ಶಕುನ ಪಕ್ಷಿ

(ಶಕುನ ಪಕ್ಷಿ, ಆರಿದ ಲಾಂದ್ರ ಮತ್ತು ತಾಳೆ ಹೂ –
ಮೂರು ಕಾದಂಬರಿಗಳು)

ಟಿ.ಕೆ. ರಾಮರಾವ್

ಸೌಮ್ಯ ಎಂ.
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ನಂ. 7/1, ದಿವಾನ್ ಮಾಧವರಾವ್ ರೋಡ್,
ಎಂ.ಎನ್. ಕೃಷ್ಣರಾವ್ ಪಾರ್ಕ್ ಎದುರು,
ಬಸವನಗುಡಿ, ಬೆಂಗಳೂರು – 560 004

Shakuna Pakshi (Kannada)- (3 novels: Shakuna Pakshi, Ārida Lāndra and Tāle Hoo): written by T.K. Ramarao; published by; Sowmya M., No. 7/1, Diwan Madhavarao Road, Opp. M.N. Krishnarao Park, Basavanagudi, Bangalore - 560 004.

First Print : 1982
Present Print : 2017
Copyright © Shakunthala Ramarao

No part of this publication may be reproduced, stored in a retrieval system, or transmitted, in any form or by any means, electronic, mechanical, photo-copying, recording or otherwise, without the prior permission of the publisher.

ಸಗಟು ಮಾರಾಟಗಾರರು
ವಸಂತ ಪ್ರಕಾಶನ
360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್,
ಜಯನಗರ, ಬೆಂಗಳೂರು – 560 011
ದೂರವಾಣಿ : 080–22443996
email : vasantha_prakashana@yahoo.com
website: www.vasanthaprakashana.com

ಪ್ರಥಮ ಮುದ್ರಣ : 1982
ಪ್ರಸ್ತುತ ಮುದ್ರಣ : 2017
ಉಪಯೋಗಿಸಿದ ಕಾಗದ : 70ಜಿಎಸ್‌ಎಂ ಮ್ಯಾಪ್‌ಲಿಥೊ
ಪುಟಗಳು : 224 ಬೆಲೆ : ರೂ.160

ಮುಖಪುಟ ವಿನ್ಯಾಸ: ಪಾ.ಸ. ಕುಮಾರ್
ಅಕ್ಷರ ಜೋಡಣೆ : ವಸಂತ ಪ್ರಕಾಶನ
ಮುದ್ರಣ : ಶ್ರೀ ವಿದ್ಯಾ ಪ್ರಿಂಟರ್ಸ್

ಶ್ರೀ ಟಿ.ಕೆ. ರಾಮರಾವ್ ಅವರ ಸಾಹಿತ್ಯಲೋಕ !

ಕನ್ನಡ ಪತ್ತೇದಾರಿ ಸಾಹಿತ್ಯ ಪ್ರಕಾರದ ಅತಿ ದೊಡ್ಡ ಹೆಸರು. ಬರೆಯುತ್ತಿದ್ದಾಗ ಅತ್ಯಂತ ಬೇಡಿಕೆಯಲ್ಲಿದ್ದ, ಬೇಡಿಕೆ ಪೂರೈಸಲು ಸಾಧ್ಯವಾಗದಿದ್ದ, ಅತಿದೊಡ್ಡ ಓದುಗರ ಬಳಗವನ್ನು ಗಳಿಸಿಕೊಂಡಿದ್ದ ಅಪರೂಪ ಸಾಧನಶೀಲರು ಟಿ.ಕೆ. ರಾಮರಾವ್. ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಪುಸ್ತಕ ಪ್ರಕಾಶಕರು ಹಿಂದೇಟು ಹಾಕುತ್ತಿದ್ದ ಕಾಲದಲ್ಲಿ, ಕನ್ನಡ ಪುಸ್ತಕ ಪ್ರಕಾಶಕರು ಇವರ ಮನೆಗೆ ಎಡತಾಕುತ್ತಿದ್ದರು. ಅಡ್ವಾನ್ಸ್ ನೀಡಿ, ಸದ್ಯ ಬರೆಯುತ್ತಿರುವ ಹಸ್ತಪ್ರತಿಯನ್ನು ನಮಗೇ ಕೊಡಿ ಎಂದು ದುಂಬಾಲು ಬೀಳುತ್ತಿದ್ದರು. ಅವರು ಕೇಳಿದಷ್ಟು ಗೌರವಧನ ನೀಡುತ್ತಿದ್ದರು. ಬಹುಶಃ, ಕನ್ನಡ ಸಾಹಿತ್ಯದಲ್ಲಿ ಹೀಗೆ ಹೆಚ್ಚಿನ ಗೌರವಧನ ಪಡೆಯುತ್ತಿದ್ದ ಇಬ್ಬರು–ಮೂವರು ಲೇಖಕರಲ್ಲಿ ಇವರೊಬ್ಬರಾಗಿದ್ದಿರಬೇಕು. ಒಂದು ಕಾಲದಲ್ಲಿ ಬೀದಿ ಬೀದಿಯಲ್ಲೂ ಇದ್ದ ಸರ್ಕ್ಯುಲೇಟಿಂಗ್ ಲೈಬ್ರೆರಿಗಳಲ್ಲಿ ಯಾರ ಕಾದಂಬರಿ ಇಲ್ಲದಿದ್ದರೂ ಟಿ.ಕೆ. ರಾಮರಾವ್ ಅವರ ಕಾದಂಬರಿಗಳೆಲ್ಲ ಖಂಡಿತ ಇರುತ್ತಿದ್ದವು.

ಇದು ಹೇಗೆ ಸಾಧ್ಯವಾಯಿತು ಎಂದು ಆಲೋಚಿಸಿದರೆ. ಎರಡು ಮೂರು ಅಂಶಗಳು ಮುಂದೆ ಕಾಣಿಸುತ್ತವೆ: ಸೊಗಸಾದ ಶೈಲಿಯ ಬರವಣಿಗೆ, ಆತ್ಮೀಯ – ಸರಳ ಚೌಕಟ್ಟು. ಮೊದಲಿನಿಂದ ಕೊನೆಯವರೆವಿಗೂ ಕುತೂಹಲವನ್ನು ಉಳಿಸಿಕೊಂಡು ಹೋಗುವುದು. ಜೊತೆಗೆ, ಪರಿಪೂರ್ಣವಾಗಿ ಸ್ಥಳೀಯ ಮೆರುಗು, ಸ್ಥಳೀಯ ಭಾಷೆ, ಸುಪರಿಚಿತ ಸ್ಥಳನಾಮಗಳ ಬಳಕೆ. ಮತ್ತೆ, ಖಚಿತವಾದ ತಾಂತ್ರಿಕ ಮತ್ತು ಕಾನೂನು ವಿವರಗಳು. ಎಲ್ಲೂ ಅಧ್ಯಾಯಗಳನ್ನು ಆಗುಹೋಗುಗಳನ್ನು ಎಳೆಯುತ್ತಿರಲಿಲ್ಲ. ಚೊಕ್ಕವಾದ–ಸುಂದರವಾದ, ಒಂದೇ ಅಳತೆಯ ಅಧ್ಯಾಯಗಳು. ಅವರ ಕಾದಂಬರಿಗಳಲ್ಲಿ ಯಾವುದೊಂದು ಸಿಕ್ಕೂ ಇರುತ್ತಿರಲಿಲ್ಲ. ಓದುಗರಿಗೆ ಕುತೂಹಲ ತಣಿಸುವ, ಮನರಂಜನೆ ನೀಡುವ ಪತ್ತೇದಾರಿ ಕಾದಂಬರಿಗಳನ್ನು ಅವರು ರಚಿಸಿದರು.

ಆದರೆ, ಹೀಗೆಂದು ಅವರು ಅಸಹಜ ಘಟನೆಗಳನ್ನು ಸೃಷ್ಟಿಸಲಿಲ್ಲ. ತಮ್ಮ ಪತ್ತೇದಾರರನ್ನು ಜೇಮ್ಸ್ ಬಾಂಡ್ ಮಾಡಲಿಲ್ಲ. ಆದರೆ, ಜೇಮ್ಸ್ ಹ್ಯಾಡ್ಲಿ ಚೇಸ್, ಅರ್ಥರ್ ಕಾನನ್ ಡಾಯ್ಲ್, ಅರ್ಲ್ ಸ್ಟಾನ್ಲಿ ಗಾರ್ಡನರ್ ಅಂತಹ ಅದ್ಭುತ ಪತ್ತೇದಾರಿ ಕಾದಂಬರಿಕಾರರ ಶೈಲಿ–ನಡೆಯನ್ನು ಉಪಯೋಗಿಸಿಕೊಂಡರು. ಸಾಹಸಗಳು, ಕತ್ತಿ–ಚಾಕು, ಪಿಸ್ತೂಲು–ರಕ್ತ ಮೊದಲಾದವುಗಳಿಗಿಂತಲೂ ಜಾಣತನದ, ತಾರ್ಕಿಕವಾದ, ಅತಿ ಸಹಜವಾದ ರೀತಿಯಲ್ಲಿ ಪತ್ತೇದಾರ ಮತ್ತು ಪತ್ತೆ ಕಾರ್ಯವನ್ನು ಸೃಷ್ಟಿಸಿದರು. ಶೆರ್ಲಾಕ್ ಹೋಮ್ಸ್ ಅಂತಹ ಸುಸಂಸ್ಕೃತ ಜಾಣ ವ್ಯಕ್ತಿತ್ವವನ್ನು ತಮ್ಮ ಪತ್ತೇದಾರ – ಪೊಲೀಸ್ ಅಧಿಕಾರಿ ಆಗಿಸಿಕೊಂಡರು. ಅತಿ ಸಹಜವಾಗಿ, ತರ್ಕಬದ್ಧವಾಗಿ ಆಗುಹೋಗು ಗಳನ್ನು ಹೆಣೆಯುತ್ತ ಹೋಗಿ, ಕಟ್ಟಕಡೆಗೆ ದಿಢೀರ್ ಎಂದು ಮುಕ್ತಾಯವೊಂದನ್ನು

ನೀಡುವ ಸಿದ್ಧ ಪತ್ತೇದಾರಿ ಶೈಲಿ ಅವರಿಗೆ ಬಹಳ ಚೆನ್ನಾಗಿ ಕರಗತವಾಗಿತ್ತು.

ಟಿ.ಕೆ. ರಾಮರಾವ್ ಅವರು ಮೊದಮೊದಲು ಬರೆದದ್ದು ಕನ್ನಡದ ಸಣ್ಣಕಥೆಗಳನ್ನು, ಕೆಲವು ಸಾಮಾಜಿಕ ಕಾದಂಬರಿಗಳನ್ನು: ಅವರ ಬರವಣಿಗೆ – ಕೃತಿಗಳು ಕನ್ನಡ ಸಾಹಿತ್ಯದ ಉತ್ತಮ ಮಟ್ಟದಲ್ಲಿ ಇರಬೇಕಾಗಿತ್ತು. ತಮ್ಮ ಅಧ್ಯಯನ – ಪ್ರಯತ್ನಗಳಿಂದ ಅವರು ಮೊದಲು ಈ ಉತ್ತಮ ಸಾಹಿತ್ಯ ಶೈಲಿಯನ್ನು ಸಿದ್ಧಿಸಿಕೊಂಡರು. ಅರವತ್ತರ ದಶಕದಲ್ಲಿ ಪ್ರಾರಂಭವಾದ 'ಸುಧಾ' ವಾರಪತ್ರಿಕೆ, ಅನಂತರ 'ಮಯೂರ' ಮಾಸಪತ್ರಿಕೆ ಸಂಪಾದಕರ ಬಯಕೆಯಂತೆ ಸಾಹಸ ಕಾದಂಬರಿಗಳನ್ನು, ಕ್ರೈಮ್ ಲೋಕದ ಕಥೆಗಳನ್ನು, ಪತ್ತೇದಾರಿ ಕಾದಂಬರಿಗಳನ್ನು ಬರೆಯತೊಡಗಿದರು. ಆ ವೇಳೆಗೆ ಕನ್ನಡದಲ್ಲಿ ಸಾವಿರಾರು ಪತ್ತೇದಾರಿ ಕಾದಂಬರಿಗಳು ಮಾರುಕಟ್ಟೆಗೆ ಬಂದುಬಿದ್ದಿದ್ದವು. ಅತಿ ಸಾಮಾನ್ಯ ಶೈಲಿ, ಅಶ್ಲೀಲ ವಿವರಗಳು, ಅತಿಮಾನುಷ ಸಾಹಸಗಳು ತುಂಬಿದ್ದ ಪುಸ್ತಕಗಳು. ಟಿ.ಕೆ. ರಾಮರಾಯರು ಇವನ್ನು ಓದಿದ್ದರೂ ಪ್ರಪಂಚ ಪ್ರಸಿದ್ಧ ಕ್ರೈಂ – ಪತ್ತೇದಾರಿ ಕಾದಂಬರಿಗಳ ರೀತಿನೀತಿಗಳನ್ನು ತಮ್ಮ ಬರವಣಿಗೆಗೆ ಉಪಯೋಗಿಸಿಕೊಂಡರು. ಆಗಲೇ ಒಂದಿಷ್ಟು ಉತ್ತಮ ಸಣ್ಣ ಕಥೆಗಳನ್ನು ರಚಿಸಿದ್ದ ಅವರು ತಮ್ಮ ಆ ಸಾಹಿತ್ಯ ಶೈಲಿಯನ್ನೇ ಪತ್ತೇದಾರಿ ಕಾದಂಬರಿಗಳ ರಚನೆಗೂ ಉಪಯೋಗಿಸಿಕೊಂಡರು. ಆವರೆಗೆ ಪ್ರಕಟವಾಗಿದ್ದ ಸಾವಿರಾರು ಪತ್ತೇದಾರಿ ಕಾದಂಬರಿಗಳ ಲೇಖಕರು, ಹಿಂದಿನ ಕಾಲದ ಶೈಲಿಯನ್ನೇ ತಮ್ಮ ಬರವಣಿಗೆಗೆ ಉಪಯೋಗಿಸಿಕೊಳ್ಳುತ್ತಿದ್ದರು, ನೂರು ವರ್ಷಗಳ ಹಿಂದಿನ ಕಥೆ – ಕಾದಂಬರಿ ಶೈಲಿಯನ್ನೇ ಮುಂದುವರಿಸಿದ್ದರು. ಓದುಗರಿಗೂ ಒಂದು ರೀತಿ ಈ ಪರಿಚಿತ ಶೈಲಿ ಹೊಂದಿಕೊಂಡಿತ್ತು.

ಆದರೆ, ಇದ್ದಕ್ಕಿದ್ದಹಾಗೆಯೇ, ಸುಪ್ರಸಿದ್ಧ – ಹಿರಿಯ ಕ್ರಾಂತಿಕಾರಿ ಪತ್ರಕರ್ತರೂ, ಧೀರ ಲೇಖಕರೂ ಆಗಿದ್ದ, ವೀರಕೇಸರಿ ಸೀತಾರಾಮಶಾಸ್ತ್ರೀ ಅವರ ಸುಪುತ್ರ ಎಂ. ರಾಮಮೂರ್ತಿ ಅವರು ಕನ್ನಡ ಪತ್ತೇದಾರಿ ಪುಸ್ತಕ ಲೋಕ ಪ್ರವೇಶಿಸಿದರು. ದಿಢೀರನೆ ಕನ್ನಡ ಪುಸ್ತಕ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡ ಅವರು 'ಇದೂ ಒಂದು ಪತ್ತೇದಾರಿ' ಪುಸ್ತಕಗಳು 'ಒಂಬತ್ತಾಣೆ' ಮಾಲೆಯಾಗಿ (ಈಗಿನ ಅರವತ್ತು ಪೈಸೆ) ಪತ್ತೇದಾರಿ ಓದುಗರ ಮುಂದೆ ಬಂದಿತು. ಬರೀ ಪತ್ತೇದಾರಿ ಓದುಗ ಮಹಾಶಯರನ್ನು ಮಾತ್ರವಲ್ಲದೆ. ಎಲ್ಲ ಕನ್ನಡ ಓದುಗರನ್ನು ಆಕರ್ಷಿಸಿತು. ಅವರ ಎಲ್ಲ ಪುಸ್ತಕಗಳ ಲಕ್ಷಾಂತರ ಪ್ರತಿಗಳು ಮಾರಾಟವಾಗಿಹೋದವು. ಎಂ. ರಾಮಮೂರ್ತಿ ಮತ್ತು ಅವರ ಪುಸ್ತಕಗಳು ಬಹುಬೇಗ ಜನಪ್ರಿಯತೆಯ ಶಿಖರ ತಲುಪುವಂತಾಯಿತು. ಸುಮಾರು ಒಂದು ನೂರು ರಾಮಮೂರ್ತಿ ಕಾದಂಬರಿಗಳು ಪ್ರಕಟವಾದವು ಎಂದು ಹೇಳುತ್ತಾರೆ.

ಎಂ. ರಾಮಮೂರ್ತಿ ಅವರು ಹಾಗೆಯೇ ಕನ್ನಡ ಸಾಹಿತ್ಯಲೋಕ ಒಪ್ಪಿಕೊಳ್ಳುವ ಭಾಷಾಶೈಲಿಯಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಸೃಷ್ಟಿಸಿದವರು, ವಿಜಯ ಸಾಸನೂರ, ಮನು ಮತ್ತು ಟಿ.ಕೆ. ರಾಮರಾವ್.

'ಬಂಗಾರದ ಮನುಷ್ಯ' ಅಂತಹದೊಂದು ಸಾರ್ವತ್ರಿಕವಾಗಿ ಮೆಚ್ಚುಗೆ ಗಳಿಸಿದ ಸಾಮಾಜಿಕ ಕಾದಂಬರಿ ಬರೆದವರು ಟಿ.ಕೆ. ರಾಮರಾವ್. ಗ್ರಾಮ್ಯ ಬದುಕಿನ ಮತ್ತು

ಮಾನವ ಸಂಬಂಧಗಳ ಸೊಗಸಾದ ಚಿತ್ರಣವಿದ್ದ ಕಾದಂಬರಿ ಇದು. ಹಾಗೆಯೇ 'ಜಗದೇವರಾಯ' ಎನ್ನುವುದೊಂದು ಐತಿಹಾಸಿಕ ಕಾದಂಬರಿಯನ್ನೂ ಬರೆದಿದ್ದಾರೆ. ಮೊದಲ ಐದಾರು ಕಾದಂಬರಿಗಳಾದ ಮೇಲೆ 'ಮೂರನೇಯ ಕೀಲಿಕೈ' (1964)ದಿಂದ ಅವರ ಬರಹದ ಚೌಕಟ್ಟು – ವಸ್ತು ಪತ್ತೇದಾರಿ ಕಡೆಗೆ ಸಾಗಿತ್ತು. ಅನಂತರ ಪತ್ತೇದಾರಿ ಕಾದಂಬರಿ ಲೇಖಕ ಎಂದೇ ಜನಪ್ರಿಯವಾಗುವಷ್ಟು ಅವರು ಬರೆದದ್ದೆಲ್ಲ ಪತ್ತೇದಾರಿ ಕೃತಿಗಳು.

ಅವರು ಹತ್ತು ಕಥಾಸಂಕಲಗಳನ್ನು (ಅಂದರೆ, ಸುಮಾರು ಒಂದು ನೂರು ಕಥೆಗಳು) ಪ್ರಕಟಿಸಿದ್ದಾರೆ. ಬಹುಪಾಲು ಸಾಮಾಜಿಕ ಆಗುಹೋಗುಗಳ ಬಗ್ಗೆ ಕಥೆಗಳನ್ನು ಬರೆದರೂ, ಕನ್ನಡದ ವಿವಿಧ ಪತ್ರಿಕೆಗಳಿಗಾಗಿ ಪತ್ತೇದಾರಿ ಕಥೆಗಳನ್ನೂ ಬರೆದರು. ಮಕ್ಕಳಿಗಾಗಿ ಐದು ಜೀವನ ಚರಿತ್ರೆಗಳನ್ನೂ ಬರೆದಿದ್ದಾರೆ.

ಟಿ.ಕೆ. ರಾಮರಾವ್ ಅವರು ಯಾವಾಗಲೂ ಕುತೂಹಲಿಗಳು. ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಯಾವಾಗಲೂ ಹೆಜ್ಜೆ ಮುಂದಿಟ್ಟು ತೊಡಗಿಕೊಳ್ಳುತ್ತಿದ್ದರು. ಅಪರಾಧ ಪ್ರಪಂಚದ ಆಗುಹೋಗುಗಳ ಕಥೆಗಳನ್ನು ಸಂಬಂಧಪಟ್ಟವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಈ ಕಾರಣಕ್ಕಾಗಿಯೇ ಹಿರಿಯ ಪೊಲೀಸ್ ಅಧಿಕಾರಿಗಳನ್ನು, ಜೈಲು ಅಧಿಕಾರಿಗಳನ್ನು ಸ್ನೇಹಿತರಾಗಿಸಿಕೊಂಡಿದ್ದರು. ವಿವಿಧ ವಿವರಗಳನ್ನು ತಮ್ಮ ಕಾದಂಬರಿಗಳಲ್ಲಿ ತಿಳಿಸುವಾಗ ಸ್ವಲ್ಪವೂ ತಪ್ಪಾಗಬಾರದು ಎನ್ನುವುದಕ್ಕಾಗಿ ಅವರು ಇಂಥ ಹಿರಿಯ ಅಧಿಕಾರಿಗಳೊಂದಿಗೆ ಆಯುಧಗಳು. ನೀತಿ ನಿಯಮಗಳು, ಕಾನೂನು ಮತ್ತು ಪೊಲೀಸ್ ನಡಾವಳಿಗಳನ್ನೆಲ್ಲ ವಿವರವಾಗಿ ಚರ್ಚಿಸುತ್ತಿದ್ದರು. ಪಿಸ್ತೂಲು – ಬಂದೂಕು – ಮದ್ದು ಗುಂಡುಗಳ ಬಗ್ಗೆ ಖಚಿತವಾದ ವಿವರ ತಿಳಿದು ಬರೆಯುತ್ತಿದ್ದರು. ಒಂದೊಂದು ಪತ್ತೇದಾರಿ ಕಾದಂಬರಿ ಬರೆಯುವಾಗಲೂ ಈ ಪ್ರಕ್ರಿಯೆ ನಡೆಯುತ್ತಿತ್ತು.

ಈ ಕುತೂಹಲ – ಹೊಸ ತಿಳಿವಳಿಕೆ ಪೂರೈಕೆಗಾಗಿಯೇ ಅವರು ಕೆಲ ಸಲ ಪ್ರಪಂಚ ಸುತ್ತಿ ಬಂದರು. ಈ ಪ್ರವಾಸಾನುಭವಗಳನ್ನೆಲ್ಲ ಸೇರಿಸಿ, 'ಗೋಳದ ಮೇಲೊಂದು ಸುತ್ತು' ಎನ್ನುವುದೊಂದು ಸೊಗಸಾದ ಪ್ರವಾಸ ಕೃತಿ ರಚಿಸಿದ್ದಾರೆ.

1983ರ ಅನಂತರ 'ತರಂಗ' ಸಂಪಾದಕೀಯದವನಾದ ಮೇಲೆ ನಾನು ರಾಯರನ್ನು ಆಗಾಗ ಭೇಟಿಮಾಡುತ್ತಿದ್ದೆ. 'ಕೆಂಪು ಮಣ್ಣು', 'ಪಯಣದ ಕೊನೆ' ಕಾದಂಬರಿಗಳನ್ನು ಹಸ್ತಪ್ರತಿರೂಪದಲ್ಲಿ ಗಮನಿಸಿದೆ. ಅವರೊಂದಿಗೆ ದೀರ್ಘವಾದ ಒಂದು ಸಂದರ್ಶನವನ್ನೂ ಮಾಡಿದ್ದೆ. ಅವರ ಹಸ್ತಪ್ರತಿಗಳು, ಟಿಪ್ಪಣಿಗಳನ್ನೆಲ್ಲ ನನ್ನ ಮುಂದೆ ಹಾಕಿ ತೋರಿಸಿದ್ದರು.

ಯಾವುದಾದರೊಂದು ವಸ್ತು ಅವರ ತಲೆಹೊಕ್ಕಿದ ಕೂಡಲೇ ಅದನ್ನು ತಲೆಯಲ್ಲೇ ತುರಿಯಲು ತೊಡಗುತ್ತಿದ್ದರು. 'ಒಂದು ವಸ್ತು ಹೊಳೆದರೆ. ಅದನ್ನ ಮನಸ್ಸಿನಲ್ಲೇ ಚರ್ನ್‌ಔಟ್ ಮಾಡ್ತೀನಿ. ವಸ್ತುವನ್ನು ಹೇಗೆ ಪ್ರಾರಂಭಿಸಬೇಕು, ಎಷ್ಟು ಅಧ್ಯಾಯಗಳಾಗಬೇಕು, ಮುಖ್ಯ ಪಾತ್ರಗಳು, ಘಟನೆಗಳು, ಅಂತ್ಯ ಇವನ್ನೆಲ್ಲ ಯೋಚಿಸುತ್ತಲೇ ಇರುತ್ತೇನೆ. ಈ ಜಗಿಯುವಿಕೆಯೆಲ್ಲ ಒಂದು ಹದಕ್ಕೆ ಬಂದ ಮೇಲೆ

ಒಂದು ಹಾಳೆಯ ಮೇಲೆ ಗೀಚಿಕೊಳ್ಳುತ್ತೇನೆ', ಎಂದು ಒಂದು ಹಾಳೆ ತೋರಿಸಿದರು. ಅದರಲ್ಲಿ ಚಿಕ್ಕ ಮೋಡಿಯಂಥ ಅಕ್ಷರಗಳಲ್ಲಿ ಚಿಕ್ಕ ಚಿಕ್ಕ ಸಾಲುಗಳನ್ನು ಗೀಚಿದ್ದರು. ಒಂದೊಂದು ಗೀಚಿದ ಸಾಲು ಒಂದೊಂದು ಅಧ್ಯಾಯದ ಹೂರಣ, ಮೊದಲ ಅಧ್ಯಾಯ ಬರೆಯಲು ಪ್ರಾರಂಭಿಸಿ. ಗೀಚಿದ ಹೂರಣಗಳಿಂದ ಆರೇಳು ಅಧ್ಯಾಯಗಳನ್ನು ಬರೆದು ಮುಗಿಸಿಬಿಡುತ್ತಿದ್ದರು. ಕೂಡಲೇ ಮುಂದಿನ ಅಧ್ಯಾಯ ಬರೆಯದೇ, ಕಟ್ಟಕಡೆಯ ಅಧ್ಯಾಯವನ್ನು ಯೋಚಿಸಿ, ತಮ್ಮ ಟಿಪ್ಪಣಿಯಂತೆ, ಕೊನೆ ಅಧ್ಯಾಯದ ಮುಕ್ತಾಯದ ಕರಡು ಬರೆಯುತ್ತಿದ್ದರು. ಅದನ್ನು ಬರೆದ ಮೇಲೆ ಅದಕ್ಕ ಹೊಂದಾಣಿಕೆ, ಪೂರಕವಾಗುವ ಹಾಗೆ, ಎಂಟನೆಯ ಅಧ್ಯಾಯದಿಂದ ಬರೆಯಲು ಪ್ರಾರಂಭಿಸಿ, ಹದಿನೈದೋ–ಇಪ್ಪತ್ತೋ ಅಧ್ಯಾಯಗಳನ್ನು ಬರೆದು ಮುಗಿಸಿ ಅವನ್ನು ಮುಕ್ತಾಯದ ಅಧ್ಯಾಯಕ್ಕೆ ಕೊಂಡಿಹಾಕುತ್ತಿದ್ದರು. ಕೊನೆಗೆ ಬರೀ ಕರಡು ರಚನೆಯಾಗಿದ್ದ ಕೊನೆಯ ಅಧ್ಯಾಯವನ್ನು ಮತ್ತೊಮ್ಮೆ 'ಪಕ್ಕಾ' ಆಗಿ ಬರೆಯುತ್ತಿದ್ದರು. ಕಾದಂಬರಿ ರಚನೆ ಕೆಲಸ ಮುಗಿದು ಹಸ್ತಪ್ರತಿ ಸಿದ್ಧವಾಗಿರುತ್ತಿತ್ತು. ಅದೇ ದಿನ ಪತ್ರಿಕಾ ಸಂಪಾದಕರೊಬ್ಬರು ಮನೆಗೆ ಬಂದು ಆ ಹಸ್ತಪ್ರತಿಯನ್ನು ಕೊಂಡೊಯ್ಯುತ್ತಿದ್ದರು.

ಸ್ಫುಟವಾದ, ಚಿತ್ತಿಲ್ಲದ ಸುಂದರ ಬರವಣಿಗೆ: ಗುಂಡಾದ ಅಕ್ಷರಗಳು, ಫುಲ್‌ಸ್ಕೇಪ್ (ಸಾಲಿಲ್ಲದ) ಬಿಳಿಹಾಳೆಯಲ್ಲಿ ರಚನೆ.

ಒಂದು ಕಾದಂಬರಿ ಬರೆದು ಮುಗಿಸಿ, ಅದು ಸಂಪಾದಕರನ್ನು ತಲುಪಿದ ಮೇಲೆ, 'ಕಾದಂಬರಿ ಮುಗೀತು. ಒಂದಿಷ್ಟು ರೆಸ್ಟ್ ತೆಗೆದುಕೊಳ್ಳಬೇಕು. ಎಲ್ಲಾದರೂ ಸುತ್ತಿ ಬರಬೇಕು' ಎಂದುಕೊಳ್ಳುತ್ತಾರೆ. ಆದರೆ ಅದು ಆಗುವುದೇ ಇಲ್ಲ. ಏಕೆಂದರೆ, ಮುಂದಿನ ಕಾದಂಬರಿಯ ವಸ್ತು ಆಗಲೇ ಮೈಮನಸ್ಸುಗಳನ್ನು ಗೋಳಾಡಿಸಲು ಪ್ರಾರಂಭವಾಗಿರುತ್ತದೆ. 'ಚರ್ನಿಂಗ್ ಔಟ್' ಕೆಲಸ ಮೊದಲಾಗಿಬಿಟ್ಟಿರುತ್ತದೆ. ಜೊತೆಗೆ ಇನ್ನೊಬ್ಬ ಸಂಪಾದಕರ ಫೋನ್‌ಕರೆ – ಮನೆ ಭೇಟಿ ಪ್ರಾರಂಭವಾಗುತ್ತದೆ. ಕ್ಯೂನಲ್ಲಿ ನಿಂತ ಸಂಪಾದಕರು 'ಪ್ರೀತಿಯ' ಒತ್ತಡ ಹಾಕತೊಡಗುತ್ತಾರೆ. ರಾಯರು ಅವರಿಗೊಂದು ದಿನಾಂಕ ಕೊಟ್ಟು ಸಾಗಹಾಕುತ್ತಾರೆ. ಇಷ್ಟು ಸಾಲದು ಎಂಬಂತೆ, ಹೊಸದಾಗಿ ಪ್ರಾರಂಭವಾದ ಪತ್ರಿಕೆಗಳು ಮತ್ತು ವಿಶೇಷಾಂಕ ಸಂಪಾದಕರಿಂದ ನಿರಂತರ ಫೋನ್ ಕರೆ, ವಿಶೇಷ ಪತ್ತೇದಾರಿ ಕಥೆಗಾಗಿ! ಇದರೊಂದಿಗೆ, ಸಭೆ – ಸಮಾರಂಭಗಳಿಗೆ ಅತಿಥಿಯಾಗಿ ಬರಲು ಕೋರಿಕೆ, ಸೋದರ – ಸೋದರಿಯರ – ಅವರ ಮಕ್ಕಳ ಭೇಟಿ, ಸಿನಿಮಾ ನಿರ್ಮಾಪಕ – ನಿರ್ದೇಶಕರ ಆಶೋತ್ತರಗಳು – ಇವುಗಳಿಗೂ ಅವರು ಸಮಯ ಮೀಸಲಾಗಿಡಬೇಕಾಗಿತ್ತು. ಈ ಸಮಯದ ಒತ್ತಡದ ಕಾರಣಕ್ಕಾಗಿಯೇ ಅವರು ತಮ್ಮ ಕಾದಂಬರಿಯ ಚಿತ್ರೀಕರಣದ ಹಕ್ಕುಗಳನ್ನು ಮಾತ್ರ ಚಿತ್ರ ನಿರ್ಮಾಪಕರಿಗೆ ನೀಡುತ್ತಿದ್ದರು. ಚಿತ್ರಕಥೆ – ಸಂಭಾಷಣೆ ಬರೆಯಲು ಯಾವತ್ತೂ ಒಪ್ಪಿಕೊಳ್ಳಲಿಲ್ಲ. ಆ ಸಿನಿಮಾ ಶೂಟಿಂಗಿಗೂ ಹೋಗುತ್ತಿರಲಿಲ್ಲ!

ಪುಂಖಾನುಪುಂಖವಾಗಿ ಅವರ ಕಥೆ – ಕಿರುಕಾದಂಬರಿ – ಕಾದಂಬರಿಗಳು ಪ್ರಕಟವಾಗುತ್ತಲೇ ಇದ್ದುದನ್ನು ನೋಡಿದಾಗ, ಅವರು ಅತಿ ವೇಗದ ಲೇಖಕರು

ಎಂದೇ ಅನ್ನಿಸುತ್ತದೆ. ಆದರೆ, ಅವರು 'ಖಂಡಿತ ನನ್ನದು ವೇಗದ ಬರವಣಿಗೆ ಅಲ್ಲ, ಅತಿ ನಿಧಾನದ ಬರವಣಿಗೆ. ನಾನು ಬರೆಯುವುದು ಬಹಳ ಕಡಿಮೆ. ದಿನಕ್ಕೆ ಐದು ಪುಟದಷ್ಟು ಉತ್ತಮ ಪ್ರತಿ ಸಿದ್ಧಪಡಿಸಲೂ ನನ್ನಿಂದಾಗುವುದಿಲ್ಲ!' ಎಂದು ಹೇಳಿದ್ದರು. 'ವರ್ಷಕ್ಕೆ ಎರಡು ಪೂರ್ಣ ಕಾದಂಬರಿಗಳನ್ನೂ, ಒಂದೋ– ಎರಡೋ ಮಿನಿ ಕಾದಂಬರಿಗಳನ್ನು ಬರೆಯಲು ಸಾಧ್ಯವಾಗಬಹುದು' ಎಂದು ಹೇಳಿದ್ದರು. 'ಕಾದಂಬರಿಯ ಪಾತ್ರಗಳು ಚೆನ್ನಾಗಿ ಮೂಡಿ ಬರಬೇಕು, ಅಧ್ಯಾಯಗಳು – ಓಟ ಅತ್ಯಂತ ಕುತೂಹಲವಾಗಬೇಕು ಎಂದೆಲ್ಲ ನಿರ್ಧರಿಸಿ ಬರೆಯತೊಡಗುವಾಗ ವೇಗದ ಬರವಣಿಗೆ ಸಾಧ್ಯವಾಗುವುದಿಲ್ಲ !' ಎಂದವರ ಮಾತು.

ಅತ್ಯಂತ ವ್ಯವಸ್ಥಿತಿ ಬರಹಗಾರ. ಪತ್ರಿಕಾ ಓದುಗರನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದವರು. ಆದರೆ ಎಂದಿಗೂ ತಮ್ಮ ಪುಸ್ತಕಗಳು – ತಾವು ಜನಪ್ರಿಯವಾಗಬೇಕು ಎಂದು ಸಾಮಾನ್ಯ ಮಟ್ಟದ ಬರವಣಿಗೆ ಮಾಡಲಿಲ್ಲ. ಅಶ್ಲೀಲ ವಿವರಗಳು, ಹೆಣ್ಣು – ಗಂಡಿನ ತೀವ್ರ ಸಂಬಂಧ ಇವನ್ನು ಚಿತ್ರಿಸಲಿಲ್ಲ. ಸುಂದರವಾದ, ಶುದ್ಧ ಅಭಿರುಚಿಯ, ಉತ್ತಮ ಭಾಷೆಯ ಸೃಷ್ಟಿ ಅವರದ್ದಾಗಿತ್ತು.

ಅವರು ಬರೆದದ್ದೆಲ್ಲ ಜನಪ್ರಿಯವಾಯಿತು. ಪುಸ್ತಕ ಪ್ರಕಾಶಕರು, ಪತ್ರಿಕಾ ಸಂಪಾದಕರು ಮತ್ತು ಓದುಗರ ನಡುವೆ ಅವರದೊಂದು ಗಟ್ಟಿಯಾದ ಬಾಂಧವ್ಯ – ಬೇಡಿಕೆ ಸೃಷ್ಟಿಯಾಯಿತು. ಕಾದಂಬರಿಯೊಂದನ್ನು ಬರೆದಕೂಡಲೇ ಮೊದಲು ಪತ್ರಿಕಾ ಸಂಪಾದಕರನ್ನು ತಲಪುತ್ತಿತ್ತು. ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವಾಗಲೇ ಪುಸ್ತಕ ಪ್ರಕಾಶಕರು ಅಡ್ವಾನ್ಸ್ ಕೊಡಲು ಬರುತ್ತಿದ್ದರು. ಧಾರಾವಾಹಿ ಮುಗಿದು, ಪುಸ್ತಕ ರೂಪ ಪ್ರಕಟವಾಗಿ ಕೆಲವೇ ದಿನಗಳಲ್ಲಿ ಮಾರಾಟವಾಗಿ ಹೋಗುತ್ತಿತ್ತು. ಎರಡನೇ ಆವೃತ್ತಿ ಪ್ರಕಟಿಸಲು ಇನ್ನೊಬ್ಬ ಪ್ರಕಾಶಕರು ಬರುತ್ತಿದ್ದರು. ಮೂರನೇ, ನಾಲ್ಕನೇ, ಐದನೆಯ ಆವೃತ್ತಿಗಳನ್ನು ಪ್ರಕಟಿಸಲು ಬೇರೊಬ್ಬ ಪ್ರಕಾಶಕರು ಬರುತ್ತಿದ್ದರು. ಎಲ್ಲರೂ ಗೌರವಧನ ಮುಂದಿಟ್ಟು ಕೃತಜ್ಞತೆಗಳೊಂದಿಗೆ ಅನುಮತಿ ಪತ್ರ ಸಮೇತ ಹೋಗುತ್ತಿದ್ದರು. ಕೆಲವು ಮಂದಿ ಉತ್ಸಾಹಿಗಳು. ಇವರ ಪುಸ್ತಕ ಪ್ರಕಟಿಸುವುದರೊಂದಿಗೆಯೇ ಹೊಸ ಪ್ರಕಟಣಾ ಸಂಸ್ಥೆ ಪ್ರಾರಂಭಿಸಿರುವುದುಂಟು.

ಅವರ ಮನೆಗೆ ಭೇಟಿ ನೀಡಿದಾಗಲೆಲ್ಲ ಟಿ.ಕೆ. ರಾಮರಾವ್ ದಂಪತಿ ಅತ್ಯಂತ ಸ್ನೇಹ ವಿಶ್ವಾಸಗಳಿಂದ ತಿಂಡಿ – ಕಾಫಿ ನೀಡಿ ಉಪಚರಿಸುತ್ತಿದ್ದರು. ಒಂದೊಮ್ಮೆ ಅವರ ಮನೆಯಲ್ಲಿ ಊಟ ಮಾಡಿದ ನೆನಪು ನನಗಿದೆ. ಬನಶಂಕರಿ ಎರಡನೆ ಹಂತದಲ್ಲಿ ಸುಂದರವಾದೊಂದು ಕಾರ್ನರ್ ಮನೆ ಕಟ್ಟಿಕೊಂಡಿದ್ದರು. ಅವರಲ್ಲಿ ಒಂದು ಸ್ಕೂಟರ್ ಇತ್ತು. ಅದರಲ್ಲೇ ಬೆಂಗಳೂರಿನ ಎಲ್ಲ ಕಡೆಗೂ ಓಡಾಡುತ್ತಿದ್ದರು. ನಮ್ಮ ಮನೆಗೂ ಒಂದೆರಡು ಸಲ ಬಂದಿದ್ದರು.

ಇಂಥ ಸಾಧನೆ, ಜನಪ್ರಿಯತೆ – ಬಹುಬೇಡಿಕೆ, ಹಣಸಂಪಾದನೆ – ಕೀರ್ತಿಗಳ ನಡುವೆಯೂ ಅವರು ಅತ್ಯಂತ ಸರಳ ವ್ಯಕ್ತಿಯಾಗಿದ್ದರು ಎಲ್ಲರೊಂದಿಗೆ ಬಹಳ ಚೆನ್ನಾಗಿ ನಗುನಗುತ್ತ ಸುಲಭವಾಗಿ ಬೆರೆಯುತ್ತಿದ್ದರು. ಹಿಂದೆ ಅವರೊಬ್ಬ ಅತಿ

ಯಶಸ್ವಿ ಟ್ಯುಟೋರಿಯಲ್ಸ್ ಉಪಾಧ್ಯಾಯ ಮತ್ತು ಯಶಸ್ವಿ ಔಷಧಿ ಮಾರಾಟಗಾರ: ಸೌಮ್ಯ ನಡವಳಿಕೆ, ಮೃದು ಮಾತುಗಾರಿಕೆ, ಮುಖದ ಮೇಲೆ ಯಾವಾಗಲೂ ಮಂದಹಾಸ !

ಬಹುಶಃ ಒಬ್ಬ ವ್ಯಕ್ತಿ – ಒಬ್ಬ ಲೇಖಕನಾಗಿ ಇದೇ ಅವರ ಯಶಸ್ಸಿನ ಗುಟ್ಟಾಗಿದ್ದಿರಬಹುದು!

(ಶ್ರೀ ಟಿ.ಕೆ. ರಾಮರಾವ್ ಅವರ ಜನನ : ಅಕ್ಟೋಬರ್, 7, 1931. ಹುಟ್ಟಿದೂರು – ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ. ತಂದೆ – ಶ್ರೀ ಕೃಷ್ಣಮೂರ್ತಿ : ತಾಯಿ – ಶ್ರೀಮತಿ ನಾಗಮ್ಮ, ಗಣಿತ ಶಾಸ್ತ್ರದಲ್ಲಿ ಬಿಎಸ್ಸಿ ಪದವಿ ಪಡೆದರು. ಬಹುಶಃ ಮೊದಲೇ ನಿರ್ಧರಿಸಿದ್ದರೋ ಏನೋ ಅವರು ಎಲ್ಲೂ ಉದ್ಯೋಗಕ್ಕೆ ಸೇರಲಿಲ್ಲ. ಬಹುಬೇಗ, ತಮ್ಮಂದಿರ – ತಂಗಿಯರ ಸಂಸಾರದ ಜವಾಬ್ದಾರಿ ಹೆಗಲಮೇಲೆ ಬಂದಾಗ, ಚನ್ನಪಟ್ಟಣಕ್ಕೆ ಬಂದು ಸೇರಿದ ಘಟ್ಟದಲ್ಲಿ ಅಲ್ಲೇ ಒಂದು ಖಾಸಗಿ ಟ್ಯುಟೋರಿಯಲ್ ಶಾಲೆ ಪ್ರಾರಂಭಿಸಿದರು. ಅತ್ಯಂತ ಜನಪ್ರಿಯ ಉಪಾಧ್ಯಾಯರೆನಿಸಿಕೊಂಡರು. ಜೊತೆಗೆ, ಚನ್ನಪಟ್ಟಣದ ಮುಖ್ಯ ಹೆದ್ದಾರಿಯಲ್ಲೇ ಔಷಧದ ಅಂಗಡಿಯೊಂದನ್ನು ತೆರೆದರು. ಬಹುಶಃ ಶಿಕ್ಷಣ ಮತ್ತು ವ್ಯಾಪಾರ ಕ್ಷೇತ್ರಗಳೆರಡೂ ಅವರ ಭಾಗ್ಯವನ್ನು ತೆರೆದಿರಬೇಕು. ಎಲ್ಲ ಜವಾಬ್ದಾರಿಗಳೂ ಆದಮೇಲೆ ಬೆಂಗಳೂರಿನ ಬನಶಂಕರಿ ಎರಡನೆ ಹಂತದಲ್ಲಿ ಸುಂದರವಾದ ಮನೆಯೊಂದನ್ನು ನಿರ್ಮಿಸಿಕೊಂಡು ಪತ್ನಿಯೊಂದಿಗೆ ಶಾಂತವಾದ ಬದುಕು ಸಾಗಿಸಿದ್ದರು. ಅವರ ಪೂರ್ಣಾವಧಿ ಹವ್ಯಾಸ – ಬರವಣಿಗೆ. ಸುಮಾರು ಮೂರು ದಶಕಗಳ ಕಾಲ ಅವರ ಬರವಣಿಗೆ ಸಾಗಿತು. ಕೀತಿ–ಸಂಪಾದನೆ ಶಿಖರದಲ್ಲಿದ್ದಾಗ, ಇದ್ದಕ್ಕಿದ್ದಹಾಗೆಯೆ ಬೆಂಗಳೂರು ರಾಜ್ಯೋತ್ಸವ ಕಾರ್ಯಕ್ರಮ ವೊಂದರಲ್ಲಿ ಭಾಗವಹಿಸಿದ್ದಾಗ, ಅಸೌಖ್ಯವಾಗಿ ಹತ್ತಿರದ ನರ್ಸಿಂಗ್ ಹೋಂಗೆ ಕರೆದೊಯ್ದರೂ ಉಪಯೋಗವಾಗದೆ – ಕೊನೆಯುಸಿರೆಳೆದರು. ಈ ಅಘಾತವನ್ನು ಅವರು ಕನ್ನಡಿಗರಿಗೆ ನೀಡಿದ್ದು 1988ರಲ್ಲಿ – ಕೊನೆಯ ಅಧ್ಯಾಯವನ್ನು ಕಾದಂಬರಿ ಮುಗಿಸುವ ಮೊದಲೇ ಬರೆಯುವ ಅವರ ಅಭ್ಯಾಸದಂತೆ!)

ಶ್ರೀ ಟಿ.ಕೆ. ರಾಮರಾವ್ ಅವರು ಇಂದು ನಮ್ಮೊಡನೆ ಇಲ್ಲದಿದ್ದರೂ, ಅವರ 73 ಕೃತಿಗಳು (53 ಕಾದಂಬರಿಗಳು, 14 ಕಥಾ ಸಂಕಲನಗಳು, 5 ಕಿಶೋರ ಸಾಹಿತ್ಯ ಮತ್ತು ಒಂದು ಪ್ರಪಂಚ ಪ್ರವಾಸ ಕಥಾನಕ) ಇಂದು ನಮ್ಮೊಂದಿಗಿವೆ. ಅವರ ನೆನಪನ್ನು ಉಳಿಸಿಟ್ಟಿವೆ.

ಈ ಸಾಧನಶೀಲ ಯಶಸ್ವಿ ಕಾದಂಬರಿಕಾರರ ಸುಪ್ರಸಿದ್ಧ ಕಾದಂಬರಿಗಳನ್ನು ಇಪ್ಪತ್ತೆರಡು ವರ್ಷಗಳ ಅನಂತರ ಮತ್ತೆ ಕನ್ನಡಿಗರ ಮುಂದೆ ತರಲು ಧೃತಿ ಪ್ರಕಾಶನ ಬಯಸಿದೆ. ರಾಯರ ನೆನಪು ಹಸಿರಾಗಿ ಉಳಿಯುವಂತೆ ಅವರೆಲ್ಲ ಜನಪ್ರಿಯ ಕೃತಿಗಳು ಹೊಸ ಸುಂದರ ರೂಪ ತಾಳಲಿವೆ. ನನಗಂತೂ ಅತಿ ಆತ್ಮೀಯರಾಗಿದ್ದ ನನ್ನ ಪ್ರೀತಿಪಾತ್ರ ಲೇಖಕಮಿತ್ರರ ಪುಸ್ತಕಗಳು ಮರುಪ್ರಕಟಣೆ ಕಾಣುತ್ತಿರುವುದು ಅತ್ಯಂತ ಸಂತೋಷದ ವಿಷಯ.

ಚಿರಂಜೀವಿ

ಪ್ರಕಾಶಕರ ಮಾತು

ಕನ್ನಡದ ಹೆಸರಾಂತ ಕಾದಂಬರಿಕಾರ ಟಿ.ಕೆ. ರಾಮರಾವ್ ಅವರ ಕೃತಿಗಳನ್ನು ಮತ್ತೆ ಓದುಗರಿಗೆ ದೊರಕಿಸಿಕೊಡಬೇಕೆಂಬ ಉದ್ದೇಶ ನಮ್ಮದು. ಪಾತ್ರ ಪುಷ್ಟಿಯಲ್ಲಿ ಕುಶಲತೆ, ಅಪರೂಪದ ಕಥಾವಸ್ತುಗಳ ಆಯ್ಕೆ, ಉದ್ದಕ್ಕೂ ಕುತೂಹಲ ಕಾಯ್ದುಕೊಳ್ಳುವ ಅವರದ್ದೇ ಆದ ವಿಶೇಷ ಬಗೆಯ ನಿರೂಪಣೆ, ಇವುಗಳಿಂದ ಸಾಹಿತ್ಯಪ್ರಿಯರ ನೆನಪಲ್ಲಿ ಆಳವಾಗಿ ನಿಂತವರು ಟಿ.ಕೆ. ರಾಮರಾವ್. ಅವರ 'ಬಂಗಾರದ ಮನುಷ್ಯ' ಕಾದಂಬರಿಯಂತು ಚಲನಚಿತ್ರವಾಗಿಯೂ ಅಪಾರ ಯಶಸ್ಸನ್ನು ಕಂಡಿತಿಲ್ಲದೆ ಅನೇಕ ಯುವ ಕೃಷಿಕರನ್ನು ಮತ್ತೆ ಕೃಷಿಕಾರ್ಯದತ್ತ ಆಕರ್ಷಿಸಿ ಅವರು ಆ ಕ್ಷೇತ್ರದಲ್ಲಿಯೇ ಅಪಾರ ಯಶಸ್ಸನ್ನು ಕೀರ್ತಿಯನ್ನು ಗಳಿಸುವಂತೆ ಮಾಡಿತು. ಪತ್ತೇದಾರಿ ಕಾದಂಬರಿ ರಚನೆಯಲ್ಲೂ ರಾಮರಾಯರದು ಸಿದ್ಧಹಸ್ತ.

ಅವರ 'ಶಕುನ ಪಕ್ಷಿ', 'ಆರಿದ ಲಾಂದ್ರ' ಮತ್ತು 'ತಾಳಿ ಹೂ' ಕಾದಂಬರಿಗಳನ್ನು ಒಟ್ಟಿಗೆ ಇಲ್ಲಿ ನೀಡುತ್ತಿದ್ದೇವೆ.

ವಂದನೆಗಳು.

ಶಕುನ ಪಕ್ಷಿ

ಸಾಮೂಹಿಕ ನೃತ್ಯ ಪ್ರಾರಂಭವಾದ ಮರು ನಿಮಿಷದಲ್ಲಿ ವೇಮರೆಡ್ಡಿ ಕನ್ನಡಕ ಹೊಂದಿಸಿಕೊಂಡು ಪಕ್ಕದವನ ಕಡೆ ಪ್ರಶ್ನಾರ್ಥಕ ನೋಟ ಬೀರಿದ. ದೃಷ್ಟಿ ಮತ್ತೆ ರಂಗದತ್ತ ತಿರುಗಿ.

ಕೆಂಪು ರಂಗಿನ ಅರೆತೋಳು ಷರಟು. ಬಿಳುಪಿನ ಹೊಳೆವ ಬೆಲ್ ಬಾಟಮ್ ಪ್ಯಂಟ್‌ನಲ್ಲಿ ಸರಿದಾಡುತ್ತಿರುವ ನೀಳ ಮುಖದ ಯುವತಿ. ನೃತ್ಯ ತರಬೇತು ಅಪೂರ್ಣವೆಂದು ಸೂಚಿಸುವ ಕೈಕಾಲುಗಳ ಚಲನೆ!

ವೇಮರೆಡ್ಡಿಯ ಕಣ್ಣುಗಳು ಕಿರಿದಾದವು.

ಹೌದು, ಅವಳು ಕಾಮಿನಿ! ಕಣ್ಣು ಮೋಸ ಹೋಗದು. ಅದೇ ಮುಖ.

ಉದ್ವೇಗದಲ್ಲಿ ಕೈಲಿದ್ದ ಕೋಲನ್ನು ನೆಲಕ್ಕೆ ಕಟಕಟ ಕುಟ್ಟಿದ. ಪಕ್ಕದಲ್ಲಿ ಕುಳಿತ ಕೋಟಯ್ಯ ಅವನ ಕೈ ತಟ್ಟಿ ಸುಮ್ಮನಿರುವಂತೆ ಎಚ್ಚರಿಸಿದ. ಬಕ್ಕವಾಗುತ್ತಿದ್ದ ಮುಂದಲೆ ಹಾಗೂ ಹಣೆಯ ಮೇಲೆ ಆವರಿಸಿದ ಬೆವರನ್ನು ಕರವಸ್ತ್ರದಿಂದ ಒರೆಸಿ ಪ್ರೇಕ್ಷಕ ವೃಂದದ ಕಡೆ ಕಣ್ಣಾಡಿಸಿ ಅರ್ಥವಾಗದವನಂತೆ ಧಣಿಯನ್ನು ಪಿಸುದನಿಯಲ್ಲಿ ಕೇಳಿದ.

"ಏನು, ಸ್ವಾಮಿ?"

ಧಣಿಯ ಬೆರಳು ರಂಗಸ್ಥಳವನ್ನು ಸೂಚಿಸಿತು.

"ನೋಡು ಕೋಟಯ್ಯ, ನೋಡು ಕಾಮಿನಿ ಎಲ್ಲಿಗೆ ಬಂದಿದಾಳೆ."

ಧ್ವನಿ ತುಸು ಏರಿತ್ತು. ಸ್ಥೂಲಕಾಯದ ಕೋಟಯ್ಯ ಮುಂದಕ್ಕೆ ಜರುಗಿ ಅಚ್ಚರಿ ವ್ಯಕ್ತಪಡಿಸಿದ.

"ಹೌದು, ಕಾಮಿನಿ! ಪ್ರದರ್ಶನ ಮುಗಿದ ಕೂಡಲೆ ಅವನನ್ನ ಕಾಣಬೇಕು." ಮತ್ತೆ ಬೆವರು ಒರೆಸಿದ.

"ಈಗಲೇ ನೋಡೋಣ. ಹುಚ್ಚು ಹುಡುಗಿ!"

ಆತುರದಿಂದ ಏಳಲುದ್ಯುಕ್ತನಾದವನನ್ನು ಬೆನ್ನ ತಟ್ಟಿ ಕೂರಿಸಿದ ಸಹಾಯಕ.

“ಶ್! ಆತುರ ಬೇಡ, ಸ್ವಾಮಿ. ಈ ದೃಶ್ಯ ಮುಗಿಯಲಿ.”

ನೀಳ ಮುಖದ ನರ್ತಕಿಯ ದೃಷ್ಟಿ ತನ್ನತ್ತ ಹರಿದಾಗ ವೇಮರೆಡ್ಡಿಯ ಎದೆಬಡಿತ ಏರಿತು. ಅವಳ ಮುಖದಲ್ಲೂ ಅಸ್ಪಷ್ಟ ಪ್ರತಿಕ್ರಿಯೆ ಕಾಣಿಸಿ ದಂತಾಯಿತು.

ದೃಶ್ಯ ಮುಗಿಯುವುದನ್ನೇ ಕಾದಿದ್ದ ವೇಮರೆಡ್ಡಿ ಬಲವಾಗಿ ಕೋಲು ಬಡಿದು ಹೊರಕ್ಕೆ ನಡೆದ. ಕೋಟಯ್ಯ ಅವನ್ನು ಹಿಂಬಾಲಿಸಿದ. ವೇದಿಕೆಯ ಪಕ್ಕದ ಬಾಗಿಲನ್ನು ಸಮೀಪಿಸಿದ ಅವರಿಬ್ಬರೂ ಒಮ್ಮೆಗೇ ನಿಂತರು.

ಅಡ್ವೋಕೇಟ್ ರಾಜಣ್ಣ ತನ್ನ ಜೂನಿಯರ್‌ನೊಂದಿಗೆ ಬಾಗಿಲಿನಲ್ಲಿ ಕಾದು ನಿಂತಿದ್ದ.

ವೇಮರೆಡ್ಡಿ ತನ್ನ ನಾಟಕ ಸ್ಪರ್ಧಿಯ ಕಡೆಗೆ ಕಣ್ಣೇರಿಸಿ ಕೋಟು ಸರಿಪಡಿಸುತ್ತಾ ಗೊಣಗಿದ.

“ನೋಡಪ್ಪ, ಇಲ್ಲೂ ಹಾಜರು ಈ ಶಕುನ ಪಕ್ಷಿ! ಇನ್ನು ಕೆಲಸ ಹಾಳಾದ ಹಾಗೇ.”

ಮಾತನ್ನು ಸ್ಪಷ್ಟವಾಗಿ ಕೇಳಿಸಿಕೊಂಡ ವಕೀಲ ವೇದಿಕೆ ಕಡೆ ಒಮ್ಮೆ ಇಣುಕಿ ಪ್ರತಿಯಾಗಿ ಗೊಣಗಿದ.

“ಕೋಲು ಬಡಿತ ಕೇಳಿದಾಗಲೇ ನನ್ನ ಪ್ಲಾನ್ ಪಂಕ್ಚರ್ ಆಯ್ತು. ಅನ್ಕೊಂಡೆ. ಕೆಟ್ಟ ಸಮಯ. ನಡಿ, ವೆಂಕೋಬಾ…”

ರಾಗಣ್ಣ ತನ್ನ ಜೂನಿಯರ್‌ನ ಭುಜ ಸವರಿದ. ವೇಮರೆಡ್ಡಿ ಮುಂದಿನ ಮಾತು ಆಡುವ ಮೊದಲೇ ಕೋಟಯ್ಯ ವಿರಸ ತಪ್ಪಿಸಿದ.

“ವಕೀಲಗಾರು, ಡಾನ್ಸ್ ಮಾಸ್ಟರ್‌ನ ನೋಡೋಕೆ ಬಂದ್ರೇನು?” ನಯವಾಗಿ ಕೇಳಿದ ಕರವಸ್ತ್ರ ಹಣೆ ಒತ್ತಿತ್ತು.

ವಕೀಲ ಹುಬ್ಬೇರಿಸಿ ಸಿಗರೇಟು ತುದಿಯನ್ನು ಪ್ಯಾಕ್ ಮೇಲೆ ಕುಟ್ಟಿದ. ಹಬ್ಬುಗಳ ನಡುವಿನ ಕುಂಕುಮವನ್ನು ಮಿಂಚು ಓಟದಲ್ಲಿ ನೋಡಿದ ರೆಡ್ಡಿ ಮಾತಿನಲ್ಲಿ ಇರಿದ.

“ಆಷಾಢಭೂತಿ…”

ರಾಗಣ್ಣ ಆ ಮಾತು ಕೇಳಿಸಿಕೊಳ್ಳದವನಂತೆ ಕೋಟಯ್ಯನಿಗೆ ಹೇಳಿದ.

“ಈಗ ನಾನು ವಕೀಲ ಅಲ್ಲ. ಕಲಾಪ್ರೇಮಿ. ನನ್ನ ಮುಂದಿನ ನಾಟಕಕ್ಕೆ ಕಲಾವಿದೆಯನ್ನು ಗೊತ್ತು ಮಾಡೋಕೆ ಬಂದೆ. ಹಾಳಾಯ್ತು ಯೋಚನೆ.”

“ಲೇಡಿ ಆರ್ಟಿಸ್ಟ್!”

ವ್ಯಂಗ್ಯವಾಗಿ ಉದ್ಗರಿಸಿದ ರೆಡ್ಡಿ. ಕೋಟಯ್ಯ ಧಣಿಯ ಮಾತು ತಡೆದು ಆಸಕ್ತಿಯಿಂದ ಕೇಳಿದ.

"ಮುಂದಿನ ನಾಟಕ ಯಾವುದೋ?"

"ಈಗ್ಲೆ ಹೆಸರು ಯಾಕೆ? ತಿಳಿದ್ರೆ ಏನಾದ್ರು ಮಸಲತ್ತು ಮಾಡ್ತೀರಿ ನನ್ನ ಮೇಲೆ."

ರೆಡ್ಡಿ ಮೆಲ್ಲನೆ ಕೇಕರಿಸಿದ.

"ನಮ್ಮ ಮಸಲತ್ತು ನಿಮ್ಮ ಮೇಲೆ! ಭಾರಿ ಕಲಾವಿದ! ದೊಡ್ಡ ನಾಟಕಕಾರ ಅಂತ ನಿಮ್ಮನ್ನು ನೀವೇ ಅಟ್ಟಕ್ಕೆ ಏರಿಸಿಕೊಂಡುಬಿಟ್ಟಿದ್ದೀರಿ. ಷೋಕಿಗೋಸ್ಕರ ಕೆಲಸಕ್ಕೆ ಬಾರದ ತರಲೆ ನಾಟಕ ಆಡೋರು, ನೀವು. ಸಾಯೋತನಕ ನಿಜವಾದ ನಾಟಕ ಆಡೋದು, ಆಡಿಸೋದು ಕಸಬು ನಮ್ದು. ನಿಮಗೂ ನಮಗೂ ಎಲ್ಲಿನ ಸಂಬಂಧ.... ಈಗ ಹೆಣ್ಣು ಆರ್ಟಿಸ್ಟ್ ಬೇಕಾಗಿರೋದು ನಿಮ್ಮ ನಾಟಕಕ್ಕೊ ಇಲ್ಲಾ, ನಿಮಗೊ?

ಜೂನಿಯರ್ ಬುಸುಗುಟ್ಟಿ ಎತ್ತಿದ ಕೈಯನ್ನು ಕೆಳಕ್ಕೆ ಇಳಿಸಿದ ರಗಣ್ಣ.

ತನ್ನ ಧಣಿಗೆ ದಿಟ್ಟತನದಿಂದಲೇ ಹೇಳಿದ ಕೋಟಯ್ಯ.

"ಛೆ, ಹಾಗೆಲ್ಲಾ ಹೇಳಬಾರದು, ಸ್ವಾಮಿ. ನಮ್ಮದು ವ್ಯವಹಾರಿ ನಾಟಕ. ಅವರದು ಹವ್ಯಾಸಿಗಳ ಕಲಾ ನಾಟಕ. ವಕೀಲರು ಭಾಷಣ ಮಾಡೋವಾಗ ನಮ್ಮ ಮೇಲೆ ನಾಲ್ಕು ಕಟುಮಾತು ಆಡಿಬಿಟ್ರು. ಅವರಿಗೆ ಒಳ್ಳೇದಾಗ್ಲಿ."

"ನಾಟಕಕ್ಕೆ ಆಗೊ ಹೆಣ್ಣು ನನಗೂ ಇರಲಿ ಅಂತಲೇ ಇಲ್ಲಿಗೆ ಬಂದಿದೀನಿ, ರೆಡ್ಡಿಗಾರು."

ರೆಡ್ಡಿಯ ಇರಿತದ ಮಾತಿಗೆ ಸೇಡು ತೀರಿಸುವಂತೆ ಪ್ರತಿ ಹೇಳಿದ ರಾಗಣ್ಣ ಚರ್ರನೆ ಕಡ್ಡಿ ಗೀರಿ ಸಿಗರೇಟು ಹೊತ್ತಿಸಿದ. ಠೀವಿಯಿಂದ ಟೈ ಗಂಟು ಸರಿಪಡಿಸಿದ.

ಕೋಟಯ್ಯ ಧಣಿಗೆ ಬಂದ ಉದ್ದೇಶದ ನೆನಪು ಕೊಟ್ಟು ವೇದಿಕೆಯ ದಿಕ್ಕಿಗೆ ಮುಖ ತಿರುಗಿಸಿದ.

ತೆರೆಯ ಹಿಂಭಾಗದಲ್ಲಿ ಮುಂದಿನ ದೃಶ್ಯಕ್ಕಾಗಿ ಮಿಂಚಿನ ಗತಿಯಲ್ಲಿ ಸಿದ್ಧತೆ ಸಾಗುತ್ತಿತ್ತು. ಪಿಸು ಮಾತುಗಳ ಮಧ್ಯೆ ಗೆಜ್ಜೆಯ ಗಲಗಲ ಸದ್ದು ಕೇಳುತ್ತಿತ್ತು.

ಕೋಟಯ್ಯಗ ತೆರೆಯ ಹಿಂದೆ ನಡೆದು ಕೈಕಟ್ಟಿ ನಿಂತವನನ್ನು ಕರೆದು ಧಣಿಯ ವಿಸಿಟಿಂಗ್ ಕಾರ್ಡ್ ಕೊಟ್ಟ.

ಒಳಕ್ಕೆ ನಡೆದ ಮನುಷ್ಯ ಮರು ನಿಮಿಷದಲ್ಲಿ ಡಾನ್ಸ್‌ಮಾಸ್ಟರ್ ರಾಜಾರಾಮನೊಂದಿಗೆ ಹಿಂತಿರುಗಿದ.

"ನಮಸ್ಕಾರ ಸಾಹುಕಾರ್ರಿಗೆ. ಬಹಳ ಸಂತೋಷ. ದಯಮಾಡಿ ಬನ್ನಿ. ಸೈಡ್‌ವಿಂಗ್‌ನಲ್ಲಿ ಕುರ್ಚಿ ಹಾಕಿಸ್ತೀನಿ. ಕುಳಿತು ನೋಡುವಿರಂತೆ."

ಇಲ್ಲದ ಸಂತೋಷ ಪ್ರಕಟಿಸಿದ ರಾಜಾರಾಮ, ಮೆಟ್ಟಿಲ ಪಕ್ಕದಲ್ಲಿ ಕಾದು ನಿಂತಿದ್ದ ರಾಗಣ್ಣನ ಕಡೆ ಕುಡಿನೋಟವನ್ನೂ ಬೀರದೆ ಶ್ರೀಮಂತ ರೆಡ್ಡಿಯ ಕೈಹಿಡಿದು ಆದರದಿಂದ ಒಳಕ್ಕೆ ಕರೆದೊಯ್ದ.

ಬೆಪ್ಪನಂತೆ ತುಟಿ ಜೋಲಿಸಿದ ರಾಗಣ್ಣ ಗೋಡೆ ಒರಗಿ ಹೊಸ ಸಿಗರೇಟು ತುಟಿಗಿಟ್ಟ. ತನ್ನ ಸೀನಿಯರ್‌ಗೆ ಆದ ಅಪಮಾನದಿಂದ ವೆಂಕೋಬ ತಲೆ ಕೆರೆದು ಬಿಚ್ಚುವುದರಲ್ಲಿ ಸೀನಿಯರ್ ಸಿಗರೇಟ್ ನೆಲಕ್ಕೆ ಕೆಡವಿ ಸ್ಟೇಜ್ ಪ್ರವೇಶಿಸಿದ.

ವೇಮರೆಡ್ಡಿಯ ಮೊನಚು ಮೂಗು ಮುಂದಾಯಿತು. ಕೋಲು ಎತ್ತಿ ಅಡ್ಡ ಹಿಡಿದು ಡನಸ್ ಮಾಸ್ಟರಿಗೆ ಕಟುವಾಗಿ ಹೇಳಿದ.

"ಮಾಸ್ಟರ್! ನಿಮ್ಮ ಪ್ರದರ್ಶನ ನೋಡಲಿಕ್ಕೆ ಇಲ್ಲಿಗೆ ಬರಲಿಲ್ಲ. ನಾನು ಬಂದಿದ್ದು ನಮ್ಮ ಹುಡುಗಿನ ಕರೆದುಕೊಂಡು ಹೋಗೋದಕ್ಕೆ."

ರಾಜಾರಾಮ ನಿಬ್ಬೆರಗಾಗಿ ನಿಂತ.

"ಯಾರು ನಿಮ್ಮ ಹುಡುಗಿ?" ಸ್ವರ ಇಳಿದಿತ್ತು.

"ಕಾಮಿನಿ" ಉತ್ತರಿಸಿದ ಕೋಟಯ್ಯ.

"ಕಾಮಿನಿ ನಿಮ್ಮ ಮಗಳೆ?"

ಆತುರದಿಂದ ಪ್ರಶ್ನಿಸಿದ ರಾಜಾರಾಮನ ಕಾತುರ, ಅಚ್ಚರಿ ಕರಗುವುದರಲ್ಲಿ ರೆಡ್ಡಿ ಆಜ್ಞಾಪಿಸಿದ.

"ಈ ಕ್ಷಣ ಅವಳನ್ನ ಕರೆತನ್ನಿ. ವಂಶದ ಘನತೆ ಮಣ್ಣು ಪಾಲಾಗೋದಕ್ಕೆ ಮೊದಲು ಇಲ್ಲಿಂದ ಹೊರಟುಬಿಡಲಿ ಅವಳು."

ಡಾನ್ಸ್ ಮಾಸ್ಟರ್ ಗಾಬರಿಗೊಂಡ.

"ವಂಶದ ಘನತೆ ಹೆಂಗೆ ಹಾಳಾಗತ್ತೆ, ಸ್ವಾಮಿ.... ಮುಂದಿನ ದೃಶ್ಯದಲ್ಲಿ ಆಕೆ ಪಾತ್ರ ಬಹಳ ಇದೆ."

"ಬಹಳ ದೊಡ್ಡ ಪಾತ್ರ! ನೃತ್ಯದ ಗಂಧವೇ ಇಲ್ಲದವಳು ಏನು ಕುಣಿಯುತ್ತಾಳೆ? ನಿಮ್ಮ ಗ್ರೂಪ್ ಡಾನ್ಸ್‌ನಲ್ಲಿ ಒಂದು ಬೊಂಬೆ ಅವಳು."

"ಮಿಸ್ಟರ್ ವೇಮರೆಡ್ಡಿ....." ಗೋಗರೆದ ರಾಜಾರಾಮ.

"ಮಾತು ನಿಲ್ಸಿ! ಸುಮ್ಮನೆ ಹೋಗಿ ಅವಳನ್ನ ಕರೆತನ್ನಿ. ಇಲ್ಲವಾದ್ರೆ ನಾನೇ ಒಳಕ್ಕೆ ನುಗ್ಗಬೇಕಾಗುತ್ತೆ..."

"ನಿಮ್ಮ ಚಿತ್ತ"

ಹತಾಶನಾಗಿ ರಾಜಾರಾಮ ಮತ್ತೊಂದು ಪಕ್ಕಕ್ಕೆ ಇಳಿದು ಹೋದ.

"ಕಾಮಿನಿ ಯಾರೂಂತ ತಿಳಿದಿದ್ರೆ ಆ ದಿಕ್ಕಿಗೆ ಕಾಲು ಹಾಕ್ತಾ ಇರ್ಲಿಲ್ಲ."

ಯಾವುದೋ ಯೋಚನೆಯಿಂದ ಹೊರಬಂದವನಂತೆ ನಿಧಾನವಾಗಿ ನುಡಿದ ರಾಗಣ್ಣ. ಅವನನ್ನು ದುರುಗುಟ್ಟಿ ನೋಡಿದ ರೆಡ್ಡಿ ಕೈ ಮುಂದಕ್ಕೆ ಚಾಚಿದ.

"ಇನ್ನೂ ತಡವಾಗಿಲ್ಲ, ಈಗಲೇ ಕಾಲು ಹಿಂದಕ್ಕೆ ಹಾಕಿ."

ಮೌನವಾಗಿ ನಿಂತವನನ್ನು ನೋಡಿ ರೆಡ್ಡಿ ಒಂದು ಹೆಜ್ಜೆ ಮುಂದೆ ಬಂದು ಕನ್ನಡಕ ಮೇಲು ಕೆಳಗು ಆಡಿಸಿ ತೀವ್ರತೆಯಲ್ಲಿ ಮತ್ತಷ್ಟು ಹೇಳಿದ.

"ಕಲಾವಿದೆಯನ್ನ ಹುಡುಕೊ ನೆಪದಲ್ಲಿ ಕಾಮಿನಿನ ಭೇಟಿ ಆದೀರಿ. ಹುಷಾರ್! ಲೇಡಿ ಆರ್ಟಿಸ್ಟ್ ಯಾರೂ ಅಗ್ಗ ಅಲ್ಲ."

"ಕಲಾವಿದೆ ಅಗ್ಗದ ಹೆಣ್ಣು ಅಂತ ಹೇಳಿದೋರು ಯಾರು? ನಾನು ಅಗ್ಗದ ಮನುಷ್ಯ ಅನ್ನೊ ಭಾವನೆ ನಿಮ್ಮ ತಲೆಯಿಂದ ದೂರ ಮಾಡಿ ಮೊದಲು. ಹುಚ್ಚನ ಹಾಗೆ ಅರ್ಥವಿಲ್ಲದೆ ಮಾತಾಡ್ತಾ ಇದೀರಿ ದೊಡ್ಡ ನಾಟಕದ ಕಂಪೆನಿ ಒಡೆಯರು."

ರೆಡ್ಡಿಯ ಎರಡೂ ಕೈಗಳಲ್ಲಿ ಭಾರವಾಗಿ ತೂಗಾಡಿದ ಕೋಲನ್ನು ಓರೆಗಣ್ಣಿನಲ್ಲಿ ನೋಡಿದ ಅಡ್ವೊಕೇಟ್. ಪರಿಸ್ಥಿತಿತ ಏಕಾಏಕಿ ಬದಲಾಯಿಸಿತು. ಕೋಟಯ್ಯ ಧಣಿಯ ಬೆನ್ನು ತಟ್ಟಿ ಹಿಂದಕ್ಕೆ ಕೈ ತೋರಿಸಿದ.

ಆತಂಕದಿಂದ ಕಣ್ಣು ಹೊರಳಿಸುತ್ತಾ ಕೈ ಹಿಸುಕಿ ನಿಂತಿದ್ದ ರಾಜಾರಾಮ.

"ಮಿಸ್ಟರ್ ರೆಡ್ಡಿ, ಕಾಮಿನಿ ಇಲ್ಲ...."

ಕೋಲು ಟಪ್ಪನೆ ಕೆಳಕ್ಕೆ ಬಿತ್ತು.

"ಏನು ಹೇಳಿದ್ರಿ?" ಅವಡು ಕಚ್ಚಿದ ರೆಡ್ಡಿ.

"ಕಾಮಿನಿ ಮಾಯವಾಗಿದ್ದಾಳೆ."

ಕಾಮಿನಿ ಮಾಯ!

ಸರಸರನೆ ಹೊರಬಂದ ವೇಮರೆಡ್ಡಿ ಮೊಗಸಾಲೆಯಲ್ಲಿ ವೇಗದ ಹೆಜ್ಜೆ ಹಾಕಿದ. ಕೋಲು ಎತ್ತಿಕೊಂಡು ಅವರನ್ನು ಹಿಂಬಾಲಿಸಿದ ಕೋಟಯ್ಯ ತುಸು ಗಟ್ಟಿಯಾಗಿ ಕೂಗಿದ.

"ನಿಲ್ಲಿ, ಸ್ವಾಮಿ. ಕಾಮಿನಿ ಎಲ್ಲಿಗೂ ಹೋಗೋದಿಲ್ಲ."

ಮೆಟ್ಟಿಲು ಇಳಿದ ರೆಡ್ಡಿ ಕಲಾಕ್ಷೇತ್ರದ ಬಲ ಭಾಗದ ವಿಶಾಲ ಅಂಗಳದಲ್ಲಿ ಅತ್ತಿತ್ತ ಕಾಲು ಹಾಕಿದ. ಸಾಲುಗಟ್ಟಿ ನಿಂತಿದ್ದ ಕಾರುಗಳಲ್ಲಿ ಇಣುಕಿ ನೋಡಿದ. ಕಾಮಿನಿ ಕಾಣಿಸಲಿಲ್ಲ.

ಕಾಮಿನಿ! ಕಾಮಿನಿ!

ಹತ್ತಾರು ಬಾರಿ ಮನಸ್ಸಿನಲ್ಲಿ ಕೂಗಿಕೊಂಡ. ಹಿಡಿಶಾಪ ಹಾಕಿ ಹಲ್ಲು ಮಸೆದ.

ಎರಡು ಪಕ್ಕಗಳಲ್ಲೂ ನೀರವತೆ ಆವರಿಸಿತ್ತು. ರಸ್ತೆಯಲ್ಲಿ ವಾಹನಗಳು ಒಂದೇ ಸಮನೆ ಹರಿದಾಡುತ್ತಿದ್ದವು.

ಯಾವ ವಾಹನವನ್ನೋ ಏರಿದ್ದಾಳೆ, ಹಾರಿದ್ದಾಳೆ.

ದಾವಿಸಿ ಬಂದ ಅಸಿಸ್ಟೆಂಟ್ ಅವನ ಕೈಗೆ ಕೋಲು ಕೊಟ್ಟು ಸಮಾಧಾನ ಹೇಳಿದ.

“ಇಷ್ಟು ದಿನ ದೂರ ಇದ್ದೋಳು ಇನ್ನೂ ಒಂದು ದಿನ ಮರೆಯಾಗಿದ್ರೇನಂತೆ! ಎಲ್ಲಿದ್ರೂ ಹುಡುಕಿಕೊಂಡು ಬರ್ತೀನಿ.”

ರೆಡ್ಡಿಯ ಜೋಲುಮುಖ ಚಿಂತೆಯಿಂದ ಮತ್ತಷ್ಟು ಜೋಲಿಸಿತು.

“ಸ್ಟೇಜ್‌ನಿಂದ ನನ್ನ ನೋಡಿದ್ಲು, ಕೋಟಯ್ಯ. ಆ ದೃಶ್ಯ ಮುಗಿದ ಕೂಡಲೆ ತೊಟ್ಟ ಉಡುಪಿನಲ್ಲೇ ಹಾರಿ ಹೋಗಿದಾಳೆ. ಇಪ್ಪತ್ತು ದಿನದಿಂದ ಮುಖ ತೋರಿಸಿಲ್ಲ. ಹಾಳು ಹುಡುಗಿ! ನನ್ನ ಮರ್ಯಾದೆನ ಎಷ್ಟು ಮಣ್ಣು ಪಾಲು ಮಾಡಿದರೂ ಅವಳಿಗೆ ಸಮಾಧಾನ ಇಲ್ಲ. ಈ ಸಲ ಕೈಗೆ ಸಿಗಲಿ. ಆಮೇಲೆ ಮಾಡ್ತೀನಿ ನೋಡ್ತಾ ಇರು.”

“ಈಗೇನೂ ಅನಾಹುತ ಆಗ್ಲಿಲ್ಲ, ಸಾಹುಕಾರ್ರೆ.”

“ನನಗೂ ಸಾಕಾಗಿದೆ. ಇನ್ನು ನನ್ನ ಮಾತು ಕೇಳಲಿಲ್ಲವೋ, ಅವಳನ್ನ ಕೊಂದೇ ಬಿಡ್ತೀನಿ.”

“ಛಿ, ಸುಮ್ಮನೆ ಬನ್ನಿ.” ಕೋಟಯ್ಯ ಧಣಿಯನ್ನು ಕಾರಿನ ಬಳಿಗೆ ಒಯ್ದ.

ಅಡ್ವೊಕೇಟ್ ರಾಗಣ್ಣ ಮೊಗಸಾಲೆಯ ಕಂಬ ಒರಗಿ ಜೇಬಿನಲ್ಲಿ, ಕೈ ಆಡಿಸಿದ. ಸಿಗರೇಟು ಮುಗಿದಿತ್ತು.

“ನಿಮ್ಮ ಲೇಡಿ ಆರ್ಟಿಸ್ಟ್ ಹಾರಿಹೋದ್ಲಲ್ಲ, ಸಾರ್?”

ವೆಂಕೋಬ ಮೆಲ್ಲನೆ ರೇಗಿಸಿದ.

“ಬೆಂಕಿ ಬಿತ್ತು ಲೇಡಿ ಆರ್ಟಿಸ್ಟ್‌ಗೆ. ಕಾಮಿನಿಯೇ ನನ್ನ ನಾಟಕಕ್ಕೆ ಬೇಕೂಂತ ಬರ್ಲಿಲ್ಲ. ಪಾತ್ರಕ್ಕೆ ಸರಿಹೋಗುವ ತೆಳ್ಳನೆ ಹೆಣ್ಣು ಬೊಂಬೆ ಯಾವುದಾದ್ರೂ ಇದೆಯಾ ಅಂತ ರಾಜಾರಾಮನ್ನ ಕೇಳೋಕೆ ಹೋದೆ. ಅವನು ನನ್ನ ಕಡೆ ತಿರುಗಿ ಕೂಡ ನೋಡಲಿಲ್ಲ. ಅಲ್ಲಿ ನಡೆದ ಕಾಮಿನಿ ರಾದ್ಧಾಂತ ಅನಿರೀಕ್ಷಿತ.”

ಕಾಮಿನಿಯ ಬಗೆಗೆ ತುಸು ಮರೆಮಾಚಿದ ರಾಗಣ್ಣ.

“ಅವಳು ಇಲ್ಲವಾದ್ರೆ ಅವಳಪ್ಪನಂಥ ಆರ್ಟಿಸ್ಟ್...”

“ಅವಳಮ್ಮನಂತ ಆರ್ಟಿಸ್ಟು ಅನ್ನಯ್ಯ. ಯಾವಳೊ ಒಬ್ಬಳು. ಸಿಗ್ತಾಳೆ. ನಾಟಕದಲ್ಲಿ ಪಾಟು ಅಂದ್ರೆ ನೂರು ಹೆಣ್ಣುಗಳು ಬಾಯಿಬಿಟ್ಟು ನಿಂತಿರುತ್ವೆ.”

ಜೂನಿಯರ್ ನೀಡಿದ ಸಿಗರೇಟ್ ಹಚ್ಚಿ ದಟ್ಟವಾಗಿ ಹೊಗೆ ತೂರಿದ.

“ನಾಟಕದ ಸಹವಾಸ ಕೆಟ್ಟದು, ಸಾರ್. ನಿಮಗೆ ಯಾಕೆ ಈ ಖಯಾಲಿ? ಹಿಂದಿನ ನಾಟಕದಲ್ಲಿ ಇನ್ನೂ ರೂಪಾಯಿನಷ್ಟು ಕೈ ಕಚ್ಚು. ಜನ ಇಲ್ಲದ ಕಥೆ ಕಟ್ತಾರೆ. ಕಕ್ಷಿಗಾರ್ರು ಬಂದಾಗ ನೀವು ಆಫೀಸಲ್ಲಿ ಸಿಗೋದಿಲ್ಲ ಅಂತ ಗೊಣಗಾಟ ಬೇರೆ. ನನ್ನ ಮಾತಿಗೆ ಬೆಲೆಯೇ ಇಲ್ಲ. ನಾನು ಬಚ್ಚ ಅಂತೆ. ಹಳೆ ಹುಲಿ ಅಂದ್ರೆ ನೀವು ಹೀಗೆ!”

ವಕೀಲ ಕಣ್ಣು ಮುಚ್ಚಿ ಮುಖ ಕಿವಿಚಿದ.

"ಹುಲಿ ಹಳೇದಾದ್ರು ಹುಲಿಯೇಗ. ನಾಟಕದ ವಿಷಯದಲ್ಲಿ ಖಯಾಲಿ ಅಂದೆ. ಅದೂ ಒಂದು ಸಂಸ್ಕಾರ. ನಮ್ಮ ತಾತ ಪೀರ್ ಕಂಪೆನಿಯಲ್ಲಿ ಇದ್ದನಂತೆ. ಅಪ್ಪ ಎರಡು ವರ್ಷ ಗುಬ್ಬಿ ಕಂಪೆನಿಯಲ್ಲಿ ಬಣ್ಣ ಹಚ್ಚಿದ. ನಾನು ಯಾವುದೂ ಕಂಪೆನಿ ಸೇರ್ಲಿಲ್ಲ. ಆದರೆ ಹವ್ಯಾಸ ಬೆನ್ನು ಹಿಡಿದಿದೆ. ಹಳೆ ನಾಟಕಗಳಿಗೆ ಮಸಿ ಹಚ್ಚೋಣ ಅಂದ್ರೆ ನನಗೆ ಉತ್ತೇಜನ ಇಲ್ಲ. ಈಗಿನ ಯುವಕರು ಸೋಡಾ ಶೀಷೆ ಹಾಗೆ. ಕೇವಲ ಅರ್ಧ ನಿಮಿಷದ ಉತ್ಸಾಹ, ಹುಮ್ಮಸ್ಸು. ಕ್ರಾಂತಿಗೆ ಅವಕಾಶ ಇಲ್ಲಯ್ಯ ಗೊಡ್ಡು ದೇಶದಲ್ಲಿ."

"ಸರಿ ಬೇರೆ ಕಲಾವಿದೆಯನ್ನು ಸಿದ್ಧ ಮಾಡಿ."

"ಅವಳನ್ನೇ ಸಿದ್ಧ ಮಾಡ್ತೀನಿ. ಅಪ್ಪನ ಕೈನಿಂದ ಹಾರಿಹೋದ ಕಾಮಿನಿಯಿಂದಲೇ ನನ್ನ ಗೀತಾ ನಾಟಕ ಆಡಿಸ್ತೀನಿ. ನಾಳೆ ಮಾತು ಮುಗಿಸ್ತೀನಿ."

"ನಾಳೆದಿನ? ಕಾಮಿನಿ ಬರ್ತಾಳ್ಯೇ!"

ಸಂಶಯ, ಅಚ್ಚರಿ ಬೆರೆತಿತ್ತು ಪ್ರಶ್ನೆಯಲ್ಲಿ.

"ಬಂದೇ ಬರ್ತಾಳೆ."

"ಜೇಬಿನಿಂದ ಎಳೆದ ಪತ್ರವನ್ನು ಗಾಳಿಯಲ್ಲಿ ಎರಡು ಸಾರಿ ಆಡಿಸಿ ಮತ್ತೆ ಜೇಬಿಗೆ ಸೇರಿಸಿ, ತನ್ನ ಹಳೆಯ ಲ್ಯಾಂಡ್ ಮಾಸ್ಟರ್ ಕಾರಿನ ಕಡೆಗೆ ಹೆಜ್ಜೆ ಹಾಕಿದ.

ವೆಂಕೋಬ ನಾಲಗೆ ಆಡಿಸುತ್ತ ನಿಂತ.

2

ಬೆಳಗಿನ ಜಾವದ ಸವಿ ನಿದ್ರೆಯಲ್ಲಿ ಹಾಸಿಗೆ ಅಪ್ಪಿದ್ದ ರಾಗಣ್ಣ ಕಿವಿ ತಮಟೆ ಕುಕ್ಕುವಂತೆ ಸ್ಫುಟವಾಗಿ ಬಂದ ಶಬ್ದದಿಂದ ಎಚ್ಚರಗೊಂಡ. ಗಡಿಯಾರದ ಮುಳ್ಳು ಇನ್ನೂ ಐದು ಗಂಟೆ ತೋರುತ್ತಿಲ್ಲ.

ಬುಡುಬುಡಿಕೆಯ ನಿರಂತರ ಬಡಿತ ನಿಂತುಶಕುನದ ಹೇಳಿಕೆ ಸರಾಗವಾಗಿ ಬಂತು.

'ಎಚ್ಚರ ಸ್ವಾಮಿ, ಎಚ್ಚರ ವಾರ ಕಳೆಯೋತನಕ ಕೇಡು ಕೂಡ್ಯೆತೆ.... ಅನಿಷ್ಟ ಮೈಮೇಲೆ ಜಿಗೀತ್ಯೆತೆ... ಮುಖವಾಡ ಹಾಕಿ ಎದುರಿಗೆ ನಿಂತ್ಯೆತೆ ಶತ್ರು... ಹಾಲವಕ್ಕಿ ಶಕುನ ನುಡಿದ್ಯೆತೆ, ಎಚ್ಚರ ಸ್ವಾಮಿ... ಎಚ್ಚರ...'

ಶಕುನ ಕೇಳಿದ ವಕೀಲ ದಿಗ್ಗನೆ ಎದ್ದು ಹೊರಬಂದ. ಬುಡುಬುಡಿಕೆಯವ ಉತ್ತೇಜಿತನಾದಂತೆ ಬುಡುಬುಡಿಕೆಯನ್ನು ಮತ್ತಷ್ಟು ಬಿರುಸಾಗಿ ಬಾರಿಸಿದ. ಶಕುನ ರಾಗವನ್ನು ಪುನರುಚ್ಚರಿಸಿದ.

ತುಂಡು ಭಾಷೆಯ ಅಪಶಕುನದ ನುಡಿಗಳನ್ನು ಗೊಂಬೆಯಂತೆ ನಿಂತು ಕೇಳಿದ

ರಾಗಣ್ಣ ಸದ್ದಿಲ್ಲದೆ ಒಳಕ್ಕೆ ನಡೆದು ಹಳೆಯ ಷರಟು ತಂದು ಕಣಿ ಹೇಳಿದವನ ಭುಜಕ್ಕೆ ಹಾಕಿ ಐವತ್ತು ಪೈಸೆ ನಾಣ್ಯವನ್ನು ಕೈಗಿತ್ತ.

ಅನಿಷ್ಟ ಸೂಚಕ ಮಾತುಗಳನ್ನು ಮೆಲುಕು ಹಾಕುತ್ತಾ ಹಾಸಿಗೆ ಮೇಲೆ ಉರುಳಿದ. ಎಚ್ಚರಗೊಂಡಾಗ ಎಂಟು ಗಂಟೆ ಮೀರಿತ್ತು. ದಿನಪತ್ರಿಕೆ ಹಿಡಿದು ನಾಲ್ಕು ಸಾಲು ಓದುವುದರಲ್ಲಿ ಫೋನ್ ಗಂಟೆ ಬಾರಿಸಿತು.

ಅತ್ತಲಿಂದ ಬಂದ ಮಾತಿನಿಂದ ಹೌಹಾರಿದ. ಕಕ್ಷಿಗಾರ ರಾತ್ರಿ ಸಿಟಿ ರೈಲ್ವೆ ಸ್ಟೇಷನ್ನಿಗೆ ಫೈಲು ಕಳಿಸಲು ಯಾರಿಂದಲೋ ಸೂಚನೆ ನೀಡಿದ್ದ.

ಫೋನ್ ಕೆಳಗಿರಿಸಿದ ರಾಗಣ್ಣ ಕಕ್ಷಿಗಾರನನ್ನು ಶಪಿಸಿದ. ಮೊಕದ್ದಮೆಯನ್ನು ಬೇರೆಯ ಕೋರ್ಟಿಗೆ ವರ್ಗಾಹಿಸಲು ಪ್ರಯತ್ನಿಸುತ್ತಿದ್ದಾನೆ ಕಕ್ಷಿಗಾರ ಶಾವಂದಪ್ಪ.

ಫೈಲನ್ನು ತಾನೇ ಒಯ್ದು ಅವನೊಂದಿಗೆ ತುರ್ತಿನ ವಿಷಯವೊಂದನ್ನು ಮಾತನಾಡಬೇಕು. ರಾತ್ರಿ ಹತ್ತೂವರೆಗೆ ಹೊರಡುವ ಪೂನಾ ಮೈಲ್ ಬಳಿಗೆ ತಾನೇ ಹೋಗಿ ಭೇಟಿಯಾಗಬೇಕು. ಹಣೆ ಕುಟ್ಟಿದ ವಕೀಲ ಮತ್ತೆ ನಿಶ್ಚಿಂತನಾದ.

“ಚಿಂತೆ ಇಲ್ಲ. ರೈಲು ಹತ್ತೂವರೆಗೆ. ಕಾಮಿನಿ ಬರುವುದು ಎಂಟೂವರೆ ಹೊತ್ತಿಗೆ!

ಕೋಟಿನ ಒಳಜೇಬಿನಲ್ಲಿದ್ದ ಪತ್ರವನ್ನು ತಂದು ಮೇಜಿನ ಮೇಲೆ ಹರಡಿದ. ಎರಡು ದಿನಗಳ ಹಿಂದೆ ಮದ್ರಾಸಿನಿಂದ ಕಾಮಿನಿ ತನಗೆ ಬರೆದ ಕಾಗದ ಅದು. ಅತಿ ಮುಖ್ಯವಾದ ವಿಷಯವನ್ನು ತನ್ನೊಂದಿಗೆ ಚರ್ಚಿಸಲು ಈ ರಾತ್ರಿ ಎಂಟೂವರೆಯ ಹೊತ್ತಿಗೆ ಬರುವೆನೆಂದು ಸೂಚಿಸಿದ್ದಾಳೆ. ಈ ರಾತ್ರಿಯ ಭೇಟಿ ತಿಳಿಸಿದವಳು ನಿನ್ನೆ ದಿನದ ಕಲಾ ಕ್ಷೇತ್ರದ ಪ್ರದರ್ಶನದಲ್ಲೂ ಸಾಧ್ಯವಾದರೆ ಭೇಟಿಯಾಗುವಂತೆ ತಿಳಿಸಿದ್ದಳು. ಆದರೆ ನಿನ್ನೆಯ ದಿನ ಭೇಟಿ ಆಗಲಿಲ್ಲ. ಅವಳನ್ನು ಕಾಣಲು ಹೋದಾಗ ವೇಮರೆಡ್ಡಿ ಅಡ್ಡಿಯಾದ. ಅಲ್ಲಿ ತಿಳಿದುದು ಎರಡು ಅನಿರೀಕ್ಷಿತ ವಿಷಯಗಳು.

ಕಾಮಿನಿ ವೇಮರೆಡ್ಡಿಯ ಮಗಳು! ಕಾಮಿನಿ ತಂದೆಯ ಕೈಗೆ ಸಿಗದೆ ಹಾರಿದಳು.

ಕಾಮಿನಿಗೆ ತನ್ನ ಹೆಸರಿನ ಪರಿಚಯ ಎಲ್ಲಿಯದು? ತನ್ನ ಮನೆಯ ವಿಳಾಸ ತಿಳಿಸಿದವರು ಯಾರು? ನಿನ್ನೆ ರಾತ್ರಿ ಮಾಯವಾದದ್ದು ಏಕೆ?

ಶ್ರೀಮಂತ ಯುವತಿಯೊಬ್ಬಳು ಏಕಾಂಗಿಯಾಗಿ ಬಂದು ಏಕಾಂಗಿಯಾದ ತನ್ನನ್ನು ಕಾಣುವುದು! ಅದೂ ರಾತ್ರಿಯ ವೇಳೆಯಲ್ಲಿ ಬ್ರಹ್ಮಚಾರಿಯ ಈ ಬಿಡದಿಯಲ್ಲಿ ಭೇಟಿ.

“ಬೀರು ಬೀಗದ ಕೈ ಕೊಡ್ತೀರಾ, ಸಾರ್. ಏನೋ ಬಹಳ ಯೋಚನೆ ಮಾಡ್ತಾ ಇದೀರಿ.”

ಅದೇ ಆಗಮಿಸಿದ್ದ ಜೂನಿಯರ್ ವೆಂಕೋಬ ಅವನ ಯೋಚನೆಯನ್ನು ಹರಿದು ಹಾಕಿದ. ರಾಗಣ್ಣ ಕಾಮಿನಿಯ ಕಲ್ಪನೆಯನ್ನು ಮರೆಮಾಚಿ ನಿಧಾನವಾಗಿ ನುಡಿದ.

“ಬೆಳಗಿನ ಜಾವ ಶಕುನ ಕೇಳ್ದೆ. ನನಗೆ ವಾರವೆಲ್ಲಾ ಅನಿಷ್ಟ ಆವರಿಸಿದೆಯಂತೆ.”

ಬೀಗದ ಕೈ ಹಿಡಿದವನು ವಿಗ್ರಹವಾಗಿ ನಿಂತ, ವೆಂಕೋಬ.

"ನಂಬ್ತೀರಾ ಸಾರ್? ಈ ಕಾಲದಲ್ಲಿ ಈ ಸಿಟಿಯಲ್ಲಿ ಅಡ್ವೊಕೇಟರಿಗೆ ಇದು ಲಾಯಖ್ ಅಲ್ಲಾ. ಹಳೆ ಹುಲಿಗೆ ಬಚ್ಚಾ ಮಾತು ಅಧಿಕವಾಗಿ ಕಾಣಬಹುದು. ಹಾಲಕ್ಕಿಗೆ ನಿದ್ರೆ ಹತ್ತಲ್ಲ ಅಂತ ಕಾಣುತ್ತೆ. ಮಾಡೋಕೆ ಕೆಲಸವಿಲ್ಲದೆ ಸೋಮಾರಿ ಕತ್ತಲು ಹರಿಯೋದಕ್ಕೆ ಮುಂಚೆ ಏನಾದ್ರೂ ಒದರುತ್ತೆ. ಬುಡುಬುಡಿಕೆಯೋನು ತಾನು ತ್ರಿಕಾಲ ಜ್ಞಾನಿ ಅಂತ ಢೋಂಗ್ಯ ಹಾಕ್ತಾನೆ. ಪಕ್ಷಿಭಾಷೆ ಬಲ್ಲವನ ಹಾಗೆ ಬಾಯಿಗೆ ಬಂದಿದ್ದು ಹೇಳಿ ಜನರನ್ನ ಸುಲೀತಾನೆ. ನೀವೂ ಅವನ ಕೈಲಿ ಸುಲಿಸಿಕೊ ಬೇಕೆ?"

"ನಂಬಿಕೆ! ನಂಬಿಕೆ ಅನ್ನೋದೆ ಬದುಕಿನ ಭರವಸೆ ಕಣಯ್ಯ, ಬಚ್ಚಾ. ಶಕುನ, ಶಾಸ್ತ್ರ, ಘಳಿಗೆ ಇವಕ್ಕೆ ಹೊಂದಿಕೊಂಡೇ ಈ ಶರೀರ ಬಲಿತಿರೋದು... ಅಂದಹಾಗೆ ಶಾವಂದಪ್ಪ ಕೇಸ್‌ನ ದಾವಣಗೆರೆ ಕೋರ್ಟಿಗೆ ಬದಲಾಯಿಸಿ ಕೊಳ್ತಾನಂತೆ. ಆಫೀಸಿಗೆ ಹೋದ ಕೂಡ್ಲೆ ಅವನ ಫೈಲ್ ತೆಗೆದಿಡು."

"ಸಧ್ಯ ಆ ಫೈಲ್ ಹೊರಟು ಹೋದರೆ ಸಾಕು. ಅದರಲ್ಲಿ ಜೀವಾಳವೇ ಇಲ್ಲ. ರುಜುವಾತು ಇಲ್ಲದೆ ಮೊಕದ್ದಮೆ ಗೆಲ್ಲೋಕೆ ನೋಡ್ತಾನೆ ಶಾವಂದಪ್ಪ" ವೆಂಕೋಬ ಬೀರು ತೆಗೆದು ಯಾವುದೊ ಪತ್ರಗಳನ್ನು ಮೇಜಿಗೆ ಹಾಕಿದ.

ರಾಗಣ್ಣನ ತಲೆಯಲ್ಲಿ ವಿಚಾರ ಸುತ್ತಿತ್ತು.

ರಾತ್ರಿ ಎಂಟೂವರೆಗೆ ಕಾಮಿನಿ ಇಲ್ಲಿಗೆ ಬರುವುದನ್ನು ಜೂನಿಯರ್‌ಗೆ ತಿಳಿಸಲೆ? ಅವಳು ಬರುತ್ತಾಳೆ ಎಂದು ನಿನ್ನೆ ತಿಳಿಸಿದುದನ್ನು ಬಹುಶಃ ಅವನು ಮರೆತಿದ್ದಾನೇನೋ.

ವೆಂಕೋಬ ಯಾವುದೊ ಹಾಡನ್ನು ನಾಸಿಕ ಸ್ವರದಲ್ಲಿ ಗುನುಗುತ್ತಾ ಕಾಗದದ ಮೇಲೆ ನೋಟ್ ಹಾಕುತ್ತಿದ್ದ.

ರಾಗಣ್ಣನಿಗೆ ವಿವೇಚನೆ ತಡೆ ಹಾಕಿತು. ಕಾಮಿನಿಯ ಭೇಟಿ ಮುಗಿದ ಮೇಲೆ ನಾಳೆ ಸಂಗತಿ ತಿಳಿಸುವುದು ಉಚಿತ.

ಮಂತ್ರಾಲಯದ ಮೃತ್ತಿಕೆಯನ್ನು ಬಾಯಿಗೆ ಹಾಕಿಕೊಂಡ ರಾಗಣ್ಣನ ಕಡೆ ಕುಡಿನೋಟ ಹಾಕಿದ ವೆಂಕೋಬ.

"ಆಫೀಸಿಗೆ ಹೋಗ್ತೀನಿ, ಸಾರ್. ಮೊದಲನೆ ಕೇಸ್ ಇವತ್ತು ಅಪಲೇಟ್ ಟ್ರಿಬ್ಯೂನಲ್‌ನಲ್ಲಿ."

ಸ್ನಾನ ಮುಗಿಸಿದ ರಾಗಣ್ಣ ಆತುರವಾಗಿ ಬಸವನಗುಡಿಗೆ ವಾಹನ ಚಲಾಯಿಸಿದ.

ಲಟಾರಿ ಕಾರನ ಪರಿಚಿತ ಸದ್ದು ಕೇಳುತ್ತಲೇ 'ನೃತ್ಯ ನಿಕೇತನ'ದ ಡಾನ್ಸ್ ಮಾಸ್ಟರ್ ರಾಜಾರಾಮ ಬಾಗಿಲಿಗೆ ಬಂದು ಸ್ವಾಗತಿಸಿದ.

"ನಿಮ್ಮನ್ನೇ ನೋಡೋಕೆ ಬರೋದ್ರಲ್ಲಿದ್ದೆ. ನೀವೇ ಬಂದುಬಿಟ್ರಿ ಬನ್ನಿ, ಸಾರ್."

ಬೂಟು ನೆಲಕ್ಕೆ ಒರೆಸಿ ಬಂದ ರಾಗಣ್ಣ ಡಾನ್ಸ್ ಹಾಲ್‌ನ ದಿಕ್ಕಿಗೆ ಇಣುಕಿದ.

ಯಾರೂ ಕಾಣಿಸಲಿಲ್ಲ.

"ನನ್ನ ನೋಡೋದು ಏನಿತ್ತು. ಬೂಟಾಟಿಕೆ ದಾಸಯ್ಯ. ಇನ್ನೂ ಮೂಖ ತೊಳೆದಿಲ್ಲ ನೀನು. ತನ್ನಲ್ಲಿಗೆ ಬರೋದ್ರಲ್ಲಿ ಇದ್ನಂತೆ. ನಿನ್ನೆ ರಾತ್ರಿ ಸೈಡ್‌ವಿಂಗ್‌ನಲ್ಲಿ ಹತ್ತು ನಿಮಿಷ ಕಾದು ನಿಂತಿದ್ದೆ. ಆ ಪಿಂಜರಾಪೋಲ್ ರೆಡ್ಡಿ ಬಂದಾಂತ ಹೊರಬಂದೆ. ಬಂದೋನು ಸೌಜನ್ಯಕ್ಕೆ ನನ್ನ ಕಡೆಯಾದರೂ ತಿರುಗಿ ನೋಡಿದ್ಯಾ?"

ರಾಜಾರಾಮ ಹಲ್ಲುಗಳನ್ನೆಲ್ಲಾ ಪ್ರದರ್ಶಿಸಿ ಮುಖದ ತುಂಬ ನಗೆ ತಂದುಕೊಂಡ.

"ಸೌಜನ್ಯಕ್ಕೆ ಗುಂಡು ಹಾಕಿ ಬದುಕೊ ಮಾರ್ಗದ ಚಿಂತೆ ನನಗೆ ನಮ್ಮೋರು ನೀವು. ಹತ್ತು ನಿಮಿಷ ಕಾಯೋ ಹಾಗೆ ಮಾಡಿದ್ರು ನಿಮ್ಮಿಂದ ಯಾವ ಬಾಧಕವೂ ಇಲ್ಲ ನನಗೆ. ಆದರೆ ಶ್ರೀಮಂತ ರೆಡ್ಡಿಯ ಸ್ವಭಾವ? ಅವನ ಶ್ರೀಮಂತಿಕೆಗಿಂತ ಹೆಚ್ಚಾಗಿ ಹೆದರೋದು ಅವನ ಆ ಕಪ್ಪು ಕೋಲಿಗೆ.... ಆ ಚೂಪು ಮೂಗಿಗೆ. ಅದಿರ್‍ಲಿ, ನಿಮಗೆ ಒಟ್ಟ ಆರ್ಟಿಸ್ಟ್ ಹುಡುಕಿ ಕೊಟ್ರೆ ಆಯ್ತಲ್ಲ, ಈ ವಾರದೊಳಗಾಗಿ?"

ಈ ವಾರ ಆ ಸುದ್ದಿಯೇ ಬೇಡ. ವಾರವೆಲ್ಲಾ ನನಗೆ ಶನಿಕಾಟ."

"ನನಗೂ ಗ್ರಹಗತಿ ಚೆನ್ನಾಗಿಲ್ಲ. ನಿನ್ನೆಯ ಬೆನಿಫಿಟ್ ಪ್ರದರ್ಶನಕ್ಕೆ ಮಾರಿರೋ ಟಿಕೆಟ್ ಲೆಕ್ಕ ಐದು ಸಾವಿರ. ಕೈ ಬಂದಿರೋದು ಒಂದೂವರೆ ಖರ್ಚು ಕಳೆದು ಉಳಿದಿರೋದು ಇನ್ನೂರು. ಕೇವಲ ಬೈಗಳ ಸಮಾರಾಧನೆ."

"ಇದು ಬೇರೆಯವರಿಗೆ ಹೇಳು. ಮೋಸದ ಅಪಾದನೆಯಿಂದ ಎರಡು ಸಾರಿ ಕಾಪಾಡಿದೀನಿ." ಡಾನ್ಸ್ ಮಾಸ್ಟರ್ ನೀಳವಾದ ಕೂದಲನ್ನು ಸವರಿಕೊಂಡು ದೀರ್ಘವಾಗಿ ಆಕಳಿಸಿದ. ಹಿಂದಿನ ರಾತ್ರಿಯ ನೃತ್ಯಪ್ರದರ್ಶನದ ಆಯಾಸ ಮುಖದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತಿತ್ತು.

"ರಾತ್ರಿ ಹಾಗೆ ಮಾಡಿದ್ದು ಸರಿಯಾ, ಸಾರ್?"

ನಡುವಿಗೆ ಕೈಯಿಟ್ಟು ಅತೀವ ಬೇಸರದಲ್ಲಿ ಕೇಳಿದ.

"ಏನು ಮಾಡ್ದೆ ನಾನು?"

"ನಿಮ್ಮ ವಿಷಯ ಅಲ್ಲ. ಆ ರೆಡ್ಡಿ ಮಾಡಿದ್ದು. ನನ್ನ ಪ್ರದರ್ಶನದ ಕಳೆ ಇಳಿಸಿಬಿಟ್ಟ. ಹುಚ್ಚನ ಹಾಗೆ ಬಂದು ಸುಮ್ಮನೆ ಇದ್ದ ಹುಡುಗೀನ ಒಯ್ತೀನಿ ಅಂತ ಬೊಬ್ಬೆ ಹಾಕಿ ನನ್ನ ಕಂಗಾಲು ಮಾಡಿಬಿಟ್ಟ. ನನಗೆ ಇನ್ನೂ ಮೂಡ್ ಬಂದಿಲ್ಲ. ರೇಗಿ ಹೋಗಿದ್ದೆ. ಆದರೆ ಕಾಮಿನಿ ಅವನ ಮಗಳು ಅಂತ ಕೇಳಿ ತೆಪ್ಪಗಾದೆ. ಕಾಮಿನಿ ಏಕಾಏಕಿ ನಾಪತ್ತೆ ಆಗಿಬಿಟ್ಟಲ್ಲಾ, ಸಾರ್"

ತಣ್ಣಗಾಗಿದ್ದ ಕಾಫಿಯನ್ನು ಫ್ಲಾಸ್ಕ್‌ನಿಂದ ಲೋಟಕ್ಕೆ ಬಗ್ಗಿಸಿ ವಕೀಲನ ಕೈಗಿತ್ತ. ವಕೀಲ ಅದನ್ನು ಮೇಜಿನ ಮೇಲೆ ಕುಕ್ಕಿದ.

"ಈಗ ಬಂದದ್ದು ಕಾಮಿನಿ ವಿಷಯ ತಿಳಿಯೋದಕ್ಕೆ..."

"ಅವಳು ವೇಮರೆಡ್ಡಿ ಮಗಳು ಅನ್ನೋ ಸಂಗತಿ ನಿನ್ನೆಯೇ ತಿಳಿದಿದ್ದು. ಮೊದಲೇ

ಗೊತ್ತಿದ್ರೆ ಅವಳನ್ನ ನನ್ನ ಶಾಲೆಗೆ ಸೇರಿಸ್ತಾ ಇರ್ಲಿಲ್ಲ. ಕೋಪಿಷ್ಟನ ಮಗಳ ವಿಷಯ, ಸಾರ್."

ನದಿಯಲ್ಲಿ ಸವೆದ ಕಲ್ಲಿನಂತೆ ನುಣುಪಾಗಿದ್ದ ಕೆನ್ನೆಯನ್ನು ಸವರಿಕೊಂಡ ರಾಜಾರಾಮ.

"ಅವಳು ಇಲ್ಲಿಗೆ ಯಾವಾಗ, ಹೇಗೆ ಬಂದು ಸೇರಿದ್ಲು? ಎಲ್ಲಾ ವಿವರವಾಗಿ ಹೇಳು."

"ಕಾಮಿನಿ ಇಲ್ಲಿ ಸೇರಿ ನಾಲ್ಕು ದಿನ ಆಯ್ತು. ನೃತ್ಯ ಕಲಿಯಲಿಕ್ಕೆ ಬಂದೋಳು ತನ್ನ ವಿಷಯ ಏನೂ ತಿಳಿಸಿಲ್ಲ. ಎರಡು ತಿಂಗಳ ಫೀಸ್ ಅಡ್ವಾನ್ಸಾಗಿ ಕೊಟ್ಲು. ಅವಳು ಶ್ರೀಮಂತರ ಮನೆಯೋಳು ಅನ್ನೋಷ್ಟು ಮಾತ್ರ ಅರ್ಥ ಮಾಡ್ಕೊಂಡೆ ಅವಸರದ ತರಬೇತಿ ಕೊಟ್ಟು ನಿನ್ನೆ ಪ್ರದರ್ಶನದ ಎರಡು ಗ್ರೂಪ್ ಡಾನ್ಸ್‌ಗೆ ಸೇರಿಸ್ದೆ. ಅಲ್ಲಿಗೆ ಮುಗೀತು ಅವಳ ಶಿಷ್ಯವೃತ್ತಿ. ಎಲ್ಲಿಗೆ ಹೋದಳೋ ದೇವರೇಬಲ್ಲ. ಇವತ್ತು ಬೆಳಗ್ಗೆ ಚೂರು ವಿಷಯ ಗೊತ್ತಾಯ್ತು. ಕಾಮಿನಿಯ ತಾಯಿ ಇದಾಳಂತೆ ಅವಳಿಗೆ ಹುಚ್ಚು. ಜಯನಗರದ ಸಾರಕ್ಕಿ ಗೇಟ್ ಹತ್ತಿರ ಮನೆ. ಕಾಮಿನಿನ ನೋಡೋದಕ್ಕೆ ಮೊನ್ನೆ ದಿನ ಒಬ್ಬ ಶಿಸ್ತುಗಾರ ಹೈದ ಇಲ್ಲಿಗೆ ಬಂದಿದ್ನಂತೆ."

ಕಾಮಿನಿಗೊಬ್ಬ ಪ್ರೇಮಿ! ವೇಮರೆಡ್ಡಿಯ ಹೆಂಡತಿಗೆ ಹುಚ್ಚು!

ರಾಗಣ್ಣ ತಲೆ ಕೆಡಿಸಿಕೊಂಡ.

"ಸಾರ್, ಕಾಮಿನಿ....."

ಏನೊ ತಿಳಿಸಲು ಪ್ರಾರಂಭಿಸಿದ ರಾಜಾರಾಮ ವಿಷಯ ತಡೆದು ಲೋಟದ ಕಾಫಿಯನ್ನು ಫ್ಲಾಸ್ಕಿಗೆ ಸುರಿದ.

"ಏನಯ್ಯ ಕಾಮಿನಿಗೆ?"

"ನಿಮ್ಮ ಹುಬ್ಬಿನ ಮಧ್ಯೆ ಕುಂಕುಮ ಇಲ್ಲ ಇವತ್ತು." ರಾಗಣ್ಣ ಅವನ ಬೆನ್ನಿಗೆ ಬಾರಿಸಿದ.

"ಮಾತು ಬದಲಿಸಬೇಡ. ನಾಲಿಗೆ ತುದಿಯಲ್ಲಿರೊ ಮಾತನ್ನ ಉಗಿ ಹೊರಕ್ಕೆ.."

"ಏನೂ ಇಲ್ಲ, ಕಾಮಿನಿಯೇ ಬೇಕೆ ನಿಮ್ಮ ನಾಟಕಕ್ಕೆ?" ಹುಬ್ಬು ಗಂಟುಹಾಕಿದ ವಕೀಲ.

"ಓಡಿಹೋದವಳನ್ನು ಎಲ್ಲಿಂದ ಹುಡುಕಿ ತರೋದು?" ಹೊರಕ್ಕೆ ಇಣುಕಿದ ರಾಜಾರಾಮ ಮೆಲ್ಲನೆ ಹೇಳಿದ.

"ನಿಮ್ಮಲ್ಲೇನು ಗುಟ್ಟು. ಕಾಮಿನಿ ಬರ್ತಾಳೆ."

"ಎಲ್ಲಿಗೆ? ಯಾವಾಗ?" ಪಿಸುಮಾತಿನ ಕಾತರದ ಪ್ರಶ್ನೆ.

"ಇಲ್ಲಿಗೇ.... ಇವತ್ತು ರಾತ್ರಿ ಹತ್ತು ಗಂಟೆಮೇಲೆ. ಯಾವುದೊ ಮುಖ್ಯ ವಿಷಯ

ಮಾತನಾಡೋದಿದೆ ಅಂತ ನಿನ್ನೆ ಪ್ರದರ್ಶನಕ್ಕೆ ಮುಂಚೆ ಹೇಳಿದ್ಲು."

ವಕೀಲ ಅವನ ತೋಳು ಹಿಡಿದು ಬಾಯಿ ತೆರೆದು ನಿಂತ.

ಕಾಮಿನಿ ರಾತ್ರಿ ಎಂಟೂವರೆಗೆ ತನ್ನ ಮನೆಗೆ ಬರಲಿದ್ದಾಳೆ. ಹತ್ತು ಗಂಟೆಯ ನಂತರ ನೃತ್ಯ ನಿಕೇತನಕ್ಕೆ! ಇಬ್ಬರಿಗೂ ತಿಳಿಸಲಿರುವ ಮುಖ್ಯ ವಿಷಯ ಯಾವುದು?

"ಮಾಸ್ಟರ್, ನಿನಗೂ ಮದ್ರಾಸಿನಿಂದ ಕಾಗದ..."

ವಕೀಲ ಮಾತು ಕತ್ತರಿಸಿದ. "ತುಟಿ ಮೀರಿದ ಮಾತು! ಮದ್ರಾಸಿನಿಂದ ತನಗೆ ಕಾಮಿನಿ ಪತ್ರ ಬರೆದುದನ್ನು ಪರೋಕ್ಷವಾಗಿ ತಿಳಿಸುತ್ತಿರುವೆ."

"ಯಾವ ಮದ್ರಾಸ್ ಕಾಗದ, ಸಾರ್?"

ಅವನೂ ಕಾತರದಿಂದ ಮುಖ ಮುಂದೆ ತಂದ.

"ಯಾವುದೂ ಇಲ್ಲ. ಕಾಮಿನಿ ಬರೋದಾದ್ರೆ ಅವಳನ್ನ ನನ್ನ ನಾಟಕಕ್ಕೆ ಗೊತ್ತು ಮಾಡು."

"ಅವಳು ಯಾರ ಮಗಳು ಅನ್ನೋದು ತಿಳಿದ ಮೇಲೂ ಈ ಚಪಲ? ರೆಡ್ಡಿ ನೆಲಕ್ಕೆ ಕೋಲು ಬಡಿಯೋದು ನೆನೆಸಿಕೊಂಡ್ರೆ ನಿಮ್ಮ ಎದೆ ಬಡಿತ ಏರಲ್ವೆ?"

"ಸತ್ತ ನಾಟಕ ಆಡಿಸೋ ಆ ಮುದಿಯ ನನ್ನ ಬಾಸ್ ಅಲ್ಲ. ನಾನು ಅವನಿಗೆ ದುಃಸ್ವಪ್ನ..... ಇಲ್ಲಿ ಕೇಳು. ಕಾಮಿನಿ ಬಂದರೆ ನನ್ನ ವಿಷಯ, ನಾಟಕದ ವಿಷಯ ಎತ್ತಬೇಡ. ಮೊದಲು ನಿನ್ನ ಬೆನಿಫಿಟ್ ಪ್ರದರ್ಶನಕ್ಕೆ ಲೆಕ್ಕ ಸರಿಯಾಗಿ ಬರೆದಿಡು. ನಿನ್ನ ಶಾಲೆ ಸೇರೋದಿಕ್ಕೆ ಬರೋ ಹುಡುಗಿಯರ ವಿಳಾಸ, ವಿವರ ಕೇಳದೆ ಸೇರಿಸ್ಕೋಬೇಡ. ನಿನ್ನ ಹುಡುಗಿಯರನ್ನ ರೇಗಿಸೊ ಬೀದಿ ಕಾಮಣ್ಣಗಳ ಮೇಲೆ ಬರಹದಲ್ಲಿ ಕಂಪ್ಲೇಂಟ್ ಕೊಡಬೇಡ. ನಾಜೂಕಾಗಿ ವಿಷಯ ತೂಗಿಸಬೇಕು."

ಗೂಡಿನಲ್ಲಿದ್ದ ಕುಂಕುಮ ಎತ್ತಿ ಹುಬ್ಬುಗಳ ಮಧ್ಯೆ ಮೆಲ್ಲನೆ ಸೋಕಿಸಿ "ಶ್ರೀಹರಿ!" ಎನ್ನುತ್ತಾ ರಾಗಣ್ಣ ಹೊರಬಿದ್ದ.

3

ಬಳೆಪೇಟೆ ಆಫೀಸಿಗೆ ರಾಗಣ್ಣ ಬಂದಾಗ ಜೂನಿಯರ್ ಫೈಲುಗಳನ್ನು ಸಿದ್ಧಮಾಡಿ ಇರಿಸಿದ್ದ. ಶಾವಂದಪ್ಪನಿಗೆ ರಾತ್ರಿ ಒಪ್ಪಿಸಬೇಕಾಗಿದ್ದುದನೆಲ್ಲಾ ದೊಡ್ಡ ಕವರ್‌ನಲ್ಲಿ ಸೇರಿಸಿ ಬಿಚ್ಚಲಾಗದಂತೆ ಅಂಟಿಸಿದ್ದ. ವೆಂಕೋಬನ ಅಭಿಪ್ರಾಯದಲ್ಲಿ ಅದು ತೊಲಗಿಹೋಗುವ ಅನಿಷ್ಟ.

ಐದು ನಿಮಿಷದಷ್ಟು ವಿರಾಮವಾಗಿ ಕುರ್ಚಿಯಲ್ಲಿ ಮೈ ಚೆಲ್ಲಿದಾಗ ತಾನು ಮುಂದಿನ ತಿಂಗಳು ಪ್ರದರ್ಶಿಸಲಿರುವ ಹೊಸ ನಾಟಕದ ಚಿಂತೆ. ಅದರೊಂದಿಗೆ ವೇಮರೆಡ್ಡಿಯ ಪ್ರತಿಕ್ರಿಯೆಗಳ ಕಲ್ಪನೆ.

ಎರಡು ತಿಂಗಳ ಹಿಂದೆ ತಾನು ಅರ್ಪಿಸಿದ ನಾಟಕ 'ಋಷ್ಯಶೃಂಗ' ಯಶಸ್ಸು ನೀಡಿದೆ. ಹಳೆಯ ನಾಟಕಗಳಿಂದ ಬೇಸತ್ತು, ಬದಲಾವಣೆಗಾಗಿ ಹಾತೊರೆಯುವ ಜನಕ್ಕೆ ಅದೊಂದು ರೀತಿಯ ಚಲವಳಿ. 'ನಾಟಕರಂಗದಲ್ಲಿ ಕ್ರಾಂತಿಗೆ ನಾಂದಿ...' ಎಂದು ಪತ್ರಿಕೆಗಳು ತನ್ನನ್ನು ಹೊಗಳಿ ಕಿರೀಟ ಇಟ್ಟಿವೆ.

ಅಂದು ನಾಟಕದ ಅಂತ್ಯದಲ್ಲಿ ಮಾಡಿದ ಚಿಕ್ಕ ಭಾಷಣ ಕಟುತರ! ಹಳೆಯ ನಾಟಕಗಳನ್ನು ಅಲ್ಲಗಳೆದು ಜನರನ್ನು ಉದ್ರೇಕಗೊಳಿಸುತ್ತಿರುವೆನೆಂದು ವೇಮರೆಡ್ಡಿ ಕಿಡಿಕಾರುತ್ತಿದ್ದಾನೆ. ಅವನ ಕಡೆಯವರಿಂದ ಬೆದರಿಕೆ ಬಂದಿದೆ. ಅವರ ದೃಷ್ಟಿಯಲ್ಲಿ ತಾನೊಬ್ಬ ಬಂಡುಕೋರ, ಸಂಚುಗಾರ.

ವೇಮರೆಡ್ಡಿ ಪ್ರಭಾವಶಾಲಿ ಶ್ರೀಮಂತ. ನಾನು ಅವನಿಗೆ ಎದುರಾಳಿ ಎಂಬುದು ಎಷ್ಟೊಂದು ಅರ್ಥಹೀನ. ಹಾಸ್ಯಾಸ್ಪದ ಸಂಗತಿ!

ಅಪಲೇಟ್ ಟ್ರಿಬ್ಯೂನಲ್ ಮೊಕದ್ದಮೆಗಾಗಿ ಮೇಯೊ ಹಾಲ್ ಅಂಗಳದಲ್ಲಿ ಕಾಯುತ್ತಿದ್ದಾಗ ತಲೆ ತುಂಬ ಅದೇ ಯೋಚನೆ.

ಮುಂದಿನ ಗೀತ ನಾಟಕ 'ಮಂಡೋದರಿ' ಪಾತ್ರದಾರಿಗಳನ್ನು ಹೊಸ ರೀತಿಯಲ್ಲಿ ಪರಿಚಯಮಾಡಿಸುವ ಬಾಗವತನ ಪಾತ್ರ ತನ್ನದು. ಈ ಕಾಲದಲ್ಲಿ ಕಣ್ಮರೆಯಾದ ಹಾರ್ಮೋನಿಯಂ ವಾದ್ಯವನ್ನು ಸಂಗೀತಕ್ಕೆ ಚಾತುರ್ಯದಿಂದ ಕೂಡಿಸಿ ವೈಶಿಷ್ಟ್ಯ ತೋರುವ ಯೋಜನೆ.

ಮಂಡೋದರಿಯ ಪಾತ್ರಕ್ಕೆ ಕಾಮಿನಿ! ಶ್ರೀಮಂತ ನಾಟಕಕಾರನ ಮಗಳು ಪ್ರಥಮವಾಗಿ ತನ್ನ ನಾಟಕದಲ್ಲಿ ಅಭಿನಯಿಸುವುದು ನಗರಕ್ಕೆ ಒಂದು ವಿಶೇಷ ಸುದ್ದಿ.

ಕಾಮಿನಿಯ ಕೈಕಾಲು ಚಲನೆಗಳಲ್ಲಿ ಜೀವಂತ ಭಾವಗಳಿಲ್ಲ.... ಚಿಂತೆಯಿಲ್ಲ. ಒಂದು ತಿಂಗಳ ತರಬೇತು ಸಾಕು. ಪವಾಡ ಸಾಧಿಸುವೆ.

ನಾಟಕದಲ್ಲಿ ಅಭಿನಯಿಸಲು ಕಾಮಿನಿ ಸಮ್ಮತಿಸುವುದು ಅಸಂಭವ!

ಹಲ್ಲಿಯೊಂದು ಚಾವಣಿಯಿಂದ ಲೊಚಗುಟ್ಟಿತು. ರಾಗಣ್ಣ ತಲೆಯ ವಿಚಾರಗಳನ್ನು ಒಂದು ಮೂಲೆಗೆ ಒಟ್ಟಿ ಜುಗುಪ್ಸೆಯಿಂದ ತಲೆ ಎತ್ತಿದ. ಶಕುನ ನುಡಿದ ಜೀವ ಕಾಣಿಸಲಿಲ್ಲ.

ರಾತ್ರಿ ಎಂಟು ಗಂಟೆಗೆ ಸ್ವಲ್ಪ ಮುಂಚಿತವಾಗಿ ಊಟ ಮುಗಿಸಿದ ಅಡ್ವೊಕೇಟ್ ಅಲಸೂರು ಬಡವಾಣೆಯ ಮನೆ ತಲುಪಿದ. ಲಟಾರಿ ಕಾರು ಎರಡು ನಿಮಿಷಗಳ ಮುಷ್ಕರದ ನಂತರ ಶಬ್ದ ನಿಲ್ಲಿಸಿತು. ವಾಹನವನ್ನು ಗ್ಯಾರೇಜಿಗೆ ಸೇರಿಸದೆ ಮನೆಯ ಮುಂದೆ ನಿಂತ.

ಮದ್ರಾಸ್ ರೋಡಿನ ಬಲಕ್ಕೆ ಅಡ್ಡ ತಿರುಗಿದ ನಿರ್ಜನ ರಸ್ತೆಯಲ್ಲಿ ಹಳೆ ಮನೆ. ಎಡಕ್ಕೆ ಕಾರ್ಮಿಕ ಸಂಘವೊಂದರ ಕಚೇರಿ. ಬಲಕ್ಕೆ ಮಾವಿನ ಮರಗಳಿಂದ ಕೂಡಿದ ದೊಡ್ಡ ಕಾಂಪೌಂಡಿನ ಬಂಗಲೆ.

ಕಾಮಿನಿ ಇಲ್ಲಿಗೆ ಬರುವುದನ್ನು ಬಹುಶಃ ಯಾರೂ ಗುರ್ತಿಸಲಾರರು.

ಮುಖ ತೊಳೆದು ಬಟ್ಟೆ ಬದಲಾಯಿಸದೆ ಬೆಡ್ ರೂಂ ಸೇರಿ ಐದು ನಿಮಿಷ ಕಾಲು ಚಾಚಿ ಕುಳಿತ. ನಂತರ ಬೀರುವಿನಿಂದ ಶೀಷೆ. ಟಂಬ್ಲರ್ ಹೊರಕ್ಕೆ ತೆಗೆದ.

ವಿಸ್ಕಿ, ಅರ್ಧ ಟಂಬ್ಲರ್ ತುಂಬಿತು ಅದಕ್ಕೆ ಸೋಡಾ ಕೂಡಿತು. 'ಶ್ರೀಹರಿ!' ಎಂದು ಎರಡು ಗುಟುಕು ಕುಡಿದ ಮೇಲೆ ದೃಷ್ಟಿ ಪಕ್ಕದ ಗೋಡೆಯ ಕ್ಯಾಲೆಂಡರ್ ಕಡೆ ಹರಿಯಿತು.

ಸಮುದ್ರದ ದ್ವೀಪದಲ್ಲಿ ಬಂಡೆಯ ಮೇಲೆ ಜಾರುವಂತೆ ಕುಳಿತ ಬೆತ್ತಲೆ ಹೆಣ್ಣಿನ ಚಿತ್ರ. ರೇಡಿಯೊ ಜಾಹಿರಾತಿನ ಆಕರ್ಷಕ ವಿನ್ಯಾಸ ಆರು ತಿಂಗಳಿನಷ್ಟು ಹಳೆಯದಾದ ಚಿತ್ರವನ್ನು ಅಂದೇ ಹೊಸದಾಗಿ ಕಂಡವನಂತೆ ಆಸಕ್ತಿಯಿಂದ ನಿರುಕಿಸಿದ.

ಈಚೆಗೆ ತನ್ನ ಪ್ರಾಕ್ಟಿಸ್ ಕುಗ್ಗುತ್ತಿದೆ. ಕೋರ್ಟಿನ ವ್ಯವಹಾರಗಲು ಹಳೆಯ ರೀತಿಯಲ್ಲೇ ತನ್ನಿಂದ ಜರುಗುತ್ತಿವೆ. ದೊಗಳೆ ಬಿಳಿ ಷರಾಯಿ, ಕಪ್ಪು ಕೋಟು, ಪಂಪ್ ಷೂಸ್, ಕೈಲಿ ಹಿಡಿದ ಸವೆದ ಚರ್ಮದ ಚೀಲ, ವಿಪರೀತ ಸದ್ದು ಮಾಡುವ ಲಟಾರಿ ಕಾರು–ಇವೆಲ್ಲಾ ತನಗೆ ಸಂಪಾದಿಸಿಕೊಟ್ಟಿರುವ ಹೆಸರು ಪಿಂಜರಾಪೋಲ್!

ಇಷ್ಟಾಗಿ ತಾನು ಹವ್ಯಾಸಿ ನಾಟಕಕಾರ ಯುವಕರಿಗೆ ನೀಡುತ್ತಿರುವುದು ನವ್ಯನಾಟಕ.

ಶಕುನ, ಶಾಸ್ತ್ರ ತನ್ನನ್ನು ಈವರೆಗೆ ಭರವಸೆ ನೀಡಿ ಕಾಪಾಡಿವೆ. ಶಕುನ ಗೊಡ್ಡುತನದ ಸಂಕೇತವೆ?

ಶಕುನ ಪಕ್ಷಿ!

ಇದು ಶಕುನದಲ್ಲಿ ವಿಶ್ವಾಸವಿಟ್ಟ ತನಗೆ ಬಾರ್ ಅಸೋಸಿಯೇಷನ್ ಸಹೋದ್ಯೋಗಿಗಳು ಕೊಟ್ಟ ವಿಡಂಬನಾತ್ಮಕ ಪ್ರಶಸ್ತಿ.

ಗಡಿಯಾರ ಎಂಟೂಕಾಲು ಸೂಚಿಸಿತು. ಎದೆ ಬಡಿತದ ಗತಿಯಲ್ಲಿ ಬದಲಾವಣೆ ಕಂಡಿತು. ಇನ್ನು ಕಾಲು ಗಂಟೆಯಲ್ಲಿ ಕಾಮಿನಿ ಬರುತ್ತಾಳೆ.

ಐವತ್ತು ದಾಟಿದ ಅವಿವಾಹಿತನ ನೋಟ ಮತ್ತೆ ಬೆತ್ತಲೆ ಹೆಣ್ಣಿನ ಚಿತ್ರದತ್ತ ತಿರುಗಿತು.

ಕಾಮಿನಿ ಹೆಸರಿಗೆ ತಕ್ಕಂತೆ ಚೆಲುವೆಯಾಗಿರಬೇಕು. ಚೆಲುವಿನ ಅವಲೋಕನಕ್ಕೆ ನಿನ್ನೆ ರೆಡ್ಡಿಯ ಅಡಚಣೆ. ಇನ್ನು ಹತ್ತು ನಿಮಿಷಗಳಲ್ಲಿ ಚೆಲುವೆ. ತನ್ನ ಮುಂದೆ ತಾನಾಗಿ ಬರುತ್ತದೆ.

ಕಾಮಿನಿ ಬಹುಶಃ ಕಾರಿನಲ್ಲಿ ಬಂದಿಳಿಯುತ್ತಾಳೆ. ಅವಳ ಆಗಮನದ ಸುಳಿವು ಹಿಡಿದವರು ತನ್ನ ಮೇಲೆ ಕಥೆ ಕಟ್ಟುವುದು ಸ್ವಾಭಾವಿಕ. ಬ್ರಹ್ಮಚಾರಿ ಎಂದಿಗೂ ಅಪವಾದಕ್ಕೆ ಎದುರು ನಿಂತ ಬಡಪಾಯಿ!

ನಡುಗುವ ಬಲಗೈ ವಿಸ್ಕಿಯ ಟಂಬ್ಲರ್ ಎತ್ತಿದಂತೆ ಎಡಗೈನ ಗಡಿಯಾರ ನೋಡಿದ. ಎದೆಬಡಿತ ತೀವ್ರಗೊಂಡಿತು. ಗೊತ್ತಾದ ವೇಳೆಯ ಮೇಲೆ ಐದು ನಿಮಿಷಗಳು,

ಇಪ್ಪತ್ತು ತಾಸುಗಳಿಗಿಂತಲೂ ದೀರ್ಘವಾಗಿ ಸವೆದವು. ಎದೆ ಬಡಿತ ತಾನಾಗಿ ಮಂದವಾಯಿತು.

ಬೆಡ್ ರೂಂ ಹಾಸಿಗೆಯಲ್ಲಿ ಕಾಲುಚಾಚಿ ತಲೆಯ ಹಿಂದಕ್ಕೆ ಕೈಸೇರಿಸಿ ಒಣನಗೆ ತಂದುಕೊಂಡ.

ಒಂಬತ್ತು ಸಮೀಪಿಸುತ್ತಿದೆ. ಇನ್ನು ಕಾಮಿನಿ ಬರಲಾರಳು!

ಇದು ಮೋಸ! ಅಲ್ಲ, ಕಾಮಿನಿಯ ಹೆಸರಿನಲ್ಲಿ ಯಾವನೊ ಕುಹಕಿ ತನ್ನ ಮೇಲೆ ಹೂಡಿರುವ ಕುಚೋದ್ಯ

"ಛೆ, ಒಂಬತ್ತು ಇಪ್ಪತ್ತು!"

ಎಂದು ಬೇಸರದಿಂದ ಗೊಣಗಿದ ವಕೀಲ. ಸಾವಧಾನವಾಗಿ ವಿಸ್ಕಿಗೆ ಸೋಡಾ ಬೆರೆಸಿ ಟಂಬ್ಲರ್ ಹಿಡಿದು ಮತ್ತೆ ಹಜಾರಕ್ಕೆ ಬಂದ. ಮೇಜಿನ ಮೇಲೆ ಶಾವಂದಪ್ಪನಿಗೆ ರೈಲಿನ ಬಳಿ ಒಪ್ಪಿಸಬೇಕಾದ ದಪ್ಪ ಕಟ್ಟು ಎದ್ದು ಕಾಣುತ್ತಿತ್ತು. ಅದನ್ನು ಬಿಚ್ಚಿ ನೋಡಲಾಗದಷ್ಟು ಭದ್ರವಾಗಿ ಅಂಟಿಕೊಂಡಿದ್ದ ವೆಂಕೋಬ.

ರಾಗಣ್ಣ ಕೋಟು ತೆಗೆದು ದಪ್ಪನೆಯ ಉಲ್ಲನ್ ಓವರ್‌ಕೋಟ್ ಏರಿಸಿದ. ಬೆಡ್‌ರೂಂಗೆ ಬಂದು ಸ್ಟೂಲಿನ ಮೇಲಿದ್ದ ಕಾರಿನ ಬೀಗದ ಕೈ ಗೊಂಚಲು ಎತ್ತಿಕೊಂಡ.

ಡಿಂಗ್‌ಡಾಂಗ್–ಕರೆಗಂಟೆ ಮಧುರವಾಗಿ ಬಾರಿಸಿತು!

ನಿಧಾನವಾಗಿ ನಡೆದು ಹೊರ ದೀಪದ ಗುಂಡಿ ಒತ್ತಿ ಬಾಗಿಲಿನ ಇಣುಕು ರಂಧ್ರದಲ್ಲಿ ಕಣ್ಣಿಟ್ಟ.

ಅರ್ಧತಲೆ ಆವರಿಸುವಂತೆ ಸೆರಗು ಹೊದ್ದ ನೀಲಿ ಸೀರೆಯ ಯುವತಿ! ಇಣುಕು ನೋಟಕ್ಕೆ ಕಾಣುವ ಚೆಲುವಿನ ಮಿಂಚು! ಹಿಂದಿನ ರಾತ್ರಿ ಪ್ರೇಕ್ಷಕ ಸ್ಥಾನದಿಂದ ಇಪ್ಪತ್ತೈದು ಗಜಗಳ ದೂರಕ್ಕೆ ಕಂಡ ಅದೇ ಮುಖ!

ಉತ್ಸಾಹದಿಂದ ಬಾಗಿಲು ತೆರೆದು ಹೊರದೀಪ ಆರಿಸಿದ. ಒಳಬಂದ ಯುವತಿ ತನ್ನ ಹಿಂದಿನ ಬಾಗಿಲು ಮುಚ್ಚಿ ತಲೆಯ ಸೆರಗು ಸರಿಸಿದಳು. ಸುಗಂಧದ ವಾಸನೆ ತುಂಬಿ ಬಂತು.

"ಏನು ಹಾಗೆ ನೋಡ್ತಾ ಇದೀರಿ? ನಾನು ಕಾಮಿನಿ. ಬರೋದು ಬಹಳ ತಡ ಆಯ್ತು. ಆಟೋರಿಕ್ಷಾ ಬೇಗ ಸಿಗಲಿಲ್ಲ. ಮದ್ರಾಸಿನಿಂದ ಬರೆದ ಕಾಗದ ಬಂತಲ್ಲಾ?"

ತೆಲುಗಿನ ಪದಗಳನ್ನು ಬೆರೆಸಿದ ಅವಳ ಮಾತು ರಾಗವಾಗಿ ಬಂತು. ಸೌಂದರ್ಯೋಪಾಸಕ ಉಸಿರು ಸೆಳೆದು ನಿಂತ.

ಕಿವಿಗಳಲ್ಲಿ ಹೊಳೆಯುವ ಹರಳಿನ ನಕ್ಷತ್ರಗಳು. ಕುತ್ತಿಗೆಯಿಂದ ಎದೆಗಿಳಿದ ಒಂದೆಳೆಯ ಚಿನ್ನದ ಸರ. ಬಳೆ ಇಲ್ಲದ ಮೃದು ಕೈಗಳು ಕಪ್ಪು ಡಯಲ್‌ನ ಕೈ ಗಡಿಯಾರ....

ಹೆಣ್ಣಿನ ಕೈಲಿ ತಪ್ಪದೆ ಇರಬೇಕಾದ ಪುಟ್ಟ ಚರ್ಮದ ಚೀಲ ಇಲ್ಲ!

ರಾಗಣ್ಣ ಯಾಂತ್ರಿಕವಾಗಿ 'ಹುಂ' ಎಂದ. ಅವಳು ಮತ್ತೆ ನುಡಿದಳು.

"ಎಷ್ಟು ದೂರ ನಿಮ್ಮ ಮನೆ! ಆಟೋದೋರು ಬರೋದಕ್ಕೆ ಹಿಂತೆಗೀತಾರೆ. ರಸ್ತೆ ಕೊನೆಗೆ ಆಟೊ ನಿಲ್ಸಿ ಇಲ್ಲಿಗೆ ನಡೆದು ಬಂದೆ... ನಾನು ಬಂದಿದ್ದು ಯಾರಿಗೂ ಗೊತ್ತಾಗಬಾರದೂಂತ ಹೊರಗೆ ನಿಂತಿರೋ ಹಳೆ ಕಾರು ನಿಮ್ಮದಾ?"

"ಹೌದು" ತುಸು ನಾಚಿ ತಲೆ ತುರಿಸಿದ.

"ನನಗೆ ಕನ್ನಡ ಬರುತ್ತೇಂತ ಆಶ್ಚರ್ಯ ಆಗತ್ತಾ? ಆಂಧ್ರದಲ್ಲಿ ಹುಟ್ಟಿ, ಮದ್ರಾಸಲ್ಲಿ ಓದಿದೋಳು ಆಡೋ ಕನ್ನಡ."

ವಿಧೇಶಿ 'ಇಂಟಿಮೇಟ್' ಪರಿಮಳ ಮತ್ತಷ್ಟು ತೂರಿ ಬಂತು. ಮೂಗು ಅರಳಿಸಿದ ವಕೀಲ ಚೆಲುವಿನ ವೀಕ್ಷಣೆ ನಿಲ್ಲಿಸಿದ.

"ಇಷ್ಟು ಕನ್ನಡ ಬಂದ್ರೆ ಸಾಕು. ನನ್ನ ನಾಟಕಕ್ಕೆ ನೀವು ಹೇಳಿ ಮಾಡಿಸಿದ ಹಾಗಿರೋ ಆರ್ಟಿಸ್ಟ್.... ಆದರೆ ನೀವು ವೇಮರೆಡ್ಡಿ ಮಗಳು ಅಂತ ತಿಳಿದ ಕೂಡಲೆ ನನ್ನ ಆಸೆ ಮುರುಟಿಹೋಯ್ತು."

"ಯಾರು ಹೇಳಿದ್ದು ನಾನು ರೆಡ್ಡಿ ಮಗಳು ಅಂತ....? ಓ, ಒಂದು ರೀತಿಯಲ್ಲಿ ನಿಜ. ಮಗಳ ಹಾಗೆ ನೋಡಿಕೊಳ್ತಾರೆ."

"ಯಾರ ಮಗಳು ನೀವು?"

ಆತುರದಿಂದ ಕೇಳಿದ.

"ನಿಧಾನವಾಗಿ ಹೇಳ್ತೀನಿ. ನನಗೆ ಬಹಳ ಆಯಾಸ ಆಗಿದೆ. ಹತ್ತು ನಿಮಿಷ ಆರಾಮವಾಗಿ ಕೂಡಬೇಕು."

ಎಡಬಲ ನೋಡಿದಳು. ಒಂದು ಉಕ್ಕಿನ ಬೀರು, ಮೆತ್ತೆ ಇಲ್ಲದ ಮೂರು ಕಪ್ಪು ಮರದ ಕುರ್ಚಿಗಳು, ಮೇಜು ಅಷ್ಟರ ಹೊರತಾಗಿ ಇನ್ನೇನೂ ಇಲ್ಲದ ಹಜಾರ ಅದು.

"ಅಗತ್ಯವಾಗಿ ಬನ್ನಿ ಈ ಕಡೆ."

ಸಂಕೋಚದಿಂದಲೇ ಬೆಡ್‌ರೂಂ ಕಡೆ ಅಡಿಯಿಟ್ಟು ಹೇಳಿದ. ನಿಸ್ಸಂಕೋಚವಾಗಿ ಒಳಬಂದ ಕಾಮಿನಿ ಫಳಫಳಿಸುವ ಹಳದಿ ಚಪ್ಪಲಿಗಳನ್ನು ಮಂಚದ ಪಕ್ಕದಲ್ಲಿ ಬಿಟ್ಟು ಹಾಸಿಗೆಯಲ್ಲಿ ಕಾಲುಚಾಚಿ ತಲೆದಿಂಬಿಗೆ ಒರಗಿದಳು.

ಅವನು ಮಾತಿಲ್ಲದೆ ನಿಂತ.

"ಎಲ್ಲಿಗೊ ಹೊರಡೊದಕ್ಕೆ ಸಿದ್ಧವಾಗಿದ್ರಿ ಅಂತ ಕಾಣುತ್ತೆ?"

ಅವನ ಪ್ಯಾಂಟ್, ಓವರ್‌ಕೋಟ್ ನೋಡುತ್ತಾ ಕೇಳಿದಳು.

"ಯಾವನೊ ಹಾಳು ಕಕ್ಷಿಗಾರ. ಅವನಿಗೆ ಫೈಲ್ ಒಪ್ಪಿಸಬೇಕು. ಇನ್ನೊಂದು

ಗಂಟೆಗೆ. ನಿಮ್ಮ ಮಾತಿಗೆ ಅಭ್ಯಂತರ ಇಲ್ಲ. ಹೇಳಿ ನಿಮ್ಮ ವಿಷಯ."

ಪಕ್ಕದ ಸ್ಟೂಲಿನ ಮೇಲಿದ್ದ ಶೀಷೆ, ಗ್ಲಾಸುಗಳ ಕಡೆ ಅವಳ ದೃಷ್ಟಿ ಹರಿಯಿತು. ವಕೀಲ ಕಸಿವಿಸಿಗೊಂಡ.

"ಹೋ, ನೀವು ನಾಟಕಕಾರರು ಹೌದಲ್ಲ"

"ಬೇಜಾರು ಮಾಡ್ಕೋಬೇಡಿ. ಮಿತಿಯಾದ ಅಭ್ಯಾಸ. ಲಾಯರ್ ಕೆಲಸಕ್ಕಿಂತ ನಾಟಕದ ಹವ್ಯಾಸ ಜಾಸ್ತಿ ಹಚ್ಕೊಂಡಿದೀನಿ. ಹೊಸ ರೀತಿ ನಾಟಕಕ್ಕೆ ಜನ ಉತ್ತೇಜನ ಕೊಡ್ತಾ ಇದಾರೆ. ನಿಮ್ಮನ್ನ ಮಂಡೋದರಿ ಪಾತ್ರಕ್ಕೆ ತಗೊಳ್ತೀನಿ. ನೀವು ರೆಡ್ಡಿಯ ಮಗಳಲ್ಲ ಅಂದಮೇಲೆ ನನ್ನ ಆಸೆ ಆಕಾಶಕ್ಕೆ ಏರಿದೆ. ನಿಮಗೆ ಆಯಾಸ ಆಗಿದೆ ಅಂದ್ರಿ. ಯಾವುದಾದ್ರೂ ಒಂದಿಷ್ಟು ಪಾನೀಯ ತರ್ತೀನಿ."

ಕಿಚನ್ ಸೇರಿದ ರಾಗಣ್ಣ ತಲೆ ಕೊಡವಿದ.

ಕಾಮಿನಿ ಬಂದುದನ್ನು ಯಾರಾದರೂ ಗಮನಿಸಿದರೆ? ರಾತ್ರಿ ಒಂಬತ್ತೂವರೆಯ ಅವೇಳೆಯಲ್ಲಿ ಅವಿವಾಹಿತನ ಮನೆಯಲ್ಲಿ ಒಂಟಿ ಹೆಣ್ಣು!

ಕಿತ್ತಳೆ ರಸವನ್ನು ಗ್ಲಾಸಿಗೆ ಬಗ್ಗಿಸಿ ನೀರು ಸೇರಿಸಿ ಕಲಕಿದ.

"ಹಳೆ ಕಾಲದ ಮನೆ ಇದು."

ಹಿಂದೆ ಬಂದು ನಿಂತವಳ ಮಾತಿನಿಂದ ಭುಜ ಅಲುಗಿಸಿ ಕತ್ತು ತಿರುಗಿಸಿದ. ಅವಳು ದೊಡ್ಡ ಹೊಗೆ ಗೂಡಿನಲ್ಲಿ ಎರಡು ಸಾರಿ ಇಣುಕಿ ನೋಡಿದಳು.

"ಇಪ್ಪತ್ತೈದು ವರ್ಷದಿಂದ ಇಲ್ಲೇ ಇದೀನಿ. ಶಾಂತವಾದ ಒಂಟಿ ಮನೆ. ಚೆನ್ನಾಗಿ ಒಗ್ಗಿಹೋಗಿದೆ."

ಅವನು ಸುಮ್ಮನೆ ನಿಂತ. ಅವಳು ಲೋಟಗಳಿಗೆ ಸಕ್ಕರೆ ಹಾಕಿ ಚಮಚದಿಂದ ಕಲಕಿದಳು. ಒಂದು ಲೋಟ ಅವನತ್ತ ಹಿಡಿದಳು. ಮೆಲುನಗೆ ಸೂಚಿಸಿ ಗ್ಲಾಸ್ ತೆಗೆದುಕೊಂಡ.

ಗ್ಲಾಸ್ ಹಿಡಿದು ಬೆಡ್‌ರೂಂಗೆ ಬಂದು ಹಾಸಿಗೆಯಲ್ಲಿ ಕಾಲು ಚಾಚಿದಳು. ಎರಡು ಗುಟುಕು ಹೀರಿ ಪರಿಮಳಯುಕ್ತ ಕರವಸ್ತ್ರದಿಂದ ತುಟಿ ಒತ್ತಿದಳು. ಕಣ್ಣುಗಳು ಏಕಾಏಕಿ ಮೇಲೇರಿ ಗೋಡೆಯ ಕ್ಯಾಲೆಂಡರ್ ವೀಕ್ಷಿಸಿದವು. ಬೆತ್ತಲೆ ಹೆಣ್ಣಿನ ನೋಟದಿಂದ ಹುಬ್ಬುಗಳು ಕುಣಿದವು. ಗೋಡೆಯಿಂದ ಇಳಿದ ದೃಷ್ಟಿ. ತಾನಿದ್ದ ಒಂಟಿ ಹಾಸಿಗೆಯ ಮೇಲೆ ಹರಿಯಿತು.

"ನಿಮ್ಮ ಹೆಂಡತಿ ಮನೇಲಿ ಇಲ್ಲವೇನು?"

ಮುಖ ಪಕ್ಕಕ್ಕೆ ಹಾಕಿ ಸಂಕೋಚದಿಂದ ಪ್ರಶ್ನಿಸಿದಳು.

ಅವನು ಗ್ಲಾಸ್ ಹಿಡಿದು ಹಾಗೆಯೇ ನಿಂತಿದ್ದ.

"ನಾನು ಮದುವೆ ಮಾಡಿಕೊಂಡಿಲ್ಲ."

ತಪ್ಪು ಮಾಡಿದವನಂತೆ ಸ್ವರ ಹೊರಡಿಸಿದ.

ಅವಳ ಜೋಡಿ ಜಡೆ, ಹಣೆಯ ಹಸಿರು ಕುಂಕುಮ, ಎದೆಯ ಮೇಲೆ ಕೆಳಕ್ಕಿಳಿದ ಕುಪ್ಪಸ, ಮೃದುವಾದ ತೋಳುಗಳನ್ನು ಕ್ಷಣದಲ್ಲಿ ಅಳೆದ.

ಅವಳು. ಕತ್ತು ತಿರುಗಿಸಿ ನಗೆ ಸೂಸಿದಳು.

"ನಾನು ಬಂದಿದ್ದು ಯಾಕೆ ಗೊತ್ತೆ?"

ಅವನನ್ನು ಅರಿವಿನ ಲೋಕಕ್ಕೆ ಇಳಿಸಿದಳು.

"ಹೌದು, ಅದು ಹೇಳಿ. ನನ್ನ ನಾಟಕಕ್ಕೆ ಸಂಬಂಧಿಸಿದ ವಿಷಯವಾದರೆ ನನ್ನ ಅದೃಷ್ಟ ದೊಡ್ಡದು."

ಗಡಿಯಾರ ನೋಡಿದ. ಒಂಬತ್ತೂ ನಲವತ್ತು!

ಕಕ್ಷಿಗಾರನನ್ನು ನೂರು ಸಾರಿ ಶಪಿಸಿದ. ಕಾಮಿನಿಯೊಂದಿಗೆ ಮಾತನಾಡಲಿರುವ ರಸಮಯ ಸನ್ನಿವೇಶದಲ್ಲಿ ಎಂತಹ ಅಡ್ಡಿ!

ಬೆಡ್‌ರೂಂನ ಸುತ್ತಲೂ ನೋಡಿದಳು.

"ನಾಟಕ ಚೆನ್ನಾಗಿ ಆಡಿಸ್ತೀರಂತೆ."

ಅವನು ತುಸು ಗಂಭೀರನಾದ. ಕಾಮಿನಿ ವಿಷಯವನ್ನು ತಿಳಿಸದೆ ಕಾಲ ವ್ಯರ್ಥ ಮಾಡುತ್ತಿದ್ದಾಳೆ. ಇದರ ಉದ್ದೇಶ?

"ಹೇಳಿದೆನಲ್ಲಾ ನನ್ನದು ಪ್ರಯೋಗಶೀಲ ನಾಟಕ. ಜನಕ್ಕೆ ಹೊಸ ಅಭಿರುಚಿಯ ಕಾವು. ಪ್ರತಿಭೆ ಇರೋ ಹೊಸ ಕಲಾವಿದರು ಸಿಗೋದು ಕಷ್ಟ... ಅಂದ ಹಾಗೆ ನೀವು ರೆಡ್ಡಿಯ ಮಗಳು ಅಲ್ಲ ಅಂದ್ರಿ. ಮತ್ತೆ ಯಾರು ನೀವು?"

"ರೆಡ್ಡಿಯ ಯಜಮಾನನ ಮಗಳು. ಕೇಳಿದ್ದೀರಾ ತಾಡಪತ್ರಿ ರತ್ತಯ್ಯನ ಹೆಸರು? ದೊಡ್ಡ ಕಂಪೆನಿ ಮಾಲೀಕ. ರತ್ತಯ್ಯನ ಮಗಳು ನಾನು. ವೇಮರೆಡ್ಡಿ ನನ್ನ ತಂದೆಯ ಕಂಪೆನಿಯಲ್ಲಿ ಮ್ಯಾನೇಜರ್ ಆಗಿದ್ದ....."

ಬೆರಳು ಕಚ್ಚಿದ ರಾಗಣ್ಣ.

"ಮತ್ತೆ ನಿಮ್ಮ ತಾಯಿ?.... ಅದೇನೊ ಬುದ್ಧಿ ಸರಿಯಾಗಿಲ್ಲ ಅಂತ ಕೇಳ್ದೆ..."

ಅವಳು ನಕ್ಕಳು.

"ಅವಳು ಯಾವ ತಾಯಿ ನನಗೆ! ಅಪ್ಪನ ಹತ್ರ ಇದ್ದ ಹೆಂಗಸರೆಲ್ಲಾ ನನ್ನ ಅಮ್ಮ ಆಗೋದು ಸಾಧ್ಯವಾ? ನನ್ನ ನೋಡೋದಕ್ಕೆ ಬಂದ ವಯಸ್ಸಿನ ಹುಡುಗರೆಲ್ಲಾ ನನ್ನ ಪ್ರೇಮಿಗಳಾ?"

ಅವನಿಗೆ ಮುಂದಿನ ಮಾತು ಮರೆತುಹೋಯಿತು.

"ನಿನ್ನೆ ರಾತ್ರಿ ರೆಡ್ಡಿಗೆ ಹೆದರಿ ಯಾಕೆ ಓಡಿಹೋದ್ರಿ?"

"ಪರಿಸ್ಥಿತಿ ಹಾಗಿತ್ತು. ನಾನು ಓಡಿಹೋಗ್ಲಿಲ್ಲ. ಅಲ್ಲೆ ಹೆಂಗಸರ ಟಾಯ್ಲೆಟ್‌ನಲ್ಲಿ ಸೇರಿಕೊಂಡಿದ್ದೆ."

ಅವನು ಉಗುಳು ನುಂಗಿದ. ಕಾಮಿನಿ ಅರ್ಥವಾಗದ ಹೆಣ್ಣು!

4

ಕಾಮಿನಿ ಮೌನವಾಗಿ ಕುಳಿತಳು. ನಿಧಾನವಾಗಿ ತಲೆ ಎತ್ತಿದಳು. ಕಿವಿ ಓರೆ ಮಾಡಿದಳು.

ಮನೆಯ ಮುಂದೆ ಕಾರು ನಿಂತ ಶಬ್ಧ ಕೇಳಿ ವಕೀಲ ಕೈಲಿದ್ದ ಲೋಟ ಸ್ಟೂಲಿನ ಮೇಲಿಟ್ಟ. ಕಾಮಿನಿ ಹಾಸಿಗೆಯಿಂದ ಎದ್ದು ಹಜಾರದ ಕಿಟಕಿಯಲ್ಲಿ ನೋಡಿದಳು. ಕಾರು ಕಾಣಿಸಿತು.

"ಅಂಕಲ್ ರೆಡ್ಡಿ ಬಂದಹಾಗಿದೆ!"

ಕಂಪಿತ ಧ್ವನಿಯಲ್ಲಿ ನುಡಿದಳು. ಅವನು ಬುದ್ಧಿ ಶೂನ್ಯನಂತೆ ತುಟಿ ಹಿಂಡುತ್ತಾ ನಿಂತ.

ಹೊರಗಡೆ ಕೋಲು ಊರಿದ 'ಕಟ್ ಕಟ್' ಸದ್ದು ಕೇಳಿಸಿತು. ವಕೀಲ ದೀರ್ಘವಾಗಿ ಉಸಿರೆಳೆದುಕೊಂಡ.

"ಹೌದು, ವೇಮರೆಡ್ಡಿ! ಇಲ್ಲಿಗೆ ಯಾಕೆ ಬರ್‍ತಾ ಇದಾನೆ?"

ಅವನ ಸ್ವರದಲ್ಲೂ ಆತಂಕ ತುಂಬಿತ್ತು.

ಕಾಮಿನಿ ಅಡಗಿದ ಗಂಟಲಿನಲ್ಲಿ ಉಸುರಿದಳು.

"ಮೋಸ! ಮೋಸ! ನಾನಿಲ್ಲಿಗೆ ಬರೋದನ್ನ ನೀವು ಅವನಿಗೆ ತಿಳಿಸಿದ್ದೀರಿ."

"ಖಂಡಿತ ಇಲ್ಲ, ಕಾಮಿನಿ. ನನ್ನ ನಂಬಿ."

"ನಾನು ಇಲ್ಲಿ ಬಂದಿರೋದು ಅವನಿಗೆ ಗೊತ್ತಾಗಬಾರದು. ಹೊರಕ್ಕೆ ದಾರಿ ತೋರಿಸಿ. ಇಲ್ಲದಿದ್ರೆ ಅನಾಹುತ ಆಗತ್ತೆ."

ರಾಗಣ್ಣ ಮಿಂಚಿನ ವೇಗದಲ್ಲಿ ಹಿಂಬಾಗಿಲನ್ನು ತೆರೆದು ಅವಳ ಕೈ ಹಿಡಿದು ಆತುರಾತುರವಾಗಿ ಸೂಚಿಸಿದ.

"ಹಿಂಬಾಗಿಲಿನಿಂದ ಹೋಗಿಬಿಡಿ. ಆದರೆ ಅಲ್ಲಿರೋದು ಐದು ಅಡಿ ಎತ್ತರದ ಗೋಡೆ...."

ಅವಳು ಚಡಪಡಿಸುವುದರಲ್ಲಿ 'ಕಟ್ ಕಟ್' ಶಬ್ದ ಗಟ್ಟಿಯಾಗಿ ಕೇಳಿಸಿತು. ಅದರ ಹಿಂದೆಯೇ ಡಿಂಗ್‌ಡಾಂಗ್ ಕರೆಗಂಟೆ ಬಾರಿಸಿತು. ವಕೀಲ ನಿಸ್ಸಹಾಯಕನಂತೆ ಬಾಗಿಲ ದಿಕ್ಕಿಗೆ ತಿರುಗಿದ. ಅವಳು ಹರಿಣಿಯಂತೆ ಸರಿದಳು.

ಮತ್ತೊಮ್ಮೆ ಡಿಂಗ್‌ಡಾಂಗ್ ಮೊಳಗಿತು. ಬಾಗಿಲಿನ ಮೇಲೆ ಕೋಲು ಬಾರಿಸುವ ಸದ್ದು ಜೋರಾಗಿ ಕೇಳಿಸಿತು.

ಉಸಿರು ಬಿಗಿಹಿಡಿದು ವಕೀಲ ಹೊರದೀಪ ಹಾಕಿ ಇಣುಕು ರಂಧ್ರದಲ್ಲಿ ನೋಡಿದ.

ನೆಲಕ್ಕೆ ಕಪ್ಪು ಕೋಲು ಊರಿನಿಂತ ಬಿರುಸು ಮುಖದ ವೇಮರೆಡ್ಡಿ! ಪಕ್ಕದಲ್ಲೊಬ್ಬ ಅಪರಿಚಿತ.

ರಾಗಣ್ಣ ಬಾಗಿಲು ತೆರೆದು ನಿಂತ. ಕೋಲಿನಿಂದ ಅವನನ್ನು ಪಕ್ಕಕ್ಕೆ ಒತ್ತಿದ. ರೆಡ್ಡಿ ಒಳಕ್ಕೆ ನುಗ್ಗಿ ಕರ್ಕಶವಾಗಿ ಕೇಳಿದ.

"ಎಲ್ಲಿ ನನ್ನ ಮಗಳು? ಎಲ್ಲಿ ಅವಳು?"

ಗಿರ್ರನೆ ಕಣ್ಣು ಗುಡ್ಡೆ ಸುತ್ತಿಸಿದ ರೆಡ್ಡಿ. ಮೀಸೆ ಕುಣಿಯಿತು.

"ಯಾರು ನಿಮ್ಮ ಮಗಳು?" ಸೌಮ್ಯವಾಗಿ ಎದುರಿಸಿದ. ಆ ಕೋಪದಲ್ಲೂ ಎದೆ ಮುಂದು ಮಾಡಿ ಚಕಿತನಾದ ರೆಡ್ಡಿ.

"ಕಾಮಿನಿ"

"ಅವಳು ರತ್ತಯ್ಯನ ಮಗಳು."

ನಿರ್ವಿಕಾರದಿಂದ ಸಿಗರೇಟು ತುಟಿಗಿಟ್ಟ ರಾಗಣ್ಣ.

"ಚರ್ಚೆ ಬೇಡ.... ಹುಚ್ಚ! ಎಲ್ಲಿದಾಳೆ ಹೇಳು."

"ಅವಳು ಇಲ್ಲಿಗೆ ಯಾಕೆ ಬರ್ತಾಳೆ?"

ರೆಡ್ಡಿ ಬೇಸರದಿಂದ ಜೊರ್ರನೆ ಕುರ್ಚಿ ಮುಂದಕ್ಕೆ ಎಳೆದು ಕುಳಿತ.

"ವಕೀಲಗಾರು, ಕಾಮಿನಿ ನಾಟಕದಲ್ಲಿ ಅಭಿನಯಿಸಬಾರದೂಂತ ನಿರ್ಧಾರ ಆಗಿದೆ. ನನ್ನ ನಾಟಕದಲ್ಲೇ ಅವಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಅವಳಿಗೆ ನಾಟಕದ ಗೀಳು ಹತ್ತಕೂಡದು. ನಿಮ್ಮ ನಾಟಕದಲ್ಲಿ ಅವಳು ಕಾಣಿಸಿಕೊಂಡ್ರೆ ನಿಮ್ಮನ್ನ ಸುಮ್ಮನೆ ಬಿಡೋದಿಲ್ಲ.... ಸಿಗ್ಗಿಲ್ಲದ ಹುಡುಗಿ."

ರೆಡ್ಡಿಯ ಪಕ್ಕದಲ್ಲಿದ್ದ ಅಪರಿಚಿತ ಮತ್ತೊಂದು ಕುರ್ಚಿ ಹಿಡಿದಾಗಲೇ ವಕೀಲನ ಗಮನ ಅತ್ತ ಹರಿದಿದ್ದು.

"ತಾವು ಯಾರೂಂತ ಕೇಳಬಹುದೆ?" ಸಿಗರೇಟು ಮುಂದೊಡ್ಡಿದ. ಅಪರಿಚಿತ ಅದನ್ನು ನಿರಾಕರಿಸಿದ. ಅವನು ತುಟಿ ಬಿಚ್ಚುವುದರಲ್ಲಿ ರೆಡ್ಡಿ ಅಧಿಕಾರಯುತ ಗಂಟಲಿನಲ್ಲಿ ಹೇಳಿದ.

"ನನ್ನ ಸ್ನೇಹಿತರು, ಸಿ.ಐ.ಡಿ. ಇನ್ಸ್‌ಪೆಕ್ಟರ್ ಗೋವಿಂದರೆಡ್ಡಿ."

ರಾಗಣ್ಣ ಸ್ವಲ್ಪವೂ ವಿಚಲಿತನಾಗಲಿಲ್ಲ.

"ಮಿಸ್ಟರ್ ವೇಮರೆಡ್ಡಿ, ನೀವು ಯಾರನ್ನ ಕರಕೊಂಡು ಬಂದ್ರೂ ನಾನು ಹೆದರೋದಿಲ್ಲ. ಕಾನೂನು ಕಾಯಿದೆ ಅರೆದು ಕುಡಿದಿರೋನು ನಾನು."

"ಕಾಮಿನಿಗೆ ಆಸೆ ತೋರಿಸಿ ಇಲ್ಲಿಗೆ ಬರೋಹಾಗೆ ಮಾಡಿದೀರಿ. ಅವಳು ತಲೆ ಕೆಡಿಸಿಕೊಂಡು ಮಂತ್ರಕ್ಕೆ ಸಿಕ್ಕಿದೋಳ ಹಾಗೆ ಓಡಿಬಂದಿದಾಳೆ."

"ಬಂದಿದಾಳೆ ಅಂತ ಯಾರು ಹೇಳಿದ್ದು?"

"ಕಾಲು ಗಂಟೆ ಮೊದಲು ನನಗೆ ಫೋನ್ ಬಂತು."

ಸಿ.ಐ.ಡಿ. ಕುರ್ಚಿಯ ಹಿಡಿಗೆ ಬೆರಳು ಬಡಿದು ನುಡಿದ. ವೇಮರೆಡ್ಡಿ ಮುಂದುವರಿಸಿದ.

"ಏನೂ ತಿಳಿಯದ ಹುಡುಗಿ ಅವಳು. ನಿಮ್ಮ ಗುಣ ತಿಳಿಯದೆ ಬಂದಿದಾಳೆ. ಅವಳನ್ನ ಸೆಳೆಯೋ ಪ್ರಯತ್ನ ಮಾಡಿದರೆ ನಿಮ್ಮನ್ನ ಏನು ಮಾಡ್ತೀನೋ ಗೊತ್ತಿಲ್ಲ. ಕೋಪ ಬಂದ್ರೆ ನಾನು ಮನುಷ್ಯ ಅಲ್ಲ. ಹೆಣ್ಣಿನ ಮನುಷ್ಯ! ಮದನಕಾಮರಾಜ!"

"ಬುದ್ಧಿ ಕೆಟ್ಟರೆ ನಾನೂ ಮನುಷ್ಯ ಅಲ್ಲ."

ಸಿಗರೇಟು ಧೂಮ ನೋಡುತ್ತಾ ಮರು ನುಡಿದ.

"ಮಾತಿನಿಂದ ಪ್ರಯೋಜನ ಇಲ್ಲ" ಎಂದು ಸಿ.ಐ.ಡಿ. ಇನ್ಸ್‌ಪೆಕ್ಟರನ್ನು ನೋಡಿ ಎದ್ದ ರೆಡ್ಡಿ ಬೆಡ್‌ರೂಂ ದಿಕ್ಕಿಗೆ ತಿರುಗಿ ಗಂಭೀರವಾಗಿ ಕೂಗಿದ.

"ಕಾಮಿ! ಬಾ ಹೊರಗೆ. ನಿನ್ನ ಏನೂ ಮಾಡೋದಿಲ್ಲ."

ನಿಶ್ಶಬ್ದತೆ ತುಂಬಿದ ಕೋಣೆಯತ್ತ ಕೋಲು ಹಿಡಿದು ಅಡಿ ಇಟ್ಟ. ರಾಗಣ್ಣನ ಮೈ ಕಂಪಿಸಿತು.

"ನಿಮಗೆ ಸುಳ್ಳು ಸುದ್ದಿ ಬಂದಿದೆ. ಕಾಮಿನಿ ಇಲ್ಲಿಗೆ ಬಂದ ವಿಷಯ ಇರಲಿ. ಅವಳು ಯಾರು ಅನ್ನೋದೆ ಗೊತ್ತಿಲ್ಲ. ದಯವಿಟ್ಟು ಹೊರಡಿ ಇಲ್ಲಿಂದ."

ವಕೀಲ ಬೆಡ್ ರೂಂ ಬಾಗಿಲಿಗೆ ಅಡ್ಡ ನಿಂತ.

"ಹೋಗು ಪಕ್ಕಕ್ಕೆ" ಕೋಲು ಎತ್ತಿದ ರೆಡ್ಡಿ.

"ನಾನು ಅಡ್ವೊಕೇಟ್ ಅನ್ನೋದು ಮರೆತಿದ್ದೀರಿ. ನೀವು ಮಾಡಿರೋದು ಅತಿಕ್ರಮ ಪ್ರವೇಶ. ಕೋಣೆ ಹುಡುಕೋದಿಕ್ಕೆ ಅವಕಾಶ ಕೊಡೋದಿಲ್ಲ."

"ಗೆಟ್ ಬ್ಯಾಕ್!"

ಸಿ.ಐ.ಡಿ. ಇನ್ಸ್‌ಪೆಕ್ಟರ್ ಕರ್ಕಶವಾಗಿ ಅರಚಿ ಅವನನ್ನು ಗೋಡೆಗೆ ತಳ್ಳಿದ. ರೆಡ್ಡಿ ಕೋಲಿನಿಂದ ಬೆಡ್ ರೂಂ ಬಾಗಿಲು ತಳ್ಳಿ ಬಗ್ಗಿ ನೋಡಿದ. ಸುಗಂಧದ ವಾಸನೆ ಮೂಗಿಗೆ ಅಡರಿತು. ಗಾಢವಾಗಿ ಪರಿಮಳವನ್ನು ಆಘ್ರಾಣಿಸಿ ಒಳಕ್ಕೆ ನುಗ್ಗಿದ. ನಿಮಿಷದ ನಂತರ ಅವನು ಹೊರಬರುವವರೆಗೆ ರಾಗಣ್ಣನಿಗೆ ಜೀವದಲ್ಲಿ ಜೀವ ಇರಲಿಲ್ಲ.

"ಕಾಮಿನಿ ಇರಲಿಲ್ಲ."

ಎಂದ ರೆಡ್ಡಿ ಕಿಚನ್, ಬಾತ್ ರೂಂ, ಟಾಯ್ಲೆಟ್‌ಗಳಲ್ಲಿ ಕಾಲಾಡಿಸಿ ಹೊರಬರುವುದರಲ್ಲಿ ಇನ್ಸ್‌ಪೆಕ್ಟರ್ ನಿರಾಶೆಯ ಉದ್ಗಾರ ತೆಗೆದ.

"ಕಾಮಿನಿ ಇಲ್ಲಿಂದ ಹಾರಿ ಹೋಗಿದಾಳೆ."

ರೆಡ್ಡಿ ಬೋಲ್ಟ್ ಬಿಚ್ಚಿದ ಹಿಂಬಾಗಿಲನ್ನು ನೋಡಿ ಕೋಲು ಗೋಡೆಗೆ ಬಾರಿಸಿದ. ಮನೆ ಹಿಂದಿನ ಕತ್ತಲನ್ನು ನೋಡಿ ಸರಕ್ಕನೆ ಹಿಂದಕ್ಕೆ ಬಂದು ಮತ್ತೆ ಬೆಡ್ ರೂಂಗೆ ನುಗ್ಗಿದ.

"ಬನ್ನಿ ಇಲ್ಲಿ."

ಅವನ ಕರೆಗೆ ಇಬ್ಬರೂ ಒಳಬಂದರು. ರೆಡ್ಡಿಯ ಕೋಲು ಮಂಚದ ಪಕ್ಕದಲ್ಲಿ ನೆಲದ ಮೇಲಿದ್ದ ಹಳದಿ ಚಪ್ಪಲಿಗಳನ್ನು ತಿವಿದು ತೋರಿಸಿತು.

"ಹೈದರಾಬಾದ್‌ನಿಂದ ಕಾಮಿನಿಗೆ ನಾನು ತಂದುಕೊಟ್ಟ ಚಪ್ಪಲಿ."

"ಈ ಸಿಟಿಯಲ್ಲಿ ಇಂಥಾ ಚಪ್ಪಲಿ ಧರಿಸೊ ಹೆಣ್ಣುಗಳು ಸಾವಿರ ಮಂದಿ. ಅವರಲ್ಲಿ ನನ್ನ ನೋಡೋಕೆ ಬರೋರು ನೂರು ಮಂದಿ."

ವಕೀಲ ನಿರ್ಯೋಚನೆಯಿಂದ ಸಿಗರೇಟಿನ ಬೂದಿ ಕೊಡಿವಿದ

"ಕಾಮಣ್ಣ!" ಹಲ್ಲು ಕಚ್ಚಿ ಕೂಗಿದ ರೆಡ್ಡಿ.

ಕೋಣೆಯೆಲ್ಲಾ ಆವರಿಸಿದ 'ಇಂಟಿಮೇಟ್' ಪರಿಮಳವನ್ನು ಪದೇ ಪದೇ ಅರಳಿದ ನಾಸಿಕದಿಂದ ಗ್ರಹಿಸಿದ ರೆಡ್ಡಿ ಪಕ್ಕನೆ ಹಾಸಿಗೆಯಲ್ಲಿದ್ದ ಹಸಿರು ಕರವಸ್ತ್ರವನ್ನು ಎತ್ತಿಕೊಂಡ.

"ಇದೂ ಕಾಮಿನಿದು!"

ಕಾಮಿನಿಯನ್ನೇ ಕಂಡಷ್ಟು ಆತುರ, ಉದ್ರೇಕದಲ್ಲಿ ಬಂತು ಸ್ವರಗ.

"ಸುಗಂಧ ಕರವಸ್ತ್ರ ಎಲ್ಲಾ ಹೆಣ್ಣುಗಳ ಜೊತೆಯಲ್ಲೇ ಹುಟ್ಟಿ ಬರೋದು"

ರಾಗಣ್ಣನ ಪ್ರತಿಕ್ರಿಯೆಯಿಂದ ಸಿ.ಐ.ಡಿ. ನಗೆ ತಡೆದ. ರೆಡ್ಡಿ ಮತ್ತಷ್ಟು ಕ್ರುದ್ಧನಾದ. ಸೋತವನಂತೆ ಹಜಾರಕ್ಕೆ ಬಂದು ಕುರ್ಚಿಗೆ ಕುಸಿದು ಕುಳಿತ.

"ಗೋವಿಂದರೆಡ್ಡಿ ಗಾರು, ಕಾಮಿ ಇಲ್ಲಿಗೆ ಬಂದಿರೋದು ಹದಿನಾರಾಣೆ ಸತ್ಯ. ನಿನ್ನೆ ಅಲ್ಲಿಂದ ಓಡಿದ್ಲು. ಈಗ ಇಲ್ಲಿಂದ ಗೋಡೆ ಹಾರಿ ಹೋಗಿದಾಳೆ.... ಉಹುಂ, ನಾವು ಬಂಇದದ್ದು ನೋಡಿ ಈ ಕೆಟ್ಟ ವಕೀಲ ಅವಳನ್ನ ಹಿಂದಿನ ಗೋಡೆ ಹತ್ತಿಸಿ ಸಾಗಿಸಿಬಿಟ್ಟ."

ತನ್ನ ಬಗ್ಗೆ ಏಕಾಏಕಿ ಉಂಟಾದಾಗ ಬಾಯಿಗೆ ಬಂದಿದ್ದೇ ಮಾತು."

"ನಾಟಕದಲ್ಲಿ ಅಭಿನಯಿಸೋ ಹುಚ್ಚು ಅವಳಿಗೆ. ಅದು ಕೂಡದು ಅಂತ ನಾವು ನಮ್ಮ ನಾಟಕಗಳ ಮೇಲೆ ವಕೀಲನಿಗೆ ಎಲ್ಲಿಲ್ಲದ ತಿರಸ್ಕಾರ. ನಮ್ಮ ಹುಡುಗಿನ ಅವನ ನಾಟಕದಲ್ಲಿ ತಂದು ನಮ್ಮ ಮುಖಕ್ಕೆ ಮಸಿ ಹಚ್ಚುವ ಮಸಲತ್ತು ಇದು."

ಅಷ್ಟು ಹೇಳಿದ ರೆಡ್ಡಿ ರೋಷದಿಂದ ಸರಕ್ಕನೆ ಎದ್ದು ವಕೀಲನ ಭುಜ ಒತ್ತಿದ. ಬುಸುಗುಡುತ್ತಾ ಒದರಿದ.

"ಶತ್ರು! ನಿನ್ನ ಬಿಟ್ಟೇನಾ? ಆ ಕಾಮಿನಿನ ಎಲ್ಲಿದ್ರೂ ಹುಡುಕಿ ತರ್ತೀನಿ. ನನ್ನ ಮರ್ಯಾದೆ ತೊಳೆದವಳನ್ನ ಕೊಂದುಬಿಡ್ತೀನಿ... ಕೊಂದು ಬಿಡ್ತೀನಿ!"

ಗೋವಿಂದರೆಡ್ಡಿ ಏನೋ ಯೋಚಿಸಿ ಬೆಡ್‌ರೂಂ ಸೇರಿದವನು ಮೂರು ನಿಮಿಷಗಳ ನಂತರ ಹೊರಬಂದ. ಒಂದು ಕೈಲಿ ಕಾಗದ ಸುತ್ತಿದ ವಸ್ತು. ಮತ್ತೊಂದು ಕೈಲಿ ಕರವಸ್ತ್ರದಲ್ಲಿ ಕಟ್ಟಿದ ವಸ್ತು. ಎರಡನ್ನೂ ಹೆಮ್ಮೆಯಿಂದ ಎತ್ತಿದ.

"ಕಾಮಿನಿ ಬಿಟ್ಟು ಹೋದ ಚಪ್ಪಲಿ, ಕರವಸ್ತ್ರ ಇಲ್ಲಿವೆ. ನಾಲ್ಕು ಟಂಬ್ಲರ್ ಜೋಪಾನ ಮಾಡಿದೀನಿ. ಅವುಗಳ ಮೇಲೆ ಬಿದ್ದಿರೊ ಬೆರಳಿನ ಗುರುತು ನಾಳೆ ದಿನ ಕಥೆ ಹೇಳುತ್ತೆ."

ವೇಮರೆಡ್ಡಿ ಒಂದು ಮಾತೂ ಆಡದೆ ನೆಲಕ್ಕೆ ಕೋಲು ಬಾರಿಸುತ್ತಾ ಹೊರಬಿದ್ದ. ಸಿ.ಐ.ಡಿ. ಇನ್ಸ್‌ಪೆಕ್ಟರ್ ಅವನನ್ನು ಅನುಸರಿಸಿದ.

ಮೂಕನಾಗಿ ನಿಂತಿದ್ದ ರಾಗಣ್ಣ ಕಾರು ಹೊರಟ ಸದ್ದು ಕೇಳಿ ನೀಳವಾಗಿ ಉಸಿರಿಟ್ಟ ಕಾಮಿನಿಯ ಭೇಟಿಯಿಂದ ಏನೂ ಸಾಧಿಸಲಾಗದವನು ಹಿಂಬಾಗಿಲಿನ ಬೋಲ್ಟ್ ಹಾಕಿ ಕಿಚನ್‌ಗೆ ಬಂದಾಗ ಅವನ ತಲೆ ಕುಟುಕಿತು ಪ್ರಶ್ನೆ.

ಐದು ಅಡಿ ಎತ್ತರದ ಗೋಡೆಯನ್ನು ಹೇಗೆ ದಾಟಿಹೋಯಿತು ಆ ಹೆಣ್ಣು?

ಮಾನಸಿಕ ವೇದನೆಯಿಂದ ಆಯಾಸವಾಗಿತ್ತು. ಲೋಟಕ್ಕೆ ನೀರು ಬಗ್ಗಿಸಿ ತುಟಿಗೆತ್ತಿದ.

"ಅಡ್ವೋಕೇಟ್‌ಗಾರು...!"

ರಾಗದಿಂದ ಹರಿದ ಮೆದು ಕರೆಯಿಂದ ಬೆಚ್ಚಿದ ಅಡ್ವೋಕೇಟ್ ಕುಡಿಯುತ್ತಿದ್ದ ನೀರನ್ನು ಎದೆಯ ಮೇಲೆ ಚೆಲ್ಲಿಕೊಂಡು ಸುತ್ತಲೂ ನೋಡಿದ. ಚಣಕಾಲ ಬೆಪ್ಪಾಗಿ ಎರಡು ಹೆಜ್ಜೆ ಸರಿದು ಹೊಗೆ ಗೂಡಿನಲ್ಲಿ ಇಣುಕಿದ. ಇಳಿಬಿದ್ದ ಕಾಲನ್ನು ತಟ್ಟಿ ಪಿಸುಗಿದ.

"ಇಳಿದು ಬನ್ನಿ ಹೊರಕ್ಕೆ ಸರ್ಕಸ್ ಮಾಡಿದ್ದು ಸಾಕು. ಹಾರಿ ಹೋದ್ರಿ ಅಂತ ತಿಳಿದೆ."

ಕಾಮಿನಿ ಹೊಗೆ ಗೂಡಿನಿಂದ ಕೆಳಕ್ಕಿಳಿದಳು. 'ಉಫ್' ಎಂದು ಬಿಡುಗಡೆಯ ಉಸಿರು ಹಾಕಿ ಮೈ ಮುರಿದು ಜಡವಾದ ಅಂಗಗಳನ್ನು ಉಜ್ಜಿದಳು. ರಾಗಣ್ಣ ತಂದುಕೊಟ್ಟ ಟವೆಲಿನಿಂದ ಮುಖ, ಕೈ ಒರಸಿಕೊಂಡು ಕೆದರಿದ ತಲೆಗೂದಲಿಗೆ ಕೈ ಆಡಿಸಿದಳು.

ಅವಳ ಅಂಗಾಂಗ ಚಲನೆಯನ್ನು ಆಸೆಯಿಂದ ವೀಕ್ಷಿಸಿದ ವಕೀಲ ತಲೆಯಲ್ಲಿ ಗೊಂದಲ ಹೂಡಿದ.

ತಾನು ಅವಿವಾಹಿತನಾಗಿ ಉಳಿದುದು ತಪ್ಪು! ಬದುಕಿನ ಮಹಾಗ್ರಂಥದಲ್ಲಿ ಮುಖ್ಯ ಅಧ್ಯಾಯವನ್ನು ಓದದೆ ಬಿಟ್ಟಿರುವೆ.

ಕಾಮಿನಿ ಮೋಹಕವಾಗಿ ಕೈ ತಿರುಗಿಸಿದಳು.

"ಅಪ್ಪನ ಕೈ ಕೆಳಗೆ ದುಡಿದ ರೆಡ್ಡಿಗೆ ಎಷ್ಟು ಆಟಾಟೋಪ! ನನ್ನ ಕೊಂದುಬಿಡ್ತಾನಂತೆ. ನನ್ನ ಚಪ್ಪಲಿ ಬೇರೆ ಒಯ್ದುಬಿಟ್ಟ."

ಇಬ್ಬರೂ ನಕ್ಕರು. ವಕೀಲ ಏಕದಂ ನಗೆ ನಿಲ್ಲಿಸಿ ಗಡಿಯಾರ ನೋಡಿದ. ಹತ್ತೂಕಾಲು!

ತುಟಿ ಕಚ್ಚಿ ಕಣ್ಣು ಅರಳಿಸಿದ. ಪೂನಾ ಮೈಲ್ ಹೊರಡಲು ಇನ್ನು ಕೇವಲ ಹದಿನೈದು ನಿಮಿಷ!

"ಕಾಮಿನಿ ನನಗೆ ಮುಕ್ಕಾಲು ಗಂಟೆ ಅವಕಾಶ ಕೊಡಿ. ರೈಲ್ವೆ ಸ್ಟೇಷನ್‌ಗೆ ಹೋಗಿ ಹಾಲು ಫೈಲ್‌ನ ಅಯೋಗ್ಯ ಕಕ್ಷಿಗಾರನ ಮುಖಕ್ಕೆ ಎಸೆದು ಬರ್ತೀನಿ. ಆಮೇಲೆ ಬೆಳಗಾಗುವವರೆಗೆ ನಿಮ್ಮ ಮಾತು ಕೇಳ್ತಾ ಕೂಡ್ತೀನಿ."

"ಹೊಗ್ಬನ್ನಿ."

ಬಾಯಿಗೆ ಕೈ ಅಡ್ಡ ಇಟ್ಟು ಆಕಳಿಸುತ್ತಾ ನಿರಾತಂಕವಾಗಿ ಹೇಳಿದಳು.

"ಬೋಲ್ಟ್ ಭದ್ರಮಾಡಿ ಬೆಡ್‌ರೂಂ ದೀಪ ಮಾತ್ರ ಹಾಕಿರಿ. ಭಯ ಆದ್ರೆ ದೀಪ ಆರಿಸಿಬಿಡಿ. ಯಾರು ಬಂದು ಕೂಗಿದರೂ ಬಾಗಿಲು ತೆಗಿಬೇಡಿ. ನಾನು ಬಂದಿದೀನಿ ಅನ್ನೋದಕ್ಕೆ ಗುರುತು ಸುಲಭ. ಡಿಂಗ್ ಡಾಂಗ್ ಗಂಟೆ ಎರಡು ಸಾರಿ ಬಾರಿಸ್ತೀನಿ."

"ಫೈಲ್ ಕಟ್ಟನ್ನು ಬಗಲಿಗಿಟ್ಟು ಬಾಗಿಲು ಮುಚ್ಚಿ ಲಟಾರಿ ಕಾರನ್ನು ಸ್ಟೇಷನ್ ದಿಕ್ಕಿಗೆ ಚಲಾಯಿಸಿದ. ಹದಿನೈದು ನಿಮಿಷ ತಡವಾದರೂ ಪೂನಾ ರೈಲು ಇನ್ನೂ ಹೊರಟಿರಲಿಲ್ಲ. ಎಂಜಿನ್‌ನಿಂದ ಗಾರ್ಡ್ ಡಬ್ಬಿಯವರೆಗೆ ನೋಡುತ್ತಾ ನಡೆದ. ಪ್ರತಿ ಬೋಗಿಯಲ್ಲೂ ಇಣುಕಿದ. ಎಲ್ಲೂ ಕಕ್ಷಿಗಾರ ಶಾವಂದಪ್ಪನ ಸುಳಿವಿಲ್ಲ.

ಇತ್ತ ಫೈಲ್ ಕೈ ಬಿಡಲಿಲ್ಲ. ಅತ್ತ ಕಾಮಿನಿಯೊಂದಿಗೆ ಮಾತು ಸಾಗಲಿಲ್ಲ. ಬೇಜವಾಬ್ದಾರಿ ಕಕ್ಷಿಗಾರ.

ರೈಲು ಹೊರಡುತ್ತಲೇ ವಕೀಲ ಕ್ಷಣವೂ ತಡಮಾಡದೆ ಅಲಸೂರಿನತ್ತ ವೇಗದಿಂದ ವಾಹನ ನಡೆಸಿದ. ತಲೆಯಲ್ಲಿ ಆಗಲೂ ಮೊರೆತ.

ಕಾಮಿನಿ ಹೇಳಲಿರುವ ವಿಷಯ ಯಾವುದು? ಬಹುಶಃ ನಾಟಕದಲ್ಲಿ ಅಭಿನಯಿಸುವ ವಿಷಯ. ಮದ್ರಾಸಿನಲ್ಲಿ ಓದಿದವಳೆಂದು ಹೇಳಿದಳು. ನಾಟಕದ ಕಂಪೆನಿ ಮಾಲೀಕನ ಮಗಳಿಗೆ ನಾಟಕದಲ್ಲಿ ಅಭಿನಯಿಸುವ ಇಚ್ಛೆ ಸ್ವಾಭಾವಿಕ. ತಮಿಳುನಾಡಿನ ಹಳೆಯ ಕಾಲದ ಗದ್ದಲದ ನಾಟಕಗಳನ್ನು ನೋಡಿ ಬೇಸರಗೊಂಡವಳಿಗೆ ಕಲಾಪೂರ್ಣ ನಾಟಕಗಳು ಹಿಡಿಸಿರಬೇಕು. ಅದಕ್ಕಾಗಿ ಮದ್ರಾಸಿನಿಂದ ತನಗೆ ಕಾಗದ ಹಾಕಿದ್ದಾಳೆ.

ಅವಳು ತನ್ನ ಮನೆಗೆ ಬಂದುದನ್ನು ಫೋನ್‌ನಲ್ಲಿ ವೇಮರೆಡ್ಡಿಗೆ ತಿಳಿಸಿದವರು ಯಾರು? ರೆಡ್ಡಿ ತನ್ನೊಂದಿಗೆ ಸಿ.ಐ.ಡಿ ಇನ್ಸ್‌ಪೆಕ್ಟರನ್ನು ಕರೆತಂದ ಕಾರಣ?

ಲಿಡೊ ಚಿತ್ರಮಂದಿರ ದಾಟಿದೊಡನೆ ಅರಳಿ ಮರದ ನೆತ್ತಿಯಿಂದ ನಿಶ್ಶಬ್ದತೆಯನ್ನು ಸೀಳುವಂತೆ 'ಗೂಕ್' ಶಬ್ದ ಕೇಳಿಸಿತು. ಕೈನ ಚಕ್ರ ತುಸು ಹತೋಟಿ ತಪ್ಪಿತು.

ಹಾಲಕ್ಕಿಯ ಕೂಗಲ್ಲ. ಇದು ಗೂಬೆಯ ಘೂತ್ಕಾರ.

ವಾರ ಪೂರ್ತಿ ತನ್ನ ಕಡೆಗೆ ನಕ್ಷತ್ರಗಳು ಕ್ರುದ್ಧಗೊಂಡಿವೆ. ವೆಂಕೋಬ ಹೇಳುವಂತೆ ತಾನು ಹಳೆಯ ಹುಲಿಯಾದರೂ ಕಾಲಕ್ಕೆ ಹಿಂದೆಬಿದ್ದ ಶಕುನ ಶರಣ. ಶಕುನ ಪಕ್ಷಿ ಇಂದು ನಿನ್ನೆಯದಲ್ಲ. ಪ್ರಾಚೀನ ಶಕುನದಲ್ಲಿ ನಂಬಿಕೆ ಇಟ್ಟ ತನಗೆ ಈತನಕ ನಂಬಿಕೆ ಕೆಡುವಂತಹ ಪ್ರಸಂಗ ನಡೆದಿಲ್ಲ. ವೆಂಕೋಬನದು ಎಳಸು ಬುದ್ಧಿ.

ನಿಶ್ಯಬ್ದ ವಾತಾವರಣದ ಮನೆಯ ಮುಂದೆ ಕಾರು ಪ್ರಯಾಸದಿಂದ ನಿಂತಿತು. ಮತ್ತೆ ಅದನ್ನು ಸ್ಟಾರ್ಟ್ ಮಾಡಿ ಗ್ಯಾರೇಜಿಗೆ ಸೇರಿಸಿ ಮೆಲ್ಲಗೆ ಬಾಗಿಲಿನ ಮುಂದೆ ನಿಂತು ಕರೆಗಂಟೆ ಎರಡು ಸಾರಿ ಒತ್ತಿದ. ಡಿಂಗ್‌ಡಾಂಗ್ ಗಂಟೆಯ ಜೋಡಿ ಶಬ್ದ ಒಳಗಡೆ ಜೋರಾಗಿ ಮೊಳಗಿದುದು ಕೇಳಿಸಿತುಗ. ಕೈನ ಒತ್ತಡಕ್ಕೆ ಬಾಗಿಲು ಒಳಕ್ಕೆ ಸರಿಯಿತು. ಬೇಸರಗೊಂಡ.

ತಾನು ಸೂಚಿಸಿದಂತೆ ಕಾಮಿನಿ ಹೊರಬಾಗಿಲು ಭದ್ರಪಡಿಸಿಕೊಂಡಿಲ್ಲ!

ಬೆಡ್ ರೂಂನಲ್ಲಿ ಕತ್ತಲು ತುಂಬಿತ್ತು. ಮೆಲ್ಲನೆ ಅಡಿಯಿಟ್ಟು, ದೀಪ ಹಾಕಿದ. ದಿಂಬಿಗೆ ಓರೆಯಾಗಿಟ್ಟು ನೀಳವಾಗಿ ದೇಹ ಚೆಲ್ಲಿದ ಕಾಮಿನಿಗೆ ಗಾಢನಿದ್ರೆ.

"ನಿದ್ರೆ ಹತ್ತಿಬಿಟ್ಟಿದೆಯಲ್ಲ."

ಮಂಚದ ಕಟ್ಟಿಗೆ ಬೆರಳು ಬಡಿದ. ಅವಳು ಎಚ್ಚರಗೊಳ್ಳಲಿಲ್ಲ.

ಇಂಟಿಮೇಟ್ ಸುಗಂಧದ ವಾಸನೆ ಸ್ವಲ್ಪವೂ ಕುಗ್ಗಿರಲಿಲ್ಲ.

ಬ್ರಹ್ಮಚಾರಿ ಅವಳ ನಿದ್ರಾಬಂಗಿ ನೋಡಿ. ಮೋಹಕ ಶರೀರ ಅವಳದು. ನುಣುಪಾದ ತೋಳನ್ನು ಮೆಲ್ಲನೆ ಒತ್ತಿ ಕರೆದ.

"ಕಾಮಿನಿ...."

ಕಾಮಿನಿ ಮೈ ಅಲುಗಿಸಲಿಲ್ಲ. ಉತ್ತೇಜಿತ ಕೈ ಅವಳ ತೋಳು ಸವರಿ ಹಸ್ತದವರೆಗೆ ಮೃದುವಾಗಿ ನೇವರಿಸಿತು. ಆ ಕೈ ಹಾಗೆಯೇ ನಿಂತಿತು.

ವಕೀಲನ ಕಣ್ಣುಗಳು ಕಿರಿದಾದವು. ಮೆಲು ತುಟಿಯನ್ನು ಹಲ್ಲುಗಳು ಬಿಗಿ ಹಿಡಿದವು.

"ಕಾಮಿನಿ!"

ತುಸು ಗಡಸು ಗಂಟಲಿನಲ್ಲಿ ಕೂಗಿ ಶರೀರವನ್ನು ಅಲುಗಿಸಿದ. ಕಾಮಿನಿಯ ಸುಂದರ ಮುಖ ದಿಂಬಿನಿಂದ ಕೆಳಕ್ಕೆ ಜೋಲಿತು. ಚೆಲುವ ತುಂಬಿದ ಮೈ ಅದೆಷ್ಟು ತಣ್ಣಗಿದೆ!

ಅವಿವಾಹಿತನ ತಲೆಯಲ್ಲಿ ತರಂಗ ಎಬ್ಬಿಸಿದ ಕಾಮಿನಿ ನಿರ್ಜೀವ ಬೊಂಬೆಯಾಗಿದ್ದಳು.

5

ಹಜಾರದ ಕುರ್ಚಿಯಲ್ಲಿ ತಲೆಗೆ ಕೈ ಹಚ್ಚಿ ಕುಳಿತ ರಾಗಣ್ಣ ತನಗಷ್ಟೇ ಕೇಳುವಂತೆ ಪಿಸುಗುಟ್ಟಿದ.

"ಕಾಮಿನಿ ಕೊಲೆಯಾಗಿದ್ದಾಳೆ!"

ವೇಮರೆಡ್ಡಿ ಹೊರಡುವ ಮೊದಲು ರೋಷದಿಂದ ಆಡಿ ಹೋದ ಮಾತು ಮೆದುಳಿನಲ್ಲಿ ಹರಿದು ಬಂತು. ಕಾಮಿನಿಯನ್ನು ಕೊಲ್ಲುವುದಾಗಿ ಹೇಳಿದ್ದ ಅವನು.

ವೇಮರೆಡ್ಡಿ ತನ್ನ ಧಣಿಯ ಮಗಳನ್ನು ಏಕೆ ಕೊಲೆ ಮಾಡಿದ? ತಾನು ಸ್ಟೇಷನ್‌ಗೆ ಹೋಗಿ ಬರುವುದರಲ್ಲಿ ಧೂರ್ತ ಕಾರ್ಯ ಸಾಗಿಸಿದ್ದಾನೆ.

ಎದ್ದು ಬೆಡ್‌ರೂಂಗೆ ಬಂದ. ಚಿರನಿದ್ರೆಯ ಸುಂದರಿ ಈಗ ಚೆಲುವಿನಿಂದ ದೂರವಾಗಿದ್ದಾಳೆ. ಅವಳ ತಲೆ ಅತ್ತಿತ್ತ ಆಡಿಸಿದ. ಅನುಭವಿಗೆ ಸ್ಪಷ್ಟವಾಯಿತು. ಅದು ಕತ್ತು ಹಿಸುಕಿ ಮಾಡಿದ ಕೊಲೆ.

ಮೆದುಳಿನಲ್ಲಿ ಮತ್ತೊಂದು ಅಲೆ ಎದ್ದಿತು. ಕಾಮಿನಿ ಹತ್ತು ಗಂಟೆಯ ನಂತರ 'ನೃತ್ಯ ನಿಕೇತನ'ಕ್ಕೆ ಭೇಟಿ ಕೊಡಲಿದ್ದವಳು. ತಾನಿಲ್ಲದ ವೇಳೆಲ್ಲಿ ಡಾನ್ಸ್ ಮಾಸ್ಟರ್ ರಾಜಾರಾಮ ಇಲ್ಲಿಗೇ ಬಂದು ಅವಳನ್ನು ಕೊಲೆ ಮಾಡಿರಬಹುದೆ? ಹತ್ತು ಗಂಟೆಯ ಮೇಲೆ ರಾಜಾರಾಮನನ್ನು ಕಾಣುವ ಬಗ್ಗೆ ಕಾಮಿನಿ ತನ್ನಲ್ಲಿ ಒಂದು ಮಾತೂ ಆಡಲಿಲ್ಲ.

ಕೊಲೆ ಮಾಡುವ ಮೊದಲು ಕಾಮಿನಿ ಇಲ್ಲಿರುವುದನ್ನು ಖಚಿತಪಡಿಸಿಕೊಳ್ಳಲು ವೇಮರೆಡ್ಡಿ ಇಲ್ಲಿಗೆ ಬಂದ. ಅವನೊಂದಿಗೆ ಬಂದಿದ್ದ ಗೋವಿಂದ ರೆಡ್ಡಿ ಸಿಐಡಿ ಇನ್ಸ್‌ಪೆಕ್ಟರ್ ಅಲ್ಲ. ಅವನೊಬ್ಬ ಢೋಂಗಿ ಮನುಷ್ಯ!

ವಕೀಲ ಮತ್ತಷ್ಟು ಹತ್ತಿರದಿಂದ ಮೃತಳನ್ನು ಗಮನಿಸಿದ. ಹಸಿರು ಕುಂಕುಮ ಕಲಸಿದೆ. ಜೋಡಿ ಜಡೆಯ ತಲೆಗೂದಲು ಸ್ವಲ್ಪ ಕೆದರಿದೆ. ಕಿವಿಗಳ ಹರಳು ನಕ್ಷತ್ರಗಳು, ಕುತ್ತಿಗೆಯ ಚಿನ್ನದ ಸರ ಹಾಗೆಯೇ ಉಳಿದಿದೆ. ಕೊಲೆಯ ಉದ್ದೇಶ ದರೋಡೆ ಅಲ್ಲ!

ಕಪ್ಪು ಡಯಲ್‌ನ ಕೈ ಗಡಿಯಾರದತ್ತ ಕಣ್ಣು ಹರಿದಾಗ ಕುತೂಹಲಗೊಂಡ. ಎಡ ಮುಷ್ಟಿ ಬಿಗಿದಿತ್ತು. ಅದನ್ನು ಮೆಲ್ಲನೆ ಬಿಡಿಸಿದ. ಹತ್ತಾರು ಕೂದಲುಗಳು ಇದ್ದವು. ಎರಡು ಮೂರು ಅರೆ ನರೆತ ಕೂದಲುಗಳು. ದೇಹ ಹೊರಳಿಸಿದಾಗ ಕೆದರಿದ ಹಾಸಿಗೆಯ ಮೇಲೆ ಮತ್ತಷ್ಟು ಕೂದಲುಗಳು ದೊರೆತವು.

ಕಾನೂನಿನ ಹಳೆಯ ಹುಲಿ ಏನೊ ಯೋಚಿಸಿದ. ನಾಲ್ಕೈದು ಅರೆನೆರೆತ ಕೂದಲುಗಳನ್ನು ಜೇಬಿಗೆ ಹಾಕಿಕೊಂಡ. ಉಳಿದವನ್ನು ಮೃತಳಕುಪ್ಪಸದಲ್ಲಿ ಸೇರಿಸಿದ.

ಹನ್ನೆರಡು ಗಂಟೆಗೆ ಐದು ನಿಮಿಷ ಕಡಿಮೆ ಎಂದು ಗಡಿಯಾರ ಸೂಚಿಸಿತು. ತಲೆಯಲ್ಲಿ ಬಿಸಿ ಹೊಗೆ ಎದ್ದಿತು.

ಈ ದೇಹವನ್ನು ಏನು ಮಾಡುವುದು?

ಶಕುನದ ರಾಗ ತಲೆಯಲ್ಲಿ ಗುಯಿಗುಟ್ಟಿತು.

ನಿಷ್ಟ ಮೈ ಮೇಲೆ ಜಿಗೀತ್ಯೆತೆ – ಮುಖವಾಡ ಹಾಕಿ ಎದುರಿಗೇ ನಿಂತ್ಯೆತೆ ಶತ್ರು....

ಹೌದು, ಕಾಮಿನಿ ತನ್ನ ಶತ್ರು. ತನ್ನ ಮನೆಗೇ ಬಂದು ಕೊಲೆಯಾಗಿ ಅನಿಷ್ಟವಾಗಿ ಕಾಡುತ್ತಿದ್ದಾಳೆ.

ಚಿಂತೆಯ ಗುಂಗಿನಲ್ಲಿ ಫಕ್ಕನೆ ತಲೆ ಎತ್ತಿದ.

ಡಿಂಗ್‌ಡಾಂಗ್ ಕರೆಗಂಟೆಯ ನಾದ! ಕನಸಿನಲ್ಲಿ ಕೇಳಿದ ಶಬ್ದದಂತಿತ್ತು.

ಇದು ಕಲ್ಪನೆ ಅಲ್ಲ. ನಿಜಕ್ಕೂ ಕೇಳಿಸುತ್ತಿರುವ ಶಬ್ದ. ಮೂರನೆಯ ಬಾರಿ ಬಂದ ಕರೆಯಿಂದ ಮೈ 'ಜುಂ' ಎಂದಿತು.

ತಲೆ ಕೆಟ್ಟ ಏಕಾಕಿಯ ಮುಂದೆ ಯುವತಿಯ ಮೃತದೇಹ! ಮಧ್ಯ ರಾತ್ರಿಯಲ್ಲಿ ಹೊರಗಡೆ ನಿಂತು ಕರೆಯುವ ವ್ಯಕ್ತಿ!

ಮತ್ತೆ ವೇಮರೆಡ್ಡಿಯ ಯಮದರ್ಶನ?

ಹೊರದೀಪ ಹಾಕಿ ಇಣುಕು ರಂಧ್ರಕ್ಕೆ ಕಣ್ಣಿಟ್ಟ.

ತುಂಬುತೋಳಿನ ಕೆಂಪು ಸ್ವೆಟರ್ ಹಾಕಿದ ನನ್ನ ಜೂನಿಯರ್ ವೆಂಕೋಬ!

ಹೆಪ್ಪುಗಟ್ಟಿದ್ದ ರಕ್ತ ಮತ್ತೆ ದ್ರವಿಸಿತು. ಹೊರಗಡೆ ನಿಂತವನಿಗೆ ಎರಡು ಮಾತು ಆಡಿ ಹಾಗೆಯೇ ಕಳುಹಿಸುವ ಎಂದಿತು ಜಿಜ್ಞಾಸೆ. ವಿವೇಚನೆ ತಲೆ ಎತ್ತಿತು.

ವೆಂಕೋಬ ವಿಶ್ವಾಸಿ. ಸಂದಿಗ್ಧ ಪರಿಸ್ಥಿತಿಗೆ ಒಬ್ಬನಿಗಿಂತಲೂ ಇಬ್ಬರು ಮೇಲು.

ಬಾಗಿಲು ತೆರೆಯಿತು. ಸರಕ್ಕನೆ ಒಳಬಂದ ವೆಂಕೋಬ ಚಳಿಗೆ ಮೈ ಮುದುರಿದ.

"ಏನು ಕೆಲಸ ಆಯ್ತು, ಸಾರ್. ಬೆಳಗ್ಗೆ ಫೋನ್ ಬಂತು ಅಂತ ಫೈಲ್ ಹಿಡಿದು ಪೂನಾ ಮೈಲ್‌ಗೆ ಹೋದ್ರಿ ನೀವು. ಮುಕ್ಕಾಲು ಗಂಟೆಗೆ ಮೊದಲು ನನ್ನ ಪಕ್ಕದ ಮನೆ ಕಂಟ್ರಾಕ್ಟರ್‌ಗೆ ಫೋನ್ ಬಂತು ನನಗೆ ತಿಳಿಸಿ ಅಂತ."

"ಏನು ತಿಳಿಸಿ ಅಂತ?"

"ಶಾವಂದಪ್ಪ ಗುಂತಕಲ್ ಪ್ಯಾಸೆಂಜರ್ ರೈಲಿಗೆ ಹೋದ ಅಂತ. ಆಗ್ಲೇ ಹನ್ನೊಂದು ಗಂಟೆ ಆಗಿಹೋಗಿತ್ತು. ನೀವು ರೈಲ್ವೆ ಸ್ಟೇಷನ್‌ನಲ್ಲಿ ಪರದಾಡಿ ಬಂದಿರ್ತೀರಿ ಅಂತ ಗೊತ್ತಿತ್ತು. ಎರಡು ಸಾರಿ ಫೋನ್ ಮಾಡ್ದೆ. ನೀವು ಫೋನ್ ಎತ್ತಲೇ ಇಲ್ಲ. ಹೇಳಿ ಹೋಗೋಣಾಂತ ನಾನೇ ಬಂದೆ."

ಜೂನಿಯರ್ ವಕೀಲ ಮೇಜಿನ ಮೇಲೆ ಬಿದ್ದಿದ್ದ ಫೈಲ್ ಕಟ್ಟಿನ ಮೇಲೆ ಬೇಸರದಿಂದ ಬಡಿದ.

"ಎಳಸು ಅಂದ್ರೆ ನೀನೇ. ಬೆಳಿಗ್ಗೆ ಇದನ್ನ ಹೇಳಕ್ಕಾಗ್ತಾ ಇರ್ಲಿಲ್ವೆ?"

"ಬೆಳಿಗ್ಗೆ ಶ್ರೀರಂಗಪಟ್ಟಣಕ್ಕೆ ಹೋಗ್ಬೇಕು ನಾನು.।

“ಶಾವಂದಪ್ಪ ಗುಂತಕಲ್ ರೈಲು ಯಾಕೆ ಹಿಡಿದ? ನಾನು ಅವನ್ನ ಪೂನಾ ರೈಲಿನ ಉದ್ದಕ್ಕೂ ಹುಡುಕಿ ಸಾಕಾದೆ ಬೆಂಕಿಗೆ ಹಾಕು ಅವನ ಫೈಲ್‌ನ.”

“ಹಾಗಂದ್ರೆ ಸಾಕಲ್ಲವೆ ನನಗೆ.”

ಎಂದ ವೆಂಕೋಬ ಮೂಗು ಪಕಪಕ ಅರಳಿಸಿದ. ದೀಪ ಉರಿಯುತ್ತಿದ್ದ ಬೆಡ್‌ರೂಂ ಕಡೆ ಕಣ್ಣೆತ್ತಿದ.

“ಎಂಥಾ ಸೊಗಸಾದ ಸೆಂಟು ವಾಸನೆ! ಯಾವಳಾದ್ರು ಲೇಡಿ ಆರ್ಟಿಸ್ಟ್....?”

“ಬಂದಿದಾಳೆ. ಸ್ಥಿರಾಭಿನಯೆ ಕೊಡ್ತಾ ಇದಾಳೆ. ಶಯನೋತ್ಸವದ ದೃಶ್ಯ. ಹೋಗಿ ನೋಡು” — ದೇಹದ ಧೈರ್ಯವೆಲ್ಲಾ ಒಟ್ಟಾಗಿಸಿ ಹೇಳಿದ. ಜೂನಿಯರ್ ಕೆನ್ನೆ ಕೆರೆಯುತ್ತಾ ಹೆಜ್ಜೆ ಇಟ್ಟ. ಅವನಿಗೆ ತಟ್ಟಲಿದ್ದ ಆಘಾತ ತಪ್ಪಿಸಲು ರಾಗಣ್ಣ ಅವನ ಕೈ ಹಿಡಿದು ಕೋಣೆಗೆ ಬಂದ.

ವೆಂಕೋಬ ಬಾಯಿ ತೆರೆದು ಚಣಕಾಲ ನಿಂತು ನಾಲಗೆ ಚಪ್ಪರಿಸಿದ.

“ಈಕೆ ಕಾಮಿನಿಯಾ, ಸಾರ್?”

“ಹೌದು... ಸತ್ತು ಹೋಗಿದಾಳೆ, ವೆಂಕೋಬ.”

ವೆಂಕೋಬ ತುಟಿ ಎರಡು ಮಾಡುವ ಮೊದಲೇ ರಾಗಣ್ಣ ಅವನ ಬಾಯಿಗೆ ಕೈ ಅಡ್ಡ ಹಿಡಿದು ಹೊರಕ್ಕೆ ಕರೆತಂದ. ನಡೆದುದನ್ನು ಅವನಿಗೆ ಸ್ಪಷ್ಟವಾಗಿ, ಸಂಕ್ಷೇಪವಾಗಿ ತಿಳಿಸಿದ. ಎರಡು ಕೈಗಳಿಂದಲೂ ತಲೆ ಒತ್ತಿ ಹಿಡಿದು ಕುಳಿತ.

“ಪೊಲೀಸ್‌ಗೆ ತಿಳಿಸಿಬಿಡೋಣ. ತಡಮಾಡಬಾರದು.”

ವೆಂಕೋಬ ಫೋನ್ ಎತ್ತಿ ಡಯಲ್‌ಗೆ ಬೆರಳು ಹೂಡಿದ. ವಕೀಲ ಅವನ ಕೈಯಿಂದ ಫೋನ್ ಎಳೆದುಕೊಂಡ.

“ಬಚ್ಚಾ ನೀನು ಕಾನೂನಿನ ಹೊರೆ ಕೆಳಗೆ ಸಿಕ್ಕೋದು ಬೇಡ. ಕಾಮಿನಿ ಇಲ್ಲಿಗೆ ಬಂದ ವಿಷಯ ತಿಳಿದು ವೇಮರೆಡ್ಡಿ ಇಲ್ಲಿಗೆ ಬಂದು ಹೋಗಿದಾನೆ. ಅವನ ಜೊತೆಗೆ ಸಿ.ಐ.ಡಿ. ಇನ್ಸ್‌ಪೆಕ್ಟರ್ ಬೇರೆ ಇದ್ದ. ಅವಳು ಬರಲೇ ಇಲ್ಲಾಂತ ನಾನು ಹೇಳಿದೀನಿ. ಅವಳ ಚಪ್ಪಲಿ, ಕರವಸ್ತ್ರ, ಇಲ್ಲಿನ ಟಂಬ್ಲರ್‌ಗಳು ಅವರ ವಶದಲ್ಲಿವೆ. ಇರೋದು ಒಂದೇ ಮಾರ್ಗ. ಶವವನ್ನು ಎಲ್ಲಿಗಾದರೂ ಸಾಗಿಸಬೇಕು.”

ಚಳಿಯಲ್ಲೂ ಬೆವರಿದ ಜೂನಿಯರ್.

“ರಾತ್ರಿ ಹೊತ್ತಿನಲ್ಲಿ ಶವದ ಸಾಗಾಣಿಕೆ! ಕೊಲೆಗೂ ಮೀರಿದ ಅಪರಾಧ ಅದು.”

“ಮತ್ತೇನು ಮಾಡಬೇಕು ಹೇಳು ನೀನೇ.”

“ಬಚ್ಚಾ ಹೇಳೋದು ಏನೂ ಇಲ್ಲ. ಹಳೆ ಹುಲಿ ಹೇಳೋದನ್ನ ಕೇಳ್ತೀನಿ. ಹೇಳಿ ಸರ್”

“ದೇಹವನ್ನ ನಾಳೆ ಸಂಜೆವರೆಗೆ ಎಲಾದ್ರೂ ಬಚ್ಚಿಡ್ಬೇಕು. ಅಷ್ಟರಲ್ಲಿ ಕೊಲೆಗಾರನ್ನ

ಪತ್ತೆ ಮಾಡುವ ಪ್ರಯತ್ನವಾಗಬೇಕು. ದೇಹ ಅಲ್ಲಿವರೆಗೆ ಕೆಡುವ ಹಾಗಿಲ್ಲ. ನಿನಗೆ ಯಾವುದಾದ್ರೂ ಐಸ್ ಫ್ಯಾಕ್ಟರಿ ಗೊತ್ತಾ?"

"ಗೊತ್ತು, ಎಷ್ಟು ಬೇಕಾದ್ರು ಐಸ್‌ಗಡ್ಡೆ ತರಬಲ್ಲೆ. ಮಂಜಿನಗಡ್ಡೆಗಳ ಮಧ್ಯೆ ದೇಹ ಇರಿಸಿ ಮರದ ಪುಡಿ ತುಂಬಿದರೆ ಆಯ್ತು."

"ಆಯ್ತು."

ಪುನಃ ಇಬ್ಬರೂ ಬೆಡರ್‌ರೂಂ ಪ್ರವೇಶಿಸಿದರು. ಅಡಿಯಿಂದ ಮುಡಿಯವರೆಗೆ ಮೃತಳನ್ನು ನಿಟ್ಟಿಸಿದ ವಕೀಲನ ಮುಖ ಅರಳಿತು.

"ಮಂಡೋದರಿ ಪಾತ್ರಕ್ಕೆ ಲಗತ್ತಾಗಿದ್ದೋಳು. ಯಾವನೋ ಕತ್ತು ಹಿಡುಕಿ ಪ್ರಪಂಚ ದಾಟಿಸಿಬಿಟ್ಟ. ಎಷ್ಟು ಅಂದವಾಗಿದಾಳೆ ನೊಡಯ್ಯ."

ವೆಂಕೋಬ ಭೀತಿ, ಆತಂಕ ಈಗ ಪೂರ್ಣವಾಗಿ ಮಾಯವಾಯಿತು. ದೇಹವನ್ನು ದಿಟ್ಟಿಸಿ ನೋಡಿದ. ಸೀನಿಯರ್ ಆಡಿದ ಮಾತು ನಿಜ. ಆಕರ್ಷಕ ಮುಖ. ಭೀತಿ ಮೂಡಿಸಬೇಕಾದ ದೇಹವು ಮೋಹಕವಾಗಿದೆ. ಮಧ್ಯವಯಸ್ಸು ದಾಟಿದ ಸೀನಿಯರ್ ವಕೀಲನಿಗೆ ಇದೆಲ್ಲಿಯ ಚಪಲ? ಸತ್ತ ಹೆಣ್ಣಿನಲ್ಲೂ ಸೌಂದರ್ಯ ವೀಕ್ಷಣೆ!

"ಈಗೇನು ಮಾಡಬೇಕು ಹೇಳಿ" ಜೂನಿಯರ್‌ನ ಮೈ ಕಂಪಿಸಿತು.

ರಾಗಣ್ಣ ಅವನಿಗೆ ಉತ್ತರ ನೀಡಲಿಲ್ಲ. ಬೆಡ್‌ಷೀಟ್ ನೆಲಕ್ಕೆ ಹಾಸಿದ. ಕಾಮಿನಿಯ ದೇಹ ಅದರ ಮೇಲೆ ನಯವಾಗಿ ಇರಿಸಿದ. ಹಾಸಿಗೆಯ ಅಂಚಿನ ಹೊಲಿಗೆ ಹರಿದು ಮಧ್ಯಂತರಗಳಲ್ಲಿ ಹಾಕಿದ ದಪ್ಪ ದಾರಗಳನ್ನು ತೆಗೆದದ್ದಾಯ್ತು. ಒಳಗಿನ ಹತ್ತಿ ಹೊರ ಬಿದ್ದು ಹಾಸಿಗೆಯು ಈಗ ಒಂದು ದೊಡ್ಡ ಖಾಲಿ ಚೀಲವಾಯಿತು.

ವೆಂಕೋಬನ ನಿದ್ರೆ ಗಣ್ಣು ವಿಶಾಲಗೊಂಡಿತ್ತು.

"ಈ ಚೀಲದಲ್ಲಿ ದೇಹವನ್ನು ಸೇರಿಸಬೇಕು, ಹೌದಲ್ಲ?"

ಹೌದೆಂದು ತಲೆ ಆಡಿಸಿದ ರಾಗಣ್ಣ, ಜೂನಿಯರ್‌ನ ಸಹಾಯದಿಂದ ಕಾಮಿನಿಯ ದೇಹವನ್ನು ಹಾಸಿಗೆ ಚೀಲಕ್ಕೆ ಸೇರಿಸಿ ತುದಿಯನ್ನು ದಾರದಿಂದ ಕಟ್ಟಿದ.

"ಈ ಚೀಲ ಮುಂಬಾಗಿಲಿಂದ ಸಾಗುವುದು ಸರಿಯಲ್ಲ."

ಜೂನಿಯರ್‌ನ ಎಚ್ಚರಿಕೆ ಮಾತು ಅಡಗಿದ ಸ್ವರದಲ್ಲಿ ಬಂತು.

"ಈಗ ಯಾರ ಕಾರಿಗೆ ಗ್ರಹಚಾರ?"

"ಪ್ರಶ್ನೆ ಹಾಕ್ಬೇಡ ಧೈರ್ಯವಾಗಿ ಕೆಲಸ ಆಗಬೇಕು ನಿನ್ನಿಂದ ನಾನು ತಾಪತ್ರಯಕ್ಕೆ ಸಿಕ್ಕಿದ್ದೀನಿ. ಗ್ರಹಗತಿ ಸರಿಯಾಗಿಲ್ಲ ನನಗೆ.... ನಿನ್ನ ನಂಬಿದ್ದೀನಿ,"

ಅವನ ಎದೆ ತಟ್ಟಿದ. ವೆಂಕೋಬನ ಕಣ್ಣುಗಳು ಗಾಬರಿ ತೋರಿದರೂ ಸಮ್ಮತಿಯ ಸೂಚನೆ ಬಂತು. ರಾಗಣ್ಣ ಅವನಿಗೆ ಮತ್ತಷ್ಟು ಹತ್ತಿರ ಬಂದು ಹೇಳಿದ.

"ಕಾಲ ವಿಳಂಬವಾಗುವಂತಿಲ್ಲ ಹೇಳೋದು ಕೇಳು. ಈಗ ನೀನ ಮೊದಲು

ಇಲ್ಲಿಂದ ಬಲಗಡೆ ರಸ್ತೆಯಲ್ಲಿ ಫರ್ಲಾಂಗ್ ದೂರದಷ್ಟು ನಡೆದು ಹೋಗು. ನನ್ನ ಕಾರನ್ನು ಎಡಗಡೆಯಿಂದ ಡ್ರೈವ್ ಮಾಡಿಕೊಂಡು ಬಂದು ನಿನ್ನ ಕೂಡಿಸಿಕೊಳ್ತೀನಿ. ಮೇಯೋಹಾಲ್ ಹತ್ತ ನಿನ್ನ ಇಳಿಸ್ತೀನಿ, ನಾನು ರೆಸಿಡೆನ್ಸಿ ರಸ್ತೆ ಬೇರೆ ಕಾರನೊಂದಿಗೆ ರಿಸರ್ವ್ ಬ್ಯಾಂಕ್ ಪಕ್ಕದಲ್ಲಿ ಕಾದಿರ್ತೀನಿ, ಅಲ್ಲಿಗೆ ನೀನು ಆಟೋದಲ್ಲಿ ಬರಬೇಕು. ಆಮೇಲೆ ಆ ಇನ್ನೊಂದು ಕಾರನ್ನು ನೀನು ಈ ಮನೆಯ ಹಿಂದಕ್ಕೆ ತರಬೇಕು.... ಏನು ಹಾಗೆ ಬೇಸರದಿಂದ ನೋಡ್ತಾ ಇದ್ದೀಯ? ಆಗಲೇ ಹೇಳ್ದೆ. ದೇಹ ನನ್ನ ಕಾರಿನಲ್ಲಿ ಸಾಗಬಾರದೊಂತ. ನನಗೆ ಬೇಗ ಕಾರು ದೊರೆಯೋದು ರೆಸಿಡೆನ್ಸಿ ರಸ್ತೆಯ ಡಾಕ್ಟರಿಂದ."

"ಆಯ್ತು. ನಾನು ಆ ಡಾಕ್ಟರ ಕಾರನ್ನ ಕನ್ಸರ್ವೆನ್ಸಿ ಭಾಗದಲ್ಲಿ ತಂದು ಮನೆಯ ಹಿಂದೆ ನಿಲ್ಲಿಸ್ತೀನಿ. ಈ ಚೀಲ ಎತ್ತಿ ಹಿಂದಿನ ಗೋಡೆ ದಾಟಿಸಿ ಕಾರಿನಲ್ಲಿಟ್ಟು ರಿಸರ್ವ್‌ಬ್ಯಾಂಕ್ ಹತ್ತಿರ ಕಾದಿರುವ ನಿಮ್ಮನ್ನ ಸೇರ್ತೀನಿ. ಅಲ್ಲಿಗೆ ಕೊಲಂಬಸನ ಅರ್ಧ ಸಾಹಸ ಮುಗೀತು."

"ವೆರಿಗುಡ್, ಅಲ್ಲಿಂದ ಎರಡು ಕಾರುಗಳೂ ಯಲಹಂಕದ ದಿಕ್ಕು ಹಿಡಿಯುತ್ತೆ. ಮೊದಲು ಮಂಜುಗಡ್ಡೆ ಹೊಂದಿಸಿಕೊಳ್ಳುವ ಕೆಲಸ ಇದೆ. ಸದ್ಯಕ್ಕೆ ಈ ದೇಹ ಮನೆ ಬಿಟ್ಟರೆ ಸಾಕು. ನಿನಗೆ ಹೆದರಿಕೆ ಆದ್ರೆ ಹೇಳು. ಕಾರುಗಳು ಅದಲು ಬದಲು ಮಾಡ್ಕೋಳ್ಳೋಣ ನಾನು ದೇಹವನ್ನು ಕಾರಿಗೆ ಸೇರಿಸಿ ತರ್ತೀನಿ.

"ಬೇಡ ಬಚ್ಚನ ಧೈರ್ಯ ಎಷ್ಟಿದೇಂತ ತೋರಿಸ್ತೀನಿ. ಹೆಣ ಹೊರುವ ಕೆಲಸ ನನಗೆ ಇರಲಿ,"

ಅವನ ಬೆನ್ನು ತಟ್ಟಿದ ವಕೀಲ ಗೂಡಿನ ವಿಭೂತಿ ಹಣೆಗೆ ಸೋಕಿಸಿ ಒಂದು ಚಿಟಿಕೆ ಎತ್ತಿ ಜೂನಿಯರ್‌ನ ಬಾಯಿಗೆ ಹಾಕಿದ.

"ನನ್ನ ಕಾರಿನಲ್ಲೇ ಚೀಲ ಎತ್ತಿಟ್ಟು ಸಲೀಸಾಗಿ ಯಾಕೆ ಒಯ್ಯಬಾರದು, ಎನ್ನಿಸುತ್ತೆ ನಿನಗೆ. ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ ಎಲ್ಲಿನ ಪಂಚಾಯಿತಿ ಇದು ಅಂತೀಯಾ?"

"ನನಗೆ ಹಾಗೇ ಅನ್ನಿಸೋದು. ಗ್ರಹಚಾರನ ದುಡ್ಡು ಕೊಟ್ಟು ತಂದು ಮೈ ಮೇಲೆ ಸುರಕೊಂಡ ಹಾಗೆ. ನಿಮ್ಮ ಕಾರಿನಲ್ಲಿ ದೇಹ ಸಾಗಬಾರದೊಂತ ವಿಪರೀತದ ಎಚ್ಚರಿಕೆ ಹೊಂದಿದ್ದೀರಿ ಕಾನೂನಿನ ಹಿಡಿತಕ್ಕೆ ನೀವು ಮೈಲಿ ದೂರ ನಿಲ್ಲುವ ಪ್ಲಾನ್‌ನಲ್ಲಿ ಸ್ವಲ್ಪ ಅತಂತ್ರ ಆದರೆ ಆ ಕಾರು ಕೊಟ್ಟ ಡಾಕ್ಟರ್ ಗತಿ ಗೋವಿಂದ ಜೊತೆಗೆ ನಾನು ಕೃಷ್ಣರ್ಪಣ."

ಕೈ ಆಡಿಸುತ್ತಾ ವೆಂಕೋಬ ಹೊರಬಿದ್ದ. ಐದು ನಿಮಿಷದ ನಂತರ ವಕೀಲ ಹಿಂಬಾಲಿಗಿನ ಬೋಲ್ಟ್ ಸಡಿಲಿಸಿ, ದೀಪ ಆರಿಸಿ ಕಾರು ಚಲಾಹಿಸಿದ. ತುಸು ದೂರ ಸಾಗಿ ವೆಂಕೋಬನನ್ನು ಕೂರಿಸಿಕೊಂಡು ಮುಂದುವರಿದಾಗ ತಲೆಯಲ್ಲಿ ಹುಳು ಆಡಿತು.

ಬಳಸಿನ ಹಂಚಿಕೆ ಆಯಿತ? ಕಾನೂನಿನ ಹಿಡಿತದಿಂದ ತನ್ನನ್ನು ರಕ್ಷಿಸಿ ಕೊಳ್ತೀನಿ ಇದು ಅಗತ್ಯ. ಕಾನೂನಿನೊಂದಿಗೆ ಚೆಲ್ಲಾಟ ನಡೆಸುತ್ತಿರುವ ಕಾಮಿನಿಯ ರೂಪದಲ್ಲಿ ಕಾಡುತ್ತಿದೆ ಅನಿಷ್ಟ!

ವೆಂಕೋಬ ಮಾತಿಲ್ಲದೆ ಮೇಯೋಹಾಲ್ ಬಳಿ ಇಳಿದ. ರಾಗಣ್ಣನ ಕಾರು ರೆಸಿಡೆನ್ಸಿ ರಸ್ತೆ ಸೇರಿತು.

ವೆಂಕೋಬ ಆಟೋರಿಕ್ಷಾದಿಂದ ರಿಸರ್ವ್ ಬ್ಯಾಂಕ್ ಬಳಿ ಇಳಿಯುವುದರಲ್ಲಿ ರಾಗಣ್ಣ ಕಪ್ಪು ಬಣ್ಣದ ಅಂಬಾಸಿಡರ್ ಕಾರಿನೊಂದಿಗೆ ಕಾದಿದ್ದ. ಕಾರಿನ ಬೀಗದ ಕೈ ಕೊಟ್ಟು ಹೇಳಿದ;

"ಸ್ವಲ್ಪ ತಾಳು. ನನ್ನ ಕಾರು ತಂದ್ಬಿಡ್ತೀನಿ"

ರಾಗಣ್ಣ ತನ್ನ ಕಾರು ತಂದು ನಿಲ್ಲಿಸಿದ. ಸಮೀಪಕ್ಕೆ ಬಂದವನಿಗೆ ಮೆಲುದನಿಯಲ್ಲಿ ಹೇಳಿದ;

"ವೆಂಕೋಬ, ಒಂದು ಸಣ್ಣ ಬದಲಾವಣೆ. ನೀನು ಹಿಂತಿರುಗಿದಾಗ ಇಲ್ಲಿಗೆ ಬರಬೇಡ. ನೇರವಾಗಿ ಮ್ಯೂಸಿಯಂ ರಸ್ತೆಗೆ ಬಂದು ಬಿಡು. ಮ್ಯೂಸಿಯಂ ಆಚೆಯ ಚೌಕದ ಪಕ್ಕದಲ್ಲಿ ಕಾದಿರ್ತೀನಿ. ಇನ್ನು ಹೊರಡು. ಗುಡ್‌ಲಕ್."

ಜೂನಿಯರ್ ವೇಗವಾಗಿ ಹೊರಟ ಮೇಲೆ ರಾಗಣ್ಣನ ತಲೆಯಲ್ಲಿ ಚಿಂತೆ ಮತ್ತೆ ಕಾಡಿತು.

ಹೂಡಿದ ಹಂಚಿಕೆ ದೀರ್ಘವಾಯಿತೆ? ಹಂಚಿಕೆಗೆ ತಾನೆ ಬಲಿಯಾದರೆ? ಛೆ,ಎಲ್ಲಿಯ ಕಾಮಿನಿ ಕೋಟಲೆ!

ಕಾರು ಮ್ಯೂಸಿಯಂ ದಾಟಿ ಕಬ್ಬನ್ ಪಾರ್ಕ್ ಅಂಚಿನ ಚೌಕಕ್ಕೆ ಐವತ್ತು ಗಜ ದೂರದಲ್ಲಿ ನಿಂತಿತ್ತು. ವಕೀಲ ವೀಲ್ ಹಿಡಿದು ಒಳಗೆ ಕುಳಿತ.

ವೇಮರೆಡ್ಡಿ ರತ್ತಯ್ಯನ ನಾಟಕದ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದನಂತೆ, ರತ್ತಯ್ಯ ಸತ್ತ ಮೇಲೆ ಕಾಮಿನಿಯ ಅನಿವಾರ್ಯದ ಅಂಕಲ್ ಆಗಿದ್ದಾನೆ. ಕಾಮಿನಿ ಅವನ ಹತೋಟಿಯಲ್ಲಿಲ್ಲ. ಅವಳು ತನ್ನ ನಾಟಕದಲ್ಲಿ ಅಭಿನಯಿಸುವುದನ್ನು ತಡಯುವುದರಿಂದ ಅವನ ಘನತೆ ಉಳಿದುಕೊಳ್ಳುತ್ತದೆ. ಕಾಮಿನಿ ಅವನಿಗೆ ಲಕ್ಷ್ಯಕೊಟ್ಟಿಲ್ಲ. ಅದರಿಂದಾಗಿ ಅವಳ ಕೊಲೆ ಆಗಿದೆ. ಕೊಲೆ ಆಪಾದನೆ ತನ್ನ ಮೇಲೆ ಬರಲೆಂದು ತನ್ನ ಮನೆಯಲ್ಲಿ ಕಾಮಿನಿಯ ಹತ್ಯೆ ನಡೆಸಿದ್ದಾನೆ.

ರಾಗಣ್ಣ ಸುತ್ತಲೂ ನೋಡಿದ ಕತ್ತಲಿನೊಂದಿಗೆ ಮೈಗೂಡಿಸಿಕೊಂಡ ಕಬ್ಬನ್‌ಪಾರ್ಕ್ ಮರಗಳು. ಐದು ನಿಮಿಷಗಳ ದೀರ್ಘ ಅಂತರದಲ್ಲಿ ಸಾಗಿ ಹೋಗುವ ಎದುರು ರಸ್ತೆಯ ವಾಹನಗಳು. ಒಂದು ಗಂಟೆಯನ್ನು ಸಮೀಪಿಸುತ್ತಿರುವ ಅಸಹನೀಯ ಚಳಿರಾತ್ರಿ.

ಹದಿನೈದು ನಿಮಿಷ ನಿಧಾನವಾಗಿ ಕಳೆಯಿತು. ವಕೀಲನ ಸಹನೆಯನ್ನು ನೂರು

ಸಾರಿ ಇರಿದ ದುರ್ಭರ ಸನ್ನಿವೇಶ ಅದು.

ವೆಂಕೋಬನದು ಮಂದ ಪ್ರವೃತ್ತಿ. ಅವನಿಂದ ತಡವಾಗುತ್ತಿದೆ. ದುಸ್ಸಾಹಸದ ಕೆಲಸದಲ್ಲಿ ವಿಳಂಬ ಸ್ವಾಭಾವಿಕ. ಐದು ಅಡಿ ಎತ್ತರದ ಗೋಡೆಯ ಮೇಲೆ ಭಾರವಾದ ಚೀಲವನ್ನಿರಿಸಿ ಮತ್ತೆ ಅದನ್ನು ಇಳಿಸಿ ಕಾರಿಗೆ ಸೇರಿಸುವುದು ಸುಲಭವಲ್ಲ. ವೆಂಕೋಬನ ಸಾಹಸಕ್ಕೆ ಏನಾದರೂ ಅಡ್ಡಿ ಬಂದಿದೆಯೆ?

ಕಂಪಿಸುವ ಬೆರಳುಗಳಲ್ಲಿ ಹೊಸ ಸಿಗರೇಟು ಹೊರಬಂತು. ಮೂರು ಸಿಗರೇಟುಗಳು ಬೂದಿಯಾಗಿ ತಾಳ್ಮೆ ಬೂದಿಯಾಗುವಷ್ಟು ಬೇಸರವಾಯಿತು.

ಛೇ, ಇಂತಹ ಕಾಯುವ ಕೆಲಸ ಶತ್ರುವಿಗೂ ಬೇಡ.

ಕಪ್ಪು ಬಣ್ಣದ ಕಾರು ಎದುರು ರಸ್ತೆಯ ಅಂಚಿಗೆ ನಿಂತಾಗ ರಾಗಣ್ಣ 'ಉಫ್' ಎಂದು ಕೆಳಗಿಳಿದು ಮೈ ಸೆಟೆಸಿದ. ಕಾರಿನಿಂದ ಇಳಿದ ಸೂಟುಧಾರಿ ಬಾನೆಟ್ ಎತ್ತಿ ಯಂತ್ರಗಳ ಮಧ್ಯೆ ತಲೆ ಹಾಕಿದ.

ಥತ್, ಇದು ವೆಂಕೋಬನ ಕಾರಲ್ಲ.

ಕಪ್ಪು ಕಾರು ಹೊರಟುಹೋಯಿತು. ಇನ್ನು ಕಾಯುವುದು ಸರಿಯಲ್ಲ ಎನಿಸಿತು ಅವನಿಗೆ. ಆತಂಕ ಏರಿ ಬಂತು. ಕಾರಿನ ಯಂತ್ರವು ವೇಗದ ಚಲನೆಗಾಗಿ ಜೋರಾಗಿ ಸದ್ದು ಮಾಡಿತು. ಮರುಕ್ಷಣದಲ್ಲಿ ಸದ್ದು ನಿಂತು ಹೋಯಿತು. ರಾಗಣ್ಣ ಉದ್ದಕ್ಕೂ ದೃಷ್ಟಿ ಓಡಿಸಿದ. ಎರಡು ಸಾರಿ ದೀಪ ಆರಿಸಿ ಮತ್ತೆ ಹೊತ್ತಿಸಿ ಧಾವಿಸಿ ಬರುತ್ತಿದ್ದ ವಾಹನವು ವೆಂಕೋಬನದು ಎಂದು ಸ್ಪಷ್ಟವಾದಾಗ ತನ್ನ ಕಾರನ್ನು ಚೌಕದ ಬಳಿಗೆ ಬದಲಾಯಿಸಿದ.

ಜೂನಿಯರ್ ಕೆಳಗಿಳಿದು ಕಾಲು ಬಲವಾಗಿ ನೆಲಕ್ಕೆ ತಾಡಿಸಿಕೊಂಡು ಬಂದ.

"ಇಂಥಾ ಹೊತ್ನಲ್ಲೂ ನನ್ನೊಂದಿಗೆ ಹುಡುಗಾಟ ಆಡ್ತೀರಿ. ಎಳಸು ನಾನಲ್ಲ... ನೀವೇ"

ಪರಿಸ್ಥಿತಿಯ ಭೀಕರತೆಯಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದ ವಕೀಲ ತನ್ನ ಜೂನಿಯರ್‌ನ ಬಿರುಸು ನುಡಿಯಿಂದ ಅವಾಕ್ಕಾದ. ಸಿಗರೇಟು ನೆಲಕ್ಕೆ ಬಿತ್ತು.

"ಹುಡುಗಾಟಕ್ಕಲ್ಲ ನಿನ್ನ ಸಹಕಾರ ಕೋರಿದ್ದು. ನನ್ನ ತಲೆ ಉಳಿಸಿಕೊಳ್ಳೋದಿಕ್ಕೆ. ನಕ್ಷತ್ರ ಕೂಟ ಸರಿ ಇಲ್ದಿದ್ರೆ ಎಲ್ಲರೂ ಗುಲಾಮರೇ. ಈಗ ನೀನು ನಮ್ಮಪ್ಪನ ಅಪ್ಪ ಅಂತ ತಿಳಿದಿದೀನಿ. ಮಾಡಿರೊ ಸಹಾಯಕ್ಕೆ ಸಾವಿರ ಸಲಾಂ."

ವೆಂಕೋಬನ ಕೆನ್ನೆ ಸವರಿ ಮತ್ತೆ ನಯವಾಗಿ ನುಡಿದ :

"ಆ ತೆಳು ದೇಹದ ಸುಂದರಿ ಸತ್ತ ಮೇಲೆ ಡಬ್ಬಲ್ ತೂಕದೋಳು ಆಗಿದಾಳೆ. ಅವಳ್ನ ಹೊತ್ತು ಐದು ಅಡಿ ಎತ್ತರದ ಗೋಡೆ ದಾಟಿಸೋದ್ರಲ್ಲಿ ನಿನ್ನ ಹೆಣ ಬಿದ್ದು ಹೋಗಿರುತ್ತೆ ಅನ್ನೋದು ಬಲ್ಲದೆ. ದೇಹವನ್ನ ಹಿಂದಿನ ಸೀಟಿಗೆ ಹಾಕಿದೆಯೊ. ಇಲ್ಲ ಡಿಕ್ಕಿಯಲ್ಲಿ ತುರುಕಿಬಿಟ್ರೊ?"

ತನ್ನ ಪ್ರಶ್ನೆ ತನ್ನ ಕಡೆಗೇ ತಿರುಗಿತ್ತು.

"ಏನು ಹರಟ್ತಾ ಇದೀಯ?"

ಅವನ ಎದೆಗೆ ಬೆರಳಿನಿಂದ ದೃಢವಾಗಿ ಬಡಿದ.

"ನನಗೆ ಸೂಚನೆಕೊಟ್ಟು ಅಲ್ಲಿಗೆ ಕಳಿಸಿದ್ರಿ, ಮಧ್ಯೆ ಕಾರು ಕೈ ಕೊಡ್ತು. ಹೇಗೋ ನಿಧಾನವಾಗಿ ಹೋದೆ. ಅಲ್ಲಿಗೆ ಹೋದಮೇಲೆ ಗೊತ್ತಾಯ್ತು ನೀವು ಮನಸ್ಸು ಬದಲಾಯಿಸಿಬಿಟ್ಟಿದ್ದೀರಿ ಅಂತ. ನನಗೆ ತಂಟೆ ತಪ್ತು. ನನ್ನ ಭಾರ ಕಳೀತು ಅನ್ಕೊಂಡು ನಿಶ್ಚಿಂತೆಯಿಂದ ಬಂದೆ. ನನಗೆ ಅಷ್ಟೊಂದು ಹೇಳಿ ನೀವೇ ಯಾಕೆ ಅವಳನ್ನ ತರೋಕೆ ಹೋದ್ರಿ?"

"ನಾನು ಅವಳ್ನ ತರ್ಲಿಲ್ಲ!"

"ಮತ್ತೆ? ನಾನು ಹೋದಾಗ ಅಲ್ಲಿ ಕಾಮಿನಿಯ ದೇಹ ಇರ್ಲಿಲ್ಲ. ಯಾರೊ ಅದನ್ನ ಸಾಗಿಸಿಬಿಟ್ಟಿದ್ದಾರೆ."

ಕಾಮಿನಿಯ ಶವ ತನ್ನ ಮನೆಯಿಂದ ಮಾಯ!

ತಲೆ ಗಟ್ಟಿಯಾಗಿ ಒತ್ತಿಕೊಂಡ ವಕೀಲ. ಮೆದುಳಿನ ತುಳುಕಾಟದಲ್ಲಿ ಬುಡಬುಡಿಕೆ ಶಬ್ದ ಕರ್ಕಶವಾಗಿ ಮೊರೆಯಿತು.

'ಹಾವಲಕ್ಕಿ ಶಕುನ ನುಡಿದೈತೆ. ಎಚ್ಚರ, ಸ್ವಾಮಿ ಎಚ್ಚರ!'

ಅವೇಳೆಯ ನೀರವತೆ ಸೀಳುವಂತೆ ಕೂಗಿದ ರಾಗಣ್ಣ.

"ಮೊದಲು ಒಂದು ಪೆಗ್ ವಿಸ್ಕಿ ಬೇಕು."

6

ಗಾಢ ನಿದ್ರೆಯಿಂದ ಎಚ್ಚರಗೊಂಡ ಅಡ್ವೊಕೇಟ್ ರಾಗಣ್ಣ ಕೋಪದ ಒಡಕು ಗಂಟಲಿನಲ್ಲಿ "ಯಾರದು?" ಎಂದು ಕೂಗಿ ಎಳೆಯುತ್ತಿದ್ದ ಕಣ್ಣುಗಳನ್ನು ಗಡಿಯಾರದತ್ತ ಹರಿಸಿದಾಗ ಒಂಬತ್ತೂವರೆ ಮೀರಿತ್ತು. ಕಿಟಕಿ ಗಾಜಿನ ಷಟರ್ ಮೂಲಕ ಸೂರ್ಯನ ಬೆಳಕು ಚೆನ್ನಾಗಿ ಹರಿದಿತ್ತು. ಜೊಂಪು ಹತ್ತಿದ ಮೈ ಕೊಡವಿದ. ಅರಿವು ಮೂಡಲು ಒಂದು ನಿಮಿಷ ಬೇಕಾಯಿತು.

ಬಾಗಿಲಿನ ಮೆಲೆ 'ಕಟ್ ಕಟ್' ಶಬ್ದ. ಹಿಂದೆಯೇ ಡಿಂಗ್ ಡಾಂಗ್ ಕರೆಗಂಟೆಯ ನಾದ.

ನಿದ್ರೆಯ ಅಮಲಿನಲ್ಲಿ ಎಲ್ಲವೂ ಅಸ್ಪಷ್ಟ. ಸದ್ದು ಕೇಳುತ್ತಾ ಮೈ ಕುಲುಕಿದ. ವೇಮರೆಡ್ಡಿಯ ಪುನರಾಗಮನ!

ಹಿಂದಿನ ರಾತ್ರಿ ಸಂಭವಿಸಿದ ಘಟನಾವಳಿ ತಲೆಯಲ್ಲಿ ಸುರುಳಿ ಬಿಚ್ಚಿತು. ಕಾಮಿನಿಯ

ಪ್ರಸಂಗ! ದುರಂತ ನಾಟಕ.

ಭೀಕರ ನೆನಪನ್ನು ಅಳಿಸಿ ನಿದ್ರೆಯ ಮತ್ತನ್ನು ಪೂರ್ಣವಾಗಿ ಕೊಚ್ಚಿ ಹಾಕುವಂತೆ ಮತ್ತೆ ಕಟಕಟ ಶಬ್ದ ಬಿರುಸಾಗಿ ಕೇಳಿಸಿತು.

"ವಾರವೆಲ್ಲ ಕಾಡುತ್ತೆ ಅನಿಷ್ಟ" ಎಂದು ಹೇಳುತ್ತಾ ಇಣುಕು ರಂಧ್ರದಲ್ಲಿ ನೋಡುವ ತಾಳ್ಮೆಯೂ ಇಲ್ಲದೆ ಬಾಗಿಲು ತೆರೆದ.

ಕಡ್ಡಿಯ ಚೂರು ಹಿಡಿದು ನಿಂತ ಜೂನಿಯರ್ ವೆಂಕೋಬ! ತಲೆಗೇರಿದ್ದ ಭಾವನೆಗಳೆಲ್ಲಾ ಮಾಯವಾದವು.

"ಅದೆಷ್ಟು ನಿದ್ರೆ ಮಾಡ್ತೀರಿ ಕುಂಭಕರ್ಣನ ಹಾಗೆ! ಕಾಲಿಂಗ್ ಬೆಲ್ ಇಪ್ಪತ್ತು ಸಾರಿ ಒತ್ತಿದ್ದಾಯ್ತು. ಸದ್ದೇ ಇಲ್ಲ. ಕಡೆಗೆ ಹೊರಗೆ ಹೋಗಿ ಈ ಕಡ್ಡಿ ತಂದು ಬಾಗಿಲು ಬಡಿಯಬೇಕಾಯ್ತು. ಕೋಲುಶಬ್ದ ಅಂದ್ರೆ ಎದ್ದು ಬರ್ತೀರಿ ಅಂತ ಗೊತ್ತು."

"ಹಾಳು ವೇಮರೆಡ್ಡಿ! ಬೆನ್ನು ಹತ್ತಿದ ಭೇತಾಳ!"

ಎಂದ ವಕೀಲ ಆಕಳಿಸಿ ನಿದ್ರೆ ಸಾಲದೆಂಬುದನ್ನು ಪ್ರಕಟಿಸಿದ.

ಒಳಬಂದು ವೆಂಕೋಬ ಕೆಲಸವಿಲ್ಲದವನಂತೆ ಬೀರು ಬಾಗಿಲು ತೆರೆದು ಸಾವಧಾನವಾಗಿ ನೋಡಿದ.

ಮಂತ್ರಾಲಯದ ಮೃತ್ತಿಕೆ ಪುಟಪರ್ತಿಯ ವಿಭೂತಿ. ತಿರುಪತಿಯ ಲಾಡು. ಆಂಜನೇಯನ ಕುಂಕು.... ಧರ್ಮಸ್ಥಳಕ್ಕೆ ಹಣ ಕಳುಹಿಸಿದ ರಸೀತಿ.

ಅವನ ದಿಕ್ಕಿಗೆ ಕಿರುನೋಟ ಬೀರಿ ಕೇಳಿದ ರಾಗಣ್ಣ.

"ಶ್ರೀರಂಗಪಟ್ಟಣಕ್ಕೆ ಹೋಗಲಿಲ್ಲವೇನು?"

"ರಾತ್ರಿಯ ಪ್ರಕರಣದಿಂದ ಶ್ರೀರಂಗಪಟ್ಟಣ ಮರೆತುಹೋಯ್ತು."

ಬೆಡ್‌ರೂಂಗೆ ಬಂದ ಜೂನಿಯರ್ ಮಂಚದ ಮೇಲೆ ಹಾಸಿದ ಒಂಟಿ ಬೆಡ್‌ಷೀಟ್, ರಗ್, ದಿಂಬನ್ನು ನೋಡಿ "ಸರಿಹೋಯ್ತು" ಎಂದು ಗೊಣಗಿದ.

"ಮತ್ತೇನಯ್ಯ ಮಾಡೋದು? ಅವಳಿಗೋಸ್ಕರ ಹಾಸಿಗೆ ಹರಿದು ಚೀಲ ಮಾಡಿದ್ದಾಯ್ತು. ಸಂನ್ಯಾಸಿ ಶಯನವೇ ಗತಿಯಾಯ್ತು."

ಬಚ್ಚಲು ಮನೆ ಸೇರಿದ ವೆಂಕೋಬ ಮಂಚದ ಪಕ್ಕದಲ್ಲಿ ಬಿದ್ದ ಹಾಸಿಗೆ ಹತ್ತಿಯನ್ನು ಕಾಲಲ್ಲಿ ತಳ್ಳಿ ಗುಡ್ಡೆ ಮಾಡಿದ. ಬಚ್ಚಲು ಮನೆ ಬಾಗಿಲಿಗೆ ನಿಂತು ಗಂಭೀರವಾಗಿ ಮಾತೆತ್ತಿದ.

"ಸಾರ್, ವಿಷಯ ಅಡ್ಡಾದಿಡ್ಡಿ ಆಗಿದೆ. ಎರಡು ಸಂಗತಿ ತಿಳಕೊಂಡು ಬರ್ತಾ ಇದೀನಿ. ನೀವು ಹೇಳಿದ್ರಿ ವೇಮರೆಡ್ಡಿ ಜೊತೆಯಲ್ಲಿ ಸಿ.ಐ.ಡಿ. ಇನ್ಸ್‌ಪೆಕ್ಟರ್ ಒಬ್ಬ ಬಂದಿದ್ದಾಂತ. ಅವನು ಢೋಂಗಿ ಅಧಿಕಾರಿ ಅಲ್ಲ ಗೋವಿಂದ ರೆಡ್ಡಿ ಅಸಲಿ ಸಿ.ಐ.ಡಿ. ಇನ್ಸ್‌ಪೆಕ್ಟರ್. ಕೆಲಸ ಸುಸೂತ್ರವಾಗಿ ಆಗಲಿ ಅಂತ ರೆಡ್ಡಿಗೆ ಇನ್ನೊಬ್ಬರು ರೆಡ್ಡಿಯ

ಕುಮ್ಮಕ್ಕು. ಇನ್ನೊಂದು ತಲೆ ಕೆಡಿಸೊ ವಿಚಾರ. ಶಾವಂದಪ್ಪ ಬಾಗಲಕೋಟೆಗೆ ಹೋಗಿ ಮೂರು ದಿನ ಆಯ್ತಂತೆ. ಅವನು ಪೂನಾ ಮೇಲ್ ಹತ್ತಿಲ್ಲ. ಗುಂತಕಲ್ ಪ್ಯಾಸೆಂಜರೂ ಹಿಡೀಲಿಲ್ಲ. ಯಾರೋ ಅವನ ಹಾಗೆ ನಟಿಸಿ ನಿಮಗೂ ನನಗೂ ಫೋನ್ ಮಾಡಿದಾರೆ."

ಸ್ನಾನದ ನೀರಿನ ಹಂಡೆಗೆ ವಿದ್ಯುತ್ ಹರಿಸಿ ಬಂದ ವಕೀಲ.

"ನಿನ್ನ ಮಾತಿನಿಂದ ಆಶ್ಚರ್ಯ ಆಗ್ತಾ ಇಲ್ಲ. ಪಕ್ಷಿ ಶಕುನ ನಿಜವಾಗ್ತಾ ಇದೆ. ಪರಿಚಯ ಇಲ್ಲದೋರು ಒಬ್ಬೊಬ್ಬರೇ ನನ್ನ ಮೇಲೆ ಕತ್ತಿವರಸೆಗೆ ಇಳೀತಾ ಇದಾರೆ."

"ಎಡ ರಸ್ತೆ ಇರಾನಿ ಹೋಟಲಿನ ಸೊಹ್ರಾಬ್‌ನ ವಿಚಾರಿಸಿ ಬಂದೆ. ನಿನ್ನೆ ರಾತ್ರಿ ಹತ್ತು ಗಂಟೆ ಸುಮಾರಿಗೆ ಪಾಂಟಿಯಾಕ್ ಕಾರು ಈ ರಸ್ತೆಗೆ ತಿರುಗಿತು ಅಂತ ಹೇಳ್ತಾನೆ."

"ಅವನೇನಯ್ಯ ಹೇಳೋದು? ನಾನೇ ಹೇಳ್ದೆ ನಿನಗೆ. ಆ ಹೊತ್ತಿನಲ್ಲಿ ವೇಮರೆಡ್ಡಿ ಸಿ.ಐ.ಡಿ. ಜೊತೆಗೆ ಬಂದಿದ್ದ ಅನ್ನೋದು."

"ಬಂದಿದ್ದು ಮುಖ್ಯ ಅಲ್ಲ ಸಾರ್. ಬಂದಿದ್ರು ಅಂತ ಹೇಳುವ ಸೊಗ್ರಾಬ್‌ನ ಸಾಕ್ಷ್ಯ ನಮಗೆ ಮುಖ್ಯ."

"ಯಾಕೆ? ನನ್ನ ಸಲೀಸಾಗಿ ಜೈಲಿಗೆ ಕಳಿಸೋದಕ್ಕೆ."

"ರಾತ್ರಿ ಹನ್ನೆರಡು ಗಂಟೆ ಮೇಲೆ ಈ ಕಡೆಗೆ ಯಾವ ಕಾರೂ ಬರಲಿಲ್ಲ ಅಂತ ಅವನ ಹೇಳಿಕೆ. ಅಂದರೆ ಕಾಮಿನಿಯ ದೇಹವನ್ನ ಬೇರೆ ರೀತಿಯಲ್ಲಿ ಒಯ್ದಿದ್ದಾರೆ. ಬಹುಶಃ ಸ್ವಲ್ಪ ದೂರ ಹೊತ್ತುಕೊಂಡು ಹೋಗಿ ಆಮೇಲೆ ಕಾರಿನಲ್ಲಿ ಸಾಗಿಸಿರಬಹುದು."

ರಾಗಣ್ಣ ಕುದಿನೀರಿಗೆ ಕಾಫಿ ಪುಡಿ ಬೆರೆಸಿದ. ಐದು ನಿಮಿಷದ ನಂತರ ಜೂನಿಯರ್ ಕಾಫಿ ಸಿದ್ಧ ಮಾಡಿ ತಂದ. ಇಬ್ಬರು ಎರಡೆರಡು ಕಪ್ ಹೀರಿದರು. ವಕೀಲ ಸ್ಟೂಲ್ ತಂದಿಟ್ಟು ಹಿಂದಿನ ಗೋಡೆ ಏರಿ ಕನ್ಸರ್ವೆನ್ಸಿ ಕಡೆಗೆ ಜಿಗಿದು ಅತ್ತಲಿಂದ ಕೂಗಿದ:

"ಬಾರಯ್ಯ ಎಳಸು."

ವೆಂಕೋಬ ಗೋಡೆ ಜಿಗಿದು ಬಂದು ಕೈ ಕೊಡವಿದ.

"ಈ ಗೋಡೆಯ ಮೇಲೆ ಒಂದು ಶವ ಏರಿಸಿ ಇಳಿಸೋದು ಕಷ್ಟ, ಸಾರ್?"

ಕಳೆದ ವಸ್ತುವನ್ನು ಹುಡುಕುವಂತೆ ಕಣ್ಣು ಹರಿಸಿದ ವಕೀಲ, ನೆಲದ ಮೇಲೆ ಅರ್ಧದಷ್ಟು ಮೂಡಿದ ಟೈರು ಗುರುತಿನ ಕಡೆ ತೋರಿದ.

"ಇರಾನಿ ಹೇಳ್ದ. ಹನ್ನೆರಡು ಗಂಟೆ ಮೇಲೆ ನಮ್ಮ ರಸ್ತೆಗೆ ಯಾವ ಕಾರೂ ತಿರುಗಲಿಲ್ಲಾಂತ. ನೋಡಿಲ್ಲಿ. ಕಾರು ಬಲ ಪಕ್ಕದಿಂದ ಕನ್ಸರ್ವೆನ್ಸಿ ಗಲ್ಲಿಯಲ್ಲಿ ಬಂದಿದೆ. ಒಂದು ಕಾರು ಮಾತ್ರ ಜರುಗುವಷ್ಟು ಸ್ಥಳ ಇಲ್ಲಿರೋದು. ಕಾಮಿನಿಯ ದೇಹ ಅದರಲ್ಲಿ ಸಾಗಿದೆ. ಕಾರು ಹಿಂದಕ್ಕೆ ಚಲಿಸಿ ಬಲಪಕ್ಕಕ್ಕೇ ಸರಿದು ಹೋಗಿದೆ."

"ಇದು ವೇಮರೆಡ್ಡಿಯ ಪಾಂಟಿಯಾಕ್ ಅಂತ ಸಾಧಿಸಬಹುದು ತಾನೆ?"

"ಒಂದು ಕಾರಿನ ನಾಲ್ಕು ಟೈರುಗಳು ನಾಲ್ಕು ರೀತಿ ಗುರುತು ಹಾಕುತ್ವೆ. ಅದರ ಮೇಲೆ ಎಷ್ಟೋ ಸಾವಿರ ಕಾರುಗಳು ಸಿಟಿಯಲ್ಲಿ. ಕಾಮಿನಿಯ ದೇಹ ಏನಾಯ್ತು ಅನ್ನೋದು ಮುಖ್ಯ...."

ಇಬ್ಬರ ಮಧ್ಯೆ ಸರಕ್ಕನೆ ದೊಡ್ಡ ಗಾತ್ರದ ಹೆಗ್ಗಣ ತೂರಿ ಹೋಯಿತು. ವಕೀಲ ಗಾಬರಿಯಿಂದ ಹಿಂದಕ್ಕೆ ಹಾರಿ ನಿಂತ.

"ಬನ್ನಿ ಸಾರ್... ಹೊಲಸು ಜಾಗದಲ್ಲಿ ಯಾಕೆ ಮಾತು."

ಇಬ್ಬರೂ ಗೋಡೆ ಏರಿ ಒಳಕ್ಕೆ ಜಿಗಿದು ಮನೆಗೆ ಬಂದರು. ವಕೀಲ ಶತಪಥ ಹಾಕಿದ.

"ಕಾಮಿನಿ ಇಲ್ಲಿಗೆ ಬರೋದನ್ನ, ನಾನು ರೈಲ್ವೆ ಸ್ಟೇಷನ್‌ಗೆ ಹೋಗೋದನ್ನ ಕೊಲೆಗಾರಿ ಚೆನ್ನಾಗಿ ತಿಳಿದಿದಾನೆ. ನಾನು ಅತ್ತ ಹೋದಾಗ ಕಾಮಿನಿಯ ಕೊಲೆ ಆಗಿದೆ. ಕೊಲೆ ಆಪಾದನೆ ನನ್ನ ಮೇಲೆ ಚೆನ್ನಾಗಿ ಹೊರಿಸುವ ಹಂಚಿಕೆ."

"ಕೊಲೆ ಮಾಡಿದ ಮೇಲೆ ಶವವನ್ನ ಒಯ್ಯುವ ಮುಟ್ಠಾಳ ಕೆಲಸ ಯಾಕೆ ಮಾಡಿದ?"

"ಕೊಲೆ ಮಾಡಿದ ಮೇಲೆ ಕೊಲೆಗಾರ ಶವದ ವಿಷಯದಲ್ಲಿ ಯಾವುದೊ ಮುಖ್ಯವಾದ ಅಂಶವನ್ನ ಮರೆತಿರಬೇಕು. ನನ್ನ ಮೆಲೆ ಆಪಾದನೆ ಹೊರಿಸೋದಕ್ಕೆ ಆ ಅಂಶ ಅಡ್ಡಿಯಾಗಿರಬೇಕು. ಶವವನ್ನು ಒಯ್ದಿದಾನೆ.... ವೆಂಕೋಬ, ಜಯನಗರದ ಎಂಟನೆ ಬ್ಲಾಕ್‌ನಲ್ಲಿ ವೇಮರೆಡ್ಡಿಯ ಮನೆ ಇದೆಯಂತೆ. ಆ ಮನೆಯಲ್ಲಿ ಯಾರಿದಾರೆ. ಅಲ್ಲಿಗೆ ಯಾರು ಬರ್ತಾರೆ ಹೋಗ್ತಾರೆ ಎಲ್ಲಾ ತಿಳಿದು ಬಾ"

"ಮನೆಯಿಂದ ಎದ್ದು ಹೋದ ಪೀಡೆ ಮತ್ತೆ ಮನೆಗೆ ಬರ್ಲಿ ಅಂತ ನೀವು ಹೇಳೋದು. ಹೆಣ ಕಾಣಿಸ್ತು, ಅದೇ ತೊಲಗಿಹೋಯ್ತು. ಅಲ್ಲಿಗೆ ಬಿಡಿ ಆ ವಿಷಯ"

"ಹೆಂಗೆ ಬಿಡೋದು? ಕಾಮಿನಿ ಇಲ್ಲಿ ಬಿಟ್ಟು ಹೋದ ವಸ್ತುಗಳನ್ನ ಒಯ್ದಿದ್ದಾನೆ, ಸಿಐಡಿ"

"ಒಂದು ಜೊತೆ ಹಳೆ ಚಪ್ಪಲಿ, ಕರ್ಚೀಫ್, ನಾಲ್ಕು ಗಾಜಿನ ಲೋಟ ಇಷ್ಟರಿಂದ ಆಟ ಆಡೋನಿಗೆ ನಾವು ಚಳ್ಳೆಹಣ್ಣು ತಿನ್ನಿಸೋದಕ್ಕೆ ಆಗಲ್ಲವೇನು? ನಿಮಗೇನು ಕಾನೂನು ಗೊತ್ತಿಲ್ಲವೆ?"

"ಮೊದಲು ನಾನು ಹೇಳಿರೋದು ಒಂದಷ್ಟು ಮಾಡಯ್ಯ, ಬಚ್ಚ!"

ಬಚ್ಚ ಹೊರಟು ಹೋದ. ಸ್ನಾನ ಮುಗಿಸಿ ಬಟ್ಟೆ ಧರಿಸಿ ದೊಡ್ಡದಾಗಿ ಕಾಣುವಂತೆ ಕುಂಕುಮ ಇಟ್ಟ ವಕೀಲ ಲ್ಯಾಂಡ್ ಮಾಸ್ಟರ್ ಕಾರಿನ ವೀಲ್ ಹಿಡಿದ. ಕ್ಷಣಕಾಲ ಯೋಚಿಸಿ ನಿರ್ಧಾರಕ್ಕೆ ಬಂದ.

ಇಂದು ಮಂಗಳವಾರ. ಮೋಡದ ದಿವಸ. ಶತ್ರುವನ್ನು ಕಾಣಲು ಇದೇ ಸೂಕ್ತ

ದಿನವಂತೆ!

ಲ್ಯಾಂಡ್ ಮಾಸ್ಟರ್ ಏರಿದ ಸ್ವರದಲ್ಲಿ ಸುಭಾಷ್ ನಗರದ ದಿಕ್ಕಿಗೆ ಸಾಗಿದಾಗ ಮನದಲ್ಲಿ ತಾಕಲಾಟ ಪ್ರಾರಂಭವಾಯಿತು.

ವೇಮರೆಡ್ಡಿ ಕೊಲೆಗಾರ! ತಾನು ಈಗ ಅವನನ್ನು ಕಾಣುವುದು ಸರಿಯೆ? ಈ ಹೊತ್ತಿನಲ್ಲಿ ಅವನು ದೊರೆಯುವುದು ಬಹುಶಃ ಸಾಧ್ಯವಿಲ್ಲ. ನಿನ್ನೆ ರಾತ್ರಿ ಅಷ್ಟೊಂದು ಧೂರ್ತನಂತೆ ನಡೆದವನ ಮುಖದಲ್ಲಿ ಪ್ರತಿಕ್ರಿಯೆ ಕಾಣಿಸಲೇಬೇಕು.

ತನು ಅವನ ನಾಟಕಗಳ ಪ್ರತಿಸ್ಪರ್ಧಿ ಎಂಬುದು ನಂಬಲಾಗದ ವಿಷಯ. ದ್ವೇಷ ಕ್ಷುಲ್ಲಕ. ತನ್ನ ಮೇಲಿನ ಪ್ರತೀಕಾರಕ್ಕೆ ರೆಡ್ಡಿ ಇಂತಹ ಭೀಕರ ತಂತ್ರ ಹೂಡಿರಲಾರ. ಕೊಲೆಯ ಉದ್ದೇಶ ಬೇರೆ ಇರಬೇಕು.

ವಾಹನ ನಿಲ್ಲಿಸಿ ಜೇಬಿಗೆ ಕೈ ಇಳಿಸಿ ನಿಧಾನವಾಗಿ ಓದಿದ. 'ಲೇಪಾಕ್ಷಿ ಕೃಪಾಪೋಷಿತ ನಾಟಕ ಮಂಡಲಿ'ಯ ಬೋರ್ಡ್ ದೊಡ್ಡದಾಗಿತ್ತು. ಅದರಡಿಯಲ್ಲಿ 'ಈ ದಿನ ನಾಟಕ ಇಲ್ಲ' ಎಂಬ ಚಿಕ್ಕ ಪ್ರಕಟಣೆ.

ಬಾಗಿಲಲ್ಲಿ ನಿಂತು ಸಂದಿನಲ್ಲಿ ಕಣ್ಣಿಟ್ಟ. ದೊಡ್ಡ ಗಂಟಲಿನ ಕಂದಪದ್ಯ ಒಳಗಿನಿಂದ ಕೇಳಿಸಿತು.

"ಯಾರು ಬೇಕಿತ್ತು?"

ವಕೀಲ ಹಿಂದಕ್ಕೆ ತಿರುಗಿದಾಗ ನಾಟಕದ ಆಳು ನಿಂತಿದ್ದ.

"ವೇಮರೆಡ್ಡೀನ ನೋಡಬೇಕು."

"ಹೊಸ ನಾಟಕದ ಪ್ರಾಕ್ಟೀಸ್ ನಡೀತಾ ಇದೆ. ಈಗ ಅವರು ಯಾರನ್ನೂ ನೋಡೋದಿಲ್ಲ. ಸಂಜೆಗೆ ಬನ್ನಿ ಸಿಕ್ತಾರೆ. ಹೇಗಿದ್ರು ಇವತ್ತು ನಾಟಕಕ್ಕೆ ರಜ."

"ಯಾವುದು ಹೊಸ ನಾಟಕ?"

"ಪ್ರಮೀಳಾರ್ಜುನೀಯ."

ನೂರಾರು ಬಾರಿ ಪ್ರದರ್ಶಿತವಾಗಿ ಸತ್ತು ಕೊಳೆಯುತ್ತಿರುವ ನಾಟಕ ಮತ್ತೆ ಪ್ರದರ್ಶನಕ್ಕೆ!

"ಸರಿ ಸಂಜೆಗೆ ಬರ್ತೀನಿ."

ಅಲ್ಲಿಂದ ಕಾಲು ತೆಗೆದ ವಕೀಲ ಥಿಯೇಟರನು ಸುತ್ತಿ ಹಿಂಭಾಗಕ್ಕೆ ಬಂದು ಸಣ್ಣ ತಡಿಕೆ ಬಾಗಿಲನ್ನು ತಳ್ಳಿ ಒಳಕ್ಕೆ ಅಡಿಯಿಟ್ಟ. ಪೇರಿಸಿಟ್ಟ ಪರದೆ ಸುರುಳಿಗಳು. ಬಣ್ಣಗೆಟ್ಟ ವಿಗ್ರಹಗಳು. ಮುರಿದ ಕುರ್ಚಿಗಳ ರಾಸಿ ಕಾಣಿಸಿದವು. ಪಕ್ಕದಲ್ಲಿ ಬಣ್ಣದ ಕೋಣೆ. ಅಂಚಿನಲ್ಲಿ ನಿಂತು ನೋಡಿದ. ಕಪ್ಪು ಕೋಲಿನ ಮೇಲೆ ಕೈಊರಿ ಕುರ್ಚಿಯಲ್ಲಿ ಕುಳಿತು ನಾಟಕದ ಅಭ್ಯಾಸವನ್ನು ತದೇಕಚಿತ್ತದಿಂದ ವೀಕ್ಷಿಸುತ್ತಿದ್ದ ವೇಮರೆಡ್ಡಿ ಚೆನ್ನಾಗಿ ಕಾಣಿಸಿದ. ಕಂಪೆನಿಯ ಎಲ್ಲಾ ನಾಟಕಗಳ ಏಕೈ ನಾಯಕ ಭಗವಂತಪ್ಪ ಅರ್ಜುನನ

ಠೀವಿಯಲ್ಲಿ ಮಾತು ಹರಿಸುತ್ತಿದ್ದ. ನಲವತ್ತು ಸಮೀಪಿಸಿದ ಪ್ರಮೀಳೆಯ ಪಾತ್ರದ ಹೆಂಗಸಿನ ನಡಿಗೆಯನ್ನು ಕೋಟಯ್ಯ ತಿದ್ದುತ್ತಿದ್ದ. ಲೆಗ್ ಹಾರ್ಮೋನಿಯಂ ಸ್ವರ ಹೊಮ್ಮಿಸಿತು.

ವೇಮರೆಡ್ಡಿಯ ದೃಷ್ಟಿ ವಕೀಲನ ಮೇಲೆ ಬಿತ್ತು. ಕೋಲು ಹಿಡಿದು ದಿಗ್ಗನೆ ಎದ್ದವನು ಬಿರುಸಾಗಿ ಕೂಗಿದ.

"ಶಕುನ ಪಕ್ಷಿ! ಹೊಸ ನಾಟಕದ ಅಭ್ಯಾಸದ ಮೊದಲನೆ ದಿನವೇ ಅಪಶಕುನ! ಈ ಕಾಮಣ್ಣನ್ನ ಹೊರಕ್ಕೆ ಹಾಕು ಕೋಟಯ್ಯ."

ಅಭ್ಯಾಸ ನಡೆಸುತ್ತಿದ್ದ ಇಡೀ ನಾಟಕದ ತಂಡ ತನ್ನತ್ತ ದಿಟ್ಟಿಸಿದಾಗ ವಕೀಲನಿಗೆ ಬತ್ತಲೆ ನಿಂತಂತಾಯಿತು.

ಕೋಟಯ್ಯ ಪಂಚೆ ಎತ್ತಿ ಹಿಡಿದು ದಪ್ಪ ದೇಹ ತೂಗಿಸಿಕೊಂಡು ಬಂದು ಕೈ ಹಿಡಿದ.

"ಇಲ್ಲಿಗೆ ಯಾಕೆ ಬಂದ್ರಿ, ವಕೀಲಗಾರು? ಹೊಸ ನಾಟಕಕ್ಕೆ ನಿಮ್ಮ ಹಾಗೆ ಶಕುನ, ಘಳಿಗೆ ಬಹಳ ನೋಡ್ತಾರೆ ಧಣಿ ಈಗ ಅವರಿಗೆ ನಿಮ್ಮ ದರ್ಶನದಿಂದ ಕೋಪ ಏರಿದೆ. ದಯವಿಟ್ಟು ನನಗಾಗಿ ಇಲ್ಲಿಂದ ಹೊರಟು ಬಿಡಿ. ಅವರ ಹುಚ್ಚು ವರ್ತನೆಯಿಂದ ನನಗೂ ನೋವಾಗಿದೆ."

"ನಿಮ್ಮ ಧಣಿ ಹುಚ್ಚ ಆದ್ರೆ ನಾನು ದೊಡ್ಡ ಹುಚ್ಚ. ಬಹಳ ಮುಖ್ಯವಾದ ವಿಷಯವನ್ನ ರೆಡ್ಡಿ ಜೊತೆ ನೇರವಾಗಿ ಮಾತಾಡೋಕೆ ಬಂದಿದೀನಿ. ತುಂಬ ಕೆಟ್ಟ ವಿಷಯ."

"ಕೆಟ್ಟ ವಿಷಯ ಏನು ಅಂಥಾದ್ದು?"

ಕೋಟಯ್ಯ ತಲೆಯ ಬೆವರು ಒತ್ತಿಕೊಂಡು ಗಾಬರಿಯಿಂದ ಕೇಳಿದ.

ಅಂತಹ ಗಂಭೀರ ಪರಿಸ್ಥಿತಿಯಲ್ಲೂ ನಾಟಕದ ನಾಯಕ ಭಗವಂತಪ್ಪ ನಮ್ರವಾಗಿ ಕೈ ಮುಗಿದ. ಅವನಿಗೆ ಪ್ರತಿ ನಮಸ್ಕಾರ ತಿಳಿಸುವುದರಲ್ಲಿ ರೆಡ್ಡಿಯ ಕೋಲು ಕುಟ್ಟಿದ ಶಬ್ದ ಕೇಳಿಸಿತು. ಸಣಕಲು ದೇಹದ ರೆಡ್ಡಿ ಮುಂದೆ ಬಂದು ಕಿರುಚಿದ.

"ತೊಲಗು! ನನಗೆ ಮಾತು ಕೇಳೋ ಪುರಸೊತ್ತು ಇಲ್ಲ. ಹಾಳಾಯ್ತು ನನ್ನ ನಾಟಕ."

ಮೀಸೆ ತುದಿಯನ್ನು ನಾಲಗೆಯಿಂದ ಒತ್ತಿ ಹಣೆ ಚಚ್ಚಿಕೊಂಡ.

"ನಿನ್ನೆ ರಾತ್ರಿ ಕಾಮಿನಿನ ಹುಡುಕಿಕೊಂಡು ಬಂದ್ರಿ. ಅವಳ ವಿಷಯ ತಿಳಿಸ್ತೀನಿ."

ರೆಡ್ಡಿಯ ಕೋಪ ತೃಣವೂ ಕುಗ್ಗಲಿಲ್ಲ. ಜಾರಿದ ಕನ್ನಡಕವನ್ನು ಮೇಲೆತ್ತಿ ನರೆತ ಕೂದಲನ್ನು ಸವರಿದ. ಕೋಲು ತುದಿಯನ್ನು ಅವನ ಎದೆಗೆ ಮುಟ್ಟಿಸಿದ.

"ಕಾಮಿನು ಸಾಯಲಿ! ಹಿಡಿ ಮಣ್ಣು ಹಾಕಿಬಿಡ್ತೀನಿ. ಅವಳನ್ನು ಹೂಳೋವಾಗ."

"ನಾನು ಹೋಗದೆ ಇದ್ರೆ....?"

"ಭೀಮಯ್ಯ!"

ಉಸಿರು ಬಿಗಿ ಹಿಡಿದು ಕೂಗಿದ ರೆಡ್ಡಿ. ಎದಿರು ಬಾಗಿಲು ತೆರೆದುಕೊಮಡು ಹೆಜ್ಜೆ ಇಟ್ಟ ದೈತ್ಯ.

ಬೆಕ್ಕಿನ ಕಣ್ಣುಗಳ, ಮಾಂಸದ ಪರ್ವತವಾಗಿದ್ದ ಭೀಮಯ್ಯ ಏನು ಮಾಡುತ್ತಾನೆ ಎಂದುಕೊಳ್ಳುವುದರೊಳಗಾಗಿ ವಕೀಲನ ತಲೆಯ ಮೇಲೆ ಬಲಿಷ್ಠ ಮುಷ್ಟಿಯ ಪ್ರಹಾರ ಎರಗಿತ್ತು. ಕಣ್ಣುಗಳ ಮುಂದೆ ನಾಟಕ ತಂಡದ ಜನ ಬಣ್ಣದ ಚಿತ್ರಗಳಾಗಿ ಸುತ್ತಿ ಕತ್ತಲಿನಲ್ಲಿ ಲೀನವಾದರು.

7

ರಾಗಣ್ಣ ಕಣ್ಣು ತೆರೆದಾಗ ತನ್ನ ಕಾಲುಗಳನ್ನು ನೀಡಲಾಗದಷ್ಟು ಇಕ್ಕಟ್ಟಾದ ಸ್ಥಳದಲ್ಲಿ ಮಲಗಿರುವುದರ ಅರಿವಾಯಿತು. ತಲೆಯಲ್ಲಿ ಟನ್ ತೂಕದ ಭಾರ, ಅಸಾಧ್ಯ ನೋವು.

ಎದುರಿಗೆ ಗಾಜಿನ ಷಟರ್. ಎಡಕ್ಕೊಂದು ಉದ್ದನೆಯ ಗಾಜಿನ ಕಿಟಕಿ ಗೂಡು, ತಳದಲ್ಲಿ ಕಿರುಗುಟ್ಟುವ ಮೆತ್ತೆ. ಮೇಲುಗಡೆ ತನ್ನತ್ತ ಇಳಿದಿರುವ ಕೆಂಪುಮೆತ್ತೆಯ ಚಾವಣಿ.

ಓಹ್, ತನ್ನ ಲ್ಯಾಂಡ್ ಮಾಸ್ಟರ್‌ನ ಹಿಂದಿನ ಸೀಟಿನಲ್ಲೇ ತಾನು ಮಲಗಿರುವೆ!

ಎದ್ದು ಕುಳಿತು ತಲೆ ಒದರಿದ.

"ತೊಗೊಳ್ರಿ, ವಕೀಲಗಾರು..."

ಎಂದು ಮುಂದಿನ ಸೀಟಿನಲ್ಲಿ ಕುಳಿತ ಕೋಟಯ್ಯ ವಿಸ್ಕಿ ಟಂಬ್ಲರ್ ನೀಡಿದ. ಎರಡು ಗುಟುಕು ಹೀರಿದ ರಾಗಣ್ಣ ತಲೆಯ ನೆತ್ತಿಯನ್ನು ಹಸ್ತದಿಂದ ಒತ್ತಿದ."

"ಕೋಪ ಬಂದಾಗ ನಿಮ್ಮ ರೆಡ್ಡಿ ಯಾವುದಕ್ಕೂ ಸಿದ್ಧ."

"ರೆಡ್ಡಿ ಅಲ್ಲ, ಮಡ್ಡಿ ಅನ್ನಿ. ಕೋಪದಿಂದಲೇ ದಿನ ದಿನಕ್ಕೂ ಹೆಸರು ಕೆಡಸಿಕೊಳ್ತಾ ಇದಾರೆ. ಅವರು ಹೇಳೋ ಹಾಗೆ ಅವರು ಒಂದು ದಿನ ಕೊಲೆ ಮಾಡ್ತಾರಂತೆ. ಇಲ್ಲದಿದ್ರೆ ಅವರೇ ಕೊಲೆ ಆಗಿ ಹೋಗ್ತಾರಂತೆ. ಆದದ್ದು ದಯವಿಟ್ಟು ಮರೆತುಬಿಡಿ. ಧಣಿಗಳ ಪರವಾಗಿ ಕ್ಷಮೆ ಬೇಡ್ತೀನಿ."

ಕೋಟಯ್ಯನಿಗೆ ಕಾಮಿನಿಯ ಕೊಲೆ ಸಂಗತಿ ತಿಳಿಸಬೇಕೆಂದು ಕೊಂಡವನು ಸುಮ್ಮನೆ ಕುಳಿತ. ವಿಸ್ಕಿ ಟಂಬ್ಲರ್ ಖಾಲಿ ಆಯಿತು.

ಕೋಟಯ್ಯ ಮತ್ತೆ ಹೇಳಿದ:

"ಧಣಿಯ ವರ್ತನೆ ಯಾವತ್ತಿಗೂ ಒಂದೇ. ಭಗವಂತಪ್ಪನಿಗೂ ಒಂದು ದಿನ ಯದ್ವಾತದ್ವಾ ಆಡಿದ್ರು. ಅವನು ನಡೆದೇಬಿಟ್ಟ. ನಾಯಕ ಇಲ್ಲದ ನಾಟಕದ ಗತಿ! ನಾನು ಹೋಗಿ ಅವನಿಗೆ ದಮ್ಮಯ್ಯ ಗುಡ್ಡೆ ಹಾಕಿ ಕರೆತರೋದ್ರಲ್ಲಿ ಸಾಕುಸಾಕಾಯ್ತು. ಆ ಹೀರೋಗೆ ಕಾಮಿನಿಯ ಮೇಲೆ ವಿಪರೀತ ಆಸೆ. ಅದನ್ನ ತಿಳಿದ ರೆಡ್ಡಿ ಬುದ್ಧಿಯನ್ನು ಕೋಪದ ಕೈಗೆ ಕೊಟ್ರು. ಅವರು ಮಾಡಿದ ತಪ್ಪನ್ನೆಲ್ಲಾ ರಿಪೇರಿ ಮಾಡೋದ್ರಲ್ಲಿ ದಿನ ಕಳೀತಾ ಇದೆ. ಈ ಧಣಿ, ನಾಟಕ ಎರಡರ ಸಹವಾಸವೂ ಬೇಸರ ತಂದಿದೆ. ಒಂದೆರಡು ತಿಂಗಳಲ್ಲಿ ಕೈ ತೊಳಕೊಂಡು ಬಿಡ್ತೀನಿ... ಕಾರಿನ ಬೀಗದ ಕೈ ಕೊಡಿ."

ಆಂಧ್ರದ ಬಿಸಿಲು ಸಾಕಷ್ಟು ಉಂಡು ದೇಹ ಬೆಳೆಸಿದ ಕೋಟಯ್ಯ ಬೆಂಗಳೂರಿನ ಹಿತವಾದ ಬಿಸಿಲಿಗೇ ತೊಯ್ದು ಹೋಗಿದ್ದ. ಟವೆಲ್‌ನಿಂದ ಮುಖ ಒರೆಸಿದ.

ನಲವತ್ತು ವಯಸ್ಸಿನ ದೇಹ ಸ್ಥೂಲವಾದರೂ ದೃಢವಾಗಿದೆ. ಮುಂಭಾಗದಲ್ಲಿ ಬಕ್ಕವಾಗುತ್ತಿರುವ ತಲೆ ಒರಟು ಕೂದಲ ಬಲ ಪಾರ್ಶ್ವದಲ್ಲಿ ನರೆತು ಯಾವುದೊ ಬಣ್ಣ ಲೇಪಿಸಿದೆ.

ಕೋಟಯ್ಯ ಭಾರಿ ಹೋಟೆಲೊಂದರ ಮುಂದೆ ಕಾರು ನಿಲ್ಲಿಸಿದ. ಇಬ್ಬರೂ ಇದರು ಬದುರು ಕುಳಿತು ಊಟ ಮಾಡಿದರು.

ಮಾತನಾಡುತ್ತಿದ್ದ ಕೋಟಯ್ಯ ಮೆಲ್ಲನೆ ವಿಷಯ ಬದಲಿಸಿದ.

"ರೆಡ್ಡಿಯ ಕೋಪ ಅವರನ್ನ ಎಲ್ಲಿಗೆ ಒಯ್ಯುತ್ತೊ. ಈಚೆಗೆ ಆರು ತಿಂಗಳಿಂದ ವಿಪರೀತ ಹುಚ್ಚು ವರ್ತನೆ"

"ಕಾರಣ?"

"ರತ್ತಯ್ಯನ ಉಯಿಲು."

"ಉಯಿಲು ಮಾಡಿದ್ದೇಕೆ ರತ್ತಯ್ಯ? ಇರೋದು ಒಬ್ಬಳೇ ಮಗಳು."

ಆ ಒಬ್ಬಳೇ ಮಗಳು ತನ್ನ ಮನೆಯಲ್ಲಿ ಕೊಲೆಯಾಗಿ ಬಿದ್ದ ಚಿತ್ರ ಅವನ ನೆಮ್ಮದಿ ಕೆಡಿಸಿತು.

"ಉಯಿಲು ಒಂದಲ್ಲ, ಎರಡು"

ಎಂದು ಕೋಟಯ್ಯ ನಿಧಾನವಾಗಿ ಕತೆ ಹೇಳಿದ. ಪ್ರಶ್ನೆ ಹಾಕದೆ ಮೌನವಾಗಿ ಅರ್ಧ ಗಂಟೆ ಕೇಳಿದ ವಕೀಲ ಮನೆ ಸೇರಿದ ಮೇಲೆ ತಲೆಯ ಚಳುಕಿನಲ್ಲಿ ಕತೆ ಮರುಕಳಿಸಿತು.

ತಾಡಪತ್ರಿ ರತ್ತಯ್ಯ ನಾಟಕದ ಕಂಪೆನಿ ಮಾಲೀಕ. ತಾಡಪತ್ರಿ ಹಾಗೂ ನೆಲ್ಲೂರಿನ ಜಮೀನುಗಳೊಂದಿಗೆ ಮದ್ರಾಸಿನ ಬ್ಯಾಂಕ್‌ನಲ್ಲಿ ನಾಲ್ಕು ಲಕ್ಷ ನಗದು ಹಣ ಇರಿಸಿದ ಶ್ರೀಮಂತ. ವೇಮರೆಡ್ಡಿ ಕಂಪೆನಿಯ ಮ್ಯಾನೇಜರ್ ಹಾಗೂ ರತ್ತಯ್ಯ ಆಪ್ತ ಕಾರ್ಯದರ್ಶಿ. ಕೋಟಯ್ಯ ವೇಮರೆಡ್ಡಿಯ ಅಸಿಸ್ಟೆಂಟ್. ಕಾಮಿನಿ ರತ್ತಯ್ಯನ ಏಕೈಕ ಸಂತಾನ. ಹೆಂಡತಿ ತೀರಿಹೋದಮೇಲೆ ರತ್ತಯ್ಯನಿಗೆ ಪ್ರಿಯತಮೆ ಪಾತಕ್ಕಳ ಮನೆ ನೆಮ್ಮದಿಯ

ತಾಣವಾಯಿತು. ಕಾಮಿನಿಗೆ ಮೊದಲಿನಿಂದ ಹಠ, ಛಲ. ಅವಳ ಇಚ್ಛೆಯನ್ನು ಶ್ರೀಮಂತ ತಂದೆ ಪೂರೈಸುತ್ತಿದ್ದ. ಮಗಳಿಗೆ ನಾಟಕದ ಸಂಪರ್ಕವೇ ಬೇಡವೆಂದು ಅವಳನ್ನು ಮದ್ರಾಸಿನಲ್ಲಿ ಬಿಟ್ಟ. ಪಚ್ಚಯ್ಯಪ್ಪ ಕಾಲೇಜಿನ ಓದು, ಮೈಲಾಪುರ ಬಡಾವಣೆಯಲ್ಲಿದ್ದ ಆಂಧ್ರ ಮಹಿಳಾ ನಿಲಯದ ವಾಸ ಕಾಮಿನಿಯನ್ನು ನಾಟಕದಿಂದ ದೂರ ಮಾಡಿದರೂ ಅಭಿನಯಿಸಬೇಕೆಂಬ ಅವಳ ಹಂಬಲ ಅದಮ್ಯ.

ಮದುವೆ ಬೇಡವೆಂಬ ಮಗಳ ವಿಚಿತ್ರ ನಿರ್ಧಾರ ಕೇಳಿದ ಮೇಲೆ ರತ್ತಯ್ಯನಿಗೆ ಚಿಂತೆ ಹತ್ತಿತು. ಒಬ್ಬಳೇ ಮಗಳ ರಕ್ಷಣೆಗಾಗಿ, ನಾಟಕ ಹಾಗೂ ಆಸ್ತಿಯ ನಿರ್ವಹಣೆಗಾಗಿ ಸೂಕ್ತ ಅಳಿಯನ ಅಗತ್ಯವಿತ್ತು. ಆದರೆ ಕಾಮಿನಿಯ ನಿರ್ಧಾರ ಅವನು ಸಾಯುವವರೆಗೂ ಬದಲಿಸಲಿಲ್ಲ.

ರತ್ತಯ್ಯ ಒಂದು ವರ್ಷದ ಹಿಂದೆ ಪ್ಲೂರಸಿ ಖಾಯಿಲೆಗೆ ತುತ್ತಾದ. ಸಾಯುವ ಎಂಟು ತಿಂಗಳಿಗೆ ಮೊದಲು ಉಯಿಲು ಮಾಡಿದ. ಕಾಮಿನಿ ಬಾಧ್ಯಸ್ಥೆಯಾದರೂ ಮದುವೆ ಆದಮೇಲೆ ಮಾತ್ರ ಅವಳಿಗೆ ಆಸ್ತಿಯ ಹಕ್ಕು ಎಂಬ ನಿಬಂಧನೆ. ಹಕ್ಕು ಬರುವವರೆಗೆ ಆಸ್ತಿಯ ನಿರ್ವಹಣೆ ವೇಮರೆಡ್ಡಿಯ ನೇತೃತ್ವದಲ್ಲಿ.

ಉಯಿಲು ಬರೆದ ಆರು ತಿಂಗಳ ನಂತರ ರತ್ತಯ್ಯ ಮನಸ್ಸು ಬದಲಾಯಿಸಿದ. ಹೆಂಡತಿಗಿಂತಲೂ ಹೆಚ್ಚಾಗಿ ನೆಮ್ಮದಿ ಕೊಟ್ಟ ಪ್ರಿಯತಮೆಯನ್ನು ಮರೆಯುವಂತಿರಲಿಲ್ಲ. ಮೊದಲನೆ ಉಯಿಲು ರದ್ದಾಗಿ ಎರಡನೆ ಉಯಿಲು ಬಂತು. ಆದರೆ ರತ್ತಯ್ಯ ಅದನ್ನು ಬಹಿರಂಗಪಡಿಸಲಿಲ್ಲ. ಹೊಸ ಉಯಿಲಿನಂತೆ ಅರ್ಧ ಆಸ್ತಿ ಕಾಮಿನಿಗೆ, ಅರ್ಧ ಆಸ್ತಿ ಪಾತಕ್ಕನಿಗೆ ಸೇರಿತು. ಕಾಮಿನಿಗೆ ಹಕ್ಕು ಬರಲು ವಿವಾಹದ ನಿಬಂಧನೆ ಇದ್ದೇ ಇತ್ತು. ಇಬ್ಬರು ಬಾಧ್ಯಸ್ಥೆಯರಲ್ಲಿ ಯಾರು ಸತ್ತರೂ ಉಳಿದವರಿಗೆ ಪೂರ್ತಿ ಆಸ್ತಿಯ ಹಕ್ಕು ಬರುವಂತಿತ್ತು. ಆಸ್ತಿಯ ನಿರ್ವಹಣೆಗೆ ಯಾರನ್ನೂ ನಮೂದಿಸಿರಲಿಲ್ಲ. ಹದಿನೆಂಟು ವರ್ಷ ಮೀರಿದ ಮೇಲೂ ಅವಿವಾಹಿತಳಾದ ಕಾಮಿನಿ ಆಸ್ತಿಗೆ ಹಕ್ಕುದಾರಿಣಿ ಆಗದೆ ಉಳಿದಳು.

ರತ್ತಯ್ಯ ಸತ್ತು ನಲ್ಕು ತಿಂಗಳ ಮೇಲೆ ವೇಮರೆಡ್ಡಿಗೆ ಎರಡನೆ ಉಯಿಲಿನ ಸಂಗತಿ ತಿಳಿಯಿತು. ಕೋಟಯ್ಯನ ಸಹಕಾರದಿಂದ ನಾಟಕ ಮತ್ತು ಆಸ್ತಿಗಳನ್ನು ನೋಡಿಕೊಂಡ. ರತ್ತಯ್ಯನ ನಂತರ 'ಲೇಪಾಕ್ಷಿ ಕೃಪಾ ಪೋಷಿತ ನಾಟಕ ಮಂಡಲಿ' ಆಂಧ್ರದಲ್ಲಿ ಕ್ರಮೇಣ ಜನಪ್ರಿಯತೆ ಕಳೆದುಕೊಂಡ ಮೇಲೆ ವೇಮರೆಡ್ಡಿ ಅದೇ ಕಂಪೆನಿಯನ್ನು ಕರ್ನಾಟಕಕ್ಕೆ ತಂದು ಕನ್ನಡ ನಾಟಕಗಳನ್ನು ಪ್ರದರ್ಶಿಸತೊಡಗಿದ. ಬೆಂಗಳೂರು ಮೊಕ್ಕಾಂನಲ್ಲಿ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ನಾಲ್ಕು ತಿಂಗಳು ಆಡಿಸಿದ....

ಕೋಟಯ್ಯನಿಂದ ತಿಳಿದ ವಿಷಯಗಳನ್ನು ಮೆಲಕು ಹಕಿ ತಲೆ ತುರಿಸಿದ. ಕಾಮಿನಿಯ ಸಾವಿನಿಂದ ಪಾತಕ್ಕನಿಗೆ ಈಗ ಆಸ್ತಿಯ ಪೂರ್ಣ ಹಕ್ಕು ದೊರೆತಿದೆ. ಅದರಿಂದ ವೇಮರೆಡ್ಡಿಗೆ ಏನು ಲಾಭ?

ಫೋನ್ ಗಂಟೆ ಬಾರಿಸಿತು. ಜೂನಿಯರ್ ವೆಂಕೋಬ ತಾನು ನಿರ್ವಹಿಸಿ ಬಂದ ಕೆಲಸದ ವರದಿ ಕೊಟ್ಟ.

"ಸಾರ್, ವೇಮರೆಡ್ಡಿ ಮನೆ ನೋಡಿ ಬಂದೆ. ಅದೇ ಮನೆಯಲ್ಲಿ ರತ್ತಯ್ಯನ ವೇಶ್ಯೆ ಪಾತಕ್ಕ ಇದಾಳಂತೆ. ಜಯನಗರದ ಎಂಟನೆ ಬ್ಲಾಕ್‌ನಲ್ಲಿ ಸಾರಕ್ಕಿ ಗೇಟ್‌ಗೆ ಫರ್ಲಾಂಗ್ ದೂರದಲ್ಲಿದೆ ಆ ಮನೆ. ಒಂಟಿಯಾದ ದೊಡ್ಡ ಮಹಡಿ ಮನೆ. ಗುಲಾಬಿ ರಂಗು ಹಚ್ಚಿದ ಮನೆ ಅದೊಂದೇ. ಅದರ ಹಿಂದೆ ತೆಂಗಿನ ಮರಗಳ ದೊಡ್ಡ ಕಾಂಪೌಂಡ್ ಇದೆ. ಮನೆಯಲ್ಲಿ ಒಬ್ಬಳು ಹೆಣ್ಣಾಳು ಮಾತ್ರ ಇರೋದು. ಸಾಮಾನ್ಯವಾಗಿ ಮನೆಗೆ ಯಾರೂ ಹೋಗೋದಿಲ್ಲಂತೆ. ವೇಮರೆಡ್ಡಿ ಬರೋದು ರಾತ್ರಿ ಹನ್ನೆರಡರ ಮೇಲೆ. ಬಚ್ಚ ಇಷ್ಟು ಕೆಲಸ ಮಾಡಿದಾನೆ ಹಳೆ ಹುಲಿಯ ಮುಂದಿನ ಅಪ್ಪಣೆಗೆ ಕಾದಿದಾನೆ."

"ಸದ್ಯಕ್ಕೆ ಹಳೆ ಹುಲಿ ಗುಹೆಯಲ್ಲಿ ಸೊರಗಿ ಬಿದ್ದಿದೆ."

"ಏನ್ಸಾರ್, ಒಂದು ತರ ಸುಸ್ತಾಗಿದೀರಿ?"

"ಉಳಕೊಂಡಿದೀನಿ. ತಲೆ ಮಿದುಳು ನೀರಾಗುವ ಹಾಗೆ ಹೊಡೆತ ಬಿತ್ತು."

"ಹೊಡೆತ?"

"ವೇಮರೆಡ್ಡಿ ಹೊಡೆಸಿಬಿಟ್ಟ. ಬಾವಿಯಲ್ಲಿ ಮುಳುಗಿದ ಬಿಂದಿಗೆ ಎತ್ತೊ ಆ ದೊಂತಾತನ್ನ ಹುಡುಕಿ ಭೀಮಣ್ಣ ಅನ್ನೋ ಹೆಸರಲ್ಲಿ ಬಾಡಿಗಾರ್ಡ್ ಮಾಡ್ಕೊಂಡಿದಾನೆ ರೆಡ್ಡಿ. ಆ ದೊಂತಾತನ ಕೈ ರುಚಿ ನೋಡ್ದೆ."

ಅತ್ತಲಿಂದ ಹಲ್ಲು ಕಡಿದ ಶಬ್ದ ಕೇಳಿಸಿತು.

"ಸಾರ್, ಆ ದೊಂತಾತನ್ನ ಹಿಡಿದು..."

"ಸುಮ್ನಿರಯ್ಯಾ ಎಳಸು. ಕಾನೂನಿಗೆ ಬಗ್ಗೊ ಜಾತಿ ಅಲ್ಲ ಅದು. ಇನ್ನೊಂದು ಕೆಲಸ ಮಾಡು. ರೆಡ್ಡಿ ಮನೆಗೆ ಹೋಗಿ ಅಲ್ಲಿರೊ ಒಡತೀನ ಮಾತಾಡ್ಸು. ಇವತ್ತಲ್ಲ, ನಾಳೆ. ಆಗಾಗ್ಗೆ ಕಾಮಿನೀನ ನೊಡೋದಕ್ಕೆ ಅವಳ ಪ್ರಿಯತಮ ಬರ್‍ತಾ ಇದ್ನಂತೆ ಅಲ್ಲಿಗೆ."

"ಕಾಮಿನಿ! ಪ್ರಿಯತಮ?" ಉದ್ಗಾರ ಎತ್ತಿದ.

"ಶುರು ಆಯ್ತು ಪ್ರವರ. ಮನೆಗೆ ಬಾರಯ್ಯ"

ಫೋನ್ ಇಟ್ಟ. ಕಾಲು ಗಂಟೆಯಲ್ಲಿ ಮತ್ತೆ ಫೋನ್ ಕಿಂಕಿಣಿ.

"ಮತ್ತೆ ಕಪಿಯ ಆಗಮನ" ಎನ್ನುತ್ತಾ ಫೋನ್ ಎತ್ತಿಕೊಮಡ. ಧ್ವನಿ ಅಪರಿಚಿತವಾಗಿತ್ತು.

"ಸಾರ್, ನಾನು ಭಗವಂತಪ್ಪ. ಬೆಳಿಗ್ಗೆ ನಿಮ್ಮ ಮೇಲೆ ಆಕ್ರಮಣ ನಡೆದಾಗ ಸುಮ್ಮನೆ ನಿಂತಿದ್ದೋನು. ಏನು ಮಾಡ್ಲಿ? ತಾಬೆದಾರಿ! ನಿಮ್ಮ ಬಗ್ಗೆ ಸಹಾನುಭೂತಿ

ಇದೆ. ಕಾಮಿನಿ ವಿಷಯದಲ್ಲಿ ನೀವು ತಿಳಿಯದೆ ಇರುವ ವಿಷಯ ತಿಳಿಸೋಣಾಂತ. ಸಂಜೆ ಆರೂವರೆ ಷೋಗೆ ಎಂಪೈರ್ ಟಾಕೀಸ್‌ಗೆ ಬನ್ನಿ. ಅಲ್ಲಿ ಸಿಕ್ತೀನಿ. ಒಂದು ವೇಳೆ ನಾನು ಭೇಟಿ ಆಗದಿದ್ರೆ ಷೋ ಬಿಟ್ಟ ಮೇಲೆ ಹಾಗೇ ಬನ್ನಿ. ಕಸ್ತೂರ್ ಬಾ ರೋಡ್‌ನಲ್ಲಿ ಮ್ಯೂಸಿಯಂ ಹತ್ರ ಕಾದಿರ್ತೀನಿ."

ಕಾಮಿನಿಯ ವಿಷಯ! ಮೈಯೆಲ್ಲಾ ಕಿವಿಯಾದ ರಾಗಣ್ಣ.

"ನಾನು ತಿಳಿಯದೆ ಇರೊ ವಿಚಾರ ಯಾವುದು?"

"ಬೇಕಾದಷ್ಟಿದೆ ಹೇಳ್ತೀನಿ ಬನ್ನಿ."

"ನಿಮ್ಮ ನಾಟಕ?"

"ಇವತ್ತು ನಾಟಕಕ್ಕೆ ರಜಾ."

ಫೋನ್ ಸಂಪರ್ಕ ಕಡಿದುಹೋಯಿತು.

ಐದೂವರೆ ಹೊತ್ತಿಗೆ ವೆಂಕೋಬ ಬಂದ. ವಕೀಲ ಅವನೊಂದಿಗೆ ಕಾರು ಏರಿ ಕಂಟೋನ್ಮೆಂಟ್ ದಿಕ್ಕು ಹಿಡಿದ.

"ನಿನ್ನೆ ರಾತ್ರಿ ಹಾಗಯ್ತು. ಇವತ್ತು ಬೆಳಿಗ್ಗೆ ನಿಮಗೆ ಹೀಗೆ ಅಯ್ತು... ಇಂಥಾ ದಿನವೂ ಸಿನಿಮಾ ಬೇಕೆ?"

ಅವನ ಮಾತಿಗೆ ರಾಗಣ್ಣ ಉತ್ತರ ನೀಡಲಿಲ್ಲ. ಭಗವಂತಪ್ಪನ ಭೇಟಿ ವಿಷಯದಲ್ಲಿ ಏನೂ ತಿಳಿಸದ ಎಂಪೈರ್ ಸಿನಿಮಾ ಪಕ್ಕದ ರಸ್ತೆಯಲ್ಲಿ ಕಾರು ನಿಲ್ಲಿಸಿ ಥಿಯೇಟರ್ ಒಳಕ್ಕೆ ಬಂದು ನೋಡಿದ. ಭಗವಂತಪ್ಪ ಕಾಣಿಸಲಿಲ್ಲ. ಚಿತ್ರ ಪ್ರಾರಂಭವಾದರೂ ಅವನು ಬರಲಿಲ್ಲ.

"ಏನು ಹಾಗೆ ನೋಡ್ತಾ ಇದೀರಿ? ಯಾವುದಾದ್ರು ಹೆಣ್ಣು ಹಕ್ಕಿ..."

ಅತಿಯಾದ ಮಾತಿಗೆ ಜೂನಿಯರ್ ನಾಲಗೆ ಕಚ್ಚಿದ. ಸೀನಿಯರ್ ಅವನ ತಲೆಯ ಮೇಲೆ ಮೊಟ್ಟಿದ.

"ಸತ್ತು ಮಾಯವಾದ ಹೆಣ್ಣು ಹಕ್ಕಿ ವಿಷಯ ಇದು. ಆಟ ಬಿಡುವತನಕ ಕಾಲ ಕಳೆಯುವುದು ಮಹಾ ಸಮಸ್ಯೆ ಆಯಿತು. ಅರ್ಥವಾಗದ ಮಲಯಾಳಿ ಚಿತ್ರ ನೋಡಿ ಚಡಪಡಿಸಿದ ವೆಂಕೋಬ ನಿದ್ರೆ ಮಾಡಿದ. ಒಂಬತ್ತೂಕಾಲು ಗಂಟೆಗೆ ಷೋ ಬಿಡುತ್ತಲೇ ರಾಗಣ್ಣ ಜೂನಿಯರ್‌ನ ತೋಳು ಹಿಡಿದು ಆತುರವಾಗಿ ಹೊರಬಂದು ಕಾರಿನ ವೀಲ್ ಹಿಡಿದ. ಗಾಳಿ ಭರ್ರನೆ ಬೀಸುತ್ತಿತ್ತು.

"ನನಗೆ ಏನಾದ್ರೂ ಕೂಲ್ ಡ್ರಿಂಕ್ಸ್ ಬೇಕಿತ್ತು."

ವೆಂಕೋಬ ನಿದ್ರೆಗಣ್ಣು ಉಜ್ಜುತ್ತಾ ಹೇಳಿದ.

"ಗುಗ್ಗು! ಈ ಚಳಿಯಲ್ಲಿ ತಣ್ಣನೆ ಪಾನೀಯ? ಸ್ಕಾಚ್ ವಿಸ್ಕಿ ಹಾಕಿಸ್ತೀನಿ ಸುಮ್ಮನೆ ಕೂಡು."

"ನಮ್ಮಪ್ಪ ಈ ಮಾತು ಕೇಳಿದರೆ ನನ್ನದು ಇರಲಿ, ನಿಮ್ಮ ಗತಿ ಏನು?"

"ಭಾರಿ ಸಂಭಾವಿತ. ಕಾಲೆಜಿನಲ್ಲಿ ನೀನು ನಡೆಸಿದ ಸಾಹಸ ಕೃತ್ಯಗಳೆಲ್ಲಾ ಗೊತ್ತಿದೆ ನನಗೆ."

"ಈಗ ಎಲ್ಲಿಗೆ ಹೋಗ್ತಾ ಇರೋದು?"

"ಥೂ ನಿನ್ನ! ಹೊರಡುವಾಗಲೇ ಎಲ್ಲಿಗೆ ಅಂತೀಯ. ಶಕುನ ಪಕ್ಷಿ ಅಂದ್ರೆ ನೀನೇ. ಮನೆಹಾಳ"

ಕಾರು ಕಸ್ತೂರ್‌ಬಾ ರಸ್ತೆಯಲ್ಲಿ ತಿರುಗಿ ಮ್ಯೂಸಿಯಂ ಸಮೀಪಿಸಿತು. ಬಲ ಫುಟ್‌ಪಾತ್ ಕಡೆಗೆ ದೃಷ್ಟಿ ನೆಟ್ಟಿದ ವಕೀಲ ದೂರದಿಂದಲೇ ಗುರ್ತಿಸಿದ. ತಲೆಗೆ ಮಫ್ಲರ್ ಸುತ್ತಿ ರಸ್ತೆಯ ಅಂಚಿಗೆ ನಿಂತಿದ್ದವನು ಕಾಣಿಸಿದ. ಲಟಾರಿ ಕಾರು ಜೊರಕ್ಕನೆ ಅವನ ಪಕ್ಕಕ್ಕೆ ನಿಂತಿತಿಉ.

ಭಗವಂತಪ್ಪ ಇಬ್ಬರನ್ನೂ ನೋಡಿದ. ರಾಗಣ್ಣ ಬಾಯಲ್ಲಿ ಸಿಗರೇಟು ಇಟ್ಟಂತೆಯೇ ನುಡಿದ :

"ಪಿಕ್ಚರ್ ಮುಗಿಯೋತನಕ ನೀವು ಎಲ್ಲಿದೀರಿ ಅಂತ ಕುರಿ ಹಾಗೆ ನೊಡೋದೆ ಆಯ್ತು."

"ಯಾವ ಪಿಕ್ಚರ್? ನಾನೇಕೆ ಬರಲಿ ಅಲ್ಲಿಗೆ?"

"ಎಂಪೈರ್‌ಗೆ ಬನ್ನ ಅಂದ್ರಿ. ಅಲ್ಲಿ ಸಿಗದಿದ್ರೆ ಈ ಹೊತ್ತಿಗೆ ಇಲ್ಲಿ ಕಾದಿರ್ತೀನಿ ಅಂತ ಫೋನ್ ಮಾಡಿದ್ರಿ."

ಮುಖ ಹಿಂದಕ್ಕೆ ಹೋಯಿತು.

"ಈ ಹೊತ್ತಿನಲ್ಲಿ ನಿಮ್ಮ ಕಾರಿಗೆ ಇಲ್ಲಿ ಕಾದಿರು ಅಂತ ನಿಮಗೆ ಫೋನ್ ಯಾರು ಮಾಡಿದ್ದು?"

ರಾಗಣ್ಣ ಸಿಗರೇಟು ತೆಗೆದು ಹೊರಕ್ಕೆ ತೂರಿದ.

"ನಿನ್ನೆಯಿಂದ ಫೋನ್‌ನಲ್ಲಿ ಏನೊ ಕುತಂತ್ರ ನಡೆದಿದೆ.... ನನಗೆ ತಿಳಿಯದ ಕಾಮಿನಿ ವಿಷಯ ನೀವು ಹೇಳ್ತೀರಿ ಅಂತ ನೀವೇ ಹೇಳಿದ ಹಾಗೆ...."

"ಆಕೆ ವಿಷಯದಲ್ಲಿ ನೀವೇ ನನಗೆ ಏನಾದ್ರು ಹೇಳಬೇಕು."

ತಲೆ ಚಚ್ಚಿಕೊಂಡ ವೆಂಕೋಬ. ಭಗವಂತಪ್ಪ ಚಳಿಯಲ್ಲಿ ಹಲ್ಲು ಕಚ್ಚುತ್ತಾ ನಿಂತ. ವಕೀಲನಿಗೆ ತಾಳ್ಮೆ ಕೆಟ್ಟಿತು.

"ಆಯ್ತು, ಕೂಡಿ. ನಿಮ್ಮನ್ನ ಥಿಯೇಟರ್ ಹತ್ರ ಬಿಡ್ತೀನಿ."

ವಕೀಲ ಬಲಗೈ ಚಾಚಿ ಹಿಂದಿನ ಬಾಗಿಲಿನ ಒಳಪಿಡಿ ತಿರುಗಿಸಿ, ಯಂತ್ರ ಗೊರಗುಟ್ಟಿಸಿ, ಹಿಂಬಾಗಿಲನ್ನು ಹೊರಕ್ಕೆ ತೆರೆದ. ದೀಪ ಹೊತ್ತಿತು.

ಆ ದೀಪ ಬೇಗ ಆರಲಿಲ್ಲ. ಬಾಗಿಲು ಮುಚ್ಚಲಿಲ್ಲ.

"ಕೂಡಿ ಅಂದೆ"

ಎಂದು ರಾಗಣ್ಣ ಬೇಸರದಿಂದ ಹಿಂದಕ್ಕೆ ನೋಡಿದೆ. ಭಗವಂತಪ್ಪ ತೆರೆದ ಬಾಗಿಲು ಹಿಡಿದು ನಿಂತೇ ಇದ್ದ. ಎರಡು ಸೀಟುಗಳ ಮಧ್ಯಕ್ಕೆ ಹರಿದಿತ್ತು ಅವನ ಸ್ಥಿರ ದೃಷ್ಟಿ. ನಡುಗುತ್ತಿದ್ದ ಕೈ ಎತ್ತಿ ಅತ್ತ ತೋರಿದ.

ರಾಗಣ್ಣ ಹಾಗೂ ಅವನ ಜೂನಿಯರ್ ಒಟ್ಟಾಗಿ ಎದ್ದು ಹಿಂದಕ್ಕೆ ಬಗ್ಗಿ ನೋಡಿದರು.

ಎರಡು ಸೀಟುಗಳ ನಡುವಿನ ಇಕ್ಕಟ್ಟಾದ ಭಾಗದಲ್ಲಿ ಸೇರಿಸಿದ ಚೀಲ! ಚೀಲದ ಬಾಯಿಂದ ಭಾಗಶಃ ಕಾಣುವ ಪರಿಚಿತ ಹೆಣ್ಣು ಶವದ ತಲೆ!

8

ಪೊಲೀಸ್ ಇನ್ಸ್‌ಪೆಕ್ಟರ್ ಹುಬ್ಳಿಕರ್ ಬೆತ್ತವನ್ನು ಕುರ್ಚಿಗೆ ಎರಡು ಸಾರಿ ಕಟಕಟಿಸಿದಾಗ ರಾಗಣ್ಣನಿಗೆ ಸ್ವಯಂ ವೇಮರೆಡ್ಡಿಯೇ ಎದೆ ಮೇಲೆ ನಿಂತು ಕುಣಿದಂತಾಯಿತು.

ಎದುರುಗಡೆ ಚಾಪೆಯ ಮೇಲೆ ಕಾಮಿನಿಯ ಶವ ಇತ್ತು.

"ನಿಮ್ಮ ಮಾತು ಹೆಂಗೆ ನಂಬೋದು, ಮಿಸ್ಟರ್ ರಾಗಣ್ಣ? ಕಾರು ಮುಕ್ಕಾಲು ಮೈಲಿ ಬಂದಮೇಲೆ, ಮೂರನೆಯ ಮನುಷ್ಯ ಕಾರಿಗೆ ಕಾಲಿಡೋವರೆಗೆ ಸೀಟುಗಳ ಮಧ್ಯೆ ಇದ್ದ ಹೆಣ ಕಾಣಲಿಲ್ಲ ಅಂತೀರಿ. ನೀವು ಸಿನಿಮಾ ನೋಡ್ತಾ ಇದ್ದಾಗ ಯಾರೊ ಬಂದು ಹೊರಗಡೆ ನಿಂತಿದ್ದ ನಿಮ್ಮ ಕಾರಿನಲ್ಲಿ ದೇಹ ಇರಿಸಿ ಹೋಗಿದಾರೆ ಅನ್ನೋದರಲ್ಲಿ ಸಾಧ್ಯತೆ ಎಷ್ಟು? ಹಾಗೆ ಮಾಡಿದ್ದನ್ನ ಯಾರೂ ನೋಡಿಲ್ಲವೆ?"

ಇನ್ಸ್‌ಪೆಕ್ಟರ್ ಒಂದೇ ವೇಗದಲ್ಲಿ ಹೇಳಿದ.

"ಕೇಳಿ ಸ್ವಾಮಿ ಹಾಗಂತ"

ಎಂದ ಭಗವಂತಪ್ಪ. ರಸ್ತೆಯಲ್ಲಿ ಬೊಬ್ಬೆ ಹಾಕಿ ರಾಗಣ್ಣನ ಕಾರು ಪೊಲೀಸ್ ಸ್ಟೇಷನ್ ಸೇರುವಂತೆ ಮಾಡಿದ್ದ. ವೆಂಕೋಬ ಅವನತ್ತ ಉರಿಗಣ್ಣು ಬಿಟ್ಟು ನಮ್ರವಾಗಿ ನುಡಿದ.

"ಎಂಪೈರ್ ಸಿನಿಮಾ ನೋಡಿದೀರಿ ನೀವು. ಕಾರುಗಳು ಎದುರು ರಸ್ತೆ ಅಂಚಿಗೆ ನಿಂತಿರುತ್ವೆ. ಪಕ್ಕದ ಅಡ್ಡ ರಸ್ತೇಲೂ ನಿಂತಿರುತ್ವೆ. ನಮ್ಮ ಲ್ಯಾಂಡ್ ಮಾಸ್ಟರ್ ಪಕ್ಕದ ನಿರ್ಜನ ರಸ್ತೆಯಲ್ಲಿ ಇದ್ದಿದ್ದು. ಆ ಜಾಗದಲ್ಲಿ ಏನು ನಡೆದರೂ ಗೊತ್ತಾಗೋದಿಲ್ಲ ಷೋ ಬಿಟ್ಟ ಮೇಲೆ ಕಾರಿನ ಹಿಂದಿನ ಸೀಟಿನ ಕಡೆ ನೋಡುವಷ್ಟು ವ್ಯವಧಾನವೂ ಇರಲಿಲ್ಲ ನಮಗೆ."

ವಕೀಲ ಕುರ್ಚಿ ಎಳೆದುಕೊಂಡು ಕುಳಿತ. ಭಗವಂತಪ್ಪ ಕಾಮಿನಿಯ ದೇಹ ನೋಡುತ್ತಾ ಕುಸುಕಿದ.

"ನಮ್ಮ ಧಣಿ ಹೋಗೇಬಿಟ್ರಲ್ಲ. ಕೊಲೆ ಆಗುವ ಜೀವ ಅಲ್ಲ ಅದು. ನಮ್ಮ ನಾಟಕದ ಗತಿ!"

"ಆಷಾಢಭೂತಿ!"

ಎಂದು ಮೂದಲಿಸಿದ ವೆಂಕೋಬ, ವಕೀಲನ ಕಿವಿಯಲ್ಲಿ ಉಸುರಿದ :

"ಕಾಮಿನಿಯ ದೇಹ ಬಹಳ ವಿಕಾರವಾಗಿದೆ."

"ರೂಪವತಿ ನಿರ್ಜೀವವಾಗಿ ಇಪ್ಪತ್ತನಲ್ಕು ಗಂಟೆ ಆಗಿದೆ. ಅದರ ಮೇಲೆ ಎಲ್ಲೆಲ್ಲಿಗೆ ಪಯಣ ನಡೆಸಿದ್ದಳೊ!"

ಅಷ್ಟೇ ಮೆಲ್ಲನೆ ಜೂನಿಯರ್‌ನ ಕಿವಿಯಲ್ಲಿ ಉಸಿರಿದ ವಕೀಲ, ದೇಹದ ಮೇಲೆ ದೃಷ್ಟಿ ಹಾಯಿಸಿದ.

ರಾತ್ರಿ ಕಂಡ ಹಸಿರು ಕುಂಕುಮ ಹಣೆಯಿಂದ ಮಾಯವಾಗಿದೆ. ಜೊಡಿ ಜಡೆ ಸಡಿಲಗೊಂಡಿದೆ. ನೀಲಿ ಸೀರೆಯ ಉಡುವಿಕೆಯಲ್ಲಿ ಅಸ್ತವ್ಯಸ್ತ. ಬಹುಶಃ ದೇಹವನ್ನು ಸಾಗಿಸುವಾಗ ಸಡಿಲಗೊಂಡ ಸೀರೆಯನ್ನು ಕೊಲೆಗಾರ ಒಪ್ಪವಾಗಿ ದೇಹಕ್ಕೆ ಹೊಂದಿಸಲು ಸಾಧ್ಯವಾಗಿಲ್ಲ. ಇಂಟಿಮೇಟ್ ಸುಗಂಧದ ವಾಸನೆ ಇನ್ನೂ ಒಂದಂಶದಷ್ಟು ಉಳಿದಿದೆ.

ಹತ್ತು ನಿಮಿಷದಲ್ಲಿ ಪಾಂಟಿಯಾಕ್ ಬಂತು. ವೇಮರೆಡ್ಡಿ ತನ್ನ ಅಸಿಸ್ಟೆಂಟ್ ಕೋಟಯ್ಯನೊಂದಿಗೆ ಒಂದೇ ಉಸಿರಿನಲ್ಲಿ ಸ್ಟೇಷನ್‌ಗೆ ಹೆಜ್ಜೆ ಹರಿಸಿದ.

"ಕಾಮಿ!... ಕಾಮಿ!!"

ಎಂದು ಎದುಬ್ಬಸದಲ್ಲಿ ಕೂಗಿದವನಿಗೆ ಮುಂದಿನ ಮಾತು ಹೊರಡಲಿಲ್ಲ. ಕನ್ನಡಕ ಹೊಂದಿಸಿಕೊಂಡು ಮಂಕು ಬೆಳಕಿನಲ್ಲಿ ದೇಹ ನೊಡುತ್ತಾ ನಿಂತ. ಕೋಟಯ್ಯ ಅವನ ಕೈಯಿಂದ ಕೋಲು ತೆಗೆದುಕೊಂಡ.

ವೇಮರೆಡ್ಡಿಗೆ ಕುರ್ಚಿ ತರಿಸಿ ಹಾಕಿದ ಹುಬ್ಳಿಕರ್ ಪೊಲೀಸ್ ಸ್ಟೇಷನ್‌ಗೆ ಶವದ ರೀತಿಯನ್ನು ಸಂಕ್ಷೇಪವಾಗಿ ತಿಳಿಸಿದ. ರೆಡ್ಡಿ ಆಗಲೇ ವಕೀಲನನ್ನು ಕಂಡುದು.

"ಕತ್ತು ಹಿಸುಕಿ ಕೊಲೆ ಮಾಡಿದಾರೆ..."

ಇನ್ಸ್‌ಪೆಕ್ಟರ್ ಮಾತೆತ್ತಿದ.

"ನಮ್ಮ ಒಡತಿಗೆ ಇಂತಹ ಸಾವು ಬರಬಾರದಾಗಿತ್ತು" ಕೋಟಯ್ಯ ಒದ್ದೆ ಕಣ್ಣು ಒತ್ತಿಕೊಂಡ.

"ಕೊಲೆ ಮಾಡಿದೋನು ಈ ಶನಿರೂಪದ ವಕೀಲ!"

ಕಿರಿಚಿದ ರೆಡ್ಡಿ ಕೋಪವನ್ನು ಭರಿಸಲಾಗದೆ ಕಣ್ಣು ಮುಚ್ಚಿದ.

"ನೀವು ಈಕೆಯ ಪೋಷಕರು ಅಂತ ತಿಳಿದು ತಕ್ಷಣ ಕರೆಸಿದೆ."

ಕೆಲಸ ಮುಗಿಸುವ ಆತುರ ಇನ್ಸ್‌ಪೆಕ್ಟರನ ಮಾತಿನಲ್ಲಿತ್ತು.

"ಏನು ಪೋಷಕನೇ! ಒಂದು ರೀತಿಯಲ್ಲಿ ಹೌದು. ಒಂದು ರೀತಿಯಲ್ಲಿ ಅಲ್ಲ.

ನನ್ನ ಧಣಿಯ ಮಗಳು ನನ್ನ ಮಗಳ ಹಾಗೆ. ಧಣಿ ಹೋದ ಮೇಲೆ ನಮ್ಮ ಒಡಗಿ ಆಗಿದ್ದೋಳು. ಇವಳೂ ಹೊರಟುಹೋದ್ಲು."

ಉಮ್ಮಳಿಸಿದ ದುಃಖದಲ್ಲಿ ರೆಡ್ಡಿ ದೇಹದ ಮುಂದೆ ಕುಳಿತ. ಕೋಟಯ್ಯ ಅವನ ಭುಜ ಹಿಡಿದು ಸಂತೈಸಿದ.

ವೇಮರೆಡ್ಡಿ ಮೃತಳ ಮುಖವನ್ನು ನಯವಾಗಿ ಸವರಿದ. ಸಡಿಲವಾಗಿ ಪಕ್ಕಕ್ಕೆ ಸರಿದ ಜಡೆಗಳಲ್ಲಿ ಬೆರಳಾಡಿಸಿದ. ಎಡಗೈ ಎತ್ತಿ ಅವಳ ಹಸ್ತವನ್ನು ಕೆನ್ನೆಗೆ ಒತ್ತಿಕೊಂಡ.

ರಾಗಣ್ಣ ಮೈ ಕೊಡವಿ ಬೆರಳು ಕಚ್ಚಿದ. ಮುಂದಕ್ಕೆ ಸರಿದು ಶವದ ಕೈಯಲ್ಲಿದ್ದ ಕಪ್ಪು ಡಯಲ್ ಗಡಿಯಾರದ ಮೇಲೆ ದೃಷ್ಟಿ ನೆಟ್ಟಿತು. ನೆನಪು ಕದಡಿತು. ಏನಿದು?

ನಿನ್ನೆ ರಾತ್ರಿ ನೋಡಿದಾಗ ಕಾಮಿನಿಯ ಗಡಿಯಾರದ ಕಪ್ಪು ಡಯಲ್ ಹೊರಮುಖವಾಗಿತ್ತು. ಈಗ ಒಳಮುಖವಾಗಿದೆ. ಕೊಲೆ ಮಾಡಿದ ಮೇಲೆ ಕೈ ಗಡಿಯಾರದ ಡಯಲನ್ನು ಒಳಮುಖವಾಗಿ ತಿರುಗಿಸುವುದರಲ್ಲಿ ಕೊಲೆಗಾರನ ಉದ್ದೇಶ?

ರೆಡ್ಡಿ ಗಡಿಯಾರವನ್ನು ಪಕ್ಕಕ್ಕೆ ಸರಿಸಿ ಒಳಮಣಿಕಟ್ಟಿನ ಮೇಲಿದ್ದ ಕಂದು ಮಚ್ಚೆಯನ್ನು ಕನ್ನಡಕ ಹೊಂದಿಸಿ ನೋಡಿದ.

ಶರೀರವನ್ನು ಗುರ್ತಿಸುವ ಒಂದು ಮುಖ್ಯ ಚಿಹ್ನೆ!

"ಕಾಮಿನಿಯ ಮಚ್ಚೆ" ಎಂದು ಕೋಟಯ್ಯ ಇನ್ಸ್‌ಪೆಕ್ಟರ್ ಕಡೆ ತಿರುಗಿದ. ಹುಬ್ಳಿಕರ್‌ನ ಪೆನ್ನು ಡೈರಿಯಲ್ಲಿ ಹರಿಯುತ್ತಿತ್ತು.

ಎವೆಯಿಕ್ಕುವುದರಲ್ಲಿ ವಕೀಲ ಕಾಮಿನಿಯ ಕೈಯನ್ನು ರೆಡ್ಡಿಯ ಹಿಡಿತದಿಂದ ಕಿತ್ತು ಮಚ್ಚೆಯ ಮೇಲೆ ಎಂಜಲು ಸವರಿ ಸರವಸ್ತ್ರದಿಂದ ಬಲವಾಗಿ ಉಜ್ಜಿದ. ನಿರಾಶೇ ಕಾದಿತ್ತು.

"ಅಸಲಿ ಮಚ್ಚೆ!" ವೆಂಕೋಬನ ಗೊಣಗಾಟದಲ್ಲಿ ಇನ್ನೂ ಹೆಚ್ಚಿನ ನಿರಾಶೆ ತುಂಬಿತ್ತು.

ರೆಡ್ಡಿ ವಕೀಲನ ಕೈ ಚಟಾರನೆ ಬಾರಿಸಿ ಎದ್ದು ನಿಂತ.

"ಇನ್ಸ್‌ಪೆಕ್ಟರ್‌ಗಾರು. ನೀವು ಇವಳ ಕೊಲೆ ವಿಷಯದಲ್ಲಿ ಹೆಚ್ಚಿನ ಕೆಲಸ ಹೊತ್ಕೊಬೇಕಾಗಿಲ್ಲ. ಕೊಲೆಗಾರ ಇಲ್ಲೇ ಇದಾನೆ. ಅಪಶಕುನದ ರಾಕ್ಷಸ. ಕಾನೂನು ಓದಿದ ಪಿಶಾಚಿ! ನಿನ್ನೆ ರಾತ್ರಿ ಕಾಮಿನಿ ಒಂಬತ್ತೂವರೆ ಹೊತ್ನಲ್ಲಿ ಇವನ ಮನೆಗೆ ಹೋದ್ಲು... ಇವನೇ ಬರುವಂತೆ ಮಾಡಿದ್ದ. ಅದರ ಸುಳಿವು ನನಗೆ ಬಂತು. ನಿಮ್ಮ ಸಿ.ಐ.ಡಿ. ಇನ್ಸ್‌ಪೆಕ್ಟರ್ ಜೊತೆಯಲ್ಲಿ ಅಲ್ಲಿಗೆ ಹೋದೆ. ನಾನು ಬಂದಿದ್ದು ನೋಡಿ ಅವಳನ್ನು ಹೊರಕ್ಕೆ ಸಾಗಿಸಿಬಿಟ್ಟ. ನಮಗೆ ಅವಳು ಸಿಗಲಿಲ್ಲ. ನಾವು ಹಿಂದಿರುಗಿದ ಮೇಲೆ ಕಾಮಿನಿ ಮತ್ತೆ ಮನೆಗೆ ಬಂದ್ಲು. ಆಗ ಅವಳ ಕೊಲೆ ಆಗಿದೆ. ಗೋವಿಂದ ರೆಡ್ಡಿಯವರನ್ನ ಕರೆಸಿ ಈಗ್ಲೇ. ಕಾಮಿನಿ ಬಿಟ್ಟು ಹೋದ ಚಪ್ಪಲಿ, ಕರ್ಚೀಫ್, ಅವಳು ಬಳಸಿದ ಗಾಜಿನ ಲೋಟಾ ಎಲ್ಲಾ ಅವರ ವಶದಲ್ಲಿವೆ."

"ಕೊಲೆಯ ಉದ್ದೇಶ ಏನು?"

ವೆಂಕೋಬ ಸವಾಲು ಹಾಕುವಂತೆ ಗಂಭೀರವಾಗಿ ಪ್ರಶ್ನಿಸಿದ. ಕೋಟಯ್ಯ ಭಗವಂತಪ್ಪನ ಕಡೆ ನೋಡಿದ. ವಕೀಲನ ಬೆರಳುಗಳು ಮೂಗು ಸವರಿದವು.

ರೆಡ್ಡಿ ಆಯಾಸದಿಂದ ಉಗುಳು ನುಂಗಿದ.

"ಕೊಲೆಯ ಉದ್ದೇಶ ನಮ್ಮ ನಾಟಕಕ್ಕೆ ಅಪಕೀರ್ತಿ ತಂದು ಅವಮಾನ ಮಾಡೋದು. ಕಾಮಿನಿಗೆ ನಾಟಕದಲ್ಲಿ ಅಭಿನಯಿಸೋ ಹುಚ್ಚು. ಕೂಡದು ಅಂತ ನಾವು. ಅದು ಅವಳ ತಂದೆಯ ನಿರ್ಧಾರ. ಕಾಮಿನೀನ ತನ್ನ ನಾಟಕದಲ್ಲಿ ಸೇರಿಸಿ ನಮ್ಮ ನಾಟಕಕ್ಕೆ ಮಸಿ ಹಚ್ಚಿ ನಮಗೆ ಅವಮಾನ ಮಾಡುವ ಚಪಲ ಈ ವಕೀಲನಿಗೆ."

"ಆ ಚಲಪಕ್ಕೆ ಕೊಲೆ ಯಾಕೆ?"

ವೆಂಕೋಬ ಕುರ್ಚಿಯ ಹಿಡಿ ಕುಟ್ಟಿದ.

"ನಿನ್ನ ಸೀನಿಯರ್‌ಗೆ ನಾನಾ ಚಪಲಗಳು. ನಾವು ನಿನ್ನೆ ಮನೆಗೆ ಬಂದು ಗಲಾಟೆ ಮಾಡಿದ ಮೇಲೆ ಕಾಮಿನಿಗೆ ಮನಸ್ಸು ಬದಲಾಯಿಸಿದೆ. ವಕೀಲನ ನಾಟಕದಲ್ಲಿ ಅಭಿನಯ ಬೇಡ ಅಮದಿದಾಳೆ. ಆಗ ವಕೀಲ...? ವಕೀಲನಿಗೆ ಮದುವೆ ಇಲ್ಲ. ಕಾಮುಕ ಮನುಷ್ಯ. ಮದನಕಾಮರಾಜ! ಒಂಟಿಯಾಗಿ ರಾತ್ರಿ ಮನೆಗೆ ಬಂದವಳ ಮೆಲೆ ಬಲಾತ್ಕಾರ ಮಾಡಿದಾನೆ. ಅವಳ ಕೊಲೆ ಮಾಡಿದಾನೆ. ಇದು ಕೊಲೆಗೆ ಕಾರಣ."

"ವೈದ್ಯ ಪರೀಕ್ಷೆ ಆದ ಮೇಲೆ ಮಾತಾಡ್ತೀನಿ."

ಿೀವಿಯಿಂದ ಮೈ ಉಬ್ಬಿಸಿದ ಜೂನಿಯರ್ ವಕೀಲ.

ವೇಮರೆಡ್ಡಿ ಆಯಾಸಗೊಂಡಿದ್ದ. ಕೋಟಯ್ಯ ಅವನ ಬೆನ್ನು ಸವರಿ ತನ್ನ ಮುಂದಲೆಯ ಬೆವರು ಒರೆಸಿಕೊಂಡ.

"ಈಕೆ ನಿನ್ನೆ ರಾತ್ರಿ ನಿಮ್ಮಲ್ಲಿಗೆ ಬಂದಿದ್ದಳೆ, ಮಿಸ್ಟರ್ ರಾಗಣ್ಣ?"

ಇನ್ಸ್‌ಪೆಕ್ಟರ್ ಪ್ರಶ್ನೆಗೆ ರಾಗಣ್ಣ ಜೂನಿಯರ್ ಕಡೆ ತಿರುಗಿದ. ವೆಂಕೋಬನ ಮುಖ ಹೆಂಚಿನ ಕಡೆ ತಿರುಗಿತು.

"ಇದೇ ಮೊದಲು ಈಕೇನ ನೋಡ್ತಾ ಇರೋದು ನಾನು. ನನ್ನ ಮನೆಯಿಂದ ಒಯ್ದ ಚಪ್ಪಲಿ, ಕರವಸ್ತ್ರ ಎರಡೂ ನನ್ನ ನಾಟಕದ ಆರ್ಟಿಸ್ಟ್‌ಗೆ ಸೇರಿದ್ದು" ದೃಢವಾಗಿ ಬಂದಿತು ಉತ್ತರ.

"ಸುಳ್ಳು ಬೊಗಳ್ತಾನೆ! ಮೋಸಗಾರ!"

ಎಂದು ಅರಚಿದ ರೆಡ್ಡಿ. ಹುಬ್ಲಿಕರ್ ಬೆತ್ತ ಕುಟ್ಟಿ ಎಚ್ಚರಿಸಿದ.

"ಮಿಸ್ಟರ್ ರೆಡ್ಡಿ, ನೀವು ಸಿಟ್ಟಿನ ಭರದಲ್ಲಿ ಸೌಜನ್ಯ ಮರೆತಿಬಿಡ್ತೀರಿ. ರಾಗಣ್ಣ ಒಬ್ಬ ಅಡ್ವೊಕೇಟ್ ಅನ್ನೋದೂ ನೆನಪಿರಲಿ. ಅವರಿಗೆ ಏಕವಚನ ಉಪಯೋಗಿಸೋದು

ನಿಮ್ಮ ಸಣ್ಣತನದ ಪ್ರದರ್ಶನ."

"ಕ್ಷಮಿಸಿ."

ಬುಸುಗುಟ್ಟಿದ ರೆಡ್ಡಿ ಏಕ್‌ದಂ ಮುಖ ಅರಳಿಸಿದ. ಶವದ ಪಕ್ಕದಲ್ಲಿದ್ದ ಚೀಲದತ್ತ ನೇರವಾಯಿತು.

"ಆ ಚೀಲ ನೋಡಿ. ಅದು ಚೀಲ ಅಲ್ಲ, ಹಾಸಿಗೆ. ಅದು ವಕೀಲರಿಗೆ ಸೇರಿದ್ದೆ ಅಂತ ಪತ್ತೆ ಮಾಡಬಹುದಲ್ಲ?"

ರಾಗಣ್ಣ ತಾನು ಎಸಗಿದ ತಪ್ಪಿಗಾಗಿ ಕಸಿವಿಸಿಗೊಂಡ.

"ನಮ್ಮ ಸೀನಿಯರ್ ಇಂಥಾ ಅಗ್ಗದ ಹಾಸಿಗೆ ಉಪಯೋಗಿಸೋದಿಲ್ಲ."

ವೆಂಕೋಬನ ಸಮಯೋಚಿನ ಮಾತು ನಯವಾಗಿ ಹರಿಯಿತು. ಅಗ್ಗದ ಹಾಸಿಗೆಯ ಒಡೆಯ ತನ್ನಲ್ಲೇ ನಾಚಿದ.

"ದೇಹಾನ ವೈದ್ಯ ಪರೀಕ್ಷೆಗೆ ಕಳಿಸಿಬಿಡ್ತೀನಿ" ಇನ್ಸ್‌ಪೆಕ್ಟರ್ ಡೈರಿ ಮುಚ್ಚಿದ.

ರಾಗಣ್ಣ ತನ್ನ ನೆನಪಿನ ಶಕ್ತಿಗೆ ತನ್ನನ್ನೇ ಮೆಚ್ಚಿಕೊಂಡ.

ನೆನಪು ಕೂಗಿ ಹೇಳಿತ್ತು. ಕಾಮಿನಿಯ ಎಡ ಮುಷ್ಟಿಯಿಂದ ತೆಗೆದಿರಿಸಿದ ಕೂದಲುಗಳು!

ಶವದ ಮುಂದೆ ಕುಳಿತು ಕುಪ್ಪುಸದಲ್ಲಿ ಕೈ ಹಾಕಿದ. ರೆಡ್ಡಿ ವಿಕಾರ ಸ್ವರದಲ್ಲಿ ಕೂಗಿದ :

"ಹರಮ್ ಖೋರ್...!"

ಇನ್ಸ್‌ಪೆಕ್ಟರ್ ನೀಡಿದ ಎಚ್ಚರಿಕೆಯನ್ನು ಜ್ಞಾಪಕಕ್ಕೆ ತಂದುಕೊಂಡು ಮತ್ತೆ ಉದ್ರೇಕದಲ್ಲಿ ಗುಡುಗಿದ.

"ನೀಡಿ, ಅವರ ಚರ್ಯೆ. ನಿಮ್ಮ ಕಣ್ಣೆದುರಿಗೇ ಸತ್ತವಳ ದೇಹದ ಮೇಲೆ ಹೀಗೆ ಕೈ ಆಡಿಸಿದೋರು, ನಿನ್ನೆ ರಾತ್ರಿ ಒಟ್ಟಿ ಹೆಣ್ಣಿನ ಮೇಲೆ ಏನೇನು ಅತ್ಯಾಚಾರ ನಡೆಸಿದರೋ?"

ವಕೀಲ ಕೈ ಹಿಂದಕ್ಕೆ ತೆಗೆದು ಇನ್ಸ್‌ಪೆಕ್ಟರ್ ಕಿವಿಯಲ್ಲಿ ಹೇಳಿದ.

"ಮಿಸ್ಟರ್ ಹುಬ್ಲಿಕರ್, ಈಕೆಯ ಕುಪ್ಪುಸದಲ್ಲಿ ತಲೆಗೂದಲು ಸೇರಿವೆ. ದಯವಿಟ್ಟು ಅದನ್ನು ನಿಮ್ಮ ಮಹಜರ್‌ನಲ್ಲಿ ಸೇರಿಸಿ ಕೂದಲು ಭದ್ರವಾಗಿ ಎತ್ತಿಡಿ."

ಚಕಿತನಾದ ಇನ್ಸ್‌ಪೆಕ್ಟರ್ "ಹುಂ" ಎಂದ.

"ಇನ್ಸ್‌ಪೆಕ್ಟರ್‌ಗಾರು, ನಿಮ್ಮ ಸಿ.ಐ.ಡಿ. ಇನ್ಸ್‌ಪೆಕ್ಟರ್‌ನ ದಯವಿಟ್ಟು ಕರೆಸಿ. ಅವರು ಬಂದಮೇಲೆ ದೇಹಾನ ಪೋಸ್ಟ್‌ಮಾರ್ಟಂಗೆ ಒಪ್ಪಿಸಿ" ರೆಡ್ಡಿಯ ಮಾತಿಗೆ ಹುಬ್ಲಿಕರ್ ಸಮ್ಮತಿಸಿ ಫೋನ್ ಮಾಡಿದ.

ವಕೀಲನ ಎದೆ ರಿಮ್ಮನೆ ಬಾರಸಿತು. ವಿಷಯಗಳು ಮಿದುಳಿನಲ್ಲಿ ಲಾಗ ಹಾಕಿದುವು. ಕಾನೂನಿನ ಮನುಷ್ಯ ಕನೂನಿಗೆ ಕುರಿಯಂತೆ ತಲೆ ಒಡ್ಡಿದರೆ ಗತಿ?

ಹತ್ತು ನಿಮಿಷದಲ್ಲಿ ಗೋವಿಂದರೆಡ್ಡಿ ಬರುತ್ತಾನೆ. ಇಲ್ಲಿರುವ ರೆಡ್ಡಿಯೊಂದಿಗೆ ಅವನ ಜಾತಿ ವಾಂಛಲ್ಯ! ಇಲ್ಲಿರುವ ಹುಬ್ಲೀಕರ್‌ನೊಂದಿಗೆ ಅವರ ಇಲಾಖಾ ವಾಂಛಲ್ಯ!

ಹಳದಿ ಚಪ್ಪಲಿ, ಕರವಸ್ತ್ರ, ಗಾಜಿನ ಟಂಬ್ಲರ್‌ಗಳು ಅವನ ವಶದಲ್ಲಿ! ಇಲ್ಲಿ ಬಿದ್ದಿರುವ ಹಾಸಿಗೆ ಚೀಲ ತನ್ನದು!

ಪುರಾವೆಗಳು ಇಷ್ಟು ಸಾಕು. ಅವನು ಬಂದ ಮೇಲೆ ತನ್ನ ದಸ್ತಗಿರಿ ಖಂಡಿತ.

ವಕೀಲ ನಿಧಾನವಾಗಿ ಮುಖ ತಿರುಗಿಸಿದ. ವೇಮರೆಡ್ಡಿ ಕೋಣೆಯ ಬಾಗಿಲಲ್ಲಿ ನಿಂತು ಹುಬ್ಲಿಕರ್‌ಗೆ ಏನೋ ತಿಳಿಸುತ್ತಿದ್ದ. ವಕೀಲ ಸದ್ದಿಲ್ಲದೆ ಅಂಗಳಕ್ಕೆ ಇಳಿದು ಹಿಂದಕ್ಕೆ ಒಮ್ಮೆ ನೋಡಿ ವೇಗವಾಗಿ ಓಡಿದ. ಕ್ಷಣದಲ್ಲಿ ಕತ್ತಲಿನಲ್ಲಿ ಮಾಯವಾದ.

* * *

ಒಂದು ಸಾರಿ ಓದಿ ಮುಗಿಸಿದ್ದ ರೋಮಶಾಸ್ತ್ರದ ಸಣ್ಣ ಹೊತ್ತಿಗೆಯ ಪುಟವನ್ನು ಮತ್ತೊಮ್ಮೆ ಓದಿ ಜೇಬಿನಿಂದ ಕವರ್ ಎಳೆದ. ಬಿಳಿಯ ಕಾಗದದ ಮೇಲೆ ಐದು ರೋಮಗಳು ಉದುರಿದವು.

ಉದ್ದನೆಯ ಕೂದಲನ್ನು ಗಾಜಿನ ಪ್ಲೇಟ್ ಮೇಲಿಟ್ಟು ಸೂಕ್ಷ್ಮದರ್ಶಕ ಯಮತ್ರದ ಅಡಿಗೆ ಅದನ್ನು ಹೊಂದಿಸಿ ಮೇಲಿನ ಲೆನ್ಸ್‌ನಿಂದ ವೀಕ್ಷಿಸಿದ ರಾಗಣ್ಣ.

ಒರಟಾದ ರೋಮ ಹುಲ್ಲು ಕಡ್ಡಿಯಂತೆ ಕಾಣಿಸಿತು. ಅದರು ಬುಡವು ಸಣ್ಣ ಬುರುಡೆಯಂತೆ ಉಬ್ಬಿತ್ತು. ಮತ್ತೊಂದು ತುದಿ ಅಡ್ಡಲಾಗಿ ಕತ್ತರಿಸಿತ್ತು. ಮತ್ತೊಂದು ಕೂದಲನ್ನು ಎತ್ತಿ ಅದನ್ನು ತುಸು ಓರೆಯಾಗಿ ಬ್ಲೇಡ್‌ನಿಂದ ಕತ್ತರಿಸಿ ಪರೀಕ್ಷಿಸಿದ. ಮೂರನೆಯ ಕೂದಲು ಬಂತು. ಮುರು ಕೂದಲುಗಳ ಬುಡಗಳು ಒಮದೆಡೆ ಇರುವಂತೆ ಜೊಡಿಸಿದ. ಎಲ್ಲವೂ ಒರಟಾದ ಬುಡಗಳು.

ಯಂತ್ರದಲ್ಲಿ ಮತ್ತೆ ಮತ್ತೆ ನೊಡಿ ಗಮನಿಸಿದ ಅಂಶಗಳನ್ನು ಗುರುತು ಹಾಕಿದ. ರೋಮಗಳು ಮತ್ತೆ ಕವರ್ ಸೇರಿದವು.

ಈ ಕೂದಲುಗಳು ಯಾರ ತಲೆಯವು? ಅರೆನರೆತ ತಲೆಯ ವ್ಯಕ್ತಿಗಳು ಈಗಿನ ಪ್ರಕರಣದಲ್ಲಿ ನಾಲ್ಕೈದು ಮಂದಿ. ಅಪರಿಚಿತ ವ್ಯಕ್ತಿ ಯಾರಾದರೂ ಇದರಲ್ಲಿ ಭಾಗವಹಿಸಿದ್ದಲ್ಲಿ ತನ್ನ ಎಲ್ಲಾ ಕೆಲಸ ವ್ಯರ್ಥ.

ಕಣ್ಣು ಮುಚ್ಚಿ ವ್ಯಕ್ತಿಯನ್ನು ಕಲ್ಪನೆಗೆ ತಂದುಕೊಂಡ. ಗೋಡೆಯ ಗಡಿಯಾರ 'ಢಣ್' ಎಂದು ಬಾರಿಸಿತು.

"ಒಳ್ಳೆಯ ಶಕುನ" ಎಂದು ಕತ್ತು ತಿರುಗಿಸಿದ.

ಮಾತಿಲ್ಲದೆ ಅವನ ಪಕ್ಕದಲ್ಲಿ ನಿಂತು ವೀಕ್ಷಣೆಯನ್ನು ಕುತೂಹಲದಿಂದ ಗಮನಿಸಿದ

ಶಾಲೆಯ ಮುಖ್ಯೋಪಾಧ್ಯಾಯ ಆಸಕ್ತಿಯಿಂದ ನುಡಿದ:

"ಸಣ್ಣ ಸುಳಿವಿನಿಂದ ದೊಡ್ಡ ಪ್ರಕರಣಗಳ ಪತ್ತೆ ಆಗಿರೋದು ಕೇಳಿದೀನಿ. ಆದರೆ ಒಂದು ಕೂದಲು ಪತ್ತೇದಾರಿಗೆ ಎಷ್ಟು ಸಹಾಯಕ ಅನ್ನೋದು ನಿಮ್ಮಿಂದ ತಿಳೀಬೇಕು."

ರಾಗಣ್ಣ ಸೂಕ್ಷ್ಮದರ್ಶಕವನ್ನು ಪಕ್ಕಕ್ಕೆ ಎತ್ತಿಟ್ಟ.

"ಈಗ ಕೂದಲಿನಿಂದ ಒಬ್ಬ ವ್ಯಕ್ತಿಯನ್ನು ಅರ್ಧದಷ್ಟು ಸೃಷ್ಟಿ ಮಾಡಿದೀನಿ. ಅದಷ್ಟೇ ಸಾಲೋದಿಲ್ಲ. ಮತ್ತಷ್ಟು ರುಜುವಾತುಗಳು ಬೇಕು. ಕಬ್ಬಿಣ ಕೆಂಪಗೆ ಕಾದಮೇಲೆ ಸುತ್ತಿಗೆಯಿಂದ ಬಾರಿಸೋದು. ನಿಮ್ಮ ಮೈಕ್ರೊಸ್ಕೋಪ್ ಕೆಲಸ ಆಯ್ತು. ಲ್ಯಾಬೊರೇಟರಿಗೆ ಕಳಸಿಬಿಡಿ. ನಿಮ್ಮ ಸಹಕಾರಕ್ಕೆ ಸಾವಿರ ಸಲಾಮುಗಳು. ನಾನಿಲ್ಲಿರೋದು ಯಾರಿಗೂ ತಿಳಿಸಬೇಡಿ. ರಾತ್ರಿ ಎಂಟಕ್ಕೆ ಹೊರಟುಬಿಡ್ತೀನಿ."

ವಕೀಲ ಕುರ್ಚಿಯಲ್ಲಿ ಒರಗಿ ದಿನಪತ್ರಿಕೆಗಳನ್ನು ಓದಿದ. ಯಾವ ಪತ್ರಿಕೆಯಲ್ಲೂ ಕಾಮಿನಿಯ ಸಾವಿನ ಸುದ್ದಿ ಬಂದಿಲ್ಲ. ವಾರಪತ್ರಿಕೆಗಳನ್ನೆಲ್ಲಾ ನೋಡಿ ಮುಗಿಸಿದ. ಕಾಲ ದೂಡುವುದು ಕಷ್ಟವಾಯಿತು.

ದೇಹ ದೊರತುದು ನಿನ್ನೆಯ ರಾತ್ರಿ ತಾನು ಪೋಲೀಸ್ ಸ್ಟೇಷನ್‌ನಿಂದ ಪಲಾಯನ ಮಾಡಿದುದು ಸುಮಾರು ಹನ್ನೊಂದು ಗಂಟೆಯಲ್ಲಿ. ಇನ್ಸ್‌ಪೆಕ್ಟರ್ ಹುಬ್ಳಿಕರ್ ಮೇಲಧಿಕಾರಿಯ ಅಪ್ಪಣೆ ಪಡೆದು ಪತ್ರಿಕೆಗೆ ಸುದ್ದಿ ಕೊಡಲು ಸಾಧ್ಯವಾಗಿಲ್ಲ. ಆದರೆ ನಾಳೆಯ ಪತ್ರಿಕೆಯಲ್ಲಿ ಶವದ ಸುದ್ದಿಯೊಂದಿಗೆ ತನ್ನ ಪಲಾಯನವೂ ತಪ್ಪದೆ ಪ್ರಕಟವಾಗುತ್ತದೆ. ಆ ವೇಳೆಗೆ ತಾನು ಬಹುದೂರ ಸಾಗಿರುತ್ತೇನೆ.

ರಾತ್ರಿ ಎಂಟೂವರೆಯ ಹೊತ್ತಿಗೆ ಕೋಟು ತೆಗೆದು ಷರಟಿನ ತೋಳು ಮಡಿಸಿದ. ತಲೆಗೆ ಮಫ್ಲರ್ ಸುತ್ತಿತು. ಕಪ್ಪು ಕನ್ನಡಕ ಕಣ್ಣಿಗೇರಿತು.

ಆಟೋರಿಕ್ಷಾ ಜಯನಗರದ ಸಾರಕ್ಕಿ ಗೇಟು ಬಳಿ ನಿಂತಾಗ ಒಂಬತ್ತು ಗಂಟೆಗೆ ಐದು ನಿಮಿಷ ಉಳಿದಿತ್ತು. ಗುಲಾಬಿ ರಂಗಿನ ಮಹಡಿ ಮನೆ ಕತ್ತಲಿನಲ್ಲಿ ಬಿಕೊ ಎನ್ನುತ್ತಿತ್ತು. ಎರಡು ಸಾರಿ ಬಾಗಿಲು ತಟ್ಟಿದ. ಮತ್ತೆ ಎರಡು ಸಾರಿ ತಟ್ಟಿದ ಮೇಲೆ ಹೆಣ್ಣಾಳು ಬಾಗಿಲು ಅರ್ಧ ತೆರೆದಳು ಇಣುಕಿದಳು.

"ಯಾರು ಬೇಕಿತ್ತು?"

ತೆಲುಗು ಬೆರೆತ ಕಂಠದಲ್ಲಿ ಬೇಸರ ತುಂಬಿತ್ತು.

"ನಾನು ಕೋಟಯ್ಯನ ಕಡೆಯಿಂದ ಬಂದಿದೀನಿ ಅಂತ ಪಾತಕ್ಕನಿಗೆ ಹೇಳಿ. ನಾನು ಲಾಯರ್ ಅಂತಲೂ ತಿಳಿಸಿ"

ವೇಮರೆಡ್ಡಿಯ ಹೆಸರು ಹೇಳದೆ ಎಚ್ಚರಿಕೆ ಹೊಂದಿದ್ದ.

ಮೆಟ್ಟಿಲು ಏರಿ ಹೋದ ಆಳು ಐದು ನಿಮಿಷಗಳ ನಂತರ ಹಿಂತಿರುಗಿ "ಬನ್ನಿ" ಎಂದಳು. ಬಾಗಿಲು ಮುಚ್ಚಿ ಮಹಡಿಯ ಕಡೆ ಕೈ ಸೂಚಿಸಿ ಕೆಳಗಿನ ಕೋಣೆ ಸೇರಿದಳು.

ಪಾತಕ್ಕ ಮೇಲಿನ ಕೋಣೆಯಲ್ಲಿ ಹಾಸಿಗೆಯ ಮೇಲೆ ಕುಳಿತು ಎಲೆ ಅಡಿಕೆ ಜಗಿಯುತ್ತಿದ್ದಳು. ಸುಮಾರು ನಲವತ್ತು ವರ್ಷ ವಯಸ್ಸಿನ ತೆಳು ದೇಹದ ಹೆಂಗಸು. ಮುಖದಲ್ಲಿ ಇನ್ನೂ ಉಳಿದಿರುವ ರೂಪು, ತೀವ್ರತೆ, ಬೈತಲೆಯ ಎರಡು ಪಕ್ಕಗಳಿಗೂ ನೆರೆ ಪ್ರಾರಂಭ.

"ಕೂಡ್ರಿ ಸ್ವಾಮಿಗಾರು. ನನಗೆ ಲಾಯರ್, ಡಾಕ್ಟರ್ ಈ ಇಬ್ಬರನ್ನ ನೋಡೋದು ಇರಲಿ... ಹೆಸರು ಕೇಳಿದರೆ ವಾಕರಿಕೆ ಬರುತ್ತೆ. ಒಬ್ಬರ ಪತ್ರ ಹಿಡಿದು ರುಜುಗೆ, ಹೆಬ್ಬೆಟ್ಟಿನ ಗುರ್ತಿಗೆ ಬರ್ತಾರೆ. ಇನ್ನೊಬ್ಬರು ಸೂಜಿ ಹಿಡಿದು ಬರ್ತಾರೆ. ನೀವು ಬರೀ ಕೈಲಿ ಬಂದಿದೀರಿ. ನನ್ನ ನೋಡಿ, ಹೀಗಿದ್ದೀನಿ. ನನಗೆ ಹುಚ್ಚು ಅಂದ್ರೆ ನಂಬ್ತೀರಾ?"

ಎರಡು ಹಸ್ತಗಳನ್ನೂ ಅವನತ್ತ ತಿರುಗಿಸಿ ನಸುನಗೆ ಸೂಚಿಸಿದಳು ಕನ್ನಡ, ತೆಲುಗು, ಬೆರೆಸಿದ ಮಾತು ಸರಿಯಾಗಿತ್ತು. ಅದೇ ಭಂಗಿಯಲ್ಲಿ ಮಾತನಾಡಿದ ಕಾಮಿನಿಯ ಕಂಠ ನೆನಪಿಗೆ ಬಂತು.

ವಕೀಲನಿಗೆ ಅಳಕುತ್ತಿದ್ದ ಎದೆ ಗಟ್ಟಿಯಾಯಿತು. ಉತ್ತೇಜಿತನಾದ.

"ನಿಮಗೆ ಹುಚ್ಚು ಅನ್ನೋ ದಡ್ಡನಿಗೆ ನಿಜವಾದ ಹುಚ್ಚಿರಬೇಕು. ಕೋಟಯ್ಯ ನನಗೆ ಎಲ್ಲಾ ತಿಳಿಸಿದಾರೆ. ನೀವು ರತ್ತಯ್ಯನಿಗೆ ಹೆಂಡತಿಗಿಂತ ಹೆಚ್ಚಾಗಿ ನಿಯತ್ತಿನಿಂದ ನಡೆದುಕೊಂಡಿದ್ರಂತೆ. ರತ್ತಯ್ಯನೂ ನಿಮಗೆ ಅನ್ಯಾಯ ಮಾಡಿ ಹೋಗ್ಲಿಲ್ಲ."

ಪಾತಕ್ಕೆ ಪಕ್ಕದಲ್ಲಿದ್ದ ಹಿತ್ತಾಳೆಯ ದಾನಿ ಎತ್ತಿ ಅದಕ್ಕೆ ಎಲೆ ಅಡಿಕೆಯ ರಸವನ್ನು ತುಪ್ಪಿದಳು.

"ಅನ್ಯಾಯ ಮಾಡಿದ್ರು. ನಿಮ್ಮಂಥ ತಿಳಿದೋರು ಹೇಳಿದ ಮೇಲೆ ನನಗೆ ಅರ್ಧ ಆಸ್ತಿ ಬರೆದ್ರು. ಆ ವಕೀಲರಿಗೆ ಕೈ ಮುಗೀಬೇಕು. ಕೇಳಿದ್ದೀರೇನು ಅನಂತಪುರದ ವೆಂಕಟೇಶರಾವು...?"

ತಡವರಿಸುವಂತಿರಲಿಲ್ಲ ಪರಿಸ್ಥಿತಿ ಹಾಗಿತ್ತು.

"ಕೇಳಿದೀನಿ. ತಿಂಗಳಿಗೊಂದು ಸಾರಿ ಇಲ್ಲಿನ ಹೈಕೋರ್ಟಿಗೆ ಬರ್ತಾರಂತೆ. ಅವರ ಸಲಹೆ ತಗೊಂಡು ಕೋಟಯ್ಯ ನನ್ನ ಕಳಿಸಿದಾರೆ."

ಹೊಗೆಸೊಪ್ಪಿನ ಪುಡಿ ಬಾಯಿಗೆ ಹಾಕಿಕೊಂಡಳು.

"ಏನು ಸಲಹೆ ಅದು?" ಕುತೂಹಲ ತೋರಿದಳು.

"ರತ್ತಯ್ಯನ ಎರಡು ಉಯಿಲೂ ರಿಜಿಸ್ಟರ್ ಆಗಲಿಲ್ಲ. ಮೊದಲನೆಯದು ರದ್ದಾಗಿ ಈಗ ಎರಡನೆ ಉಯಿಲು ಚಾಲ್ತಿಯಲ್ಲಿದೆ. ಎರಡನೆಯದು ರಿಜಿಸ್ಟರ್ ಆದ್ರೆ ಕ್ಷೇಮ."

"ಇದೇನು ಹೇಳ್ತೀರಿ? ಉಯಿಲು ಬರೆದಾಗ ಈಗ ಬದುಕಿಲ್ಲ. ಪತ್ರ ರಿಜಿಸ್ಟರ್ ಆಗೋದು ಹೇಗೆ? ಹಾಗಂತ ವೆಂಕಟೇಶರಾವು ಹೇಳಿದ್ರು.।

"ಸಾಧ್ಯ ಇದೆ. ಆಸ್ತಿಗೆ ಬಾಧ್ಯಸ್ಥರು ಇಬ್ಬರು. ನೀವು ಮತ್ತು ಕಾಮಿನಿ. ಇಬ್ಬರೂ ಇದೀರಿ...."

ಅತೀವ ಕಾತರದಿಂದ ಅವಳ ಮಾತಿಗಾಗಿ ಕಾದ. ಪಾತಕ್ಕನ ಮುಖದಲ್ಲಿ ಅಣುಮಾತ್ರದ ವಿಕಾರ ಕಾಣಿಸಲಿಲ್ಲ. ವಕೀಲನಿಗೆ ಸಮಾಧಾನವಾಯಿತು.

ಪಾತಕ್ಕನಿಗೆ ಕಾಮಿನಿಯ ಸಾವು ತಿಳಿಯದು! ಮತ್ತೆ ಹೇಳಿದ.

"ಸಾಕ್ಷಿಗಳ ಸಮ್ಮುಖದಲ್ಲಿ ಪತ್ರ ರಿಜಿಸ್ಟರ್ ಆಗಬಹುದು. ವೇಮರೆಡ್ಡಿ ಇದಕ್ಕೆ ಒಪ್ಪಿದಾರೆ..."

ತುಸು ತಳಮಳಗೊಂಡು ತಟ್ಟನೆ ಕೇಳಿದ.

"ವೇಮರೆಡ್ಡಿ ಎಷ್ಟು ಹೊತ್ತಿಗೆ ಬರ್ತಾರೆ?"

ಬಾಯಿನ ರಸ ಹೊರಬೀಳದಂತೆ ಬಾಯಿಗೆ ಟವೆಲ್ ಒತ್ತಿ, ಮೆಲ್ಲನೆ ಕೆಮ್ಮಿದಳು.

"ಅದಕ್ಕೆ ಹೊತ್ತು ಗೊತ್ತು ಒಂದೂ ಇಲ್ಲ. ನಾಟಕ ಮುಗಿದ ಮೇಲೆ ಸಿಕ್ಕಿದೋರ ಮೆಲೆ ಎಗರಾಡಿ, ಕುಡಕೊಂಡು ಅಡ್ಡಾಡಿ ಹನ್ನೆರಡಕ್ಕೆ ಬಂದ್ರೆ ಈಗ ಬಂದ ಹಾಗೆ. ತಮಗಿಂತ ವಯಸ್ಸಿನಲ್ಲಿ ದೊಡ್ಡೋನು ಅಂತ ಮರ್ಯಾದೆಯಿಂದ ನೋಡಿಕೊಳ್ತಿದ್ರು. ಅವರು ಸತ್ತಮೇಲೆ ಹುಲಿ ಆಗ್ಬಿಟ್ಟ. ಕೆಳಗಡೆ ಅವನ ಕೋಣೆ. ಮೇಲಕ್ಕೆ ಬರೋದಿಲ್ಲ. ಅವನಿಗೆ ರಕ್ತದ ಒತ್ತಡ. ನಾನೇ ಇಳಿದು ಮಾತಾಡ್ಸಿ ಬರ್ತೀನಿ. ಅದೇನು ಪೊಗರು! ಕೋಪಕ್ಕೆ ಲಗಾಮೇ ಇಲ್ಲ. ನಾನು ಹೊರಕ್ಕೆ ಹೋಗಬಾರದಂತೆ. ನಾನು ಸಿನಿಮಾ ನೋಡಿ ಮೂರು ತಿಂಗಳಾಯ್ತು. ನನಗೆ ಹುಚ್ಚು ಅಂತ ಡಾಕ್ಟರಿಂದ ಹೇಳಿಸಿ ಬಿಟ್ಟಿದ್ದಾನೆ."

"ಆ ಡಾಕ್ಟರಿಗೆ ಮಣ್ಣು ಹಕಿ."

"ಸುಲಭವಾಗಿ ಮಾತಾಡ್ತೀರಿ. ವೇಮರೆಡ್ಡಿ ನನ್ನ ಹುಚ್ಚಾಸ್ಪತ್ರೆಗೆ ಒಂದು ವಾರ ಸೇರಿಸಿದ್ದ. ಒಂದಲ್ಲ, ನಾಲ್ಕು ಡಾಕ್ಟರಿಂದ ಚೆನ್ನಾಗಿರೋಳಿಗೆ ಪರೀಕ್ಷೆ ಮಾಡ್ಸಿ ಏನೇನೋ ಕಾಗದ ತುಂಬಿಕೊಂಡಿದಾನೆ. ಹುಚ್ಚಿ ಅಂತ ಸುದ್ದಿ ಹರಡಿದಾನೆ. ನಾಳೆ ನಮ್ಮ ಉಯಿಲು ರಿಜಿಸ್ಟರ್ ಆಗೋದಕ್ಕೆ ಇದು ಅಡ್ಡಿ ಆಗಲ್ಲವೆ?"

"ಆಗೋದಿಲ್ಲ. ನಿಮ್ಮ ಬುದ್ಧಿ ಸರಿಯಾಗಿದೇಂತ ಭಾರಿ ಡಾಕ್ಟರಿಂದ ಸರ್ಟಿಫಿಕೇಟ್ ಕೊಡಿಸೋದು ನನ್ನ ಭಾರ."

"ನನ್ನ ಪಾಲಿನ ಜಮೀನು ಮಾರೋದಕ್ಕೆ ಸಾಧ್ಯ ತಾನೆ?"

"ಖಂಡಿತ ಸಾಧ್ಯ. ಆದರೆ ಜಮೀನು ಯಾಕೆ ಮಾರ್ತೀರಿ?"

"ಮತ್ತೇನು ಮಾಡೋದು ಆ ಸುಡುಗಾಡು ಭೂಮಿಯಿಂದ? ನೀವು ತಾಡಪತ್ರಿ ನೋಡಿಲ್ಲ. ಅಲ್ಲಿ ಬೆಳೆಯೋದು ಹುಚ್ಚೆಳ್ಳು."

"ವೇಮರೆಡ್ಡಿಗೆ ನಿಮ್ಮ ಮೇಲೆ ಯಾಕೆ ದ್ವೇಷ?"

"ಯಜಮಾನರು ಮೊದಲನೇ ಉಯಿಲು ಮಾಡಿದಾಗ ಇಡೀ ಆಸ್ತಿ ಮಗಳಿಗೆ ಬಿಟ್ರು. ಅವಳ ಮದುವೆ ಆಗೋವರೆಗೆ ರೆಡ್ಡಿಯೇ ಆಸ್ತಿಯ ಉಸ್ತುವಾರಿ ನೊಡಿಕೊಳ್ಳೋದು ಅಂತ ಬರೆದ್ರು. ರೆಡ್ಡಿ ಹಣ ಉಡಾಯಿಸ್ದ. ಎರಡನೆ ಉಯಿರು ನನಗೂ ಕಾಮಿನಿಗೂ

ಆದಮೇಲೆ ಅವನ ಉಸ್ತುವಾರಿ ಕೆಲಸ ಹೋಯ್ತು. ಅಕ್ರಮ ಸಂಪಾದನೆ ತಪ್ಪಿಹೋಯ್ತು. ಕಾಮಿನಿ ಮೇಲೆ ಇಲ್ಲದ ಪ್ರೀತಿ ತೋರಿಸೋದಕ್ಕೆ ಶುರು ಮಾಡಿದಾನೆ. ಅವಳಿಗೆ ಉಯಿಲಿನ ಹಕ್ಕು ಹೆಚ್ಚಿಸೋದಕ್ಕೆ ನನಗೆ ಹುಚ್ಚಿಯ ಪಟ್ಟ ಕೊಡ್ಸಿದಾನೆ. ಅವಳಿಗೆ ಮದುವೆ ಮಾಡ್ಸಿ ಅನಂತಪುರದ ಜಮೀನಿನ ಮ್ಯಾನೇಜರ್ ಆಗಿ ಆಮೇಲೆ ಜಮೀನನ್ನ ಲಪಟಾಯಿಸೋ ಸಂಚು. ಆದರೆ ಅವಳಿಗೆ ಮದುವೆ ಬೇಡ.... ಪ್ರಣಯ ಬೇಕು"

"ಯಾರು ಕಾಮಿನಿಯ ಪ್ರಣಯಿ!"

"ಮದ್ರಾಸ್‌ನಿಂದ ಹೋದವಾರ ಬಂದಿದ್ದ ಅವಳ್ನ ಹುಡಕ್ಕೊಂಡು ತಲೆಕೂದಲು ಸೊಪ್ಪಿನ ಹಾಗೆ ಬೆಳೆಸಿದಾನೆ. ಬಣ್ಣದ ಬಟ್ಟೆ ಹೈದ. ಮತ್ತೆ ಈ ಕಡೆ ಕಾಣಿಸಿಕೊಂಡ್ರೆ ಗ್ರಹಚಾರ ಬಿಡಸಿಬಿಡ್ತೀನಿ ಅಂತ ಗದರಿಸಿ ಅಟ್ಟಿದೆ."

ಹೆಮ್ಮೆಯಿಂದ ಬಾಯಿಗೆ ಮತ್ತೊಂದು ಎಲೆ ಸೇರಿಸಿದಳು.

"ನೀವು ಕಾಮಿನಿನ ನೋಡಿ ಎಷ್ಟು ದಿನ ಆಯ್ತು?"

"ತಿಂಗಳಾಗಿರಬಹುದು."

ರಾಗಣ್ಣ ಜೇಬಿನಿಂದ ಟೈಪ್ ಆದ ಕಾಗದವನ್ನು ತೆಗೆದು ಹರಡಿದ.

"ಇದು ರತ್ತಯ್ಯನ ಮೊದಲನೆ ಉಯಿಲು..."

ಪಾತಕ್ಕ ಗಲ್ಲಕ್ಕೆ ಕೈಯಿಟ್ಟು ಗಂಭೀರವಾಗಿ ಹೇಳಿದಳು.

"ಎಲ್ಲಿ ಬಂತು, ಲಾಯರುಗಾರು! ಆ ಉಯಿಲು ತೆಲುಗಿನಲ್ಲಿ ಬರೆದಿದ್ರು, ಇದು ಇಂಗ್ಲೀಷ್‌ನಲ್ಲಿದೆ"

ರಾಗಣ್ಣ ಕ್ಷಣದಲ್ಲಿ ತಪ್ಪು ತಿದ್ದಿಕೊಂಡು ಮುಖದ ವಿಕಾರವನ್ನು ಅಡಗಿಸಿದ.

"ಆ ಉಯಿಲಿನ ನಕಲು ಇದು. ನನಗೆ ತೆಲುಗು ಬರೋದಿಲ್ಲ ಅಂತ ವಿವರಣೆ ಇಂಗ್ಲಿಷಿನಲ್ಲಿ ಕಳಿಸಿದಾರೆ ನಿಮ್ಮ ಲಾಯರು. ಎರಡನೆ ಉಯಿಲಿನ ಒಂದು ನಕಲು ನಿಮ್ಮಲಿದೆಯಂತೆ. ಸ್ವಲ್ಪ ಕೊಡಿ ಅದನ್ನ."

"ಅವರ ಹತ್ರವೂ ಒಂದು ನಕಲು ಇತ್ತು"

ಎನ್ನುತ್ತಾ ಪಾತಕ್ಕ ಸೊಂಟದ ಬೀಗದ ಕೈ ಕುಚ್ಚು ಎಳೆದು ಬೀರುವಿನಿಂದ ಉಯಿಲು ತೆಗೆದು ಅವನ ಕೈಗಿತ್ತಳು. ಅದೂ ತೆಲುಗು ಬರಹದ ಪತ್ರ.

"ನಿಮ್ಮ ಆಸ್ತಿಯ ನಿರ್ವಹಣೆಗೆ ಕೋಟಯ್ಯನ್ನ ನೇಮಿಸಿಕೊಳ್ಳೋದು ಉಚಿತ ಅಂತ ನನ್ನ ಸಲಹೆ. ಆತ ಸಂಭಾವಿತ. ರೆಡ್ಡಿಯ ಹಾಗೆ ದುಡುಕು ಮನುಷ್ಯ ಅಲ್ಲ. ಕೋಪಿಷ್ಟನೂ ಅಲ್ಲ."

"ಸರಿಯಾಗಿ ಹೇಳಿದ್ರಿ. ನಾನೇ ಹೇಳಬೇಕೂಂತ ಇದ್ದೆ. ಕೊಟಯ್ಯನ್ನ ಒಂದು ಮಾತು ಕೇಳಿ."

"ಕೋಟಯ್ಯನ ಸಮ್ಮತಿ ಪಡೆದದ್ದಾಗಿದೆ. ಅದಕ್ಕೂ ಒಂದು ಪತ್ರ ಮಾಡಿ ಈ

ಉಯಿಲಿನೊಂದಿಗೆ ರಿಜಿಸ್ಟರ್ ಮಾಡಿಸಿಬಿಡೋಣ. ಅದಕ್ಕೋಸ್ಕರ ಈ ಉಯಿಲು ಕೇಳಿದ್ದು. ಇದರಿಂದ ನಾಳೆ ಕಾಮಿನಿಯ ಕಡೆಯಿಂದ ತಕರಾರು ಇರೋದಿಲ್ಲ. ಉಯಿಲನ್ನು ನಾಳೆ ಸಂಜೆ ಹಿಂದಕ್ಕೆ ಕೊಡ್ತೀನಿ."

"ತೊಗೊಂಡು ಹೋಗಿ, ವೇಮರೆಡ್ಡಿಗೆ ತೋರಿಸಬೇಡಿ, ಅಷ್ಟೆ. ಮೊದಲು ನನು ಹುಚ್ಚಿ ಅಲ್ಲಾಂತ ಸರ್ಟಿಫಿಕೇಟ್ ಮಾಡ್ಸಿ, ಸ್ವಾಮಿ."

"ಖಂಡಿತ."

ವಕೀಲ ಮೆಟ್ಟಿಲು ಇಳಿದು ಹೊರಬಂದವನು ಹಿಂದಕ್ಕೆ ನೋಡದೆ ವೇಗವಾಗಿ ಹೆಜ್ಜೆ ಹಾಕಿದ.

9

ಮದ್ರಾಸ್ ಸೇರಿದ ರಾಗಣ್ಣ ಮೈಲಾಪುರದ ಆಂಧ್ರ ಮಹಿಳಾ ನಿಲಯದ ಮೇಟ್ರನ್‌ಗೆ ತಾನೊಬ್ಬ ಪೊಲೀಸ್ ಅಧಿಕಾರಿಯೆಂದು ತಿಳಿಸಿದುದರಿಂದ ಕೆಲಸ ಸುಸೂತ್ರವಾಯಿತು. ಕಾಮಿನಿಯ ವಿಷಯಗಳನ್ನು ಸಾಕಷ್ಟು ಸಂಗ್ರಹಿಸಿದ. ಕಾಮಿನಿ ಅಲ್ಲಿಂದ ಇಪ್ಪತ್ತೈದು ದಿನಗಳ ಹಿಂದೆಯೇ ಹೊರಟುಹೋದ ಸಂಗತಿ ತಿಳಿಯಿತು. ಅವಳನ್ನು ಕಾಣಲು ವೇಮರೆಡ್ಡಿ, ಕೋಟಯ್ಯ ತಿಂಗಳಿಗೊಮ್ಮೆ ಬರುತ್ತಿದ್ದುದನ್ನು, ಅವಳು ಈಚೆಗೆ ಮದುವೆ ಆಗುವ ಇಚ್ಛೆ ಹೊಂದಿದ್ದನ್ನೂ ಅರಿತ. ಕಾಮಿನಿಯ ಎಡಗೈ ಮಣಿಕಟ್ಟಿನ ಮೇಲೆ ಮಚ್ಚೆ ಇದ್ದುದನ್ನು ಖಚಿತಪಡಿಸಿಕೊಂಡ. ಅವಳ ಸ್ನೇಹ, ಚಲನವಲನ ಎಲ್ಲವನ್ನೂ ವಿಚಾರಿಸಿ, ನಿಯಲದ ಅವಳ ಲೆಕ್ಕದಲ್ಲಿ ಕಣ್ಣಾಡಿಸಿದ. ಕೆಲವು ಕಾಗದಗಳನ್ನು ತೆಗೆದಿರಿಸಿಕೊಂಡ.

ಕಾಮಿನಿ ಓದುತ್ತಿದ್ದ ಪಚ್ಚಯ್ಯಪ್ಪ ಕಾಲೇಜಿನಲ್ಲಿ ಮತ್ತಷ್ಟು ಸಂಗತಿ ತಿಳಿಯಲು ಸಾಧ್ಯವಾಯಿತು. ಅಲ್ಲಿಂದ ಲಾಯೊಲಾ ಕಾಲೇಜ್ ಸೇರಿ ಕಾಮಿನಿಯ ಪ್ರಣಯಿಗಾಗಿ ಹುಡುಕಿದ. ಪ್ರಣಯಿ ಸಭಾಪತಿಯನ್ನು ಪತ್ತೆ ಹಚ್ಚುವುದರಲ್ಲಿ ಅವನಿಗೆ ತುಸು ತ್ರಾಸವೇ ಆಯಿತು.

ಪಾತಕ್ಕ ಹೇಳಿದಂತೆ ಸಭಾಪತಿ ಸೊಪ್ಪಿನ ತಲೆಯ ಬಣ್ಣದ ಬಟ್ಟೆಗಳ ಆಧುನಿಕ ಯುವಕ. ಮಧ್ಯಮ ದರ್ಜೆ ಕುಟುಂಬಕ್ಕೆ ಸೇರಿದವನು. ರಾಗಣ್ಣನ ನಯವಾದ ಮಾತುಗಳಿಗೆ ಲಕ್ಷ್ಯಗೊಡದವನು. ತಾನು ಸಿ.ಐ.ಡಿ. ಇಲಾಖೆಯ ಅಧಿಕಾರಿಗಳಿಗೆ ಉತ್ತರಿಸುತ್ತಿರುವೆನೆಂದು ಹೇಳಿಕೊಂಡ ಮೇಲೆ ತಣ್ಣಗಾದ ▯

ಮೆರಿನಾ ಬೀಚ್‌ನಲ್ಲಿ ಅವನೊಂದಿಗೆ ಸಾಗುತ್ತಾ ಸ್ನೇಹಯುತವಾಗಿ ಕೇಳಿದ ವಕೀಲ.

"ನೀನು ಕಾಮಿನೀನ ಮದುವೆ ಆಗಬೇಕೂಂತ ಇದ್ದೆ. ಅವಳು ಒಪ್ಪಿಗೆ ಕೊಟ್ಟಿದ್ದಳಾ?"

"ಇಬ್ಬರೂ ಒಪ್ಪದೆ ರಿಜಿಸ್ಟರ್ ಮದುವೆ ಹೇಗೆ ಸಾಧ್ಯ?"

"ರಿಜಿಸ್ಟರ್ ಮದುವೆ?"

"ಸದ್ಯ ಮದುವೆ ಆಗ್ಲಿಲ್ಲ. ನಾನು ತಿರುಪತಿಯಲ್ಲಿ ಮದುವೆ ಆಗೋಣ ಅಂದೆ. ಅವಳಿಗೆ ರಿಜಿಸ್ಟರ್ ಮದುವೆಯೇ ಬೇಕಾಗಿತ್ತು. ಅದೇ ಸರಿಯಾದ ಕಾನೂನುಬದ್ಧ ಮದುವೆಯಂತೆ. ಅವಳಿಗೆ ಮದುವೆಯ ಆತುರ ಇತ್ತು. ಮದುವೆ ಇಲ್ಲದೆ ಆಸ್ತಿಗೆ ಹಕ್ಕು ಸಿಗೋದಿಲ್ಲ ಅಂತ ಹೇಳಿದ್ಲು."

"ಮದುವೆ ಯಾವತ್ತಿಗೆ ಗೊತ್ತಾಗಿತ್ತು?"

"ಹದಿನೈದು ದಿವಸಕ್ಕೆ ಹಿಂದೆಯೇ ಮದುವೆ ಆಗಬೇಕಾಗಿತ್ತು. ಆದರೆ ಅದಕ್ಕೂ ಹತ್ತು ದಿನ ಮೊದಲೇ ಅವಳು ಇಲ್ಲಿಂದ ಹೊರಟುಹೋದಳು. ಅಂತ ಗೊತ್ತಾಯ್ತು, ಬೇಸರವಾಯ್ತು. ಅವಳೊಂದಿಗೆ ಕಡೆಯ ಮಾತು ಆಡಿ ಬಿಡೋಣ ಅಂತ ಹೋದವಾರ ಬೆಂಗಳೂರಿಗೆ ಹೋದೆ. ಅವಳ ಪೋಷಕ ಮಹಾ ಕೋಪಿಷ್ಟ ಅಂತ ಅವಳೇ ಹೇಳಿದ್ಲು. ಅವಳ ತಾಯೀನ ನೋಡೋಣಾಂತ ಜಯನಗರಕ್ಕೆ ಹೋದೆ. ಅವಳು ಹುಚ್ಚಿ. ಬಾಯಿಗೆ ಬಂದ ಹಾಗೆ ಹೇಳಿ ಕಳಿಸಿಬಿಟ್ಲು. ಬಸವನಗುಡಿ ಡ್ಯಾನ್ಸ್ ಸ್ಕೂಲಿಗೆ ಬಂದೆ. ಭೇಟಿ ಆಗ್ಲಿಲ್ಲ."

"ಆಮೇಲಿನ ಸಂಗತಿ ಗೊತ್ತಾಯ್ತಾ?"

"ಯಾವುದೂ ಗೊತ್ತಿಲ್ಲ. ಅವಳ ಆಸೆ ಬಿಟ್ಟೆ. ಮತ್ತೆ ಅವಳೇ ಬಂದು ಬೇಡಿದರೂ ನಾನು ಮದುವೆ ಆಗೋದಿಲ್ಲ. ಇಲ್ಲಿಂದ ಓಡಿಹೋದಳು, ಬೆಂಗಳೂರಿನಲ್ಲೂ ಇಲ್ಲ ಅಂದಮೇಲೆ ಅವಳಲ್ಲಿ ನನಗೆ ವಿಶ್ವಾಸ ಹೋಯ್ತು."

ವಕೀಲ ಅವನ ತೋಳು ಹಿಡಿದು ನಿಂತ.

"ವಿಶ್ವಾಸ ಹೋದಮೇಲೆ ಅನಾಹುತವೇ ಆಯ್ತು. ಅವಳಿಗೆ ಉಯಿಲಿನ ಹಕ್ಕು ಪಡೆಯೋ ಆತುರ. ಮದುವೆ ಬೇಕಿತ್ತು. ಗಂಡ ಬೇಕಿರಲಿಲ್ಲ. ನಿನಗೆ ಅವಳ ಆಸ್ತಿಯ ಮೇಲೆ ಕಣ್ಣು. ಕಾಮಿನಿ ಮೇಲಿನ ಪ್ರೀತಿ ಒಂದು ನಾಟಕ. ಅವಳಿಗೆ ನಿನ್ನ ಮೇಲಿನ ನಂಬಿಕೆ ಹೋಯ್ತು. ಮದುವೆಗೆ ಮೊದಲೇ ಹೊರಟುಹೋದ್ಲು. ಅವಳನ್ನು ಒಲಿಸಿಕೊಳ್ಳೋದಕ್ಕೆ ನೀನು ಬೆಂಗಳೂರಿಗೆ ಹೋದೆ."

"ಏನು ಬೇಕಾದ್ರೂ ಅರ್ಥ ಕೊಡಬಹುದು ನೀವು."

ಅವನಿಗೆ ಬೇಸರವಾಗಿತ್ತು.

"ಅಲ್ಲಿ ಹೋದಾಗ ನಿನಗೆ ಗೊತ್ತಾಯ್ತು. ಕಾಮಿನಿಗೆ ಇನ್ನೊಬ್ಬ ಪ್ರಣಯಿ ಇರೋದು."

"ಕಾಮಿನಿಗೆ ಇನ್ನೊಬ್ಬ ಪ್ರಣಯಿ!"

ಬೇಸರವನ್ನು ಒಮ್ಮೆಗೇ ಕೊಚ್ಚಿದ ವಿಸ್ಮಯ ಎದ್ದು ಕಾಣಿಸಿತು.

"ನಾಟಕ ಆಡಬೇಡ. ಅವೆಲ್ಲಾ ಭಗವಂತಪ್ಪನಿಗೇ ಇರ್ಲಿ... ಕಾಮಿನಿಯ ಇನ್ನೊಬ್ಬ ಪ್ರಿಯತಮ ಆ ಭಗವಂತಪ್ಪ. ನಾಟಕದ ಹೀರೊ. ಬೆಳಗೊಳದ ಹೆಂಡತಿ ಸಾಲದೆ

ಇನ್ನೊಬ್ಬಳ ಮೇಲೆ ಕಣ್ಣು ಹರಿಸಿದೋನು."

"ಬೆಳಗೊಳದ ಭಗವಂತಪ್ಪ?"

"ಕೇಳು, ಅದು ತಿಳಿದ ಮೇಲೆ ನೀನು ಕಾಮಿನೀನ ಭೇಟಿ ಮಾಡಿದೀಯ... ಅದೂ ನನ್ನ ಮನೆಯಲ್ಲಿ."

ಸಭಾಪತಿ ಹೇಳಿದ್ದುದನ್ನು ತಡೆದು ಮತ್ತೆ ಹೇಳಿದ ರಾಗಣ್ಣ :

"ಇಬ್ಬರಿಗೂ ಚರ್ಚೆ ಆಯ್ತು. ನಿರಾಶೆ, ಕೋಪ ಎರಡೂ ನಿನ್ನ ಹುಚ್ಚು ಮಾಡಿದ್ವು. ನೀನು ಕಾಮಿನಿಯ ಕತ್ತು ಹಿಸುಕಿಬಿಟ್ಟೆ"

ಒಣನಗೆ ಬಂತು ಸಭಾಪತಿಗೆ.

"ನನ್ನ ಕೈ ಆ ಸುಂದರವಾದ ಕುತ್ತಿಗೆಯನ್ನು ಹಿಸುಕಿಬಿಡ್ತು ಅಂತೀರಾ?"

"ಕೊಲೆ ಆಗಿಹೋಯ್ತು ಕಾಮಿನಿ."

"ಉಹುಂ, ಅವಳು ಕೊಲೆ ಆದಾಳೆ? ಆ ನಾಗಿಣಿ ಯಾರನ್ನ ಬೇಕಾದ್ರೂ ಕೊಲೆ ಮಾಡ್ತಾಳೆ."

ಹುಚ್ಚನಂತೆ ಗಡುಸಾಗಿ ಕೂಗಿದವನ ತಲೆಗೆ ಕೈ ಹಾಕಿ ರಾಗಣ್ಣ ನಾಲ್ಕಾರು ಕೂದಲು ಎಳೆದು ಹಾಕಿದ. ಅವನನ್ನು ಅಲ್ಲಿಯೇ ಬಿಟ್ಟು ಟ್ಯಾಕ್ಸಿ ಹಿಡಿದು ಬಸ್ ನಿಲ್ದಾಣಕ್ಕೆ ಹೋಗುತ್ತಿದ್ದಾಗ ತಲೆಯಲ್ಲಿ ಪ್ರಶ್ನೆ ಸುಳಿದಾಡಿತು.

ಮದ್ರಾಸಿನಿಂದ ಹೊರಟ ಕಾಮಿನಿ ರಾಜಾರಾಮನ 'ನೃತ್ಯನಿಕೇತನ' ಸೇರುವವರೆಗೆ ಎಲ್ಲಿದ್ದಳು?

ಆಂಧ್ರ ಮಹಿಳಾ ನಿಲಯದಲ್ಲಿ ಸೇರಿರುವ ಬಹುತೇಕ ಯುವತಿಯರು ಶ್ರೀಮಂತ ಮನೆತನದವರ. ನಿಲಯದಲ್ಲಿ ಪ್ರಣಯಜ್ವರಕ್ಕೆ ಒಳಗಾದವಳು ಇನ್ನೊಬ್ಬಳು ಇದ್ದಲ್ಲಿ ಕಾಮಿನಿಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತಾಳೆ!

ಬಸ್ ನಿಲ್ದಾಣದ ದಿಕ್ಕಿಗೆ ಹರಿಯುತ್ತಿದ್ದ ಟ್ಯಾಕ್ಸಿಯನ್ನು ಮತ್ತೆ ಮೈಲಾಪುರಕ್ಕೆ ತಿರುಗಿಸಲು ಹೇಳಿದ, ಮಹಿಳಾ ನಿಲಯ ಸೇರಿದಾಗ ಪ್ರಶ್ನೆಗಳ ಮಾಲೆ ತಲೆಯಲ್ಲಿ ಸುತ್ತಾಡಿತು.

* * *

ಅನಂತಪುರ ಸೇರಿ ರಾಗಣ್ಣ ಲಾಯರ್ ವೆಂಕಟೇಶರಾವ್‌ನೊಂದಿಗೆ ಮಾತು ಮುಗಿಸಿದ. ತಾಡಪತ್ರಿಗೆ ಹೋಗಿ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅರ್ಧಗಂಟೆ ಕಳೆದು ಅಡ್ವೊಕೇಟ್ ಭೀತರಾಯುಡುವಿನೊಂದಿಗೆ ಸಾವಧಾನವಾಗಿ ಚರ್ಚಿಸಿದ ಮೇಲೆ ವಿಶ್ರಾಂತಿ ಪಡೆಯದೆ ರಾತ್ರಿ ಬೆಂಗಳೂರಿಗೆ ಹಿಂತಿರುಗಿದ.

ನಡುರಾತ್ರಿ ದಾಟಿದ ಮೇಲೆ ತನ್ನಲ್ಲಿ ಅನಿರೀಕ್ಷಿತವಾಗ ಬಂದ ರಾಗಣ್ಣನನ್ನು

ನೋಡಿ ರಾಜಾರಾಮ ತುಟಿ ಅದುರಿಸಿದ.

"ಸಾರ್, ನಿಮ್ಮನ್ನ... ನಿಮ್ಮ ಮೇಲೆ...."

"ಕೊಲೆ ಆಪಾದನೆ, ದಸ್ತಗಿರಿ ವಾರಂಟ್ ಎಲ್ಲಾ ಕಾದಿದೆ. ಅದಿರಲಿ ವೆಂಕೋಬನ್ನ ನೋಡಬೇಕಲ್ಲ ಈಗ? ಈ ನಂಬರ್ ತಗೊಂಡು ಫೋನ್ ಮಾಡಿ ತಕ್ಕಷಣ ಬರಲಿಕ್ಕೆ ಹೇಳು ಇಲ್ಲಿಗೆ. ನಾನು ಬಂದಿದೀನಿ ಅಂತ ಬೊಬ್ಬೆ ಹೊಡೀ ಬೇಡ. ಇದು ವೆಂಕೋಬನ ಪಕ್ಕದ ಕಂಟ್ರಾಕ್ಟರ್ ಫೋನ್ ನಂಬರು. ವೆಂಕೋಬ ಬಂದು ಫೋನ್ ತಗೊಳ್ಳೊತನಕ ವಿಷಯ ಹೇಳ್ಬೇಡ."

ರಾಜಾರಾಮ ಮೈಯೆಲ್ಲಾ ಕುಲುಕುವಂತೆ ಸೀನುಹಾಕಿ ಮೂಗು ಒರೆಸಿದ. ವಕೀಲ ದೊಪ್ಪನೆ ಕುರ್ಚಿಗೆ ಕುಸಿದು ಕುಳಿತ.

"ಥತ್, ಒಂಟಿ ಸೀನು?" ಡಾನ್ಸ್ ಮಾಸ್ಟರ್ ತಾನೇ ಮೊದಲು ಹೇಳಿ ಮುಂದಿನ ಬೈಗಳಿಗೆ ತಡೆ ಕೊಟ್ಟ.

"ಹೋಗುವಿಯಂತೆ ತಾಳು. ಕಾಮಿನಿ ಶಾಲೆಗೆ ಸೇರಿದ್ದು ಯಾವತ್ತು ಅಂದೆ!"

ರಾಜಾರಾಮ ತಲೆಕೆರೆದ. ವಕೀಲ ಅವನ ಅರೆನೆರೆತ ಕೂದಲನ್ನು ಗಾಢವಾಗಿ ನಿಟ್ಟಿಸಿದ.

"ಹೇಳಿದ್ನಲ್ಲಾ ಅವತ್ತೇ... ನನ್ನ ಬೆನಿಫಿಟ್ ಪ್ರದರ್ಶನಕ್ಕೆ ಸುಮಾರು ನಾಲ್ಕು ದಿನ ಮೊದಲು..."

"ಸುಳ್ಳು ಹೇಳ್ಬೇಡ. ಅವಳು ಇಲ್ಲಿ ಸೇರಿ ಇಪ್ಪತ್ತೈದು ದಿನಗಳಿಗಿಂತ ಹೆಚ್ಚಾಗಿದೆ."

"ಇಲ್ಲಾಂತ ಸತ್ಯಮಾಡಿ ಹೇಳ್ತೀನಿ" ಧ್ವನಿ ಕಂಪಿಸಿತು.

"ನಾಳೆ ಕೋರ್ಟ್‌ನಲ್ಲಿ ಹೇಳಬೇಕಾದ ಮಾತು ಇದು."

"ನಿಜ ಹೇಳೋಕೆ ಹೆದರಿಕೆ ಯಾಕೆ. ನೂರು ಸಾರಿ ಹೇಳ್ತೀನಿ. ನಿಮ್ಮಲ್ಲಿ ಮುಚ್ಚುಮರೆ ಯಾಕೆ ಮಾಡ್ಲಿ ನಾನು? ಎರಡು ಸಾರಿ ನನ್ನ ಬಚಾವ್ ಮಾಡಿದೀರಿ."

"ವೇಮರೆಡ್ಡಿ ಯಾವತ್ತಾದ್ರೂ ಬಂದಿದ್ನಾ ಈ ಶಾಲೆಗೆ?"

"ಇಲ್ಲ" ಕೈ ಹಿಸುಕಿದ.

"ಹಣದ ಆಸೆಗೆ ಕಾಮಿನೀನ ರೆಡ್ಡಿಯ ಕೈಗೆ ನೀನು ಹಿಡಿದುಕೊಟ್ಟೆಯೇನು?"

"ಛೇ, ಬೇಕಾದ್ರೆ ಕಳ್ಳತನ ಮಾಡೇನು. ಅಂತಹ ಗುಲಾಮ ಕೆಲಸ ಎಂದೂ ಮಾಡೋದಿಲ್ಲ."

ವಕೀಲ ನಗೆ ತಡೆದು ಎದ್ದು ನಿಂತ.

"ನೀನೇ ಏನಾದ್ರೂ ಅವಳನ್ನ ಕೆಣಕಿ ಮುಖಭಂಗ ಆಯ್ತೂಂತ ಕೊಲೆ ಮಾಡಿಬಿಟ್ಯೋ?"

"ರಾಮ ರಾಮ! ಈ ಮಾತು ಬಸವನಗುಡಿಯಲ್ಲಿ ಒಬ್ಬನ ಕಿವಿಗೆ ಬಿದ್ರೆ ಸಾಕು. ನನ್ನ ಗತಿ ದೇವರೇ ಗತಿ...! ಸಾರ್..."

ಕೈ ಬಲವಾಗಿ ಹಿಸುಕಿದ.

"ಹೇಳ್ಬಿಡು."

"ನೀವು ಅವಳ ಕೊಲೆ ಮಾಡಿಲ್ವೆ, ಸಾರ್?"

"ಅವಳ ಕೊಲೆ ಯಾವನು ಮಾಡ್ತಾನೆ! ಮುದುಕನಿಗೂ ಅವಳ್ನ ಕಂಡ್ರೆ ಪ್ರೇಮ ಹೊಸ ಯೌವನದಲ್ಲಿ ಪುಟಿಯುತ್ತೆ."

"ಹಹ್ಹ! ಅದಕ್ಕೇ ನಾನು ಕೇಳಿದ್ದು."

"ಅಂದ್ರೆ ನಾನು ಮುದುಕ ಅಂತಲೆ? ಅವಳನ್ನ ಕಂಡು ಯೌವನ ಬಂತು ಅಂತಲೆ? ಅದಕ್ಕಾಗಿ ಅವಳ ಕೊಲೆ ನನ್ನಿಂದ ಆಯ್ತು?"

"ಇದು ನನ್ನ ಅಭಿಪ್ರಾಯ ಅಲ್ಲ, ಸಾರ್. ಗಾಂಧಿಬಜಾರಿನ ರೋಡ್ ರೋಮಿಯೋಗಳು ಆಡ್ಕೊಳ್ಳೋ ಮಾತು."

ವಕೀಲ ನೆನಪು ಕೆದಕಿ ತಟ್ಟನೆ ಕೇಳಿದ :

"ಆ ದಿನ ರಾತ್ರಿ ಹತ್ತು ಗಂಟೆ ಮೇಲೆ ಕಾಮಿನಿ ನಿನ್ನ ನೋಡೋದಕ್ಕೆ ಬರ್ತಾಳೆ ಅಂದಿದ್ದೆ. ಬಂದು ಏನು ಮಾಡಿದ್ಲು?"

ರಾಜಾರಮ ನಿರಾಶೆಯಿಂದ ಕೈ ಒದರಿದ.

"ಎಲ್ಲಿ ಬಂದ್ಲು? ಕಾದು ಕಾದು ನನ್ನ ಕಣ್ಣು ಗುಡ್ಡೆ ಬೆಳ್ಳಗಾದ್ವು. ನನ್ನ ಫೂಲ್ ಮಾಡಿದ್ಲು. ಯಾರ ಕೈಗೊ ಕುತ್ತಿಗೆ ಕೊಟ್ಟು ಕೃಷ್ಣಾರ್ಪಣ ಅಂದುಬಿಟ್ಲು."

"ಸರಿ, ಈಗ ಹೋಗು. ಫೋನ್ ಮಾಡು. ಮೊದಲೇ ಎಳಸು ನನ್ನ ಜೂನಿಯರ್. ಈಗ ಹುಚ್ಚೇ ಹಿಡಿದಿರಬೇಕು! ಮತ್ತೆ ಒಂಟಿ ಸೀನು ಹಾಕ್ಬೇಡ. ನಾಳೆಗೆ ನನ್ನ ಅನಿಷ್ಟ ಕಳೆಯುತ್ತೆ. ಅಲ್ಲೀತನಕ ಶ್ರೀಹರಿ ಕಾಪಾಡ್ಬೇಕು."

ಸಿಗರೇಟು ಹಚ್ಚಿ ಆತುರದಿಂದ ಎಳೆದು ಕೋಣೆಯ ತುಂಬ ಹೊಗೆ ಹರಡಿದ.

ಮರುದಿನ ರಾಗಣ್ಣ ರಾಜಾಜಿನಗರ ಸೇರಿದ ಬೆಳಗಿನ ಸ್ನಾನ ಮುಗಿಸಿ ಕಂದಪದ್ಯವನ್ನು ಮೆಲ್ಲನೆ ಹೇಳುತ್ತಾ ವರಾಂಡಕ್ಕಿಳಿದ ಭಗವಂತಪ್ಪ ವಕೀಲನನ್ನು ನೋಡಿ ಕಟ್ಟಿಗೆಯಂತೆ ನಿಂತುಬಿಟ್ಟ. ಸ್ಮಶಾನಯಾತ್ರೆ ಮಾಡಿದ ಶವ ಮತ್ತೆ ಜೀವಂತವಾಗಿ ಹಿಂತಿರುಗಿದಂತಾಯಿತು.

"ಪೊಲೀಸ್ ಸ್ಟೇಷನ್‌ನಿಂದ ಅದೇನು ಹಾರಿಬಿಟ್ರಿ! ಇನ್ಸ್‌ಪೆಕ್ಟರ್ ಇದ್ದಬದ್ದ ಕೋಪವೆಲ್ಲಾ ನಮ್ಮ ಮೇಲೆ ಕಾರಿಬಿಟ್ರು. ಹೇಳಿಕೆ ಪುಟಗಟ್ಟಲೆ ಬರೆದುಹಾಕಿದ್ರು. ಅಲ್ಲಿಂದ ಬರೋ ಹೊತ್ತಿಗೆ ಬೆಳಗಾಗಿತ್ತು."

ಅವನ ದೃಷ್ಟಿ ವಕೀಲನ ಹಣೆಯ ಮೇಲಿನ ಕುಂಕುಮ, ವಿಭೂತಿಯ ಮೇಲಿತ್ತು.

ವಕೀಲನ ಕಣ್ಣು ಅವನ ತಲೆಗೂದಲನ್ನು ನಿಟ್ಟಿಸುತ್ತಿತ್ತು.

"ನನ್ನ ದರ್ಶನದಿಂದ ನಿಮ್ಮ ಕೆಲಸ ಹಾಳಾಗೋದಿಲ್ಲ ತಾನೆ?"

"ಆಗಬಾರದ್ದೆಲ್ಲಾ ಆಗಿ ಹೋದ ಮೇಲೆ ಇನ್ನೇನಿದೆ, ಸ್ವಾಮಿ?"

"ವಾರದ ಅನಿಷ್ಟ ಕಳೆಯೋ ಮುಂಚೆ ತನಿಖೆ."

"ನನ್ನ ತನಿಖೆ? ನೀವೇ ಒಂದು ಕಾಲು ಜೈಲಿನಲ್ಲಿಟ್ಟು ಬಂದಿದೀರಿ."

"ಮಿತಿಮೀರಿ ಬಂದ ಪದ ಅದು. ತನಿಖೆ ಅಲ್ಲ, ವಿವರಣೆ. ಅವತ್ತು ಎಷ್ಟೊಂದು ಬೊಬ್ಬೆ ಹೊಡೆದು ಕಾರನ್ನ ಪೊಲೀಸ್ ಸ್ಟೇಷನ್‌ಗೆ ಒಯ್ದು ಫಜೀತಿ ಮಾಡಿದ್ರಿ."

"ಮತ್ತೇನು ಮಾಡಬೇಕಾಗಿತ್ತು ನಾನು? ನೀವು ಮಾಡಿದ ಕೆಲಸಕ್ಕೆ ನಾನು ಬಂದೀಖಾನೆ ನೋಡಬೇಕಾಗಿತ್ತು. ಉಳಕೊಂಡೆ. ಕಾಮಿನಿಯ ವಿಷಯದಲ್ಲಿ ಏನೋ ಹೇಳೋದಿದೆ ಅಂತ ಮ್ಯೂಸಿಯಂ ಹತ್ರ ಕಾಯೋದಕ್ಕೆ ಫೋನ್‌ನಲ್ಲಿ ಹೇಳಿದ್ರಿ. ಕಾದು ನಿಂತ ಬಡಪಾಯಿ ಕುತ್ತಿಗೆಗೆ ಹೆಣ ಕಟ್ಟೋದೆ?"

"ಅದು ಕೇಳೋದಕ್ಕೆ ಬಂದೆ, ಭಗವಂತಪ್ಪ. ನಿಮಗೆ ಫೋನ್ ಮಾಡಿದೋರು ಯಾರು? ಧ್ವನಿಯ ಪರಿಚಯ ಇರಬೇಕಲ್ಲ?"

"ಫೋನ್ ಮಾಡಿದೋರು ನೀವೇ... ಮತ್ತಾರು ಮಾಡಿದ್ದು? ನಿಮಗೆ ನಾನು ಫೋನ್ ಮಾಡ್ದೆ ಅಂದ್ರಿ. ನನ್ನ ಧ್ವನಿಯ ಪರಿಚಯ ಸಿಗಲಿಲ್ಲವೆ ನಿಮಗೆ?"

ಇಬ್ಬರೂ ಬೆಪ್ಪಾದರು. ವಕೀಲ ಸಿಗರೇಟು ತುಟಿಗಿಟ್ಟು ಸ್ವರ ಹೊರಡಿಸಿದ.

"ಇಬ್ಬರಿಗೂ ಒಂದೇ ವ್ಯಕ್ತಿ ಫೋನ್ ಮಾಡಿದೆ. ಇಬ್ಬರೂ ಮೂರ್ಖರಾಗಿಬಿಟ್ವಿ."

"ಯಾರು ಆ ವ್ಯಕ್ತಿ?" ಆತುರದಿಂದ ಮುಖ ಸಮೀಪಕ್ಕೆ ತಂದ.

"ನನ್ನ ಕಾರಿನಲ್ಲಿ ಕಾಮಿನಿಯ ದೇಹ ಇಟ್ಟೋನು."

"ಇಟ್ಟೋನು ಕೊಲೆಗಾರ ಸ್ವಾಮಿ. ಕೊಲೆಗಾರ ನೀವು ತಾನೆ?"

"ತಲೆ ಚಿಟ್ಟು ಹಿಡಿಸಬೇಡಿ, ನಟಸಾರ್ವಭೌಮ. ದಯಮಾಡಿ ನಾಲ್ಕು ಮಾತಿಗೆ ಉತ್ತರ ಹೇಳಿ. ಇಲ್ಲಿಂದ ಹೋಗಿ ಪೊಲೀಸ್‌ಗೆ ಒಪ್ಪಿಸಿಕೊಂಡುಬಿಡ್ತೀನಿ>"

"ಅಂದ್ರೆ ನೀವು ಜಾಮೀನಿನ ಮೇಲೆ ಬಿಡುಗಡೆ ಆಗಿಲ್ಲ? ಪೊಲೀಸ್‌ಗೆ ಇನ್ನೂ ಬೇಕಾದ ಮನುಷ್ಯ."

"ಕಾನೂನು ತಿಳಿದೋನ ಹತ್ರ ಎಷ್ಟು ವಟಗುಟ್ತೀರಿ? ಕಾಮಿನಿ ಆಗಾಗ್ಗೆ ನಿಮ್ಮನ್ನ ಭೇಟಿ ಆಗಿ ಬಹಳಷ್ಟು ಮಾತಾಡ್ತಾ ಇದ್ಲಂತೆ. ಅದೇನು ಅವಳು ಹೇಳ್ತಾ ಇದ್ದಿದ್ದು ಅನ್ನೋದರ ಮೇಲೆ ಎರಡು ಮಾತು ನೇರವಾಗಿ ಆಡಿ."

"ಇದೇನು ಸೋಜಿಗ ಅಂತ ಕೇಳ್ತೀರಿ? ನನ್ನ ಧಣಿ ಅಲ್ಲವೆ ಆಕೆ? ಆಕೆಯ ಅಧೀನದಲ್ಲಿರೊ ಕಂಪೆನಿಯಲ್ಲಿ ದುಡಿಯೋನು ನಾನು..."

"ಪಾತಕ್ಕನೂ ಧಣಿ ಅಲ್ಲವೆ?"

"ಬುದ್ಧಿ ಕೆಟ್ಟವಳ ಸಂಗತಿ ಬೇಡ ಈಗ. ನನ್ನ ಬುದ್ಧಿಗೆ ಮಂಕು ಬಡಿಯುತ್ತೆ. ಕಾಮಿನಿ ನನ್ನ ಕಾಣ್ತಾ ಇದ್ರು. ಬಹಳಷ್ಟು ಮಾತಾಡ್ತಾ ಇದ್ರು. ಎಲ್ಲಾ ನಾಟಕಕ್ಕೂ ನಾನು ಹೀರೊ ಎನ್ನುವ ಅಭಿಮಾನದಿಂದ ಎಲ್ಲರಿಗೂ ಹೊಟ್ಟೆ ಉರಿಯೋ ಹಾಗೆ ಸ್ವಲ್ಪ ಹೆಚ್ಚಾಗಿ ಮಾತಾಡ್ತಾ ಇದ್ರು. ನಮ್ಮ ನಾಟಕದಲ್ಲಿ ತಾನು ಅಭಿನಯಿಸೋದಕ್ಕೆ ಒಂದು ಮಾತು ರೆಡ್ಡಿಗೆ ಹೇಳಿ ಅಂತ ನನ್ನ ಆಗಾಗ ಪೀಡಿಸ್ತಾ ಇದ್ರು. ನನ್ನ ಜೊತೆಯಲ್ಲಿ ಆಕೆ ನಾಯಕಿ ಪಾತ್ರ ವಹಿಸಿದರೆ ಎಷ್ಟು ಚೆಂದ ಅಂತ ಕನಸು ಕಾಣ್ತಾ ಇದ್ದೆ. ನಾನೇನೋ ಶಿಫಾರಸು ಮಾಡ್ದೆ. ಆದರೆ ರೆಡ್ಡಿ ನನ್ನ ಮಾತಿಗೆ ಕಿವಿ ತಿರುಗಿಸಲಿಲ್ಲ."

"ನಿಮಗೆ ಅವಳ ಮೇಲೆ ಬಹಳ ಆಸೆ ಇತ್ತಂತೆ."

"ಆಸೆ ಅಂದ್ರೆ ಏನರ್ಥ, ಸ್ವಾಮಿ? ಸುಂದರ ವಸ್ತು ಎಲ್ಲಾ ಕಾಲಕ್ಕೂ ಸಂತೋಷದಾಯಕ ಅಂತ ಇಂಗ್ಲೀಷ್‌ನಲ್ಲಿ ಹೇಳ್ತಾರೆ. ಅದೇ ರಿತಿ ನಾನೂ ಆಕೆಯ ಬಗ್ಗೆ.... ಛೆ, ಎಂಥಾ ಮಾತು ಆಡ್ತೀರ ನನ್ನಿಂದ. ಆಕೆ ನನ್ನ ತಂಗಿ ಸಮಾನ. ನನಗೂ ಹೆಂಡತಿ ಇದಾಳೆ ಬೆಳಗೊಳದಲ್ಲಿ. ನನ್ನ ವಿರುದ್ಧ ಇವೆಲ್ಲಾ ಯಾರು ಹೇಳಿದಾರೆ ಅಂತ ಗೊತ್ತು. ಸೊಪ್ಪಿನ ತಲೆಯ ಸಭಾಪತಿ ಇಲ್ಲಿಗೆ ಬಂದು ಗಲಾಟೆ ಮಾಡಿ ಹೋಗಿದ್ದ. ಅವನೇ ಕಾಮಿನಿಯ ಕೊಲೆ ಮಾಡಿದ್ದು.... ಹಾಗಂತ ಅಂದ್ಕೊಂಡಿದ್ದೆ. ಆದರೆ ಕೊಲೆ ಮಾಡಿರೋದು ನೀವು."

"ಅದನ್ನ ನಾಳೆ ತೀರ್ಮಾನ ಮಾಡ್ತೀನಿ. ನಿಮ್ಮ ವಿಷಯದಲ್ಲಿ ವೇಮರೆಡ್ಡಿ ಹೇಗೆ?"

ಮುಖ ಹಿಂಡಿದ ಭಗವಂತಪ್ಪ.

"ನಾವಿಬ್ರೂ ಹಾಲು ಜೇನು ಇದ್ದ ಹಾಗೆ. ಅವರು ಕಾಮಿನಿ ವಿಷಯದಲ್ಲಿಹೇಗೆ ಅಂತ ಕೇಳ್ತೀರಿ ಮುಂದಿನ ಪ್ರಶ್ನೆ. ರೆಡ್ಡಿಗೆ ಅವಳನ್ನ ಕಂಡ್ರೆ ಈಚೆಗೆ ಕೆಂಡದ ಕೋಪ. ಎರಡನೆ ಉಯಿಲಿನಿಂದ ಅಧಿಕಾರ ಹೋಯ್ತು ಅಂತ ಆ ಸಿಟ್ಟಿನಲ್ಲಿ ಅವಳ ಕೊಲೆ ಮಾಡೋವರಗೆ.... ಈಗ ನೀವು ಬಂದಿದ್ದು ಯಾಕೆ ಹೇಳಿ ಮೊದಲು. ನೀವು ಜೊತೇಲಿ ಸಿಡಿಮದ್ದು ತಂದಿರ್ತೀರಿ."

"ನನು ಅಪಾಯಕಾರಿ ಅಲ್ಲ, ಭಗವಂತಪ್ಪ."

"ನಮ್ಮ ರೆಡ್ಡಿ ಧಣಿ ಹೇಳೋ ಹಾಗೆ ನೀವು ಶಕುನ ಪಕ್ಷಿ. ನಿಮ್ಮ ಮುಖ ನೋಡಿದ್ರೆ ನಮ್ಮ ಕೆಲಸ ನಿರ್ನಾಮವಂತೆ. ಇನ್ನು ನೀವು ಮಸಲತ್ತು ಮಾಡಿದರೆ ನಮ್ಮನ್ನ ಕಾಪಾಡೋರು ಯಾರು?"

"ನನಗೆ ಸರಿಯಾಗಿ ಉತ್ತರವೇ ಹೇಳ್ಲಿಲ್ಲ. ಇರಲಿ, ಆ ಪಾತಕ್ಕ..."

"ಮಾತಿನಲ್ಲಿ ಎಲ್ಲಿಂದ ಎಲ್ಲಿಗೊ ಹಾರ್ತೀರಿ. ನನಗೆ ಗೊತ್ತು ಈಗ ನೇರವಾಗಿ ಉಯಿಲಿನ ವಿಷಯಕ್ಕೆ ಬರ್ತಿದೀರಿ. ಆ ವಿಷಯ ನನಗೆ ಸುತಾರಾಂ ಗೊತ್ತಿಲ್ಲ. ಪ್ರಶ್ನೆ ಹಾಕ್ಬೇಡಿ. ನಾನು ಕಾನೂನಿಗೆ ಹೆದರೊ ಮನುಷ್ಯ."

“ನೀವು ಕೊಲೆ ಮಾಡಿದೀರಿ ಅಂತ ನಾನು ಸಾಬೀತು ಮಾಡಲು ಸಾಧ್ಯವಿಲ್ಲ ಅಂತಲೆ?”

ಭಗವಂತಪ್ಪ ಪ್ರತಿಮೆಯಾಗಿ ನಿಂತ.

“ಏನು ಬೇಕಾದ್ರೂ ಸಾಬೀತು ಮಾಡ್ತೀರಿ. ಕಾನೂನು ಹಿಗ್ಗಿಸಿ ಬಗ್ಗಿಸಿ ಇಲ್ಲದ್ದು ಸೃಷ್ಟಿ ಮಾಡ್ತೀರಿ. ನನ್ನ ಹಣೆಗೆ ಕೊಲೆಗಾರ ಅನ್ನೋ ಚೀಟಿ ಹಾಕ್ತೀರಿ. ಪೊಲೀಸರಿಗೆ ಬೇಕಾಗಿರೋ ನಿಮ್ಮನ್ನ ಪೊಲೀಸರಿಗೆ ಒಪ್ಪಿಸಲೇ ಬೇಕು.”

ಮುಂದೆ ಬಂದವನನ್ನು ವಕೀಲ ತಡೆದ. “ನಡಿ, ಮಹರಾಯ. ನಾನೇ ಪೊಲೀಸರಿಗೆ ಒಪ್ಪಿಸಿಕೊಂಡುಬಿಡ್ತೀನಿ. ನೇರವಾಗಿ ನಿಮ್ಮ ನಾಟಕದ ಥಿಯೇಟರ್‌ಗೆ ಹೋಗೋಣ. ಕೈಮುಗೀತೀನಿ ಜನಕ್ಕೆ ಕೇಳೋಹಾಗೆ ಬೊಬ್ಬೆ ಹಾಕ್ಬೇಡ.”

10

ವೇಮರೆಡ್ಡಿ ಕೋಲು ನೆಲಕ್ಕೆ ಬಲವಾಗಿ ಬಡಿದು 'ಕಟ್' ಎನ್ನಿಸಿದ. ಪೊಲೀಸ್ ಇನ್ಸ್‌ಪೆಕ್ಟರ್ ಹುಬ್ಳಿಕರ್ ಅವನತ್ತ ಕೈತೋರಿ ಸುಮ್ಮನಿರುವಂತೆ ಸೂಚಿಸಿದ.

ವಕೀಲ ರಾಗಣ್ಣ ಮೇಜಿನ ಮೇಲೆ ತೆಲುಗು ಬರಹದ ಎರಡು ಉದ್ದನೆಯ ಹಾಳೆಗಳನ್ನು ಹರಡಿ ಅವುಗಳ ಪಕ್ಕಕ್ಕೆ ಮೂರು ಪತ್ರಗಳನ್ನು ಜೋಡಿಸಿಟ್ಟು ತಲೆ ಎತ್ತಿದ.

ಎದುರು ಕುರ್ಚಿಯಲ್ಲಿ ಗಂಟು ಮುಖದ ವೇಮರೆಡ್ಡಿ ಕುಳಿತಿದ್ದ. ಅವನ ಒಂದು ಪಕ್ಕಕ್ಕೆ ಕೋಟಯ್ಯ, ಮತ್ತೊಂದು ಪಕ್ಕಕ್ಕೆ ಭಗವಂತಪ್ಪ. ಹತ್ತು ಅಡಿಗಳ ದೂರಕ್ಕೆ ಸ್ಟೂಲಿನ ಮೇಲೆ ಡಾನ್ಸ್ ಮಾಸ್ಟರ್ ರಾಜಾರಾಮ.

ಮೇಜಿನ ಸುತ್ತಲೂ ಇನ್ಸ್‌ಪೆಕ್ಟರ್ ಹುಬ್ಳಿಕರ್, ಸಿ.ಐ.ಡಿ. ಇನ್ಸ್‌ಪೆಕ್ಟರ್ ಗೋವಿಂದರೆಡ್ಡಿ ಹಾಗೂ ಜೂನಿಯರ್ ವಕೀಲ ವೆಂಕೋಬ.

ರಾಗಣ್ಣ ಗಂಟಲು ಕೇಕರಿಸಿ ವಿಷಯವನ್ನು ಮುಂದಿಟ್ಟ.

ಇದು ರತ್ತಯ್ಯ ಸಾಯುವುದಕ್ಕೆ ಎಂಟು ತಿಂಗಳು ಮೊದಲು ಬರೆದ ಉಯಿಲು. ಇದು ತಾಡಪತ್ರಿಯ ಅಡ್ವೋಕೇಟ್ ಭೂತರಾಯುಡು ಹಾಗೂ ವೇಮರೆಡ್ಡಿ ಬಳಿ ಇದೆ. ನಾನು ಇದನ್ನ ತಾಡಪತ್ರಿ ಅಡ್ವೋಕೇಟರಿಂದ ತಂದಿದೀನಿ. ಈ ಉಯಿಲ ಪ್ರಕಾರ ಮದುವೆ ಆದಮೇಲೆ ಕಾಮಿನಿ ಆಸ್ತಿಗೆ ಏಕೈಕ ಬಾಧ್ಯಸ್ಥೆ ಅವಳಿಗೆ ಮದುವೆ ಆಗುವವರೆಗೆ ವೇಮರೆಡ್ಡಿ ಆಸ್ತಿಯ ನಿರ್ವಾಹಕ. ಇನ್ನು ಎರಡನೆ ಉಯಿಲು. ಮೊದಲ ಉಯಿಲು ಬರೆದ ಆರು ತಿಂಗಳ ನಂತರ ಅಂದರೆ ರತ್ತಯ್ಯ ಸಾಯುವ ಎರಡು ತಿಂಗಳ ಮೊದಲು ಬರೆದದ್ದು. ಇದು ಅನಂತಪುರದ ಅಡ್ವೋಕೇಟ್ ವೆಂಕಟೇಶರಾವ್, ಕಾಮಿನಿ ಹಾಗೂ ಪಾತಕ್ಕನ ಬಳಿ ಇವೆ. ಇದನ್ನ ನಾನು ಪಾತಕ್ಕನಿಂದ ತಂದಿದೀನಿ.

ಇಬ್ಬರಿಗೂ ಸಮಾನ ಹಕ್ಕು. ಆಸ್ತಿಯ ನಿರ್ವಾಹಕ ಇಲ್ಲಿ ಯಾರೂ ಇಲ್ಲ. ಎರಡು ಉಯಿಲುಗಳೂ ರಿಜಿಸ್ಟರ್ ಆಗಿಲ್ಲ. ಆಗಬೇಕಾದ ಅಗತ್ಯವೂ ಇಲ್ಲ..."

"ಯಾರೂ ಮನೆಯಲ್ಲಿ ಇಲ್ಲದ ಸಮಯದಲ್ಲಿ ಪಾತಕ್ಕನಿಗೆ ಮೋಡ ಮಾಡಿ ಉಯಿಲು ತಂದಿದಾರೆ ಇವರು. ಇದು ಕಳ್ಳತನಕ್ಕೆ ಸಮಾನ. ನನ್ನ ಕಂಪ್ಲೇಂಟ್ ಗಮನಕ್ಕೆ ತೊಗೊಳ್ಳಿ."

ಸಿಡಿದೆದ್ದು ಹೇಳಿದ ವೇಮರೆಡ್ಡಿಗೆ ಕೂಡಲು ತಿಳಿಸಿದ ಹುಬ್ಳಿಕರ್:

"ಮಧ್ಯೆ ಮಾತಾಡಬೇಡಿ, ಮಿಸ್ಟರ್ ರೆಡ್ಡಿ. ಈಗ ಅಡ್ವೊಕೇಟ್ ರಾಗಣ್ಣ ನಿಮ್ಮ ಚಾವಣಿಯ ಕೆಳಗೆ ತಪ್ಪೊಪ್ಪಿಗೆ ಹೇಳಿಕೆ ಕೊಡಲು ನಮ್ಮನ್ನೆಲ್ಲಾ ಸೇರಿಸಿದಾರೆ."

ವಕೀಲ ಮಾತು ಸಾಗಿಸಿದ.

"ಎರಡನೆಯ ಉಯಿಲಿನ ವಿಷಯ ವೇಮರೆಡ್ಡಿಗೆ ಗೊತ್ತಾದುದು ರತ್ತಯ್ಯ ಸತ್ತ ನಾಲ್ಕು ತಿಂಗಳ ಮೇಲೆ..."

ವೆಂಕೋಬನ ಕಡೆ ನೋಡಿದ. ವೆಂಕೋಬ ತುಟಿ ಬಿಚ್ಚಿದ.

"ಆಸ್ತಿ ನಿರ್ವಾಹಕನ ಅಧಿಕಾರ ಕಳೆದುಕೊಳ್ಳುವ ವೇಮರೆಡ್ಡಿಗೆ, ಎರಡನೆ ಉಯಿಲಿನ ವಿಷಯ ತಾನು ಸತ್ತಮೇಲೆ ಗೊತ್ತಾಗಲಿ ಅನ್ನೋದು ರತ್ತಯ್ಯನ ಸಂಕೋಚದ ನಿರ್ಧಾರವಾಗಿತ್ತು. ಬಾಧ್ಯಸ್ಥೆಯರಿಬ್ಬರೂ ಅದನ್ನ ರೆಡ್ಡಿಗೆ ತಿಳಿಸಲಿಲ್ಲ. ಇದಕ್ಕೆ ಕಾರಣ ಆ ಮೂವರಿಗೂ ರೆಡ್ಡಿಯ ಮೇಲಿನ ಅಪನಂಬಿಕೆ."

ಕೋಟಯ್ಯ ಧಣಿಯ ಕೈತಟ್ಟಿ ಸುಮ್ಮನಾಗಿಸಿದ. ವಕೀಲ ಹೇಳಿದ :

"ಮೊದಲನೆ ಉಯಿಲಿನಿಂದ ಪಾತಕ್ಕನಿಗೆ ಪೂರ್ಣ ನಷ್ಟವಾಗಿತ್ತು. ಎರಡನೆ ಉಯಿಲಿನಿಂದ ಕಾಮಿನಿಗೆ ಅರ್ಧ ನಷ್ಟವಾದರೂ, ಹೇಳಲಾಗದ ನಷ್ಟ ಯಾರಿಗೆ?"

"ವೇಮರೆಡ್ಡಿಗೆ."

ಭಗವಂತಪ್ಪ ಅನಾಯಾಸವಾಗಿ ಹೇಳಿದಾಗ ರೆಡ್ಡಿ ಚಕಿತಗೊಂಡ.

"ಪಾತಕ್ಕನಿಗೆ ಆಸ್ತಿಯ ಹಕ್ಕು ಬರದಿರಲಿ ಅಂತ ಅವಳಿಗೆ ರೆಡ್ಡಿ ಹುಚ್ಚಿಯ ಪಟ್ಟ ಕೊಡಿಸಲು ಪ್ರಯತ್ನ ಮಾಡಿದರು."

ವೆಂಕೋಬನ ಮಾತು ನುಸುಳಿ ಬಂತು.

ಸಿ.ಐ.ಡಿ. ಇನ್ಸ್‌ಪೆಕ್ಟರ್ ಗೋವಿಂದರೆಡ್ಡಿ ಬೇಸರ ಪ್ರಕಟಿಸಿದ.

"ಮಿಸ್ಟರ್ ಹುಬ್ಳಿಕರ್, ನಾವು ಉಯಿಲಿನ ವರದಿ, ಪ್ರತಿಕ್ರಿಯೆ ಕೇಳೋದಿಕ್ಕೆ ಇಲ್ಲಿಗೆ ಬರ್ಲಿಲ್ಲ, ಇದು ರಾಗಣ್ಣನ ತಪ್ಪೊಪ್ಪಿಗೆಯೂ ಅಲ್ಲ."

ವೇಮರೆಡ್ಡಿ ಉತ್ಸಾಹದಿಂದ ನುಡಿದ.

"ನಿಮ್ಮಿಂದ ಓಡಿಹೋದ ಆಪಾದಿತನ್ನ ಸುಮ್ಮನೆ ಬಂಧಿಸುವುದು ಬಿಟ್ಟು ಅವರಿಂದ ನಾಟಕ ಆಡಿಸ್ತಾ ಇದೀರಿ."

ವೆಂಕೋಬನ ಉತ್ತರ ನಯವಾಗಿ ಹರಿಯಿತು.

"ನಮ್ಮ ಸೀನಿಯರ್ ಮೇಲೆ ಯಾವ ಆಪಾದನೆಯೂ ಇಲ್ಲ. ಅವರು ಆವತ್ತು ಏಕಾಏಕಿ ಹೊರಟುಹೋಗಿದ್ದು ಪಲಾಯನ ಅಂತ ಹೇಳೋದು ತಪ್ಪು. ಅವರ ಕಾರಿನಲ್ಲಿ ಒಂದು ಶವ ಸೇರಿತ್ತು. ಅದನ್ನ ಅವರು ಪೊಲೀಸ್‌ಗೆ ಒಪ್ಪಿಸಿ ಹೇಳಿಕೆ ಕೊಟ್ರು"

"ನಾನಲ್ಲವೆ ಅವರನ್ನ ಸ್ಟೇಷನ್‌ಗೆ ಬರೊ ಹಾಗೆ ಮಾಡಿದ್ದು?"

ಭಗವಂತಪ್ಪ ಗೊಣಗಿದ.

ವಕೀಲ ಜೂನಿಯರ್ ಕಡೆ ನೋಡಿ ಕೆಮ್ಮಿದ.

"ರತ್ತಯ್ಯ ಸತ್ತ ನಾಲ್ಕು ತಿಂಗಳ ನಂತರ ಎರಡನೆ ಉಯಿಲಿನ ಸಂಗತಿ ವೇಮರೆಡ್ಡಿಗೆ ತಿಳಿಯಿತು. ಇದಕ್ಕೆ ರತ್ತಯ್ಯನ ಸಂಕೋಚ ಪ್ರವೃತ್ತಿಯಾಗಲಿ, ಯಾರ ಅಪನಂಬಿಕೆಯಾಗಲಿ ಕಾರಣವಲ್ಲ. ಎರಡನೆಯ ಉಯಿಲು ಸೃಷ್ಟಿಯಾದದ್ದು ರತ್ತಯ್ಯ ಸತ್ತು ನಾಲ್ಕು ತಿಂಗಳ ನಂತರ..."

ವಕೀಲನ ಕಣ್ಣು ಎಲ್ಲರ ಮೇಲೂ ಹರಿಯಿತು. ಎಲ್ಲಾ ಮುಖಗಳಲ್ಲೂ ಸಮನಾದ ವಿಸ್ಮಯ.

"ಅಂದರೆ ಎರಡನೆ ಉಯಿಲು ಕೃತಕವೆ?"

ಹುಬ್ಳಿಕರ್‌ನ ಪ್ರಶ್ನೆ ಗಂಭೀರವಾಗಿತ್ತು.

"ಹೌದು, ಎರಡನೇದು ಖೋಟಾ ಉಯಿಲು. ಎತ್ತಯ್ಯ ಮಾಡಿದ್ದು ಒಂದೇ ಉಯಿಲು. ಆ ಸಾಚಾ ಉಯಿಲಿನಲ್ಲಿರುವ ರತ್ತಯ್ಯನ ಸಹಿಯನ್ನ ತಾಡಪತ್ರಿ ಕಚೇರಿಗಳಲ್ಲಿರುವ ಅವನ ಎಷ್ಟೋ ಸಹಿಗಳೊಂದಿಗೆ ತಾಳೆ ನೋಡಬಹುದು. ಎರಡನೆ ಖೋಟಾ ಉಯಿಲಿನಲ್ಲಿರೋ ರತ್ತಯ್ಯನ ಸಹಿ ಯಾರಿಂದಲೊ ಆಗಿರುವ ಕಳ್ಳ ಸಹಿ. ಖೋಟಾ ಉಯಿಲು ಕಾಮಿನಿಯ ಕೊಲೆಯ ಕಡೆ ಬೆರಳು ತೋರುತ್ತೆ."

ವೇಮರೆಡ್ಡಿ ನೆಮ್ಮದಿಗೆಟ್ಟು ಕೋಲನ್ನು ಬಾಯಿಗಿಟ್ಟು ಕಡಿದ.

"ಕೊಲೆಗಾರ ಯಾರು?" ಹುಬ್ಳಿಕರ್ ಗೋವಿಂದ ರೆಡ್ಡಿಯತ್ತ ನೋಡಿ ಕುತೂಹಲದಿಂದ ಕುರ್ಚಿಯಲ್ಲಿ ದೇಹ ಹೊಂದಿಸಿದ.

ವಕೀಲ ಅದೇ ತಾಳ್ಮೆಯಲ್ಲಿ ಮೂರು ಪತ್ರಗಳನ್ನು ಎತ್ತಿ ತೋರಿಸಿದ.

"ಕೊಲೆಗಾರ ಯಾರೂಂತ ಪತ್ತೆ ಮಾಡೋಣ. ಹತ್ತು ದಿನಗಳ ಹಿಂದೆ ಮದ್ರಾಸಿನಿಂದ ನನಗೆ ಕಾಮಿನಿಯ ಪತ್ರ ಬರುತ್ತೆ. ನಾನು ಆಕೇನ ಭಾನುವಾರ ಕಲಾಕ್ಷೇತ್ರದ ಪ್ರದರ್ಶನದ ಮಧ್ಯೆ ಸಾಧ್ಯವಾದರೆ ನೋಡಬಹುದು ಅಂತ ತಿಳಿಸ್ತಾಳೆ. ಮತ್ತೆ ಮಾರನೆ ದಿನ ಅಂದರೆ ಸೋಮವಾರ ರಾತ್ರಿ ಎಂಟೂವರೆ ಗಂಟೆಗೆ ನನ್ನ ಮನೆಗೇ ಬಂದು ತುರ್ತು ವಿಷಯ ಮಾತಾಡೋದು ಇದೇಂತ ಬರೆಯುತ್ತಾಳೆ. ಪ್ರದರ್ಶನದ ಮಧ್ಯೆ ಅವಳನ್ನು ಕಾಣೋದಕ್ಕೆ ನನ್ನ ಜೂನಿಯರ್ ಜೊತೆಗೆ ಹೋಗ್ತೀನಿ. ಅದೇ ಹೊತ್ತಿಗೆ ವೇಮರೆಡ್ಡಿ

ಆತುರದಿಂದ ಕೋಟಯ್ಯನ ಜೊತೇಲಿ ಅಲ್ಲಿಗೆ ಬರ್ತ್ತಾರೆ. ಆದರೆ ಕಾಮಿನಿ ಏಕ್‌ದಂ ಮಾಯವಾಗ್ತಾಳೆ. ಅಂದರೆ ಕಾಮಿನಿ ತಾನು ಅಲ್ಲಿರುವುದನ್ನು ನಿಮಗೆ ಮನದಟ್ಟು ಮಾಡಿಸಿದರೂ, ಹತ್ತಿರದಲ್ಲಿ ಕಾಣಿಸಿಕೊಳ್ಳಲು ಇಚ್ಛೆಪಟ್ಟಿಲ್ಲ. ಪ್ರದರ್ಶನಕ್ಕೆ ಎರಡು ದಿನ ಮೊದಲು ಮದ್ರಾಸಿನಿಂದ ನನಗೆ ಕಾಮಿನಿ ಪತ್ರ ಬರೆದಳು. ಪ್ರದರ್ಶನಕ್ಕೆ ನಾಲ್ಕು ದಿನಗಳ ಮೊದಲೇ ಬೆಂಗಳೂರಿನಲ್ಲಿದ್ದಾಳೆ. ರಾಜಾರಮನ 'ನೃತ್ಯನಿಕೇತನ'ದಲ್ಲಿ ತನ್ನ ವಿಳಾಸ ತಿಳಿಸದೆ ಸೇರಿದಾಳೆ. ಅಂದರೆ ಮದ್ರಾಸಿನಿಂದ ಕಾಮಿನಿ ನನಗೆ ಪತ್ರ ಬರೆಯಲಿಲ್ಲ. ಅವಳ ಹೆಸರಿನಲ್ಲಿ ಕೊಲೆಗಾರ ಪತ್ರ ಬರೆದು ಮದ್ರಾಸಿನಿಂದ ಪೋಸ್ಟ್ ಮಾಡಿದಾನೆ. ಇಗೋ, ಕಾಮಿನಿಯ ಹೆಸರಿನಲ್ಲಿ ನನಗೆ ಬಂದಿರೋ ಖೋಟಾ ಪತ್ರ...."

ವಕೀಲನ ಕಣ್ಣುಗಳು ಹೊರಳಿದವು. ಕೋಟಯ್ಯ ಕೈ ಹಿಸುಕುತ್ತಿದ್ದ. ರಾಜಾರಾಮನನ್ನು ಪ್ರಶ್ನಾರ್ಥಕವಾಗಿ ನೋಡಿದ. ಉಳಿದವರು ಮೌನವಾಗಿ ಕುಳಿತರು. ಮುಖದಲ್ಲಿ ವಿಕಾರ ಯಾರಿಗೂ ಇಲ್ಲ. ರಾಗಣ್ಣ ತುಸು ನಿರಾಶೆಗೊಂಡವನಂತೆ ಹೇಳಿಕೆ ಮುಂದುವರಿಸಿದ.

"ಕೊಲೆಗಾರನಿಗೆ ನನ್ನ ಸ್ವಭಾವ, ಚಲನವಲನ, ನನ್ನ ಮನೆಯ ನಕ್ಷೆ ಎಲ್ಲಾ ಚೆನ್ನಾಗಿ ಗೊತ್ತಿವೆ. ಸೋಮವಾರ ಬೆಳಿಗ್ಗೆ ಶಾವಂದಪ್ಪನ ಕಡೆಯಿಂದ ಫೋನ್ ಬರುತ್ತೆ. ರಾತ್ರಿ ಹತ್ತೂವರೆಯ ಪೂನಾ ಮೈಲ್ ಬಳಿ ನಾನೇ ಮೊಕದ್ದಮೆ ಫೈಲ್ ತಂದೊಪ್ಪಿಸಬೇಕು ಅನ್ನೋ ಸೂಚನೆ. ಅದೇ ರಾತ್ರಿ ಹನ್ನೊಂದು ಗಂಟೆಯ ನಂತರ ನನ್ನ ಜೂನಿಯರ್‌ಗೆ ಶಾವಂದಪ್ಪ ಗುಂತಕಲ್ ಪ್ಯಾಸೆಂಜರ್‌ನಲ್ಲಿ ಹೊರಟ ಅನ್ನೋ ಹೇಳಿಕೆ. ಕೊಲೆಗಾರ ನನ್ನ ಮನೆಯ ಕಿಚನ್‌ನಲ್ಲಿ ದೊಡ್ಡ ಹೊಗೆ ಗೂಡು ಇರೋದು, ನನ್ನ ಮನೆಯ ಹಿಂದಿನ ಕನ್ಸರ್ವೆನ್ಸಿ ಲೇನ್ ಯಾವಾಗಲೂ ನಿರ್ಜನವಾಗಿರೋದು ಎಲ್ಲವನ್ನೂ ಮನೆ ನೋಡದೆ ತಿಳಿದುಕೊಂಡಿದಾನೆ..."

ವೆಂಕೋಬ ಚರಚರ ತಲೆ ಕೆರೆದು ಅಳುಕಿನಲ್ಲಿ ಹೇಳಿದ :

"ಹೊಗೆಗೂಡಿನ ವಿಷಯ ಈ ನಾಟಕದೋರ ಮುಂದೆ ಹೇಳಿದ್ದುಂಟು."

"ಮುಖವಾಡ ಧರಿಸಿ ಶತ್ರು ಎದುರಿಗೆ ನಿಂತಿದೆ ಅಂತ ಕಣಿಕಾರ ಪಕ್ಷಿ ಶಕುನ ಹೇಳಿದ್ದು ಇದೇ. ನಿನಗೇ ಅರಿವಿಲ್ಲದೆ ಕೊಲೆಗಾರನಿಗೆ ಅಪ್ರತ್ಯಕ್ಷವಾಗಿ ಸಹಾಯ ಮಾಡಿದೀಯ, ವೆಂಕೋಬ... ಆಯ್ತು, ಕೇಳಿ ಮುಂದೆ. ಕೊಲೆಗಾರ ರಾತ್ರಿ ಎಂಟೂಕಲು ಗಂಟೆ ಹೊತ್ತಿಗೆ ನನ್ನ ಮನೆ ಸಮೀಪವಾಗಿ, ಬಹುಶಃ ಮುಂದಿನ ಮೈದಾನದ ಮರದಡಿ ಕತ್ತಲೆಯಲ್ಲಿ ನಿಂತು ನೋಡ್ತಾನೆ. ಎಂಟೂವರೆಗೆ ಕಾಮಿನಿ ಬರೋದಿಲ್ಲ. ಅವನಿಗೆ ಆತಂಕ, ಗಾಬರಿ. ಒಂಬತ್ತೂ ಇಪ್ಪತ್ತರ ನಂತರ ಸ್ವಲ್ಪ ದೂರದಲ್ಲಿ ನನ್ನ ಮನೆಗೆ ನಡೆದು ಬರ್ತಾಳೆ...ನಾನು ಹತ್ತೂ ಕಾಲು ಗಂಟೆಗೆ ಆತುರಾತುರವಾಗಿ ರೈಲ್ವೆ ಸ್ಟೇಷನ್‌ಗೆ ಕಾರಿನಲ್ಲಿ ಧಾವಿಸ್ತೀನಿ. ಕಾದಿದ್ದ ಕೊಲೆಗಾರ ನನ್ನ ಮನೆಗೆ ಬಂದು ಕಾಮಿನಿಯ ಕತ್ತು ಹಿಸುಕಿ ಕೊಲೆ ಮಾಡ್ತಾನೆ..."

ವೇಮರೆಡ್ಡಿ ಹುಲಿಯಂತೆ ಗೊರಗುಟ್ಟಿ ಕೋಲು ಪದೇ ಪದೇ ಬಡಿದ.

"ಶುದ್ಧ ಸುಳ್ಳು! ಮಧ್ಯೆ ನಡೆದ ಕಥೆ ಹೇಳಿ. ನಾನು ಒಂಬತ್ತೂ ನಲವತ್ತರ ಹೊತ್ತಿಗೆ ಸಿ.ಐ.ಡಿ. ಇನ್ಸ್‌ಪೆಕ್ಟರ್ ಗೋವಿಂದರೆಡ್ಡಿಯವರ ಜೊತೆ ಅಲ್ಲಿಗೆ ಹೋದೆ. ಆಗಲೇ ಕಾಮಿನಿಯ ಕೊಲೆ ಆಗಿರಬೇಕು. ಅಲ್ಲಿ ದೇಹ ಇರಲಿಲ್ಲ. ಅವಳು ಬಿಟ್ಟಿದ್ದ ಚಪ್ಪಲಿ, ಕರವಸ್ತ್ರ, ಉಪಯೋಗಿಸಿದ ಟಂಬ್ಲರ್ ತೊಗೊಂಡು ಬಂದ್ವಿ."

"ವಕೀಲರನ್ನ ಆಗಲೇ ನಿಮ್ಮ ಸಂಗಡ ಕರೆತರಬಹುದಿತ್ತಲ್ಲ, ಮಿಸ್ಟರ್ ಗೋವಿಂದರೆಡ್ಡಿ?" ಹುಬ್ಳಿಕರ್ ಸಹೋದ್ಯೋಗಿಯನ್ನು ಕೆಣಕಿದ.

"ಕಾನೂನು ತಿಳಿದ ಮನುಷ್ಯ ಮುಂದೆ ಏನು ಮಾಡ್ಲಿ? ಅಲ್ಲಿ ಕಾಮಿನಿ ದೇಹ ಇರಲಿಲ್ಲ. ಕಾಮಿನಿ ಅಲ್ಲಿಗೆ ಬರಲೇ ಇಲ್ಲಾಂತ ವಕೀಲರು ಎರಡು ಸಾರಿ ಹೇಳಿದ್ರು."

ಕೋಟಯ್ಯ ಕುತೂಹಲ ತಡೆಯದೆ ಕೇಳಿದ :

"ನಿಮ್ಮ ಮನೆಯಲ್ಲಿ ಕೊಲೆ ಆಯ್ತೂಂತ ಹೇಳ್ತೀರಿ. ವಕೀಲಗಾರು? ಅವತ್ತು ಸ್ಟೇಷನ್‌ನಲ್ಲಿ ದೇಹ ಇದ್ದಾಗ ಕಾಮಿನೀನ ನೋಡ್ತಾ ಇರೋದು ಇದೇ ಮೊದಲು ಅಂತ ಹೇಳಿದ್ರಿ."

"ನನ್ನ ಮನೆಯಲ್ಲಿ ಕೊಲೆ ಆದದ್ದು ನಿಜ. ಸ್ಟೇಷನ್‌ನಲ್ಲಿ ಹಾಗೆ ನಾನು ಹೇಳಿದ್ದೂ ನಿಜ. ಆದರೆ ಹಾಗಂತ ಬರವಣಿಗೆಯಲ್ಲಿ ಹೇಳಿಕೆ ಕೊಡ್ಲಿಲ್ಲ. ನನ್ನ ಪತ್ತೆ ಕೆಲಸಕ್ಕೆ ಅಡ್ಡಿ ಆಗದೆ ಇರೋಷ್ಟು ಹೇಳಿದೀನಿ. ವೇಮರೆಡ್ಡಿ ಸಿ.ಐ.ಡಿ.ಯವರ ಜೊತೆಯಲ್ಲಿ ಬಂದಾಗ ಕಾಮಿನಿ ಜೀವಂತವಾಗಿದ್ಲು. ಹೊಗೆ ಗೂಡಿನಲ್ಲಿ ಸುರಕ್ಷಿತವಾಗಿ ಸೇರಿಕೊಂಡಿದ್ಲು. ನಾನು ರೈಲು ನೋಡಿಕೊಂಡು ಬರುವ ಹೊತ್ತಿಗೆ ಕೊಲೆಯಾಗಿ ಬಿದ್ದಿದ್ಲು. ಆಮೇಲೆ ನನ್ನ ಜೂನಿಯರ್ ಬಂದ. ಅವನು ಹೇಳಿದ ಹಾಗೆ ದೇಹ ಪೊಲೀಸ್‌ಗೆ ಆಗಲೇ ಒಪ್ಪಿಸಿದ್ದಿದ್ರೆ ನಾನೇ ಕೊಲೆಗಾರ ಅನ್ನಿಸಿಕೊಳ್ತಿದ್ದೆ. ಕೊಲೆಗಾರ ಪತ್ತೆ ಆಗೋದು ಎಷ್ಟು ವಿಳಂಬವಾಗ್ತಿತ್ತೋ ತಿಳಿಯದು. ನಾನು ಕಾಮಿನಿಯ ದೇಹವನ್ನು ಕೆಲವು ಗಂಟೆಗಳ ಕಾಲ ರಕ್ಷಿಸಿಡುವ ಯೋಚನೆ ಮಾಡಿದೆ. ಅದಕ್ಕೆ ವ್ಯವಸ್ಥೆ ಮಾಡಿಕೊಂಡು ಬರೋದ್ರಲ್ಲಿ ದೇಹ ನನ್ನ ಮನೆಯಿಂದ ಮಾಯವಾಗಿತ್ತು."

"ಸುಳ್ಳು ಹೇಳ್ತೀರಿ, ವಕೀಲಗಾರು. ಶವ ಕಂಡವರು ತಮ್ಮ ಮೇಲೆ ಆಪಾದನೆ ಎಲ್ಲಿ ಬಂದೀತೊ ಅಂತ ಮೊದಲು ಪೊಲೀಸ್‌ಗೆ ಅದನ್ನ ಒಪ್ಪಿಸ್ತಾರೆ. ನೀವು ಹಪಿಳೋಹಾಗೆ ಶವನ ರಕ್ಷಿಸಿಡೋದಕ್ಕೆ ಹೋಗೋಲ್ಲ."

ಕೋಟಯ್ಯನ ಮಾತಿಗೆ ಹುಬ್ಳಿಕರ್ ಸಮ್ಮತಿ ಸೂಚಕವಾಗಿ ತಲೆ ಆಡಿಸಿದ.

"ಪೊಲೀಸ್‌ಗೆ ತಿಳಿಸದೆ ಶವ ಮುಚ್ಚಿಡೋದು ಭಾರಿ ಅಪರಾಧ."

"ಹೌದು, ಇನ್ಸ್‌ಪೆಕ್ಟರ್ ಸಾಹೆಬ್. ಆದರೆ ನಾನೆಲ್ಲಿ ಶವ ಮುಚ್ಚಿಟ್ಟೆ? ಅಥವಾ ಸಾಗಿಸಿದೆ? ಅದನ್ನ ನನ್ನ ಮನೆಯಿಂದ ಸಾಗಿಸಿ ಮಾರನೆ ದಿನ ರಾತ್ರಿಯವರೆಗೆ ಮುಚ್ಚಿಟ್ಟೋನು ಕೊಲೆಗಾರ. ಅದನ ಕಾರಿಗೆ ಸೇರಿಸಿದೋನು ಅವನೇ..."

ವೇಮರೆಡ್ಡಿ ಪ್ರಥಮ ಬಾರಿಗೆ ಮುಖದಲ್ಲಿ ನಗೆ ತಂದುಕೊಂಡ. ಚೂಪು ಮೂಗು ಎತ್ತಿ ಅಣಕವಾಡಿದ.

"ನಿಮ್ಮ ಮೇಲೆ ಆಪಾದನೆ ಬರಲಿ ಅಂತ ನಿಮ್ಮ ಮನೆಯಲ್ಲೇ ಕೊಲೆ ಮಾಡಿದೋನು ಮನೆಯಿಂದ ಶವ ಸಾಗಿಸುವ ತಿಳಿಗೇಡಿತನ ತೋರಿಸ್ತಾನೇನು?"

"ಶವದ ಪ್ರಯಾಣದ ಗುಟ್ಟು ಅಲ್ಲೇ ಇರೋದು, ರೆಡ್ಡಿಗಾರು. ಕೊಲೆ ಮಾಡಿದ ಮೇಲೆ ಕೊಲೆಗಾರ ಫೋನ್‌ಮಾಡಿ ತಕ್ಷಣ ಪೊಲೀಸರನ್ನು ನನ್ನ ಮನೆಗೆ ಕಳಿಸಬೇಕಾಗಿದೆ. ಅದಕ್ಕೋಸ್ಕರ ಹೊರಟಾಗ ತಾನು ಮರೆತ ಮುಖ್ಯ ಸಂಗತಿ ನೆನಪಿಗೆ ಬಂದಿದೆ. ಅಚಾತುರ್ಯ ಆಗಿಹೋಗಿದೆ. ಅದು ಇಲ್ಲವಾದರೆ ಕೊಲೆಯ ಉದ್ದೇಶ, ಶ್ರಮ ಎಲ್ಲವೂ ವ್ಯರ್ಥ. ಗತ್ಯಂತರವಿಲ್ಲದೆ ಹೊರಬಂದು ಮರೆಯಲ್ಲಿದ್ದ ಕಾರನ್ನು ಮನೆಯ ಬಲಭಾಗದಿಂದ ಕರ್ನ್ಸರ್ವೆನ್ಸಿ ಭಾಗಕ್ಕೆ ತಂದು ನಿಲ್ಲಿಸಿ ಶವವನ್ನು ಒಯ್ತಾನೆ. ಕೇವಲ ಕೊಲೆ ಮಾಡಲು ಬಂದವನಿಗೆ ಅನಿರೀಕ್ಷಿತ ಘೋರ ಶ್ರಮ. ಮನೆ ಹಿಂದಿನ ಐದು ಅಡಿ ಎತ್ತರದ ಗೋಡೆ ದಾಟಿಸಿ ಆ ದೃಢವಾದ ಶರೀರವನ್ನು ಕಾರಿಗೆ ಸೇರಿಸುವುದು ಅಸಾಧಾರಣ ಸಾಹಸವೆ! ಕೊಲೆಗಾರ ಶವದ ಎಡಗೈನ ಕಪ್ಪು ಡಯಲ್ ಗಡಿಯಾರ ಬಿಚ್ಚಿ ಒಳ ಮಣಿಕಟ್ಟಿನ ಮಧ್ಯೆ ಒಂದು ಕಪ್ಪು ಚುಕ್ಕೆ ಇಟ್ಟು ಮಚ್ಚೆಯ ಹಾಗೆ ಕಾಣುವಂತೆ ಮಾಡುತ್ತಾನೆ. ಬಣ್ಣಕ್ಕಾಗಿ ಆ ಹೊತ್ತಿನಲ್ಲಿ ಅವನು ಹುಡುಕಬೇಕಾದುದಿಲ್ಲ. ಮೊದಲೇ ತೆಗೆದಿರಿಸಿದ ಕಂದು ಬಣ್ಣ. ಬಹುಶಃ ಗೇರು ಎಣ್ಣೆಯಿಂದ ತಯಾರಿಸಿದ್ದು. ಗಡಿಯಾರ ಮತ್ತೆ ಕೈಗೆ ಸೇರಿಸುತ್ತಾನೆ. ಆಗ ಹೊರಮುಖವಾಗಿದ್ದ ಡಯಲ್ ಒಳಮುಖವಾದುದು ಅವನ ಗಮನಕ್ಕೆ ಬಂದಿಲ್ಲ. ಮತ್ತೆ ಆ ಹೊತ್ತಿನಲ್ಲಿ ನನ್ನ ಮನೆಗೆ ಶವ ತಂದಿರಿಸುವುದು ಸಾಧ್ಯವಿಲ್ಲ. ಮರುದಿನ ರಾತ್ರಿಯವರೆಗೆ ಅದನ್ನು ಮುಚ್ಚಿಟ್ಟು ನನ್ನ ಕಾರಿಗೆ ಸೇರಿಸುತ್ತಾನೆ. ಮಚ್ಚೆಯ ಗುರುತಿನಿಂದಾಗಿ ಕಾಮಿನಿಯ ಶರೀರವನ್ನು ಗುರ್ತಿಸಲಾಯಿತು."

ವೇಮರೆಡ್ಡಿ ಕುರ್ಚಿಯಲ್ಲಿ ಸರಿದಾಡಿ ಮುಷ್ಟಿ ಬಿಗಿದ.

"ಮೋಸ! ಅರ್ಥವಿಲ್ಲದ ಮಾತು! ಕಾಮಿನಿಯ ಎಡ ಮಣಿಕಟ್ಟಿನ ಮಚ್ಚೆ ಅವಳು ಹುಟ್ಟಿದಾರಭ್ಯ ಬಂದದ್ದು. ಅದನ್ನ ಶವಕ್ಕೆ ಹಚ್ಚುವ ಅಗತ್ಯ ಇರ್ಲಿಲ್ಲ."

"ನಿಜ ರೆಡ್ಡಿಗಾರು. ಆದರೆ ನನ್ನ ಮನೆಗೆ ಬಂದು ಕೊಲೆಯಾದ ಕಾಮಿನಿಗೆ ಮಚ್ಚೆ ಇರಲಿಲ್ಲ. ಕೊಲೆಗಾರ ಹೊಸದಾಗಿ, ತುಸು ಶಾಶ್ವತವಾಗಿ ನಿಲ್ಲುವಂತೆ ಮಚ್ಚೆ ಹಾಕಬೇಕಾಯ್ತು. ಅರ್ಥ ಆಯ್ತಲ್ಲ?... ನನ್ನಲ್ಲಿಗೆ ಬಂದೋಳು ಅಸಲಿ ಕಾಮಿನಿ ಅಲ್ಲ, ಖೋಟಾ ಕಾಮಿನಿ!"

"ಖೋಟಾ ಕಾಮಿನಿ!" ಉದ್ಗಾರ ಎತ್ತಿದ ಕೋಟಯ್ಯನನ್ನ ಅನುಸರಿಸಿ ರಾಜಾರಾಮ ದನಿಗೂಡಿಸಿದ.

"ಖೋಟಾ ಉಯಿಲು! ಮದ್ರಾಸಿನ ಖೋಟಾ ಕಾಗದ! ಖೋಟಾ ಕಾಮಿನಿ!"

ಮುಂದಿನ ಮಾತುಗಳನ್ನು ತಡೆದ ವಕೀಲ.

"ಹೌದು, ಖೋಟಾ ಕಾಮಿನಿ! ಅವಳ ಹೆಸರು ಕನ್ನಗಿ. ಬೆಜವಾಡದ ಕನ್ನಗಿ. ಮದ್ರಾಸ್ ಮಹಿಳಾ ನಿಲಯದಲ್ಲಿ ಅಸಲಿ ಕಾಮಿನಿಯ ಸ್ನೇಹಿತೆ. ಕಾಮಿನಿ ಅಲ್ಲಿಂದ ಹೊರಟು ಹೋದ ಹದಿನೈದು ದಿನಗಳ ನಂತರ ತಾನೂ ಕನ್ಮರೆ ಆದಳು. ಕಾಮಿನಿಯ ಹೆಸರಿನಲ್ಲಿ ತನಗೆ ಬಂದ ಪತ್ರದ ಬರಹ ಕನ್ನಗಿಯ ಬರಹದೊಂದಿಗೆ ಹೋಲುತ್ತದೆ. ಕಾಮಿನಿಯ ಕೈ ಬರಹದ ಮಾದರಿಗಳನ್ನು ಅವಳ ಕಾಲೇಜಿನಿಂದ, ಮಹಿಳಾ ನಿಲಯದಿಂದ ತಂದಿದೀನಿ."

"ಮತ್ತೆ ಕಾಮಿನಿ ಎಲ್ಲಿ ಹೋದ್ಲು?"

ಕೋಟಯ್ಯನ ಸ್ವರ ತಣ್ಣಗಿತ್ತು. ಗರಬಡಿದಂತೆ ಕುಳಿತ ವೇಮರೆಡ್ಡಿಯ ಕೈ ನೇವರಿಸಿದ.

"ಕಾಮಿನಿ ಕೊಲೆಯಾಗಿ ಇವತ್ತಿಗೆ ಸುಮಾರು ಒಂದು ತಿಂಗಳೇ ಆಗಿರಬಹುದು. ಅವಳನ್ನು ಮದ್ರಾಸಿನಲ್ಲಿ ಕೊನೆಗಾಣಿಸಿದ ಕೊಲೆಗಾರ ಕನ್ನಗಿಯನ್ನು ಬೆಂಗಳೂರಿನಲ್ಲಿ ಕೊಲೆಮಾಡಿ ನಾಟಕ ಪೂರೈಸಲು ಯತ್ನಿಸಿದ."

ವೇಮರೆಡ್ಡಿ ಒಂದೇ ಮೌನ ಸಾಧಿಸಿದ.

ಗೋವಿಂದರೆಡ್ಡಿ ಗಂಭೀರವಾಗಿ ಪ್ರಶ್ನಿಸಿದ.

"ಕೊಲೆಗಾರ ಯಾರು?"

"ಹೇಳ್ತೀನಿ ಮಿಸ್ಟರ್ ಗೋವಿಂದರೆಡ್ಡಿ. ಕನ್ನಗಿಯ ಹೆಬ್ಬೆರಳು ಗುರುತು ನೀವು ತೆಗೆದುಕೊಂಡು ಹೋದ ಗಾಜಿನ ಟಂಬ್ಲರ್ ಮೇಲಿದೆ. ಕಾಮಿನಿಯ ಹೆಬ್ಬೆರಳು ಗುರುತು ತಾಡಪತ್ರಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿದೆ. ಉಯಿಲು ಮಾಡಿದ ಎರಡು ತಿಂಗಳಿಗೆ ರತ್ತಯ್ಯ ತಾಡಪತ್ರಿಯ ನಾಲ್ಕು ಎಕರೆ ಜಮೀನು ಮಾರಿದಾಗ ಹಾಕಿಸಿದ ಕಾಮಿನಿಯ ಹೆಬ್ಬೆಟ್ಟು ಗುರುತು ಅದು... ಕಾಮಿನಿಯನ್ನು ಆಗಾಗ್ಗೆ ಭೇಟಿ ಮಾಡ್ತಾ ಇದ್ದು, ಹದಿನೈದು ದಿನಗಳ ಹಿಂದೆ ಕನ್ನಗಿಯೊಂದಿಗೆ ಹೆಚ್ಚು ಕಾಲ ಕಳೆದ ಕೊಲಗಾರನನ್ನು ಆಂಧ್ರ ಮಹಿಳಾ ನಿಲಯದ ಮೇಟ್ರನ್ ಚೆನ್ನಾಗಿ ಗುರುತಿಸಬಲ್ಲಳು....ಇಷ್ಟು ಹೇಳಿದ್ದಾಯ್ತು. ಈಗ ಕೊಲೆಗಾರ ತಾನಾಗಿ ಪೊಲೀಸರಿಗೆ ತನ್ನನ್ನು ಒಪ್ಪಿಸಿಕೊಳ್ಳೋದು ಧೂರ್ತತೆಯಲ್ಲೂ ಒಂದು ರೀತಿಯ ಘನತೆ. ಅಂತಹ ಘನತೆ ತೋರಿಸುವುದು ಉಚಿತ..."

ವಕೀಲ ಕಾದು ನಿಂತ. ಹುಬ್ಳಿಕರ್ ಕೊಲೆಗಾರನನ್ನು ಕಾಣಲು ಕಾತರಗೊಂಡ.

ಆದರೆ ಎಲ್ಲಾ ಮುಖಗಳಲ್ಲೂ ಮೌನ ಆತಂಕ.

ಎರಡು ನಿಮಿಷಗಳ ನಂತರ ವಕೀಲ ರಾಗಣ್ಣ ಜೇಬಿನಿಂದ ಚಿಕ್ಕ ಕವರ್ ಎಳೆದ.

"ಇಗೋ ಇಲ್ಲಿದಾನೆ ಕೊಲೆಗಾರ"

ಎಂದು ನಾಲ್ಕೈದು ತಲೆಗೂದಲುಗಳನ್ನು ಬಿಳಿ ಕಾಗದದ ಮೇಲೆ ಹಾಕಿ ಸಾವಧಾನದಿಂದ ನುಡಿದ:

"ಮಿಸ್ಟರ್ ಹುಬ್ಳಿಕರ್, ಇವು ಕೊಲೆಯಾದ ಕನ್ನಗಿಯ ಎಡಗೈ ಮುಷ್ಟಿಯಲ್ಲಿದ್ದ ತಲೆಗೂದಲುಗಳು. ಕೊಲೆಗಾರ ಕತ್ತು ಹಿಸುಕುವಾಗ ಅವಳು ರಕ್ಷಣೆಯ ಹೋರಾಟದಲ್ಲಿ ಅವನ ತಲೆಗೂದಲನ್ನು ಕಿತ್ತಿದಾಳೆ. ಆ ಕೂದಲುಗಳನ್ನ ಅವಳ ಕುಪ್ಪಸದಲ್ಲಿ ಸೇರಿಸಿದ್ದೆ ನಾನು. ಅವು ನಿಮ್ಮ ವಶದಲ್ಲಿವೆ. ಅವುಗಳಿಂದ ಎತ್ತಿಟ್ಟ ನಾಲ್ಕೈದು ರೋಮಗಳು ಇವು. ನಿಮ್ಮ ಟರ್ೖನಿಂಗ್ ಕಾಲೇಜಿನಲ್ಲಿ ಹೇಳಿಕೊಟ್ಟ ರೋಮಶಾಸ್ತ್ರದ ವಿವರಗಳನ್ನು ಸ್ವಲ್ಪ ನೆನಪಿಗೆ ತಂದುಕೊಳ್ಳಿ. ಈ ಕೂದಲನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಒರಟಾದ ಹುಲ್ಲು ಕಡ್ಡಿಯ ಹಾಗೆ ಕಾಣುತ್ತೆ. ಒಂದು ತುದಿ ಕತ್ತರಿಸಿದೆ. ಕೊಲೆಗಾರ ಸುಮಾರು ಹದಿನೈದು ದಿನಗಳ ಹಿಂದೆ ಕ್ಷೌರ ಮಾಡಿಸಿಕೊಂಡಿದಾನೆ. ಕೂದಲು ತುಸು ನರೆತಿದೆ. ಆದರೆ ಬಣ್ಣದ ಕೋಶಗಳು ಅಚ್ಚ ಕಪ್ಪುಬಣ್ಣದಲ್ಲಿವೆ. ಅಂದರೆ ಆಸಾಮಿಯ ತಲೆ ಇದೇ ನರೆಯಲು ಪ್ರಾರಂಭವಾಗಿದೆ. ವಯಸ್ಸು ಸುಮಾರು ನಲವತ್ತು ಎಂದು ನಿಗದಿ ಮಾಡೋಣ. ಕೂದಲುಗಳಿಗೆ ಕೃತಕ ಬಣ್ಣವನ್ನು ಲೇಪಿಸಿದ್ದಾನೆ....ಕೂದಲಿನ ಬುಡಗಳು ಮರಳಿನ ಬುರುಡೆಗಳಂತೆ ಕಾಣುತ್ತವೆ. ಅಂದರೆ ಮನುಷ್ಯ ಚೆನ್ನಾಗಿ ಬೆವರುತ್ತಾನೆ. ಕೂದಲಿನ ಬುಡಗಳು ಸ್ವಭಾವತಃ ಬೆವರನ್ನು ಅಧಿಕವಾಗಿ ಹೀರುವುದಾದರೂ, ಇಲ್ಲಿ ಬೆವರನ್ನು ಅಧಿಕವಾಗಿ ಹೀರಿದಂತೆ ಕಾಣುವುದಿಲ್ಲ. ಅರ್ಥಾತ್ ಆಸಾಮಿಯ ಬಕ್ಕತಲೆಯ ಅಂಚಿನ ಕೂದಲುಗಳು ಇವು. ಕೂದಲುಗಳು ಸಾಧ್ಯವಾದಮಟ್ಟಿಗೆ ತಮ್ಮ ಒಡೆಯನ ಕಡೆ ಕಥೆ ಹೇಳಿ ಕೈ ತೋರುತ್ತಾ ಇವೆ. ಜೊಡಿ ಕೊಲೆ ಮಾಡಿರುವ ವ್ಯಕ್ತಿ ಸುಮಾರು ನಲವತ್ತು ವರ್ಷದವನು. ಮುಂದಲೆಯ ಎಡ ಭಾಗ ಬಕ್ಕವಾಗಿವೆ. ಪ್ರಾರಂಭವಾಗಿರುವ ನರೆಗೂದಲಿಗೆ ಬಣ್ಣ ಹಚ್ಚಿದಾನೆ. ಕ್ಷೌರ ಮಾಡಿ ಹದಿನೈದು ದಿನ ಆಗಿರಬಹುದು. ಮೇಲಾಗಿ ಬೆಂಗಳೂರಿನ ತಂಪು ಹವೆಯಲ್ಲೂ ವಿಪರೀತವಾಗಿ ಬೆದರುವ ಸ್ಥೂಲಕಾಯದವನು...."

ವಕೀಲ ತಲೆ ಎತ್ತಿ ನಸುನಗುತ್ತಲೇ, ಕುರ್ಚಿಯಿಂದ ಎದ್ದ ಕೋಟಯ್ಯ ನಿಧಾನವಾಗಿ ಮುಂದೆ ಬಂದು ಇನ್ಸ್‌ಪೆಕ್ಟರ್ ಹುಬ್ಳಿಕರ್‌ನತ್ತ ಎರಡು ಕೈಗಳನ್ನೂ ಚಾಚಿ ನಿಂತ.

"ನನ್ನ ಕೋಟಯ್ಯ ಕೊಲೆಗಾರ!"

ಎಂದು ವೇಮರೆಡ್ಡಿ ಅತೀವ ಆಯಾಸದಲ್ಲಿ ಕುರ್ಚಿಯಲ್ಲಿ ಕುಸಿದ.

11

ಪೊಲೀಸ್ ಇನ್ಸ್‌ಪೆಕ್ಟರ್ ಹುಬ್ಳಿಕರ್ ರಂಗಣ್ಣನ ಲಟಾರಿ ಲ್ಯಾಂಡ್‌ಮಾಸ್ಟರ್‌ನಲ್ಲಿ ವೆಂಕೋಬನೊಂದಿಗೆ ಕುಳಿತು ರಾಜ್ಯ ಗೆದ್ದವನಂತೆ ಉದ್ದನೆಯ ಚುಟ್ಟ ಹೊತ್ತಿಸಿದ.

"ತುರ್ತಿನ ಫೋನ್ ಸೂಚನೆ ಕೊಟ್ಟು ಅರ್ಧ ಗಂಟೆ ಆಯ್ತು. ಈ ಹೊತ್ತಿಗೆ ಅನಂತಪುರದಲ್ಲಿ ಅಡ್ವೋಕೇಟ್ ವೆಂಕಟೇಶರಾವುನ ದಸ್ತಗಿರಿ ಆಗಿರಬೇಕು..."

ವೆಂಕೋಬ ಚಾರ್‌ಮಿನಾರ್ ಸಿಗರೇಟು ತುಟಿಗಿಟ್ಟ.

"ಪಾತಕ್ಕ ಜಯನಗರದ ಸ್ಟೇಷನ್ ಸೇರಿ ಒಂದು ಗಂಟೆ ಆಗಿರಬೇಕು" ಎಂದ.

ಕಾರು ಸಾಕಷ್ಟು ಶಬ್ದದೊಂದಿಗೆ 'ರೆಡ್‌ಫಾಕ್ಸ್' ಹೋಟೆಲ್ ಸೇರಿತು. ಸೋಫಾದ ತುಂಬ ಆ ಆರಾಮವಾಗಿ ಒರಗಿದ ರಾಗಣ್ಣ ಪತ್ತೇದಾರಿಯ ವಿವರ ಪ್ರಾರಂಭಿಸಿದ.

"ವೇಮರೆಡ್ಡಿಗೆ ವಿಪರೀತ ಕೋಪ, ದುಡುಕು. ನಾನು ಈವರೆಗೆ ಅವನಿಂದ ನಾಲ್ಕು ಮಾತಿನ ಹೇಳಿಕೆ ಪಡೆಯೋಕೆ ಸಾಧ್ಯವಾಗಲಿಲ್ಲ. ನನ್ನ ಮಾತು ಕೇಳಿಸುವಷ್ಟು ಅವಕಾಶ ಇದ್ದಿದ್ರೆ ಪತ್ತೆ ಕೆಲಸ ಇನ್ನೂ ಸುಲಭವಾಗ್ತಿತ್ತು. ಅವನು ಕಾಮಿನಿಯ ಆಸ್ತಿಗೆ ನಿರ್ವಾಹಕನಾದ ದಿನದಿಂದಲೇ ಕೋಟಯ್ಯನಿಗೆ ಒಳಗುದಿ. ರತ್ತಯ್ಯನಿಂದ ಚೂರು ಆಸ್ತಿ ಪಡೆಯದೆ ಪಾತಕ್ಕ ಕಂಗಾಲಾಗಿದ್ದಳು. ರತ್ತಯ್ಯ ಸಾಯುವವರೆಗೆ ಸುಮ್ಮನಿದ್ದು ಕೋಟಯ್ಯ ಪಾತಕ್ಕನೊಂದಿಗೆ ಸಂಚುಹೂಡಿದ. ಅದಕ್ಕೆ ವೆಂಕಟೇಶರಾವು ಸೇರಲಾಗಿ ಎರಡನೆ ಖೋಟಾ ಉಯಿಲು ತಯಾರಾಯಿತು. ಅದಕ್ಕೆ ತಕ್ಕಹಾಗೆ ರತ್ತಯ್ಯನ ಉಯಿಲು ರಿಜಿಸ್ಟರ್ ಆಗಿರಲಿಲ್ಲ. ಪಾತಕ್ಕ ಅರ್ಧ ಆಸ್ತಿ ಪಡೆದರೆ ಮೂವರೂ ಸಮನಾಗಿ ಲಾಭ ಪಡೆಯಬೇಕೆಂಬ ಒಪ್ಪಂದವಾಗಿತ್ತಂತೆ. ಎರಡನೆ ಉಯಿಲಿನ ಬಗ್ಗೆ ಏಕಾಏಕಿ ತಿಳಿದಾದ ವೇಮರೆಡ್ಡಿ ತಬ್ಬಿಬ್ಬಾದ. ರತ್ತಯ್ಯನನ್ನು ಶಪಿಸಿದ. ಹೊಸ ಉಯಿಲಿನಲ್ಲಿ ಕೋಟಯ್ಯ ಆಸ್ತಿಯ ನಿರ್ವಾಹಕನೆಂದು ಸೂಚಿಸಿದ್ದಲ್ಲಿ ಅವನ ಮೇಲೆ ಸಂಶಯ ಬರ್ತಿತ್ತು. ಕೋಟಯ್ಯನ ವಿಷಯದಲ್ಲಿ ವೇಮರೆಡ್ಡಿಗೆ ಸಂಶಯವಿದ್ದರೂ ಹೊಸ ಉಯಿಲಿನಿಂದಾಗಿ ಸಂದೇಹ ತಟ್ಟಲು ಕಾರಣವಿರಲಿಲ್ಲ.

ರತ್ತಯ್ಯನ ವೇಶ್ಯೆ ಪಾತಕ್ಕನಿಗೆ ಅರ್ಧ ಆಸ್ತಿ ಸೇರುವಂತಾದಾಗ ವೇಮರೆಡ್ಡಿ ಅತೀವ ಬೇಸರಗೊಂಡ. ಪಾತಕ್ಕನಿಗೆ ಬುದ್ಧಿಭ್ರಮಣೆ ಎಂಬುದಾಗಿ ರುಜುವಾತು ಮಾಡಿ ಕಾಮಿನಿಗೆ ಪೂರ್ಣ ಆಸ್ತಿಯ ಹಕ್ಕು ಕೊಡಿಸುವ ಪ್ರಾಮಾಣಿಕ ಯತ್ನ ಅವನದು. ಕೋಟಯ್ಯ ಖೋಟಾ ಉಯಿಲಿನಿಂದ ಪಾತಕ್ಕನ ಮೂಲಕ ಲಾಭ ಪಡೆಯುವ ಸನ್ನಾಹ ಮೊದಲು ಮಾಡಿದ. ನಂತರ ಈಚೆಗೆ ಒಂದು ತಿಂಗಳ ಹಿಂದೆ ಕಾಮಿನಿಯ ನಿರ್ಧಾರದಿಂದ ಸಂಚಿನ ಬೆಟ್ಟವನ್ನು ಏರಿದ. ಕಾಮಿನಿ ಸಭಾಪತಿಯನ್ನು ಮದುವೆಯಾಗುವುದು ಅವನಿಗೆ ಅನಿರೀಕ್ಷಿತ. ಮದುವೆಯೊಡನೆ ಅವಳಿಗೆ ಆಸ್ತಿಯ ಮೇಲಿನ ಹಕ್ಕು ಜಾರಿಗೆ ಬರುತ್ತದೆ. ನಂತರ ಪಾತಕ್ಕನ ಹಕ್ಕು ರುಜುವಾತಾದರೆ ಸಂಚು ಸರಿಹೋಗುವ ಸಂಭವವಿದೆ."

"ಕೋಟಯ್ಯನಿಗೆ ಆಗ ಮಿದುಳಿನಲ್ಲಿ ಅಲೆ ಎದ್ದಿತು. ಕಾಮಿನಿಯ ಕೊಲೆ!"

ವೆಂಕೋಬ ಸೀನಿಯರ್‌ನ ವರದಿಗೆ ಪುಟಕೊಡುವಂತೆ ಹೇಳಿ ವಿಸ್ಕಿಗೆ ಸೋಡ ಸುರಿದ.

"ಕಾಮಿನಿಯ ಕೊಲೆಯಿಂದ ಖೋಟಾ ಉಯಿಲು ಪಾತಕ್ಕನಿಗೆ ಪೂರ್ಣ ಆಸ್ತಿಯ ಹಕ್ಕು ದೊರಕಿಸುತ್ತೆ. ಆದರೆ ಕಾಮಿನಿಯ ಕೊಲೆಯಿಂದ ಸಂಶಯ ಬರುವುದು ಪ್ರಥಮತಃ ಕೋಟಯ್ಯನ ಮೇಲೆ ಹಾಗೂ ಪಾತಕ್ಕಳ ಮೇಲೆ. ಅದಕ್ಕಾಗಿ ಕೋಟಯ್ಯ

ದೀರ್ಘವಾಗದ ಕ್ರಮಕ್ಕೆ ಬುದ್ಧಿ ಹೂಡ ಬೇಕಾಯ್ತು. ಕಾಮಿನಿಯನ್ನು ಮದ್ರಾಸಿನಲ್ಲಿ ಕೊಲೆ ಮಾಡಿದ. ಬಹುಶಃ ಕುತ್ತಿಗೆ ಹಿಸುಕಿ ಹತ್ಯೆ ನಡೆಸಿರಬೇಕು. ದೇಹವನ್ನು ಕೊನೆಗಾಣಿಸಲು ಸಮುದ್ರದ ನೆರವು ಪಡೆದಿರಬೇಕು. ಕಾಮಿನಿ ಮಹಿಳಾ ನಿಲಯದಿಂದ ಓಡಿದಳೆಂಬ ಸುದ್ಧಿ ವೇಮರೆಡ್ಡಿಗೆ ಬಂತು. ನಂತರ ಕೋಟಯ್ಯ ಅದೇ ನಿಲಯದ ಕನ್ನಗಿಯನ್ನು ಹಿಡಿದ..."

ಹಬಿಕರ್ ಮಾತು ಕೂಡಿಸಿದ.

"ಕಾಮಿನಿಯಷ್ಟೇ ಎತ್ತರ, ಗಾತ್ರ, ಬಣ್ಣದಲ್ಲಿದ್ದ ಕನ್ನಗಿಗೆ ಹಣದ ಆಸೆ ತೋರಿಸಿ ನಾಟಕಕ್ಕೆ ಹೂಡಿದ."

"ಹೌದು, ಕಾಮಿನಿಯಂತೆ ನಟಿಸಲು ತರಬೇತಿ ನೀಡಿದ. ಕಾಮಿನಿ ಬಳಸುತ್ತಿದ್ದ ಉಡುಪು, ಇಂಟಿಮೇಟ್‌ನ ಸುಗಂಧ, ಕಿವಿಯ ಹರಳಿನ ಕ್ಷತ್ರ, ಕುತ್ತಿಗೆಯ ಚಿನ್ನದ ಸರ, ಕಪ್ಪು ಡಯಲ್‌ನ ಗಡಿಯಾರ, ಹಸಿರು ಕುಂಕು, ಎರಡು ಜಡೆ, ಕನ್ನಗಿಯನ್ನು ಕಾಮಿನಿಯಾಗಿ ರೂಪಿಸಿದವು. ಅವಳು ಕೊಲೆಯಾಗುವವರೆಗೆ ಅವನು ಮರೆತ ಒಂದೇ ಒಂದು ಅಂಶ ಕಂದು ಮಚ್ಚೆ!"

"ಅದಕ್ಕಾಗಿ ಅವನು ಅಗಾಧ ಜುಲ್ಮಾನೆ ಕೊಡಬೇಕಾಯ್ತು."

ಜೂನಿಯರ್ ವಕೀಲ ಹುಬ್ಲಿಕರ್‌ನ ಟಂಬ್ಲರ್‌ಗೆ ಕೈ ಹಾಕಿದ.

"ಕೊಲೆಯ ನಾಟಕಕ್ಕೆ ನಾನು ಸೂಕ್ತ ಯಜ್ಞಪಶುವಾಗಿ ಸಿಕ್ಕಿದೆ ನನ್ನ ನವ್ಯ ನಾಟಕದಿಂದ ವೇಮರೆಡ್ಡಿಯ ಕಣ್ಣಲ್ಲಿ ನಾನು ಬಂಡುಕೋರನಾಗಿದ್ದೆ. ಕನ್ನಗಿ ರಾಜಾರಾಮನ ನೃತ್ಯಶಾಲೆ ಸೇರಿದಳು. ನೃತ್ಯಪ್ರದರ್ಶನಕ್ಕೆ ನಾನು, ರೆಡ್ಡಿ ಬರುವಂತೆ ಮಾಡಿದ, ಕೋಟಯ್ಯ. ಕಾಮಿನಿ ಇನ್ನೂ ಬದುಕಿದ್ದಾಳೆಂಬ ಅಭಿಪ್ರಾಯ ರೆಡ್ಡಿಯ ಮನಸ್ಸಿನಲ್ಲಿ ಮೂಡಿಸುವುದು ಅವನ ಉದ್ದೇಶ. ಆ ದಿನ ಪ್ರದರ್ಶನದಿಂದ ಕನ್ನಗಿಗೆ ಮಾಯವಾಗುವಂತೆ ಸೂಚಿಸಿದವನೂ ಅವನೇ. ನಂತರ ಸೋಮವಾರ ನನ್ನ ಮನೆಯಲ್ಲಿ ಆಡುವ ನಾಟಕಕ್ಕೆ ತರಬೇತಿ ನೀಡಿದ. ವೇಮರೆಡ್ಡಿಗೆ ನನ್ನ ಮನೆಗೆ ಬರುವಂತೆ ಫೋನ್ ಕರೆಕೊಟ್ಟು, ನಂತರ ನನ್ನ ಮನೆಯಲ್ಲಿಯೇ ಅವಳನ್ನು ಕೊಲೆ ಮಾಡಿದ. ಅದರಿಂದಾಗಿ ಆಪಾದನೆ ನನ್ನತ್ತ ಹರಿದು ಅವನು ಸಂಶಯದಿಂದ ಅತಿ ದೂರಕ್ಕೆ ಸರಿದುಹೋದ. ರೆಡ್ಡಿ ನನ್ನ ಮನೆಗೆ ಬಂದಾಗ ಅವಳು ಹೊಗೆ ಗೂಡಿನಲ್ಲಿ ಅವಿತುಕೊಳ್ಳಲು ಅವನದೇ ಸೂಚನೆ.

"ಕಾಮಿನಿಯ ಹೆಸರಿನ ಕನ್ನಗಿ ನಿಮ್ಮಲ್ಲಿ ಬಂದಾಗ ಯಾವ ಸಂಶಯವೂ ತಟ್ಟಲಿಲ್ಲವೆ?" ಹುಬ್ಲಿಕರ್ ಪ್ರಶ್ನಿಸಿದ.

ಸಂಶಯಕ್ಕೂ ಮಿಗಿಲಾಗಿ ಅರ್ಥವಾಗದ ಪರಿಸ್ಥಿತಿಗೆ ಸಿಕ್ಕಿದ್ದೆ. ಅವಳು ಪರಿಚಿತಳಂತೆ ಬೆಡ್‌ರೂಂ ಮಂಚದ ಮೇಲೆ ಕಾಲು ಚಾಚಿದ್ದು, ಸ್ವೇಚ್ಛೆಯಾಗಿ ಓಡಾಡಿದ್ದು, ರೆಡ್ಡಿ ಬರುವವರೆಗೆ ಏನೇನೊ ಮಾತನಾಡಿ ಕಾಲ ಕಳೆದಿದ್ದು, ದಿಟ್ಟತನದಿಂದ ಹೊಗೆ ಗೂಡಿನಲ್ಲಿ ಸೇರಿದ್ದು, ನನ್ನ ಬೆಪ್ಪು ಮಾಡಿದವು. ತುಸು ಸಂಶಯ ತಲೆಗೆ ಹತ್ತಿದ್ದರಿಂದಲೇ

ಅವಳ ಶವವನ್ನು ಮರುದಿನದವರೆಗೆ ರಕ್ಷಿಸಲು ಕೈ ಹಚ್ಚಿದ್ದು."

"ಪತ್ತೆದಾರಿಗೆ ಮೊದಲ ಸುಳಿವು ಎಲ್ಲಿ ಸಿಕ್ಕಿತು?"

"ಶವದ ಎಡಗೈಲಿ ಹಿಡಿದಿದ್ದ ತಲೆಗೂದಲು. ಮಾರನೆಯ ದಿನ ಶವದ ಕೈಗಡಿಯಾರದ ಡಯಲ್ ಒಳಮುಖವಾಗಿ ತಿರುಗಿಕೊಂಡಿದ್ದು. ಅದರಡಿಯ ಕಂದು ಮಚ್ಚೆ... ಪಾತಕ್ಕಳಿಗೆ ಸುಳ್ಳು ಹೇಳಿ ಪಡೆದ ಖೋಟಾ ಉಯಿಲು, ಆಮೇಲೆ ಮದ್ರಾಸ್, ಅನಂತಪುರ, ತಾಡಪತ್ರಿಯಲ್ಲಿ ವಿಷಯಗಳ ಶೋಧನೆ."

"ಸದ್ಯ, ಪಕ್ಷಿ ಶಕುನ ಪೂರ್ತಿಯಾಗಿ, ನಮ್ಮ ಸೀನಿಯರ್‌ಗೆ ಅನಿಷ್ಟ ಕಳೀತು" ವೆಂಕೋಬ ಟಂಬ್ಲರ್ ಪೂರ್ತಿಯಾಗಿ ಬಾಯಿಗೆ ಸುರಿದುಕೊಂಡ.

"ಅನಿಷ್ಟ ನೀನೇ! ಹೊಗೆ ಗೂಡಿನ ವಿಷಯ ಈ ನಾಟಕದೋರ ಮುಂದೆ ನೀನು ಬಾಯಿ ಬಿಡದೆ ಇದ್ದಿದ್ರೆ... ಎಳಸು! ಬಚ್ಚಾ!"

"ನೀವು ಆ ರಾತ್ರಿ ಪೂನಾ ಮೈಲ್ ಹತ್ತಿರಕ್ಕೆ ಹೋಗದೆ ಇದ್ದಿದ್ರೆ... ಆಮೇಲೆ ನಾನು ನಿಮ್ಮಲ್ಲಿಗೆ ಬರದೆ ಇದ್ದಿದ್ರೆ... ಯಾರಿಗೆ ಗೊತ್ತು, ಹಳೆ ಹುಲಿಯೇ ಕೊಲೆಗಾರ ಅನ್ನಿಸಿಕೊಂಡುಬಿಡ್ತಿದ್ರೇನೋ!"

ಆರಿದ ಲಾಂದ್ರ

1

ಅರ್ಧ ನಿಮಿಷ ಕತ್ತಲಿನಲ್ಲಿ ಕಣ್ಣು ಮುಚ್ಚಿ ಕುರ್ಚಿ ಒರಗಿದ ಸಬ್ ಇನ್ಸ್‌ಪೆಕ್ಟರ್ ದಿವಾಕರ ಮೇಜಿಗೆ ಪೆನ್ ಕುಟ್ಟಿ ಮುಖ ಸವರಿಕೊಮಡ.

"ಪ್ರತಿ ಶನಿವಾರ ದೀಪ ಹೋಗೋದು ನಮ್ಮೂರಿಗೆ ಮಾತ್ರನೊ, ಬೇರೆ ಕಡೆಗೂ ಉಂಟೊ ಅಂತ. ಲೆಕ್ಕಕ್ಕೆ ಶನಿವಾರ ಅಂತ. ಮುರು ಮೂರು ದಿನಕ್ಕೂ ಇದೊಂದು ಗೋಳು."

ವಿದ್ಯುತ್ ಉಳಿತಾಯಕ್ಕೆ ಇಲಾಖೆಯವರು ಜಾಲನೂರು ಮತ್ತು ಸುತ್ತಲಿನ ಗ್ರಾಮಗಳ ದೀಪಗಳನ್ನು ಸಂಜೆ ಆರೂವರೆಗೆ ಸರಿಯಾಗಿ ಆರಿಸಿದ್ದರು.

ಸ್ಪಷ್ಟವಾಗಿ ಕಾಣದ ಸಾಹೇಬನ ಕಹಿ ಮುಖದ ಚರ್ಯೆಯನ್ನು ತನ್ನಲ್ಲೆ ಚಿತ್ರಿಸಿಕೊಂಡ ಗೋಡೆಗೆ ನಿಂತಿದ್ದ ದಫೇದಾರ್ ನಂದೀಶ ಮುಖ ನೇರಗೊಳಿಸಿ ಹೇಳಿದ.

"ಸದ್ಯಕ್ಕೆ ನಮ್ಮೂರಿಗೆ ಮಾತ್ರ ಇದು. ಮಳೆ ಹುಯ್ಯೋತನಕ ಇದೇ ಕಣ್ಣುಮುಚ್ಚಾಲೆ ಆಟ, ಸ್ವಾಮಿ. ಆ ಮಳೆಯೂ ಲಿಂಗನಮಕ್ಕಿ ಹತ್ರಾನೇ ಆಗ್ಬೇಕು ನೊಡಿ. ಎಂಟು ಗಂಟೆಯವರೆಗೆ ಸ್ಟೇಷನ್ ಕಗ್ಗಾಡು."

"ಅಂಧೇರಿ ನಗರಿ!" ಬೇಸರದಿಂದ ಆಕಳಿಸಿದ.

"ಚೌಪಟ್ ರಾಜ!" ಕೊಂಡಿ ಹಾಕಿದಂತೆ ಪ್ರತಿ ಹೇಳಿದ ದಫೇದಾರ.

"ಯಾರೋ ಚೌಪಟ್ ರಾಜ?" ಕತ್ತಲೆಯಲ್ಲಿ ತೂರಿತು ಗದರಿಕೆಯ ಪ್ರಶ್ನೆ.

"ನಿಮ್ಮ ಸಾಹೇಬ್ರು, ಸ್ವಾಮಿ. ಆಡು ಮಾತು ಹೇಳ್ದೆ... ಇಲ್ಲೇನು ಮಾಡ್ತೀರಿ, ಸಿನಿಮಾಕ್ಕಾದ್ರೂ ಹೋಗ್ಬನ್ನಿ... ಓ, ಅಲ್ಲೂ ಕರೆಂಟ್ ಇರೋದಿಲ್ಲ."

ಬೂಟು ಕಟಕಟಿಸುತ್ತಾ ಕತ್ತಲಿನಲ್ಲಿ ಹೊರಕ್ಕೆ ನಡೆದ ದಿವಾಕರ....

"ದೀಪ ಹೋಗೋದು ನಮ್ಮನೆಗೆ ಮಾತ್ರನೋ. ಬೇರೆ ಮನೆಗೂ ಉಂಟೊ....?"

ಸಿಟ್ಟಿನಲ್ಲಿ ಗೊಣಗಿದ ದಿವಾಕರ. ಸ್ವಿಚ್ ಒತ್ತಿದಾಗ ದೀಪ ಬಂದಿರಲಿಲ್ಲ. ಸುಖ ನಿದ್ರೆಗೆ ಭಂಗವಾಗಿತ್ತು. ಸೊಳ್ಳೆ ಪರದೆ ತೂರಿ ಬರುತ್ತಿತ್ತು ಹೆಂಡತಿಯ ಗೊರಕೆ. ಹೊಳೆಯುವ ಮುಳ್ಳುಗಳ ಕೈಗಡಿಯಾರ ಹನ್ನೆರಡು ಗಂಟೆ ಏಳು ನಿಮಿಷ ತೋರಿತು.

"ಸ್ವಾಮಿ...," ಹೊರಗಿನಿಂದ ಎರಡನೆ ಸಾರಿ ಕರೆ ಬಂತು.

"ಸ್ವಲ್ಪ ಉಸಿರು ಬಿಟ್ಟು ನಿಂತ್ಕೊಳ್ಳೊ, ನಂದೀಶ. ನೀನು ಕೂಗಿದ್ದು ಕೇಳ್ತು. ಮತ್ತೆ ದೀಪ ಹೋಗ್ಬಿಟ್ಟಿದೆ."

ಬಾಗಿಲು ತೆರೆದು ನಿಂತ ದಿವಾಕರ ದೂರದ ಮನೆಯ ದೀಪ ನೋಡಿ ಕೊರಗು ಸ್ವರ ಎತ್ತಿದ.

"ಎಂಟಕ್ಕೆ ಬಂದಿದ್ದ ದೀಪ ಈಗ ನನ್ನ ಮನೇಲಿ ಮಾತ್ರ ಹೋಗಿದೆ."

ಬಲಕ್ಕೆ ನೋಡಿದಾಗ ತೆಂಗಿನ ಸೋಗೆ ಕಾಣಿಸಿತು. ಮನೆಗೆ ಸೇರಿದ ವಿದ್ಯುತ್ ತಂತಿ ಕಡಿದು ಹೋಗಿತ್ತು. ಹಿಂದಕ್ಕೆ ಸರಿದು ಗಾಬರಿಯಿಂದ ಹೇಳಿದ.

"ದೂರ ನಿಲ್ಲೊ. ಆ ತಂತಿ ಒಳಗೆ ಕರೆಂಟ್ ಹರೀತಾ ಇದೆಯೊ ಏನೊ, ಲೈಟ್ ಆಫೀಸ್‌ಗೆ ಫೋನ್ ಮಾಡು."

"ಫೋನ್ ಬಂದಿದೆ ಚಾಮಗೆರೆ ಬಿಳಿಗೌಡರಿಂದ. ನೀವು ಈಗ್ಲೇ ಬರಬೇಕಂತೆ."

"ಯಾರು ಸತ್ತರಂತೆ?"

"ಅದು ನೆಟ್ಟಗೆ ಹೇಳ್ಲಿಲ್ಲ. ಸತ್ತಿರಬೋದು ಅಂದ್ರು."

ಅಧಿಕಾರಿಗೆ ನರಗಳು ಸೆಟೆದವು.

"ಏನೊ ಹಾಗಂದ್ರೆ?"

"ಗೌಡರು ಹೇಳಿದ್ದು ಅಷ್ಟೇ, ಮನೆ ಜನವೆಲ್ಲಾ ಹೆದರಿ ಕೂತುಬಿಟ್ಟಿದ್ದಾರಂತೆ. ಆಸಾಮಿ ದೆವ್ವದ ಕೋಣೇಲಿ ಸತ್ತಿರಬಹುದು ಅಂತಾರೆ."

"ಹಾಗೆ ಜನ ಸಾಯೊ ಕಡೆಗೆಲ್ಲಾ ಪೋಲೀಸ್ ಹೋಗೋದಾದ್ರೆ ಒಂದೊಂದು ರೇಂಜ್ ಸ್ಟೇಷನ್‌ಗೂ ಹತ್ತು ಸಬ್ ಇನ್ಸ್‌ಪೆಕ್ಟರ್ ಬೇಕಾಗ್ತಾರೆ."

"ಸಾಯೋಕೆ ಸಿದ್ಧವಾಗಿ ಹಟದೋನು ಸತ್ತೇ ಹೋಗಿರಬಹುದೂಂತ"

ರೋಸಿದ ದಿವಾಕರ.

"ಯಾರೂಂದೆ?"

"ಅದೇ ಸತ್ತಿರೊ ಆಸಾಮಿ"

"ತಲೇಲಿ ಮಣ್ಣಿದೆಯೇನು ಆ ಗೌಡನಿಗೆ. ಯಾವನೊ ಅವನ ಮನೇಲಿ ಸತ್ತರೆ

ಈ ಹೊತ್ನಲ್ಲಿ ನನ್ನ ಯಾಕಯ್ಯ ಕರೆಸೋದು. ಅದೂ ಸತ್ತಿರೋದು ಗ್ಯಾರಂಟಿ ಇಲ್ಲ. ನೀನೇ ಹೋಗು ಬೇಕಾದ್ರೆ" ಕಣ್ಣುಜ್ಜಿದ ಸಬ್ ಇನ್ಸ್‌ಪೆಕ್ಟರ್.

"ಗೌಡರು..."

"ಗೌಡ ಅನ್ನೋ ಸಾಕು" ಗಂಟಲು ಏರಿತ್ತು.

"ಗೌಡ ನೀವೇ ಬರಬೇಕೂಂತ ತಿಳ್ಸಿದಾನೆ. ತರಲೆ ಮನುಷ್ಯ. ನೇರವಾಗಿ ಡಿ.ಐ.ಜಿ. ಹತ್ರ ಹೋಗ್ತಾನೆ."

ಮತ್ತೆ ಗದರಲಿಲ್ಲ ದಿವಾಕರ. ಹರಿದು ಬಿದ್ದ ತಂತಿ ಬಗ್ಗೆ ವಿದ್ಯುತ್ ಇಲಾಖೆಗೆ ಫೋನ್ ಮಾಡಿ, ಮನೆಯ ಹತ್ತಿರ ಒಬ್ಬ ಕಾನ್ಸ್‌ಟೇಬಲ್‌ನನ್ನು ಇರಿಸಿ ನಂದೀಶನೊಂದಿಗೆ ಮೋಟಾರ್ ಸೈಕಲ್ ಹತ್ತುವ ವೇಳೆಗೆ ರಾತ್ರಿಯ ಹನ್ನೆರಡು ಗಂಟೆ ಇಪ್ಪತ್ತು ನಿಮಿಷ ದಾಟಿತ್ತು.

"ದೆವ್ವದ ಕೋಣೆ ಸೇರಿದ ಮೇಲೆ ಸತ್ತೇ ಹೋಗಿರ್ಬೇಕು ಆ ಮನುಷ್ಯ. ಯಾರ ಮೇಲೂ ನಾವು ಚಾರ್ಜ್‌ಷೀಟ್ ಹಾಕೊ ಚಿಂತೆ ಇರೋದಿಲ್ಲ... ನಂಗೊತ್ತು ನೀವು ದೆವ್ವ ಅಂದ್ರೆ ನಂಬೋದಿಲ್ಲ. ನಾನು ದೆವ್ವದ ಆಟ ನೋಡಿದೀನಿ, ಬಹಳ ಮಂದಿ ಆಡೋ ಮಾತು ಸುಳ್ಳಾಗಿರೋದಿಲ್ಲ, ಸ್ವಾಮಿ."

ಗ್ರಾಮದ ಕಡೆ ವೇಗವಾಗಿ ಸಾಗುತ್ತಿದ್ದಾಗ ನಂದೀಶ ಸಾಹೇಬನ ಕಿವಿ ಕಡೆ ಬಾಗಿ ಹೇಳಿದ. ಸಾಹೇಬ ಅಸಡ್ಡೆಯಲ್ಲಿ 'ಹುಂ' ಎಂದರೂ ಜಗ್ಗದೆ ಮಾತಿನ ಚಪಲ ತೀರಿಸಿಕೊಂಡ.

"ಬಿಳಿಗೌಡನಿಗೆ ಚೆಂದಾಗಿರೋ ಎರಡು ಹೆಣ್ಣು ಮಕ್ಕಳು. ಒಬ್ಬಳು ಪುಷ್ಪಲತಾ ಮತ್ತೊಬ್ಬಳು ಸ್ನೇಹಲತಾ"

ವಾಹನದ ವೇಗ ಏಕದಂ ಕುಗ್ಗಿತು. ದಿವಾಕರ ಅವನನ್ನು ಮೊಳಕೈ ನಿಂದ ತಿವಿದ.

"ಯಾಕೆ? ಗೌಡನಿಗೆ ಹೆಣ್ಣು ಮಕ್ಕಳು ಇರಬಾರದಾ?"

"ಹಾಗಲ್ಲ ಸ್ವಾಮಿ. ತಿಮ್ಮಿ, ವೆಂಕಟಿ, ಬೋರಿ ಅನ್ನೋ ಹೆಸರುಗಳ ಮಧ್ಯೆ ಎಂತಾ ಇಂಪಾದ ಹೆಸರುಗಳು! ಹೆಣ್ಣು ಮಕ್ಕಳಿಬ್ರೂ ಸಿಟೀಲಿ ಕಾಲೇಜು ಓದ್ದೋರು. ಅಪ್ಪ ಅಮ್ಮ ಇಟ್ಟ ಹೆಸರು ಬಿಟ್ಟು ಈ ಹೆಸರು ಇಟ್ಕೊಂಡಿರಬೇಕು ಅನ್ನೋಣ. ಮೊದಲನೆಯೋಳು ಸದ್ಯಕ್ಕೆ ಮದುವೆ ಬೇಡ ಅಂದ್ಲಂತೆ. ಕಿರಿಯೋಳಿಗೆ ಅಪ್ಪ ಗಂಡು ಹುಡುಕಿದಾನೆ. ಆದ್ರೆ ಅವಳು ಬೇರೆ ಜಾತಿಯೋನ್ನ ಪ್ರೀತಿಸಿದಾಳಂತೆ."

ಸಬ್ ಇನ್ಸ್‌ಪೆಕ್ಟರ್ ಮತ್ತೆ ತನ್ನ ಗಾಂಭೀರ್ಯ ತಳೆದ.

"ಈಗ ಯಾಕೆ ಈ ಕಥೆ ತೆಗಿತಿದೀಯ?"

"ಈಗ ನಾವ ಹೋಗ್ತಾ ಇರೊ ಮನೆ ಸಂಗತಿ ಇದು."

"ಪೂರಾ ಸಾಂಸಾರಿಕ ಮಾತಿಗೆ ಇಳೀಬೇಡ."

ನಂದೀಶ ಎದುರು ಗಾಳಿಯನ್ನು ಪ್ರತಿಭಟಿಸುವಂತೆ ಅವನ ಕಿವಿ ಸಮೀಪಿಸಿ ಗಟ್ಟಿಯಾಗಿ ಹೇಳಿದ.

"ಬಿಳಿಗೌಡನ ಸೋದರತ್ತೆ. ಚೆನ್ನಮ್ಮ ದೆವ್ವ ಆಗಿ ಅವನ ಮನೆ ಹಿಂದೆ ಸೇರಿದಾಳೆ...."

"ಕತ್ತೆಗೆ ಹೇಳು ಈ ಕಥೇನ."

ನಂದೀಶ ಪಟ್ಟು ಬಿಡದೆ ಮೊಟಕಾಗಿ ಕಥೆ ಒಪ್ಪಿಸಿದ.

ಅದು ಐವತ್ತು ವರ್ಷದ ಹಿಂದಿನ ಕಥೆ. ಬಿಳಿಗೌಡನ ತಾತ ನಂಜನಗೂಡು ಕಪಿಲಾ ಹೊಳೆಯ ದಂಡೆಯ ಮೇಲೆ ಜಮೀನು ಹೊಂದಿದ್ದ ಶ್ರೀಮಂತನಂತೆ ಅವನ ಮಗಳು ಚೆನ್ನಮ್ಮ ಹದಿನೈದನೆ ವರ್ಷಕ್ಕೆ ಕಾಲಿಡುತ್ತಲೆ ತಂದೆ ಪಕ್ಕದ ಹಳ್ಳಿಯ ಸ್ನೇಹಿತನ ಮಗನನ್ನು ಮದುವೆ ಗೊತ್ತುಮಾಡಿದ. ಚೆನ್ನಮ್ಮ ಗಂಗಮತದ ಬಿಳಿ ಚೆಲುವನನ್ನು ಗುಟ್ಟಾಗಿ ಪ್ರೇಮಿಸಿದ್ದಳಂತೆ! ಅಂತಸ್ತು, ಜಾತಿ ಎಲ್ಲವೂ ಕೀಳಾದವನನ್ನು ಗೌಡ ಒಪ್ಪುವುದೆಲ್ಲಿ? ಮಗಳು ಮಹಾ ಹಠವಾದಿ. ಗೌಡ ನಂಜನಗೂಡು ಬಿಟ್ಟು ಚಾಮಗೆರೆಗೆ ಬಂದುಬಿಟ್ಟ. ಚೆನ್ನಮ್ಮ ಮದುವೆ ಆಗಲೇ ಇಲ್ಲ. ಮನೆ ಹಿಂದಿನ ಮತ್ತೊಂದು ಕಟ್ಟಡದ ಕೋಣೆಯಲ್ಲಿ ಒಂಟಿಯಾಗಿ ಇರುತ್ತಿದ್ದಳು. ಚಾಮಗೆರೆಗೆ ಬಂದ ಮೂರನೆ ವರ್ಷದಲ್ಲಿ ಸತ್ತುಹೋದಳು. ತಾನು ಸಾಯಲಿರುವ ದಿನವನ್ನು ಖಚಿತವಾಗಿ ತಿಳಿಸಿದ್ದಳಂತೆ. ತಾನಿದ್ದ ಮಹಡಿ ಕೋಣೆಯನ್ನು ಸದಾ ಮುಚ್ಚಿರಬೇಕೆಂದು ಅಪ್ಪಣೆ ಮಾಡಿ ತೀರಿಹೋದಳು. ಪ್ರತಿವರ್ಷ ಉಗಾದಿ ಹಬ್ಬದ ಮರುದಿನ ಮಾತ್ರ ಕೋಣೆ ಬಾಗಿಲು ತೆಗೆಯುವಂತೆ ಸೂಚಿಸಿದ್ದಳು. ಅವಳನ್ನು ಮನೆಯ ಹಿಂದಿನ ಜಮೀನಿನಲ್ಲಿ ಕಿರುನೆಲ್ಲಿ ಗಿಡಕ್ಕೆ ಸಮೀಪವಾಗಿ ಸಮಾಧಿ ಮಾಡಲಾಯಿತು.

ನಾಲ್ಕು ಮೈಲಿ ದೂರದ, ಹತ್ತು ನಿಮಿಷದ ಪ್ರಯಾಣ ಮುಗಿದ ಮೇಲೆ ಚಾಮಗೆರೆ ತಲುಪಿದರು. ಗ್ರಾಮ ಕತ್ತಲಿನಲ್ಲಿ ಮುಳುಗಿತ್ತು. ದೊಡ್ಡ ಬೇಲಿಯ ಚೌಕಟ್ಟಿನ ಹಳೆಯ ಮನೆಯ ಮುಂದೆ ವಾಹನ ನಿಲ್ಲಿಸಿ ಬಾಗಿಲು ತಟ್ಟಿದ ದಿವಾಕರ. ಎರಡನೆ ಸಾರಿ ಬಡಿದ ಮೇಲೆ ಒಳಗಿನ ಬೋಲ್ಟು ಎಳೆದ ಶಬ್ದ ಕೇಳಿಸಿತು. ಬಲಗೈಲಿ ಉದ್ದನೆಯ ಲಾಂದ್ರ ಹಿಡಿದವನು ಕಾಣಿಸಿದ. ಗಾಳಿ ಭರ್ರನೆ ಒಳಕ್ಕೆ ನುಗ್ಗಿತು.

"ಯಾರು?" ಒಳಗಿನವ ಕೇಳಿದ

"ಪೊಲೀಸ್‌ನೋರು ಬಂದಿದೀವಿ ಅಂತ ನಿಮ್ಮ ಗೌಡರಿಗೆ ಹೇಳು" ನಂದೀಶ ಅಧಿಕಾರವಾಣಿ ಹಾಕಿದ.

ಲಾಂದ್ರ ಹಿಡಿದವನು ಭಯ, ಗೌರವದಲ್ಲಿ ಹೆಜ್ಜೆ ಹಿಂದಿಟ್ಟ.

"ನಿಮಗೇ ಕಾಯ್ತಾ ಔರೆ. ಬನ್ನಿ ಒಳಾಕೆ...ನಾನು ಗೌಡ್ರು ಆಳು ದಡಗುಂಟೆ."

ನಾಲ್ಕಾರು ಮೇಣದ ಬತ್ತಿಗಳು ಉರಿಯುತ್ತಿದ್ದ ವಿಶಾಲ ಹಜಾರಕ್ಕೆ ಕರೆದೊಯ್ದು

ಆಳು ಲಾಂದ್ರ ನೆಲಕ್ಕಿಟ್ಟು ಕುರ್ಚಿ ಎಳೆದು ತಂದ.

"ಇಲ್ಲೂ ದೀಪ ಹೋಗಿದೆಯೇ?" ರಾಗವಾಗಿ ಕೇಳಿದ ಎಸ್.ಐ.

"ಉಂ, ಹೋಗ್ತಾನೇ ಇರ್ತದೆ"

ಎಂದು ಲಾಂದ್ರ ಅಲುಗಿಸುತ್ತಾ ಸರಿದುಹೋದ ದಡಗುಂಟೆ ನಿಮಿಷದಲ್ಲಿ ಧಣಿಯನ್ನು ಕರೆತಂದ.

"ನಮಸ್ಕಾರ, ಸಾಹೇಬ್ರೆ. ದೀಪ ಹೋಗ್ಬಿಟ್ಟಿದೆ. ನಿಮಗೇ ಕಾಯ್ತಾ ಇದ್ವಿ... ಬನ್ನಿ, ಇತ್ತ ಕಡೆ."

ಕೈಲಿದ್ದ ಟಾರ್ಚು ಮುಂದು ಮಾಡಿ ಹಿಂಬಾಗಲಿನ ಮೂಲಕ ಹೊರಕ್ಕೆ ಕರೆದೊಯ್ದ.

"ಏನು ವಿಷಯ, ಗೌಡರೆ?" ಮೆಲ್ಲನೆ ಕೇಳದ ದಿವಾಕರ.

"ಪ್ರಮಾದವಾದ ವಿಷಯ! ನಮ್ಮ ಕುಲಕ್ಕೆ ಹತ್ತಿರೊ ಶಾಪದ ಸಂಗತಿ ಗೊತ್ತಲ್ಲ."

"ಗೊತ್ತಿಲ್ಲ" ಎಂದು ಬಯಲಿನ ಜಾಗಕ್ಕೆ ಬಂದ. ಲಾಂದ್ರದ ಆಳು ದೂರಕ್ಕೆ ನಿಂತ.

"ನಿಮಗೆ ಗೊತ್ತಿಲ್ಲವೆ?" ಗೌಡ ದಫೇದಾರನ ಕಡೆ ನೋಡಿದ.

"ಸ್ವಲ್ಪ ಗೊತ್ತಿದೆ."

ನಂದೀಶ ತನ್ನ ಸಾಹೇಬನ ಪಕ್ಕಕ್ಕೆ ಬಂದು ಮೂವತ್ತು ಅಡಿಗಳಷ್ಟು ದೂರದಲ್ಲಿದ್ದ ಒಂದು ಅಂತ್ತಿನ, ತಂಬಾಕು ಬ್ಯಾರನ್‌ನಂತಹ ಹಳೆಯ ಕಟ್ಟಡದ ಮೇಲು ಕೋಣೆ ತೋರಿಸಿದ.

"ಅದೇ ದೆವ್ವದ ಕೋಣೆ ನಾನು ಹೇಳಿದ್ದು.।

ಮೆಲ್ಲನೆ ಹೇಳಿದ. ಬಿಳಿಗೌಡ ಆ ಭಾಗಕ್ಕೆ ಟಾರ್ಚು ಹಾಕಿದ.

"ಯಾರನ್ನೂ ಇಲ್ಲಿಗೆ ಕರೆಯಬೇಡಿ. ನಾನು, ನನ್ನ ದಫೇದಾರ್ ಆ ಕೋಣೆ ನೋಡಿ ಬರ್ತೀವಿ."

ಸಾಹೇಬನ ಮಾತಿನಿಂದ ನಂದೀಶ ತಲ್ಲಣಿಸಿದ.

"ನನ್ನ ಸೋದರತ್ತೆ ದೆವ್ವ ಅಲ್ಲೇ ಉಳಿದಿರುತ್ತೆ ಅಂತ ಅನ್ನಸ್ತೆ.... ಲಕ್ಷ್ಮಣ ಸತ್ತು ಹೋಗಿರ್ಬೇಕು!..." ಗೌಡ ತಡವರಿಸಿದ.

"ಯಾರು ಲಕ್ಷ್ಮಣ?"

"ಆಮೇಲೆ ಹೇಳ್ತೀನಿ" ಉಗುಳು ನುಂಗಿದ.

"ಬಾಗಿಲು ಒಳಗಿಂದ ಹಾಕ್ಕೊಂಡಿರಬೇಕು."

"ಅದಕ್ಕಿರೋದು ಒಂದೇ ಬೀಗದ ಕೈ. ಲಕ್ಷ್ಮಣ ಒಳಗಿಂದ ಬೀಗ ಹಾಕ್ಕೊಂಡಿರೋದು ನಿಜ."

"ಸಣ್ಣ ಹಾರೆ ತರಿಸಿಕೊಡಿ."

ಗೌಡನ ಸೂಚನೆಯಂತೆ ದಡಗುಂಟೆ ಎರಡಡಿ ಉದ್ದದ ಕಬ್ಬಿಣದ ಸಲಾಕೆ ತಂದು ಕೊಟ್ಟ. ನಂದೀಶ ಆಳಿನ ಕೈನ ಲಾಂದ್ರ ತೆಗೆದುಕೊಂಡು. ಟಾರ್ಚ್ ಹಿಡಿದು ಮುಂದಕ್ಕೆ ಹೆಜ್ಜೆ ಇಟ್ಟು ಸಾಹೇಬನನ್ನು ಉಸಿರುಕಟ್ಟಿ ಹಿಂಬಾಲಿಸಿದ.

ಹಳೆಯ ಕಟ್ಟಡ ಸಮೀಪಿಸಿ ಕೆಳಗಿನಿಂದ ಮೇಲಿನವರೆಗೆ ಟಾರ್ಚ್ ಬೆಳಕು ಹಾಕಿದ ದಿವಾಕರ. ಗಾರೆ ಉದುರಿದ, ಕಪ್ಪು ಹಿಡಿದ ಇಟ್ಟಿಗೆ ಮೆಟ್ಟಿಲುಗಳು ಮುಂಭಾಗದಿಂದ ಮೇಲಿನ ಕೋಣೆ ಬಾಗಿಲಿನವರೆಗೆ ಏರಿ ಹೋಗಿದ್ದವು.

ಹದಿನಾಲ್ಕು ಮೆಟ್ಟಿಲುಗಳ ನಂತರ ಮೂರು ಅಡಿ ಚದರದ ನಿಲ್ದಾಣ. ಮತ್ತೆ ವಿರುದ್ಧ ದಿಕ್ಕಿಗೆ ಏರಿದ ಮೆಟ್ಟಿಲುಗಳು.

ನಂದೀಶ ನೀಳವಾದ ಉಸಿರು ಹಾಕುತ್ತಾ ಬಾಗಿಲಿನ ಮಧ್ಯಕ್ಕೆ ಲಾಂದ್ರ ಎತ್ತಿ ಹಿಡಿದ. ಬಾಗಿಲಿಗೆ ಹೊರಗಿನಿಂದ ಹಾಕುವ ಚಿಲಕ ಇರಲಿಲ್ಲ. ಬೀಗದ ಕೈ ಹೂಡುವ ರಂಧ್ರ ಕಾಣಿಸಿತು.

ಬಾಗಿಲಿಗೆ ಕಿವಿ ಹಚ್ಚಿ ಅರ್ಧ ನಿಮಿಷ ಗಮನಿಸಿದ ಅಧಿಕಾರಿ ಎರಡು ಸಾರಿ ಬೆರಳಿನಿಂದ ಕುಟ್ಟಿದ. ಒಳಗಿನಿಂದ ಸದ್ದು ಕೇಳಿ ಬರಲಿಲ್ಲ. ಎಡಭುಜ ಮುಂದು ಮಾಡಿ ಬಾಗಿಲಿಗೆ ಘರ್ಷಿಸಿದ. ಅರ್ಧ ಸಡಿಲವಾದ ಬಾಗಿಲು ಒಳಕ್ಕೆ ಬಾಗಿ ಮತ್ತೆ ಹಿಂದಕ್ಕೆ ಸರಿಯಿತು. ದಫೇದಾರನ ಎರಡನೆ ಹೊಡೆತ ಬಾಗಿಲನ್ನು ಪೂರ್ತಿಯಾಗಿ ಒಳ ಸರಿಸಿತು. ಹಳೆಯ ವಾಸನೆ ಗುಬ್ಬನೆ ಮೂಗು ಅಡರಿತು.

ಸಾಹೇಬನ ಹಿಂದೆ ನಂದೀಶ ಮೆಲ್ಲನೆ ಅಡಿಯಿಟ್ಟ. ಇಬ್ಬರು ಹಿಡಿದ ಬೆಳಕುಗಳು ಎಡಬಲ ಹರಿದವು. ಕಪ್ಪು ಮರದ ಕುರ್ಚಿಯ ಮೇಲೆ ಕುಸಿದಿದ್ದ ವ್ಯಕ್ತಿ ತಲೆ ಪಕ್ಕಕ್ಕೆ ಒರಗಿಸಿತ್ತು.

ನಂದೀಶ ಸೊರಂರ್ರನೆ ಉಸಿರೆಳೆದು ಸಾಹೇಬನಿಗೆ ಒತ್ತಿ ನಿಂತ. ಮೆಲ್ಲನೆ ಗೊರಗುವ ಸ್ವರ ಕೇಳಿಸಿದತ್ತ ಟಾರ್ಚು ತಿರುಗಿಸಿದ ದಿವಾಕರ. ಸಣ್ಣ ಗಾತ್ರದ ಕಪ್ಪು ಟೇಪ್ ರೆಕಾರ್ಡರ್... ಅದರಲ್ಲಿನ ಟೇಪ್ ಸುತ್ತುತ್ತಿದೆ!

ಲಕ್ಷ್ಮಣನ ಮುಖ ಬಲಕ್ಕೆ ಹೊರಳಿತ್ತು. ಸ್ಪರ್ಷಕ್ಕೆ ತಣ್ಣಗಿತ್ತು ಕೈ. ಸುಂದರ ಮುಖದವನು ಮೃತನಾಗಿದ್ದ! ಆ ಮುಖದಲ್ಲಿ ಬೆದರಿದ ಛಾಯೆ ಕಾಣದು. ಸ್ವಲ್ಪವೂ ಕೊಂಕದ ಕೆಂಪು ಬುಷ್‌ಶರ್ಟ್, ಬಿಳುಪು ಪ್ಯಾಂಟು, ಅರ್ಧ ಹಣೆ ಆವರಿಸಿದ ತಲೆಗೂದಲು.

ದಿವಾಕರ ದೇಹದ ಭಾಗಗಳನ್ನು ನಯವಾಗಿ ಮುಟ್ಟಿ ನೋಡಿದ. ಎದೆ, ಹೊಟ್ಟೆ, ಬೆನ್ನು, ಯಾವ ಭಾಗದಲ್ಲೂ ಹೊಡೆತ ಕಾಣದು. ರಕ್ತದ ಕಲೆ ಇಲ್ಲ.

ಅಚಲನಾಗಿ ಕುಳಿತ ವ್ಯಕ್ತಿಯ ಕಡೆಗೊಮ್ಮೆ ನೋಡಿದ ಸಬ್ ಇನ್ಸ್‌ಪೆಕ್ಟರ್ ಅವನ ಕೈನ ಆಟೊಮ್ಯಾಟಿಕ್ ಗಡಿಯಾರವನ್ನು ವೀಕ್ಷಿಸಿದ. ಹನ್ನೆರಡು ಗಂಟೆ ಐವತ್ತು ನಿಮಿಷ. ತನ್ನ ಗಡಿಯಾರ ಹತ್ತೆರಡು ನಲವತ್ತೈದು ಸುಚಿಸುತ್ತಿತ್ತು.

ರೆಕಾರ್ಡರ್‌ನಲ್ಲಿ ಟೇಪ್ ಸುತ್ತುವುದು ಏಕಾಏಕಿ ನಿಂತು ಹೋಯಿತು. ಶಬ್ದವನ್ನು ರೆಕಾರ್ಡ್ ಮಾಡುವ ಸುತ್ತುವಿಕೆ ಆಗಿರಲಿಲ್ಲ. ರೆಕಾಡ್‌ಆದ ಟೇಪು ಹಿಂದಕ್ಕೆ ಸುತ್ತಿ ನಿಂತಿತ್ತು.

ಬೆರಳಿಗೆ ಕರವಸ್ತ್ರ ಸುತ್ತಿ ಬಟನ್ ಒತ್ತಿ ಆಫ್ ಮಾಡಿದ. ಮತ್ತೊಂದು ಬಟನ್ ಒತ್ತಿದಾಗ ಟೇಪ್ ಹೊರಕ್ಕೆ ಚಿಮ್ಮಿ ಬಂತು. ಒಂದೊಂದು ಪಕ್ಕದಲ್ಲೂ ಒಂದು ಗಂಟೆ ಅವಧಿಯಷ್ಟು ಧ್ವನಿ ಹೊಮ್ಮಿಸುವ ಕ್ಯಾಸೆಟ್ ಅದು ನಂದೀಶ ಕರವಸ್ತ್ರದಲ್ಲಿ ಟೇಪ್‌ರೆಕಾರ್ಡರ್ ಸುತ್ತಿ ಕೈಗೆತ್ತಿಕೊಂಡ.

ಮೃತನ ಬಲ ಪಕ್ಕದಲ್ಲಿ ಹಳೆಯ ಮೇಜು. ಅದರ ಮಧ್ಯೆ ಹಿಂದುಮುಂದು ತೂಗಾಡುವ ಧೂಳು ಮುಚ್ಚಿದ ಕನ್ನಡಿ. ಅದರ ಮುಂದೆ ಹಳೆಯ ಬೀಗದ ಕೈ. ಎಡ ಪಕ್ಕಕ್ಕೆ ಬೀಟೆ ಮರದ ಮಂಚ. ಹಿಂಬದಿಯ ಕಿಟಕಿ ಸೀಳಿನಲ್ಲಿ ಗಾಳಿ 'ಸುಂಯ್' ಗುಡುತ್ತಾ ತೂರಿ ಬರುತ್ತಿತ್ತು. ಸಡಿಲವಾದ ಒಂದು ಷಟರ್ ಪಟಪಟಿಸುತ್ತಿತ್ತು.

ಟಾರ್ಚ್ ಬೆಳಕು ಮಂಚದ ಮೇಲೆ ಹರಿದಾಡಿ ಹಾಗೆಯೇ ನಿಂತಿತು. ದಿವಾಕರ ಕಣ್ಣರಳಿಸಿದ. ಮಂಚದ ಮೇಲೆ ಸಿಲಿಂಡರ್ ಆಕಾರದ ಕೈ ದೀಪ! ಆರಿದ ಲಾಂದ್ರ!

"ಕತ್ತಲಿನಲ್ಲಿ ಆರಿದ ಲಾಂದ್ರ ಇಟ್ಕೊಂಡು ಯಾಕೆ ಕೂತ್ಕೊಂಡ ಈ ಮನುಷ್ಯ?"

ಅಲುಗಿದ ಶಬ್ದ ಕೇಳದು. ದೀಪ ಖಾಲಿಯಾಗಿತ್ತು.

"ಎರಡೂ ಒಂದೇ ತರದ ಲಾಂದ್ರಗಳು"

ದಡಗುಂಟೆಯ ಕೈನಿಂದ ತಂದಿದ್ದ ಲಾಂದ್ರವನ್ನು ಆರಿದ ಲಾಂದ್ರದೊಂದಿಗೆ ಹಿಡಿದು ತೋರಿದ ನಂದೀಶ.

ಒಂದು ಅಡಿ ಎತ್ತರದ ಸಿಲಿಂಡರ್ ಆಕಾರದ ಲ್ಯಾಂಟರ್ನ್. ತಳದಲ್ಲಿ ಸೀಮೆ ಎಣ್ಣೆಯ ಚೌಕನೆಯ ಕೋಶ. ಮೇಲುಗಡೆ ದಪ್ಪನೆಯ ಹಿಡಿ ಗಣಿಯಲ್ಲಿ ಬಳಸುವಂತಹ ನೀಳವಾದ ಲಾಂದ್ರದ ಮುಕ್ಕಾಲು ಭಾಗಕ್ಕೆ ಗಾಜಿನ ಚಿಮಣಿ ಹೊದಿಕೆ. ಗಾಜಿನ ಮೇಲು ತುದಿ ಒಂದು ಕಡೆ ಅರ್ಧ ಅಂಗುಲದಷ್ಟು ಒಡೆದಿದೆ. ಒಳಭಾಗ ಹೊಗೆಯಿಂದ ಮುಸುಕಾಗಿದೆ.

ಆರಿದ ಲಾಂದ್ರವನ್ನು ಮಂಚದ ಮೇಲಿಟ್ಟ.

"ಈ ಹೊತ್ನಲ್ಲಿ ಬೆರಳು ಗುರುತು ಹುಡುಕೋದಲ್ಲ"

ದಿವಾಕರ ಅತಿ ಬುದ್ಧಿವಂತಿಕೆಯ ಮಾತಾಡುತ್ತಿದ್ದಾನೆ ಎನಿಸಿತು ನಂದೀಶನಿಗೆ.

"ಬೆರಳು ಗುರುತು ಬೇಕಾಗಿರೊ ಕೇಸ್ ಅಲ್ಲ ಇದು"

"ದೆವ್ವದ ಬೆರಳು ಗುರುತು ಹೇಗಿರುತ್ತೆಂತ ನಮ್ಮ ಸಾಹೇಬರು ನೋಡೋದು ಬೇಡವೆ? ನಾನು ಹೋಗಿ ಒಬ್ಬ ಕಾನ್ಸ್‌ಟೇಬಲ್‌ನ ಇಲ್ಲಿಗೆ ಕಳಿಸಿಕೊಡ್ತೀನಿ ನೀನು ಇಲ್ಲೇ ಇರು, ಬೆಳಗಾದ ಮೇಲೆ ಸಾಹೇಬರನ್ನ. ಫೋಟೋಗ್ರಾಫರ್‌ನ ಕರಕೊಂಡು ಬರ್ತೀನಿ... ಯಾಕೆ ಹಾಗೆ ತರಗುಟ್ತಾ ಇದೀಯ? ಈ ಕೋಣೇಲಿ ಇರು ಅಂತ ಹೇಳ್ಲಿಲ್ಲ. ಬಾಗಿಲು ಮುಚ್ಚಿ ಕೆಳಗಿಳಿದು ಬಂದು ಮಂಚ ಹಾಕಿಸ್ಕೊಂಡು ಆಳಿನ ಜೊತೆ ಕೂತ್ಕೊ."

ನಂದೀಶನ ತಲೆ ಸಮ್ಮತಿಪೂರ್ವಕವಾಗಿ ಅಲುಗಿತು.

ಸಬ್ ಇನ್ಸ್‌ಪೆಕ್ಟರ್ ಮೆಟ್ಟಿಲು ಇಳಿದು ಬರುತ್ತಲೇ ಬಿಳೀಗೌಡ ಅತೀವ ಆತಂಕ, ಕಾತರತೆಯಲ್ಲಿ ಧ್ವನಿಸಿದ.

"ಲಕ್ಷ್ಮಣ...?"

"ನಿಮ್ಮ ಲಕ್ಷ್ಮಣ ನೀವು ಭಾವಿಸಿದ ಹಾಗೆ ಸತ್ತು ಹೋಗಿದಾನೆ. ದೇಹದ ಯಾವ ಭಾಗದಲ್ಲೂ ಹೊಡೆತ, ತಿವಿತ ಕಾಣ್ತಾ ಇಲ್ಲ"

ಗೌಡನ ಉಸಿರಾಟ ಏರಿತು.

"ದೆವ್ವದ ಕೈಗೆ ಸಿಕ್ಕಿ ಸತ್ತ ಅಂತ ಈಗಲಾದ್ರೂ ನಂಬ್ತೀರಾ?"

"ನಮ್ಮ ಡಿಪಾರ್ಟ್‌ಮೆಂಟ್ ದೆವ್ವಗಳು ನಂಬಬೇಕಲ್ಲ, ಗೌಡರೆ. ಎಲ್ಲಿರೋದು ಫೋನ್?"

"ಪಂಚಾಯಿತಿ ಮನೇಲಿ ಒಂದು ಫೋನ್ ಇದೆ."

"ಪಬ್ಲಿಕ್ ಕಾಲ್ ಆಫೀಸ್?"

"ಹುಂ"

"ಒಬ್ಬ ಪಿ.ಸಿ.ನ ಕರೆಸ್ಕೊಬೇಕು. ನಮ್ಮ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ವಿಷಯ ತಿಳಿಸಬೇಕು."

"ಅಷ್ಟೆಲ್ಲಾ ಯಾಕೆ ಸಾಹೇಬ್ರೆ?"

ಗೌಡ ಚಿಂತಿತನಾಗಿ ನಿಂತ. ದಿವಾಕರ ಅವನ ಪ್ರಶ್ನೆಗೆ ಗಮನಕೊಡದೆ ಎಡಬಲ ನೋಡಿದ. ಕತ್ತು ಏರಿತು, ಮೂತಿ ಮೊನಚಾಯಿತು. ಎಡಭಾಗದ ಮನೆಯೊಂದರ ಕಿಟಕಿಯಿಂದ ಮಂಕು ವಿದ್ಯುತ್ ಬೆಳಕು ಕಾಣಿಸಿತು.

"ಅಲ್ಲಿ ದೀಪ ಇದೆ" ಅತ್ತ ಬೆರಳು ಮಾಡಿದ.

"ಪುಟ್ಟಯ್ಯ ಎದ್ದಿರಬೇಕು... ಅವನಿಗೆ ಬೆನ್ನು ನೋವು. ರಾತ್ರಿ ನಿದ್ರೆ ಬರೋದಿಲ್ಲ."

"ಪುಟ್ಟಯ್ಯನ ಖಾಯಿಲೆ ವಿಷಯ ಯಾರಿಗೆ ಬೇಕು. ಆ ಮನೇಲಿ ಕರೆಂಟ್ ಇದೆ. ನಿಮ್ಮ ಮನೆ ದೀಪ ಆರಿಹೋಗಿದೆ."

ಬಿಳಿಗೌಡ ತಲ್ಲಣಗೊಂಡಂತೆ ಕಾಣಿಸಿದ.

"ನಮ್ಮ ಮನೆ ಫ್ಯೂಸ್ ಹೋಗಿರ್ಬೇಕು. ಆರೂವರೆಗೆ ಹಓದ ದೀಪ ಎಂಟಕ್ಕೆ ಬಂತು. ಹತ್ತೂಮುಕ್ಕಾಲರ ಹೊತ್ತಿಗೆ ಮತ್ತೆ ಹೋಯ್ತು."

ದಫೇದಾರನೊಂದಿಗೆ ದಿವಾಕರ ಹಜಾರದಲ್ಲಿ ಹಾದು ವರಾಂಡಕ್ಕೆ ಬಂದ.

ತಥ್! ಹಾಳು ಕತ್ತಲೆ. ಊರಲ್ಲಿ ದೀಪ ಇದ್ರೂ ಈ ಮನೇಲಿ ಕಗ್ಗತ್ತಲೆ. ಸ್ವಲ್ಪ ಟಾರ್ಚ್ ಹಾಕು.

ನಂದೀಶ ಟಾರ್ಚ್ ಬೆಳಕನ್ನು ಗೋಡೆಯ ಮೇಲೆ ಹರಿಸಿದ. ಆ ವೇಳೆಯಲ್ಲಿ ಅಧಿಕಾರಿ ತೋರುತ್ತಿದ್ದ ವರ್ತನೆಯಿಂದ ಬಿಳಿಗೌಡ ರೋಸಿಹೋಗಿದ್ದ.

ದಿವಾಕರ ಮೀಟರ್ ಬೋರ್ಡಿನ ಮುಂದೆ ನಿಂತು ಮೇನ್ ಸ್ವಿಚ್ ಪೆಟ್ಟಿಗೆ ಸಡಲಿಸಿ ಅದರಿಂದ ಎರಡು ಎರಡು ಪೋರ್ಸಲೇನ್ ಕಟ್‌ಔಟ್‌ಗಳನ್ನು ಎಳೆದು ನೋಡಿದ. ಫ್ಯೂಸ್ ತಂತಿಗಳು ಭಿನ್ನವಾಗಿರಲಿಲ್ಲ.

"ಗೌಡರೇ, ಮನೇಲಿ ಎಲ್ಲಾ ಕೆಲಸಕ್ಕೂ ಕರೆಂಟ್ ಬಳಸ್ತೀರಾ?"

"ಇಲ್ಲ. ದೀಪಕ್ಕೆ ಮಾತ್ರ ಬಳಸ್ತೀವಿ. ಕರೆಂಟ್‌ನಲ್ಲಿ ನೀರು ಕಾಯ್ಸಲ್ಲ, ಅಡಿಗೆ ಮಾಡಲ್ಲ."

"ಮತ್ತೆ ಹೊರ ಕಂಬದಲ್ಲಿ ಫ್ಯೂಸ್ ಹೋಗುವಷ್ಟು ಬಲವಾಗಿ ಕರೆಂಟ್ ಯಾಕೆ ಬಳಸಿದ್ದು?"

"ಅಂತದ್ದೇನೂ ಬಳಸಲಿಲ್ಲ, ಸ್ವಾಮಿ" ಹಣೆ ಚಚ್ಚಿ ಗಡಸಾಗಿ ಪ್ರತಿ ನುಡಿದ ಗೌಡ. ದಫೇದಾರನಿಗೂ ಬೇಸರ ಬಂದಿತ್ತು.

"ವಿಪರೀತ ನೋಡ್ತಾ ಇದೀರಿ, ಸ್ವಾಮಿ" ಮೆಲ್ಲನೆ ಹೇಳಿದ.

"ಮುಚ್ಚು ಬಾಯಿ!" ಅಷ್ಟೇ ಮೆಲ್ಲನೆ ಸುಮ್ಮನಾಗಿಸಿದ.

ಮತ್ತೆ ಹಜಾರಕ್ಕೆ ಬಂದು ನಿಂತ ಅಧಿಕಾರಿಯ ಕಡೆ ನೋಡದೆ ಗೌಡ ಗಂಭೀರವಾಗಿ ನುಡಿದ.

"ಕೋಣೇಲಿ ಮುದುರಿ ಕುಳಿತಿರೋರ್ನ ಕರೆಸು ಅಂದ್ರೆ ಕರೆಸ್ತೀನಿ, ಸ್ವಾಮಿ."

"ನಂಗೆ ಗೊತ್ತು ನಿಮಗೆ ಸ್ವಲ್ಪ ಬೇಜಾರು ಬಂದಿದೆ ಅಂತ. ಏನು ಮಾಡೋದು? ನನ್ನ ಸವಭಾವ ಸ್ವಲ್ಪ ಹಾಗೇನೇ. ಸಣ್ಣದಕ್ಕೆಲ್ಲಾ ಕಣ್ಣಾಡಿಸಿ ತಲೆ ಕೆಡಿಸಿಕೊಳ್ಳೋದು. ನಮ್ಮ ಸಾಹೇಬ್ರು ಹೇಗೆ ಅಂತೀರಿ? ಸಣ್ಣದರ ಕಡೆ ಲಕ್ಷ್ಯ ಕೊಡೋದಿಲ್ಲ ಆಮೇಲೆ ಸಣ್ಣದರ ಮೇಲೆ ನೂರು ಪ್ರಶ್ನೆ ಹಾಕಿ ನನ್ನ ಪ್ರಾಣ ತಿನ್ತಾರೆ. ಇಲ್ಲಿ ಆಗಿರೋದು ಒಂದು ಅಸ್ವಾಭಾವಿಕ ಮರಣ. ಕೋಣೇಲಿರೋರು ಅಲ್ಲೇ ಇರಲಿ. ಅಗತ್ಯವಾದರೆ ನಾನೇ ಅವರನ್ನ ಬೇಕಾದ ವಿಷಯ ಕೇಳ್ಕೋತೀನಿ. ನೀವು ಹೇಳೋದು ಈಗ ಸಾಕು."

"ಏನು ಬೇಕಾದ್ರೂ ಕೇಳಿ, ಹೇಳ್ತೀನಿ."

ಮೂವರೂ ಮನೆಯ ಹಿಂಭಾಗಕ್ಕೆ ಬಂದು ಕತ್ತಲಿನಲ್ಲಿ ನಿಂತರು. ಬಿಳಿ ಗೌಡ ಚೆನ್ನಮ್ಮನ ದೆವ್ವದ ಕತೆ ಹೇಳಿದ. ಚೆನ್ನಮ್ಮನ ಶಾಪ ಕುಟುಂಬದ ಮೇಲೆ ಯಾಕೆಂಬುದು ಅವನಿಗೆ ತಿಳಿಯದು. ದೆವ್ವದ ಅಸ್ತಿತ್ವದಲ್ಲಿ ಪೂರ್ಣ ನಂಬಿಕೆ ಹೊಂದಿದ್ದುದು ಮಾತಿನಲ್ಲಿ ಸ್ಪಷ್ಟವಾಗಿತ್ತು.

"ಈ ಕಥೆಗೂ ಈಗಿನ ಪ್ರಸಂಗಕ್ಕೂ ಸಂಬಂಧ ಏನಿದೆ, ಗೌಡರೆ?" ನಿರಾಸಕ್ತಿಯಲ್ಲಿ ಕೇಳಿದ.

"ಸಂಬಂಧ ಇದೆ. ನನ್ನ ಕಿರಿ ಮಗಳು ಸ್ನೇಹಲತಾ ಚೆನ್ನಮ್ಮನ ಪುನರಾವತಾರ ಆಗಿದಾಳೆ. ಹುಲ್ಲುಕೆರೆ ನಾಗೇಗೌಡರ ಮಗ ವರದಪ್ಪನಿಗೆ ಅವಳನ್ನು ಗೊತ್ತುಮಾಡ್ದೆ. ಅವಳಿಗೆ ಯಾವ ಕೆಟ್ಟ ನಕ್ಷತ್ರವೊ! ಲಕ್ಷ್ಮಣನ್ನ ಮದುವೆ ಆಗಬೇಕೂಂತ "

"ಒಪ್ಪಿಗೆ ಕೊಡಬೋದಿತ್ತು."

"ಶಿವಶಿವ! ಏನು ಮಾತು, ಸ್ವಾಮಿ. ಲಕ್ಷ್ಮಣ ಅಂದ್ರೆ ನಮ್ಮ ಕುಲದ ಹುಡುಗ ಅಲ್ಲ. ಅವನ ಕುಲವೇ ಗೊತ್ತಿಲ್ಲ ಯಾರಿಗೂ, ಅವನಿಗೆ ತಂದೆ ತಾಯಿ, ಆಸ್ತಿ, ಉದ್ಯೋಗ ಒಂದೂ ಇಲ್ಲ. ನೋಡೋದಿಕ್ಕೆ ಲಕ್ಷಣವಾಗಿದಾನೆ. ಇವಳಿಗೆ ಅವನ ಮೇಲೆ ಹುಚ್ಚು ಅಂದ್ರೆ ನಾನು ಕುಲಕ್ಕೆ ಅಪಚಾರ ಮಾಡ್ಲೆ? ಸುತ್ರಾಂ ಒಪ್ಪೋನಲ್ಲ ಲಕಷ್ಮಣ ನಾಲ್ಕು ತಿಂಗಳಿಂದ ಈ ಮನೆಗೆ ಬರ್ತಾ ಇದಾನೆ. ಎರಡು ಮೂರು ಸಾರಿ ಜಾತಿ, ಸಂಪ್ರದಾಯ, ಮೂಢನಂಬಿಕೆ ಅಂತ ನನ್ನ ಜೊತೆ ಚರ್ಚೆಗೆ ಇಳಿದ. ನಾನು ಅವನ ಸಂಗಡ ಮಾತಾಡೋದು ಕಡಿಮೆ ಮಾಡ್ದೆ. ಮಹಾ ಹಠವಾದಿ ಹುಡುಗಿ. ಒಪ್ಪಿದರೆ ಕುಲಗೌರವ ಮಣ್ಣಿನ ಪಾಲು. ಹಳ್ಳಿಗಳ ಕಡೆಯಂತೂ ಅದಕ್ಕೆ ಚಿಕಿತ್ಸೇನೆ ಇಲ್ಲ. ಕಟುವಾಗಿ ಹೇಳಿದ್ರೆ ಹೆಚ್ಚು ಕಡಿಮೆ ಆದೀತು. ಅವಳೂ ದೆವ್ವ ಆಗೋದು ಸತ್ಯ. ನೋಡಿ ಎಂತಾ ಇಕ್ಕಟ್ಟಿಗೆ ಸಿಕ್ಕಿದೀನಿ!"

"ಇಕ್ಕಟ್ಟಿನಿಂದ ಪಾರಾಗಿದೀರಿ. ಹಳ್ಳಿಯೋರಾದ್ರೂ ಸುಶಿಕ್ಷಿತರ ಹಾಗೆ ಚೆನ್ನಾಗಿ ಮಾತಾಡ್ತೀರಿ. ಆದರೂ ದೆವ್ವದಲ್ಲಿ ನಂಬಿಕೆ, ಸಂಪ್ರದಾಯ ಇಷ್ಟೊಂದು ಹಚ್ಚಿಕೊಬಾರದು."

"ಹಚ್ಚಿಕೊಂಡಿದ್ದಲ್ಲ. ರಕ್ತದಲ್ಲಿ ಬಂದಿರೋದು. ಇದರಿಂದ ಯಾರಿಗೂ ಕೆಡಕಿಲ್ಲ, ಸ್ವಾಮಿ. ನಿಮ್ಮ ಹಾಗೇ ಹೇಳ್ತಿದ್ದ ಲಕ್ಷ್ಮಣ, ನನ್ನ ಮೂಢನಂಬಿಕೆ, ಚೆನ್ನಮ್ಮನ ಶಾಪದ ಭಯ ತಿಗೀತೀನಿ ಅಂತ ಹೇಳಿ ದೆವ್ವದ ಕೋಣೆಗೆ ಹೋದ.... ನನ್ನ ತಾತ ಕುಲದ ಘನತೆ ಉಳಿಸಿಕೊಳ್ಳೋದಿಕ್ಕೆ ನಂಜನಗೂಡಿನಿಂದ ಇಲ್ಲಿಗೆ ಬಂದ. ನಾನೆಲ್ಲಿಗೆ ಹೋಗ್ಲಿ?... ಇನ್ನೊಂದು ವಿಚಿತ್ರ. ಚೆನ್ನಮ್ಮನ ಹಾಗೇ ನನ್ನ ಕಿರಿ ಮಗಳು, ಅದೇ ಮುಖ, ಅದೇ ಕಂಠ, ಅದೇ ಹಠ ಅಂತ ನನ್ನ ತಂದೆ ಸಾಯೋವರೆಗೂ ಹೇಳ್ತಿದ್ರು. ಚೆನ್ನಮ್ಮನಿಗೆ ನಮ್ಮ ಕುಲದ ಮೇಲೆ ಸೇಡು ತೀರಿಸಿಕೊಳ್ಳೊ ಛಲ. ಅವಳ ಶಾಪ ನನ್ನ ಮಗಳಿಗೆ ತಟ್ಟಿದೆ."

"ಲಕ್ಷ್ಮಣನಿಗೆ ದೆವ್ವದ ಕೋಣೆಗೆ ಹೋಗೊ ಧೈರ್ಯ ಹೇಗೆ ಬಂತು?"

"ಅದು ಧೈರ್ಯ ಅಲ್ಲ. ಯೌವನದ ಮದ, ಹುಚ್ಚು ಹಠ ಅನ್ನಿ. ದೆವ್ವ ಇಲ್ಲಾಂತ ತೋರಿಸ್ತೀನಿ ಅಂದ. ಚೆನ್ನಮ್ಮನ ದೆವ್ವ ನಿಜವಾಗಿ ಇರೋದಾದ್ರೆ ಅದರಿಂದ ಒಪ್ಪಿಗೆ, ಆಶೀರ್ವಾದ ಪಡೆದು ಬರ್ತೀನಿ. ಆಗ ಮದುವೆ ಮಾಡಿಕೊಡಿ ಅಂದ. ನಾನು ಗಾಬರಿ ಆದೆ. ಇದು ಪರೀಕ್ಷೆ ಮಾಡೊ ವಿಷಯವೆ? ಅವನ್ನ ತಡೆಯೋದಿಕ್ಕೆ ಆಗ್ಲಿಲ್ಲ."

"ಸತ್ತು ಹೋಗ್ತಾನೇಂತ ಭಾವಿಸಿದ್ರಾ?"

"ಭಾವಿಸೋದೇನು, ನಿರ್ಧಾರವಾಗಿತ್ತು. ನಾನು ದೆವ್ವದಲ್ಲಿ ನಂಬಿಕೆ ಇಟ್ಟೋನು. ಈ ಫಾಸಲೇಲಿರೊ ಹಳ್ಳಿಯೋರಿಗೆಲ್ಲಾ ಗೊತ್ತು ಚೆನ್ನಮ್ಮನ ಕಥೆ. ಬಿಳಿ ಸೀರೆ ಚೆನ್ನಮ್ಮ ಆಗಾಗ ಇಲ್ಲಿ ಓಡಾಡೋದನ್ನ ಇಲ್ಲಿನ ಜನ ಕಂಡಿದಾರೆ."

ದೀರ್ಘವಾದ ಉಸಿರು ಹಾಕಿದ ದಿವಾಕರ.

"ಲಕ್ಷ್ಮಣ ಏನು ಮಾಡ್ದ?... ಅವನು ಬಂದ ಮೇಲೆ ಏನಾಯ್ತು?"

"ಲಕ್ಷ್ಮಣ ರಾತ್ರಿ ಏಳೂವರೆಗೆ ಬಂದ. ಆಗ ಕತ್ತಲು. ದೀಪ ಬಂದ ಮೇಲೆ ಎಂಟೂಕಾಲಿಗೆ ಎಲ್ಲರ ಜೊತೆ ಊಟ ಮಾಡ್ದ. ಸ್ವಲ್ಪ ಹೊತ್ತು ಇಸ್ಪೀಟ್ ಆಡ್ದ. ಹತ್ತೂ ಮುಕ್ಕಾಲರ ಹೊತ್ನಲ್ಲಿ ಮತ್ತೆ ದೀಪ ಹೋಯ್ತು. ಹನ್ನೊಂದೂ ಕಾಲು ಗಂಟೆಗೆ ಲಕ್ಷ್ಮಣ ನಾನು ನೋಡ್ತಾ ಇದ್ದ ಹಾಗೆಯೇ ದೆವ್ವದ ಕೋಣೆಗೆ ಹೊರಟ. ಆಗ ನಾನು ಏನೂ ಹೇಳ್ಲಿಲ್ಲ. ನಾವೆಲ್ಲಾ ಉಸಿರು ಬಿಗಿ ಹಿಡಿದು ಕೋಣೇಲಿ ಕಾದು ಕುಳಿತಾಯ್ತು. ಹನ್ನೊಂದು ಐವತ್ತೈದಕ್ಕೆ ದೆವ್ವದ ಕೋಣೆಯಿಂದ ಭೀಕರ ಚೀತ್ಕಾರ ಕೇಳಿಸ್ತು..!"

"ಹನ್ನೊಂದು ಗಂಟೆ ಐವತ್ತೈದು ನಿಮಿಷ ಅಂತ ಖಚಿತವಾಗಿ ಹೇಳೋದು ಹೇಗೆ?"

"ನಾವೆಲ್ಲಾ ಪ್ರತಿಕ್ಷಣ ಗಡಿಯಾರದ ಕಡೆ ನೋಡ್ತಾ ಹನ್ನೆರಡು ಗಂಟೆ ಆಗೋದನ್ನ ಕಾಯ್ತಾ ಇದ್ದೋರು."

"ಹನ್ನೆರಡು ಗಂಟೆ ! ಓ, ದೆವ್ವ ಬರೋ ಹೊತ್ತಲ್ಲವೆ ಅದು? ಐದು ನಿಮಿಷ ಮೊದಲೇ ಬಂದು ಬಿಡ್ತು... ಈ ಮನೇಲಿ ಯಾರ್‍ಯಾರು ಇರೋದು?"

"ನಾನು, ನನ್ನ ತಮ್ಮ ಕೋಟೇಗೌಡ. ನನ್ನ ಮಗ ನಾಗರಾಜಪ್ಪ, ನನ್ನ ಇಬ್ಬರು ಹೆಣ್ಣು ಮಕ್ಕಳು, ಅಡಿಗೆ ಆಳು ಭಗವಂತ, ಮತ್ತೆ ಆಳು ದಡಗುಂಟೆ..."

"ಜಮೀನಿನ ಆಳುಗಳು..."

"ಅವರು ಇಲ್ಲಿರೋದಿಲ್ಲ... ನಿನ್ನೆ ಲಕ್ಷ್ಮಣ ಇದ್ದ. ವರದಪ್ಪನೂ ಬಂದಿದ್ದ."

"ವರದಪ್ಪ?"

"ಅದೇ ಹುಲ್ಲುಕೆರೆ ಹುಡುಗ, ನನ್ನ ಮಗಳಿಗೆ ಗೊತ್ತು ಮಾಡಿದ್ದೀನಿ ಅಂದ್ನಲ್ಲಾ ಅವನು."

“ಅವನು ಯಾಕೆ ಬಂದಿದ್ದ?”

“ಆಗಾಗ್ಗೆ ಬರ್ತಾನೆ, ಅವರಪ್ಪ ನಾಗೇಗೌಡ ನನ್ನ ಸ್ನೇಹಿತ. ವರದಪ್ಪನೂ ಲಕ್ಷ್ಮಣನ್ನ ತಡೆಯೋದಿಕ್ಕೆ ಪ್ರಯತ್ನ ಮಾಡ್ದ.”

“ಆ ಕೋಣೆಯಿಂದ ಕೂಗು ಕೇಳಿದ ಮೇಲೆ ಅಕ್ಕಪಕ್ಕದೋರು ಯಾರೂ ಬರಲಿಲ್ಲವೆ?”

“ಅದು ಅಷ್ಟು ಗಟ್ಟಿಯಾದ ಕೂಗಲ್ಲ. ನಾವು ಅದನ್ನೇ ಕಾಯ್ತಿದ್ವಿ. ಜೋರಾಗಿ ಕೇಳಿಸಿದ ಹಾಗೆ ಆಗಿರೋದು ಆ ಮನೆಯೋರಿಗೆ ಮಾತ್ರ.”

“ಈ ಮನೆ ಕೋಣೆಯಿಂದ ಯಾರೂ ಬರಲಿಲ್ಲವೆ?”

“ಯಾರು ಬಂದ್ರೊ ಗೊತ್ತಿಲ್ಲ. ಬಹುಶಃ ಬಂದಿರಲಾರರು. ನಾನು ಹಜಾರಕ್ಕೆ ಬಂದೆ. ಕೋಣೆಗಳಿಂದ ಮಾತು ಕೇಳ್ತಿತ್ತು. ನಾನೇ ಸೂಚನೆ ಕೊಟ್ಟೆ. ಪೊಲೀಸ್ ಬರೋತನಕ ಹೊರಗೆ ಬರೋದು ಬೇಡಾಂತ. ನಾನೇ ಫೋನ್ ಮಾಡಿದ್ದು.”

“ಲಕ್ಷ್ಮಣನಿಗೆ ದೆವ್ವದ ಕೋಣೆ ಬೀಗದ ಕೈ ಕೊಟ್ಟೋರು ಯಾರು?”

“ನಾನು... ಆ ಕೋಣೆಗೆ ಒಂದೇ ಬೀಗದ ಕೈ ಇರೋದು. ಅದು ಯಾವಾಗ್ಲೂ ನನ್ನಲ್ಲೇ ಇರೋದು.”

“ಕೋಣೆಗೆ ಹೋಗೋಕೆ ಮೊದಲು ಹೇಗಿದ್ದ? ಅಂದ್ರೆ ಹೆದರಿದ್ನೆ ಅಥವಾ ಧೈರ್ಯವಾಗಿದ್ನೆ?”

“ಧೈರ್ಯವಾಗಿದ್ದ. ಎಲ್ಲರ ಜೊತೆ ನಗ್ತಾ ಮಾತಾಡ್ದ. ಸ್ನೇಹ ಅಳ್ತಾ ಇದ್ಲು. ಅವಳಿಗೆ ಸಮಾಧಾನ ಹೇಳ್ದ. ನನ್ನ ಮಗ ಮೌನವಾಗಿದ್ದ. ವರದಪ್ಪ ಬೇಡ ಅಂತ ಹೇಳ್ತಿದ್ದ. ನನ್ನ ತಮ್ಮ ಗುಡ್‌ಲಕ್ ಹೇಳ್ದ.”

“ಅವನು ಮೆಟ್ಟಿಲು ಏರಿದ್ದನ್ನ ಯಾರು ನೋಡಿದ್ರು?”

“ಆಗ ಕತ್ತಲು. ಯಾರೂ ನೋಡಿರಲಾರ್ರು. ಹನ್ನೊಂದು ಕಾಲು ಗಂಟೆಗೆ ಬೀಗದ ಕೈ ತೊಗೊಂಡು ಹೊರಟ. ಅದೇ ಕಡೇ ಅವನ್ನ ನಾನು ಕಂಡದ್ದು... ಇನ್ಸ್‌ಪೆಕ್ಟರೇ...”

“ಸಬ್ ಇನ್ಸ್‌ಪೆಕ್ಟರ್ ಅಂದ.”

“ಸ್ವಾಮಿ ದಿವಾಕರಪ್ಪನೋರೆ, ಅದೇನು ಪ್ರಶ್ನೆ ಹಾಕಿ ಬಿಟ್ರಿ, ಭಾರಿ ಖೂನಿ ಕೇಸ್‌ನಲ್ಲಿ ಹಾಕೊ ಹಾಗೆ... ಸುಸ್ತಾದೆ ನಾನು, ಸ್ವಲ್ಪ ಟಾರ್ಚು ಕೊಡಿ. ನೀರು ಕುಡಿದು ಬರ್ತೀನಿ.”

ಟಾರ್ಚು ಕೊಟ್ಟ ದಿವಾಕರ.

“ನನಗೂ ಸ್ವಲ್ಪ ನೀರು ಕುಡಿಸಿ, ಗೌಡರೆ”

ಎಂದು ಅವನ ಹಿಂದೆಯೇ ಹಜಾರಕ್ಕೆ ಬಂದ. ದಫೇದಾರ ಮೌನವಾಗಿದ್ದ. ಬಿಳಿಗೌಡ ಮೂಲೆಯಲ್ಲಿದ್ದ ನೀರಿನ ಚಿಕ್ಕ ಡ್ರಮ್ ಸುತ್ತಲೂ ಕೈ ಆಡಿಸಿ ಹೇಳಿದ.

"ಎಲ್ಲೋ ಲೋಟಾನೆ ಕಾಣ್ತಾ ಇಲ್ಲ."

"ನೀವು ಕುಡೀರಿ ಸಾಕು. ನಾನು ಸ್ವಲ್ಪ ಫೋನ್ ಮಾಡಿ ಬರ್ತೀನಿ."

"ಅದೇನು ನಿಮ್ಮ ದಫೇದಾರ್ ಕೈಲಿ?"

ಗೌಡ ಗಾಬರಿಯಲ್ಲಿ ತುಸು ಗಟ್ಟಿಯಾಗಿಯೇ ಕೇಳಿದ.

"ಟೇಪ್ ರೆಕಾರ್ಡರ್.... ದೆವ್ವದ ಕೋಣೆಯ ಸ್ವತ್ತು."

ಹತ್ತಿರ ಬಂದ ಗೌಡ ಸ್ವತ್ತನ್ನು ಚೆನ್ನಾಗಿ ನೋಡಿದ.

"ನನ್ನ ತಮ್ಮನ ಸ್ವತ್ತು. ಲಕ್ಷ್ಮಣ ಒಯ್ದಿರಬೇಕು ಇದನ್ನ"

"ಸದ್ಯಕ್ಕೆ ನಾನು ಒಯ್ತಾ ಇದೀನಿ."

ಗ್ರಾಮದ ಏಕೈಕ ಫೋನ್ ಇದ್ದ ಪಂಚಾಯಿತಿ ಮನೆಗೆ ಬರುವ ಮೊದಲು ಮುಟ್ಟಯ್ಯನ ಮನೆ ಬಾಗಿಲು ತಟ್ಟಿದ ದಿವಾಕರ, ಇನ್ನೂ ಎಚ್ಚರವಾಗಿದ್ದ ಪುಟ್ಟಯ್ಯ ವರಾಂಡದ ದೀಪ ಹಾಕಿ, ಆ ಹೊತ್ತಿನಲ್ಲಿ ಪರಿಚಿತ ಪೊಲೀಸ್ ಅಧಿಕಾರಿಯನ್ನು ಕಂಡು ಭಯ, ಅಚ್ಚರಿಯಿಂದ "ಬನ್ನಿ" ಎಂದ.

"ಸಣ್ಣ ವಿಷಯ ಕೇಳೋದಿಕ್ಕೆ ಬಂದೆ, ಪುಟ್ಟಯ್ಯ. ನಿಮ್ಮ ಮನೇಲಿ ದೀಪ ಯಾವಾಗ ಆರಿತು?"

"ಶನಿವಾರದ ಮಾಮೂಲು, ಆರೂವರೆಗೆ ಹೋಯ್ತು. ಎಂಟಕ್ಕೆ ಬಂತು."

"ಮತ್ತೆ ದೀಪ ಆರಲಿಲ್ಲವೆ?"

"ಇಲ್ಲ. ಇದೇನು ದೊಡ್ಡ ವಿಷಯ ಅಂತ ಕೇಳ್ತಿದೀರಿ, ಸ್ವಾಮಿ"

"ಬಿಳಿಗೌಡನ ಮನೆಯಲ್ಲಿ ಹತ್ತೂ ಮುಕ್ಕಾಲರಿಂದ ದೀಪ ಬಂದಿಲ್ಲ"

"ಕಂಬದಾಗೆ ಕೆಟ್ಟಿರಬೇಕು. ನೀವು ಹೇಳಿದ ಹೊತ್ನಾಗೆ ಡಿಪಾರ್ಟ್‌ಮೆಂಟೋನು ಕತ್ತಲಾಗೆ ಅವರ ಮನೆ ಮುಂದೆ ಕಂಬ ಹತ್ತಿ ಸರಿ ಮಾಡಿದ್ನಲ್ಲಾ."

ದಿವಾಕರನ ಎರಡೂ ಕೈಗಳು ನಡುವಿನ ಮೇಲೆ ನಿಂತವು.

"ಹತ್ತೂ ಮುಕ್ಕಾಲಿನಲ್ಲಿ"

"ಹುಂ."

"ಮತ್ತೆ ಯಾಕೆ ಅಲ್ಲಿ ಈಗಲೂದೀಪ ಇಲ್ಲ?"

"ಏನು ಹೇಳ್ಲಿ"

ಎಸ್.ಐ. ಮತ್ತೇನೂ ಹೇಳದೆ ಪಂಚಾಯಿತಿ ಮನೆಗೆ ಬಂದ. ಇಬ್ಬರು ಸ್ಕೂಲ್

ಹುಡುಗರೊಂದಿಗೆ ಮಲಗಿದ್ದ ಆಳು ಎದ್ದು ಗೌರವದಿಂದ ನಿಂತು ಕೇಳಿದ.

"ಚೇರ್ಮನ್ ಮನ್ಯಾಪೌರೆ. ಎಬ್ಬಿಸ್ಲೆ?"

"ಬೇಡ, ಎಷ್ಟು ಹೊತ್ನಿಂದ ಇದೀಯ ಇಲ್ಲಿ?"

"ಊಟ ಮಾಡಿ ಒಂಬತ್ತಕ್ಕೆ ಬಂದೋನು."

"ಇಲ್ಲಿ ಯಾರು ಫೋನ್ ಮಾಡಿದ್ರು?"

"ಬಿಳಿಗೌಡ್ರೇ. ನಿಮ್ ಟೇಸನ್‌ಗೆ..."

"ಅವರಿಗೆ ಮೊದಲು, ಇಲ್ಲಾ ಆಮೇಲೆ ಯಾರು ಫೋನ್ ಮಾಡಿದ್ರು?"

"ಯಾರೂ ಮಾಡ್ನಿಲ್ಲ. ಅವರೊಬ್ರೇ ಮಾಡಿದ್ದು."

"ಎಷ್ಟು ಗಂಟೆ ಇರಬೋದು ಆಗ?"

"ಹನ್ನೆರಡಾಗೋಗಿತ್ತು."

"ಹೆಂಗೆ ಗೊತ್ತಾಯ್ತು ಟೈಮ್?"

"ನಿದ್ದೆ ಕಣ್ಣಾಗೆ ಗಂಟೆ ಎಷ್ಟೂಂತ ನಾನೇ ಕೇಳ್ದೆ ಅವರ್ನ. ಹನ್ನೆರಡಾಗೋತು ಅಂದ್ರು."

ದಿವಾಕರ ಫೋನ್ ಎತ್ತಿಕೊಂಡ.

2

ವಿದ್ಯುತ್ ಇಲಾಖೆಯ ಲೈನ್‌ಮನ್ ಸಿಮೆಂಟ್ ಕಂಬ ಹತ್ತಿ ತೆರೆದ ಸಣ್ಣ ಪೆಟ್ಟಿಗೆ ಮುಟ್ಟುವುದರಲ್ಲಿ ಕೆಳಗಿನಿಂದ ಕೂಗಿ ಎಚ್ಚರಿಸಿದ ದಿವಾಕರ.

"ಹೇಳಿದ್ದು ಗೊತ್ತಾಯ್ತಲ್ಲ. ಆ ಕಟ್‌ಔಟ್‌ನ ಮುಟ್ಟಬೇಡ ಬೆರಳಿಂದ. ಕರ್ಚೀಫ್‌ನಿಂದ ಎಳೆದು ಬಲ ಜೇಬಿಗೆ ಹಾಕ್ಕೊ. ಎಡ ಜೇಬಿನಲ್ಲಿರೊ ಹೊಸ ಕಟ್‌ಔಟ್‌ನ ಅಲ್ಲಿಗೆ ಸೇರ್ಸು."

ಬೆಳಗಿನ ಬಿಸಿಲಿಗೆ ಅಡ್ಡಲಾಗಿ ಹಣೆಗೆ ಕೈಯಿಟ್ಟು ಕಂಬದ ತುದಿ ನೋಡಿ ದೃಷ್ಟಿ ದಿವಾಕರನ ಮೇಲೆ ಇಳಿಸಿದ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಹಿದಾಯತ್ ಮುಖ ಓರೆ ಮಾಡಿ ಕೇಳಿದ.

"ಆ ಮಂಗ ಏನ್ ಕರಾಮತ್ ಮಡೋದ್ಕೆ ಹತ್ತಿದ್ದು, ದಿವಾಕ್ರು?"

ದಿವಾಕರ ಎದೆ ಮುಂದು ಮಾಡಿ ನಿಂತ.

"ಅಲ್ಲಿಂದ ಇಳಿಸಿದ ಫ್ಯೂಸ್ ಕಟ್‌ಔಟ್‌ನ ನಮ್ಮ ಮಹಜರ್‌ಗೆ ಸೇರಿಸ್ಕೋಬೇಕು ಅನ್ನಿದೆ, ಸಾರ್. ಮನೆ ಫ್ಯೂಸ್ ಸರಿಯಾಗಿದೆ. ಕಂಬದಲ್ಲಿ ವಿದ್ಯುತ್ ಸಂಪರ್ಕ

ಕಡಿದುಹೋಗಿದೆ ನಿನ್ನೆ ರಾತ್ರಿಯಿಂದ."

"ಮಹಜರ್ ಯಾಕೊ?" ದವಡೆ ಅಲುಗಿಸಿದ.

"ಇದು ಅಸ್ವಾಭಾವಿಕ ಮರಣ."

"ಆದ್ರೇನು? ಆ ಕಟ್‌ಔಟು, ಮೂಲೇದು ಚಪ್ಲಿ, ಗೋಡೇದು ಜೇಡರ್‌ಗೆ ಬಲೆ ಹಂಗೇ ಜಮಾಯಿಸ್ಕೊಂಡ್ರೆ ಆಫೀಸ್ ಮ್ಯೂಸಿಯಂ ಆಗ್ತದೆ ನಾಳೆ... ಆ ಸೈತಾನ್‌ಗೆ ಇಳೀಂತ ಹೇಳೊ. ನೀನು ಅಷ್ಟೇ ಬಚ್ಚಲ್ ಒಳಗ್ಗೆ ಮೀನು ಹಿಡೀತೀಯ. ಬಹಳ ಚಾಲಾಕಿ ಮಾಡೋದು ಖರಾಬ್. ಇದು ಹುಶಾರಿ ಅಲ್ಲ, ಗುಸ್ತಾಕಿ."

ಲೈನ್‌ಮನ್ ಹಳೆಯ ಕಟ್‌ಔಟ್ ಕರ್ಚಿಫ್‌ನಲ್ಲಿ ಸುತ್ತಿ ಕಂಬದಿಂದ ಇಳಿದ. ಆ ಪೋರ್ಸಲೇನ್ ತುಂಡನ್ನು ತಿರುಗಿಸಿ ನೋಡಿದ. ದಿವಾಕರನ ಮುಖ ಅರಳಿತು.

"ನಾನು ಊಹಿಸಿದ ಹಾಗೇ ಆಗಿದೆ, ಸಾರ್. ಇದನ್ನ ನೋಡಿ. ಫ್ಯೂಸ್ ತಂತೀನ ಯಾರೋ ಕಿತ್ತು ಹಾಕಿದಾರೆ. ಅದೇ ಸುಟ್ಟು ಹೋಗಿಲ್ಲ. ಸುಟ್ಟಿದ್ರೆ ಸ್ವಲ್ಪವಾದರೂ ಕಪ್ಪು ಹತ್ತಿರ್ತಾ ಇತ್ತು. ಇದನ್ನ ಮಹಜರ್ ಪಟ್ಟಿಗೆ ಸೇರ್ಸಿ ಸೀಲ್ ಮಾಡ್ತೀನಿ."

ಉಬ್ಬಿದ ದವಡೆಗಳು ಗಲಗಲ ಆಡಿದವು.

"ನಿಂದು ಕೇಸ್‌ಗೆ ಫಾಯ್ದೆ ಆದ್ರೆ ಈ ಕಂಬಾನು ಪಟ್ಟಿ ಒಳ್ಗೆ ಸೇರ್ಸು. ನಾಳೆ ನಂಗೆ ಬೈಬೇಡ. ದೊಡ್ಡ ಸಾಹೇಬರ್ ಚಾಡಿ ಹೇಳ್ಬೇಡ, ಇದು ಡೆತ್ ಕೇಸು, ಆಸಾಮಿ ಕುತ್ಗೆ ಹಿಚ್ಕೆ ಸಾಹಿಸ್‌ಬಿಟ್ಟದೆ ಸೈತಾನ್. ಇದಕ್ಕೆ ಸೆಕ್ಷನ್ ಇಲ್ಲ... ಸೈತಾನ್ ಕುತ್ಗೆ ಇಸ್ಕಿ ಸಾಯ್ಸೋದು ಅಂತ ಹಳ್ಳಿವಳಗೆ ಹೇಳ್ತಾರೆ. ನೀನು ಏನ್ ಹೇಳ್ತಿ, ಬೇಟಾ?"

"ಡಾಕ್ಟರ್ ರಿಪೋರ್ಟ್ ಬಂದ ಮೇಲೆ ಹೇಳ್ತೀನಿ."

"ಮತ್ತೇನ್ ಫಜೀತಿ ಅದು?"

ದಫೇದಾರನ ಕಡೆ ಬೆರಳು ತೋರಿದ ಹಿದಾಯತ್. ನಂದೀಶ ಕರವಸ್ತ್ರದಲ್ಲಿ ಸುತ್ತಿದ ವಸ್ತು ಹಿಡಿದಿದ್ದ. ದಿವಾಕರ ಅದನ್ನು ತಂದು ತನ್ನ ಅಧಿಕಾರಿಗೆ ತೋರಿದ."

"ಸ್ಟೇನ್‌ಲೆಸ್ ಸ್ಟೀಲ್‌ದ ಲೋಟ..."

"ಹೌದು, ಸಾರ್. ದೆವ್ವದ ಕೋಣೆ ಕಟ್ಟಡದ ಪಕ್ಕದಲ್ಲಿ ಬೆಳಗ್ಗೆ ಸಿಕ್ತು."

ದಿವಾಕರ ದೂರದಲ್ಲಿ ನಿಂತಿದ್ದ ಬಿಳಿಗೌಡನಿಗೆ ಸನ್ನೆ ಮಾಡಿ ಕರೆದು ಲೋಟ ತೋರಿದ. ಗೌಡ ತಲೆ ಆಡಿಸಿದ.

"ಇದು ನಮ್ಮ ಮನೇದು. ಹಜಾರದಲ್ಲಿ ನೀರಿನ ಡ್ರಮ್ ಪಕ್ಕದಲ್ಲಿ ಇರೋದು. ನಿನ್ನೆ ರಾತ್ರಿ ಇದು ಅಲ್ಲಿರಲಿಲ್ಲ. ನಿಮಗೆ ಆ ಮಾತು ಹೇಳ್ದೆ. ನೆನಪಿರಬೇಕು."

ಎಸ್.ಐ. ಏನೂ ಹೇಳಲಿಲ್ಲ.

ಬಾಣಂದೂರು ಸರ್ಕಲ್ ಇನ್ಸ್‌ಪೆಕ್ಟರ್ ಸ್ಥಳ ವೀಕ್ಷಣೆಯ ಕೆಲಸ ಮುಗಿಸಿದ್ದ. ಫೋಟೋಗ್ರಾಫರ್, ಬೆರಳುಗುರುತಿನ ತಜ್ಞ ಹೊರಡಲು ಸಿದ್ಧವಾದರು.

ಅಸ್ವಾಭಾವಿಕ ಮರಣವೊಂದಕ್ಕೆ ತಾನು ವಹಿಸಿದ ಎಚ್ಚರಿಕೆ ಅತಿಯಾಯಿತೆಂದುಕೊಂಡ ದಿವಾಕರ. ದೇಹವನ್ನು ಪೊಲೀಸ್ ವ್ಯಾನ್‌ನಲ್ಲಿ ಒಯ್ಯುವ ಮೊದಲು ಹಿದಾಯತ್ ತನ್ನ ಅಸಿಸ್ಟೆಂಟನ ಮುಖದಲ್ಲಿದ್ದ ಚಿಂತೆಯನ್ನು ಗಮನಿಸಿದ.

"ನನಗೆ ಗೊತ್ತು ನಿನ್ ದಿಮಾಕ್ ಯಾವಾಗ್ಲೂ ಹೈಜಂಪ್‌ನಾಗೆ ಇರ್ತದೆ. ಇಲ್ಲಿ ನಿಂಗೆ ಡೌಟ್ ಬಂತು. ಕೈಗೆ ಸಿಕ್ಕಿದ್ದೆಲ್ಲಾ ಎತ್ಕೊಂಡು ಮೂರು ಪೇಜು ಮಹಜರ್ ಅಂದ್ರೆ ಫಜೀತಿ... ಆಯ್ತು, ಹೆದರ್ಬೇಡ. ಬೇಟಾ, ನೀನು ಮಾಡಿರೋದ್ಕೆಲ್ಲಾ ನಂದು ಓ.ಕೆ."

ಉತ್ತೇಜನದಿಂದ ದಿವಾಕರ ಉಬ್ಬಿದ. ತನ್ನಲ್ಲಿನ ವಿಶ್ವಾಸ ಏರಿತು.

"ಹೌದು, ಸಾರ್. ನನಗೆ ಸಂಶಯ ಬಂದುಬಿಡ್ತು, ಕೈಕಾಲು ಸ್ವಲ್ಪ ಚಾಚಿದೆ. ಆಮೇಲೆ ಎಲ್ಲಾ ವಿವರವಾಗಿ ಹೇಳ್ತೀನಿ. ತನಿಖೆ ನಿಮ್ಮದು. ನಾಳೆ ನಿಮಗೆ ಕೆಟ್ಟ ಹೆಸರು ಬರದ ಹಾಗೆ ನೋಡ್ಕೊಳ್ಳೋದು ನನ್ನ ಕರ್ತವ್ಯ."

ಇನ್ಸ್‌ಪೆಕ್ಟರ್ ದವಡೆ ಜೋರಾಗಿ ಕಾಣಿಸಿದ.

"ನಂಗೂ ಶಾಕ್ ಬಂದಿದೆ, ದಿವಾಕ್ರು. ಇದು ಸೈತಾನ್‌ದು ಕರಾಮತ್ ಅಲ್ಲ. ಲವ್ ಮ್ಯಾಟರ್. ಹುಡುಗ ಹೆಚ್ಚು ಕಡಿಮೆ ಆಗಿದಾನೆ."

ಜೇಬಿನಿಂದ ಸಣ್ಣ ಪುಸ್ತಕ ತೆಗೆದು ಎಸ್.ಐ. ಕೊಟ್ಟಿದ್ದ ವಿವರದ ಮೇಲೆ ವೇಗವಾಗಿ ಕಣ್ಣಾಡಿಸಿದ.

"ನೀನು ಏಳ್ ತಿಂಗಳ್ಗೆ ಹುಟ್ಟೋನು. ಹನ್ನೆರಡು ಏಳಕ್ಕೆ ವಿಷಯ ತಿಳೀತು ನಿಂಗೆ... ಹನ್ನೆರಡು ಇಪ್ಪತ್ತಕ್ಕೆ ಜಾಲನೂರು ಬಿಟ್ಟೆ... ಹನ್ನೆರಡೂವರೆಗೆ ಚಾಮಗೆರೆ... ಹನ್ನೆರಡು ನಲವತ್ತೈದಕ್ಕೆ ದೆವ್ವದ ಕೋಣೆ ಒಳ್ಗೆ ಹಾಜರ್... ಬೇಟಾ ಇದು ತೂಫಾನ್ ಕೆಲಸ. ನಿಂದ ರಕ್ತಕ್ಕೆ ಬರ್ಫ್ ಹಾಕಿ ನಿಧಾನವಾಗಿ ಕೆಲಸ ಮಾಡು. ಬೇಕಾದ್ರೆ ಇವತ್ತು ಇಲ್ಲಿ ಇರು. ಸಣ್ಣದಕ್ಕೆ ತಲಹಾಕಿ ಸತಾಯಿಸ್ಬೇಡ. ಅಂದ್ರೆ ಸಣ್ಣದು ಬಿಟ್ಬಿಡು ಅಂತ ಹೇಳ್ತಿಲ್ಲ."

ನಗುತ್ತಾ ತನ್ನ ನರೆತ ತಲೆ ಸವರಿಕೊಂಡ ಹಿದಾಯತ್.

"ಡಾಕ್ಟರ್ ರಿಪೋರ್ಟು ಸ್ವಲ್ಪ ಬೇಗ..."

"ಹೇಳ್ತೀನಿ ಡಾಕ್ಟರ್‌ಗೆ"

"ಮನೇಲಿರೋರ್ದು ಫಿಂಗರ್ ಪ್ರಿಂಟ್..."

ಬೆದರಿಂದ ಹಿದಾಯತ್. ತುಟಿ ಓರೆಯಾಯಿತು.

"ಹುಷಾರಾಗಿ ತೊಗೊ. ಇವತ್ತು ಬೇಡ, ನಾಳೆ ತೊಗೊ. ಹಬಬ್ ಮಾಡ್ಬೇಡ. ಗೌಡ ನೆಟ್ಟಗೆ ಡಿ.ಐ.ಜಿ. ಹತ್ರ ಹೋಗೊ ಆಸಾಮಿ."

ಸಾಹೇಬ ನಿರ್ಗಮಿಸುತ್ತಲೇ ದಿವಾಕರ ದಫೇದಾರನೊಂದಿಗೆ ಮನೆಯ ಹಿಂಬದಿಗೆ

ಬಂದು ನಿಂತ. ಬೆಳಗಿನ ಬಿಸಿಲಿನಲ್ಲಿ ಈಗ ಆವರಣ ಚೆನ್ನಾಗಿ ಕಾಣುತ್ತಿತ್ತು. ಹಳೆಯ ಕಟ್ಟಡ, ಹಿಂಭಾಗದ ಮೂರು ಹಿಪ್ಪೆ ಮರಗಳು. ಅವುಗಳ ಹಿಂದಿನ ವಿಶಾಲ ಭಾಗದ ಜಮೀನುಗಳು. ದೆವ್ವದ ಕೋಣೆಯವರೆಗೆ ಕಟ್ಟಿದ ಗಾರೆ ಮೆಟ್ಟಿಲುಗಳು ಎಲ್ಲದರ ಮೇಲೆ ಕಣ್ಣುಗಳು ಹರಿದಾಡಿದವು.

ದೆವ್ವದ ಕೋಣೆಗೆ ಸೀಲು ಹಾಕಲು ಮೆಟ್ಟಿಲು ಏರಿದ. ಧೂಳು ತುಂಬಿದ ಮೆಟ್ಟಿಲುಗಳ ಮೇಲೆ ಮೂರು ನಾಲ್ಕು ವಿವಿಧ ಅಳತೆಗಳ ಹೆಜ್ಜೆ ಗುರುತುಗಳು ಒಂದರ ಮೇಲೊಂದು ಮೂಡಿದ್ದವು.

"ಇಲ್ಲಿ ಯಾರ ಹೆಜ್ಜೆ ಗುರುತೂ ಸರಿಯಾಗಿ ಸಿಗೋಹಾಗಿಲ್ಲ."

ಎಸ್.ಐ.ನ ಮಾತಿಗೆ ನಂದೀಶ ತನ್ನ ಅಭಿಪ್ರಾಯವನ್ನು ತಡ ಮಾಡದೆ ಕೂಡಿಸಿದ.

"ಯಾರ ಬೆರಳು ಗುರುತೂ ಸಿಗೋದು ಕಾಣೆ."

ಮೊಹರು ಹಾಕುವ ಮೊದಲು ಒಳಕ್ಕೆ ಅಡಿ ಇಟ್ಟ ದಿವಾಕರ. ತೆರೆದ ಬಾಗಿಲಿನಿಂದ ಹರಿದ ಬೆಳಕು ಖಾಲಿ ಕೋಣೆಯ ಒಳಭಾಗವನ್ನು ಚೆನ್ನಾಗಿ ತೋರಿತು. ಮಂಚದ ಕಡೆ ದೃಷ್ಟಿ ಸರಿದಾಗ ಏಕಾಏಕಿ ನೆನಪು ಕುಟುಕಿತು.

"ಹಾಂ!" ಒಂದೇ ಸಾರಿಗೆ ಉದ್ಗರಿಸಿದ ದಿವಾಕರ ಹಾಗೆಯೇ ಬಾಯಿ ತೆರೆದು ನಿಂತ.

"ಏನು, ಸ್ವಾಮಿ?" ದಫೇದಾರ ಆತುರದಲ್ಲಿ ಕೇಳಿದ.

"ರಾತ್ರಿ ನೋಡಿದೆವಲ್ಲಾ, ಆ ದೀಪ. ಆರಿದ ಲಾಂದ್ರ ಎಲ್ಲೋಯ್ತು? ಅದೂ ಮಹಜರ್‌ಗೆ ಸೇರಿಸಬೇಕಾಗಿತ್ತು."

ಆರಿದ ಲಾಂದ್ರ ಮಂಚದ ಮೇಲಿರಲಿಲ್ಲ! ನಂದೀಶ ಕಂಪಿಸಿದ.

"ಹೌದು, ಯಾರೊ ಒಯ್ದಿದಾರೆ. ಸಾಹೇಬ್ರು ಇಲ್ಲಿಗೆ ಬಂದಿದ್ದಾಗಲೂ ಅದು ನನಗೆ ನೆನಪು ಬರ್ಲಿಲ್ಲ."

"ರಾತ್ರಿಯಿಂದ ಕಾವಲಿದ್ದೋನು ನೀನು. ನಿದ್ರೆ ಮಾಡ್ಬಿಟ್ಟೆ. ಯಾರೊ ಎತ್ತಿಬಿಟ್ರು... ಅದರಲ್ಲಿ ಯಾವುದೊ ಸುಳಿವು ಉಳಿದಿರ್ಬೇಕು."

"ನಾನು ಸ್ವಲ್ಪ ನಿದ್ರೆ ಮಾಡಿದ್ದು ನಿಜ, ಸ್ವಾಮಿ"

"ಈ ಮರಣದಲ್ಲಿ ನನ್ನ ಸಂಶಯ ಇನ್ನೂ ಬಲವಾಗ್ತಿದೆ. ಶವದ ಹತ್ತಿರ ಇದ್ದ ವಸ್ತುಗಳೆಲ್ಲಾ ಮುಖ್ಯ. ದೀಪದಿಂದ ಯಾವುದೊ ಸುಳಿವು ಸಿಗ್ತಿತ್ತು ಅನ್ನೋದು ನಿಜ... ಆಯ್ತು, ಈ ವಿಷಯ ನಮ್ಮ ಸಾಹೇಬರಿಗೆ ಸದ್ಯಕ್ಕೆ ತಿಳಿಸೋದು ಬೇಡ."

ಕೋಣೆ ಬಾಗಿಲಿನ ಹೊರಕ್ಕೆ ಚಿಲಕ ಇರಲಿಲ್ಲ. ತಂತಿಯಿಂದ ಬಾಗಿಲು ಬಿಗಿಸಿ ಮೊಹರು ಹಾಕಿ ವೇಗದ ಹೆಜ್ಜೆಯಲ್ಲಿ ಇಳಿದು ನೇರವಾಗಿ ಬಿಳಿಗೌಡನ ಬಳಿಗೆ ಬಂದ ಸಬ್ ಇನ್ಸ್‌ಪೆಕ್ಟರ್ ಮೆಲ್ಲನೆಯ ಸ್ವರದಲ್ಲಿ ಆತಂಕ ತೋರಿದ.

“ಗೌಡರೆ, ತನಿಖೆ ಕೆಡಿಸೊ ಕೆಲಸ ಆಗೋಗಿದೆ...”

“ತನಿಖೆ ಯಾಕೆ, ಸ್ವಾಮಿ?”

ಅವನಿಗಿಂತಲೂ ಹೆಚ್ಚಿನ ಆತಂಕ ಪ್ರಕಟಿಸಿದ ಗೌಡ.

“ನಿಮ್ಮ ದೆವ್ವದ ಕೋಣೇಲಿ ನಿನ್ನೆ ರಾತ್ರಿ ನಾನು ನೋಡಿದ ದೀಪ ಈಗ ಮಾಯವಾಗಿದೆ.... ಸಿಲಿಂಡರ್ ಆಕಾರದ ಲಾಂದ್ರ! ಅದು ನಮ್ಮ ತನಿಖೆಗೆ ಒಳಪಡೋದು ಯಾರಿಗೂ ಬೇಡವಾಗಿದೆ.”

“ಶಿವಶಿವ! ವಿಷಯ ಖಂಡಿತ ಕಾಣೆ. ಮನೇಲಿ ವಿಚಾರಿಸ್ತೀನಿ ತಾಳ್ರಿ”

ಕಚ್ಚೆ ಹಿಡಿದು ಮನೆಯ ಕಡೆಗೆ ತಿರುಗಿದವನನ್ನು ತಡೆದ.

“ನಿಮಗೆ ತಿಳಿದಿದ್ರೆ ಮಾತ್ರ ಹೇಳಿ. ಆ ವಿಷಯ ಎಲ್ಲರಿಗೂ ಗೊತ್ತಾಗೋದು ಬೇಡ. ನಮ್ಮ ಸಾಹೇಬರಂತೂ ಸಣ್ಣ ವಿಷಯ ಬೇಡ ಅಂತಲೇ ಅದನ್ನು ದೊಡ್ಡದು ಮಾಡಿ ರಂಪ ಮಾಡಿಬಿಡ್ತಾರೆ... ನಿಮ್ಮ ಮನೇಲಿ ಅಂತಾ ಲಾಂದ್ರಗಳು ಎಷ್ಟಿವೆ?”

“ಐದಾರು ಇರ್ಬೇಕು. ನನ್ನ ತಮ್ಮ ಮಿಲಟರಿಯಲ್ಲಿದ್ದೋನು. ಅಲ್ಲಿನ ಹರಾಜಿನಲ್ಲಿ ಏನೇನೊ ವಸ್ತುಗಳನ್ನು ತರೋವಾಗ ಈ ಲಾಂದ್ರಗಳನ್ನು ತಗೊಂಡು ಬಂದ. ಪ್ರತಿ ಕೋಣೆಯಲ್ಲೂ ಇವೆ. ಇತ್ತೀಚೆಗೆ ಕರೆಂಟ್ ಹೋಗೋಕೆ ಶುರುವಾದಾಗಿನಿಂದ ಅವುಗಳ ಬಳಕೆ ಹೆಚ್ಚಾಯ್ತು. ನಮ್ಮ ಆಳು ದಡಗುಂಟೆ ಇದಾನಲ್ಲ. ಅವನೇ ಅವನ್ನು ಒರೆಸಿ ಸೀಮೆಎಣ್ಣೆ ತುಂಬೋದು.”

“ನಿಮ್ಮ ಆಳಿಗೆ ಹೇಳಿ ಎಲ್ಲಾ ಲಾಂದ್ರಗಳನ್ನು ತರ್ಸಿ.”

ಗೌಡ ಮರುಮಾತಿಲ್ಲದೆ ಆಳನ್ನು ಕರೆದು ಲಾಂದ್ರಗಳನ್ನು ತರ ಹೇಳಿದ. ಐದು ನಿಮಿಷದಲ್ಲಿ ಐದು ಲಾಂದ್ರಗಳನ್ನು ತಂದು ಸಾಲಾಗಿರಿಸಿ ದಡಗುಂಟೆ ಸರಿದು ನಿಂತ.

ಐದು ದೀಪಗಳನ್ನೂ ಎತ್ತಿ ನೋಡಿದ ಅಧಿಕಾರಿ. ಒಂದೇ ಬಗೆಯ ಲಾಂದ್ರಗಳು. ಎಲ್ಲವೂ ಸಾಕಷ್ಟು ಸ್ವಚ್ಛವಾಗಿದೆ. ಎಲ್ಲದರಲ್ಲೂ ಸೀಮೆ ಎಣ್ಣೆಯ ತುಳುಕು ಶಬ್ದ ಕೇಳುತ್ತಿದೆ.

ತಲೆ ಕೊಡವಿದ ಎಸ್.ಐ.

“ದೆವ್ವದ ಕೋಣೆಯಲ್ಲಿದ್ದ ಲಾಂದ್ರ ಇಲ್ಲಿಲ್ಲ.”

“ಪ್ರತಿಯೊಂದೂ ಬಹಳ ನಿಗಾ ಇಟ್ಟು ನೋಡ್ತಿದ್ರೆ ನಮ್ಮ ಕಳವಳ ಹೆಚ್ಚಾಗತ್ತೆ. ನೀವು ಹೀಗೆಲ್ಲಾ ಮಾಡ್ತಿರೋದು ಸರಿಯೆ?”

ಗೌಡ ತಾನು ಆಡಿದುದು ಸರಿಯಲ್ಲವೆಂದು ಒಡನೆ ಅರಿತ. ಬಣವೆಯಲ್ಲಿ ಸೂಜಿ ಹುಡುಕುವ ಪ್ರವೃತ್ತಿಯ ಅಧಿಕಾರಿಗೆ ಹಾಗೆ ಆಡಬಾರದಿತ್ತು ಎನಿಸಿತು. ಬಹುಶಃ ತನ್ನ ಮೇಲೆ ಸಂಶಯ?

ಅಧಿಕಾರಿ ತನ್ನ ಮಾತು ತೆಗೆದ.

"ಆ ಲಾಂಧ್ರದಲ್ಲಿ ತೊಟ್ಟು ಎಣ್ಣೆ ಇರ್ಲಿಲ್ಲ. ದೀಪದ ಗಾಜಿನ ಮೇಲು ಭಾಗ ಸಿಡಿದ ಹಾಗೆ ಸ್ವಲ್ಪ ಒಡೆದಿತ್ತು. ಹೀಗೆ ಮಸಿ ಹಿಡಿದಿತ್ತು... ಅಂದರೆ ದೀಪವನ್ನು ಈಚೆಗೆ ಯಾರೂ ಬಳಸಿಲ್ಲ..."

ದಿವಾಕರನ ಮಾತು ಪೂರೈಸುವ ಮೊದಲೇ ಆಳು ದಡಗುಂಟೆ ತಟಕ್ಕನೆ ಅಡ್ಡ ನುಡಿದ.

"ಭಗವಂತಯ್ಯನ ಗೂಡ್ನಾಗಿರೊ ಲಾಂದ್ರ ಸ್ವಾಮಿ ಅದು. ಅಲ್ಲಿರ್ನಿಲ್ಲ ದೀಪ ಈಗ."

ನಂದೀಶ ಗೌಡನತ್ತ ಚಕಿತ ನೋಟ ಹಾಕಿದ.

"ಭಗವಂತಯ್ಯ?" ಮುಖ ಹಿಡಿದ ಎಸ್.ಐ.

"ಅದೇ ನಮ್ಮ ಅಡಿಗೆ ಆಳು ಭಗವಂತ."

ಎಂದ ಗೌಡ ತಾನೇ ಅಪರಾಧಿ ಎನಿಸುವಂತೆ ಮುಖ ವಕ್ರ ಮಾಡಿ ಮತ್ತೆ ಸಾವರಿಸಿಕೊಮಡ.

"ಆ ಹಳೇ ಲಾಂದ್ರದಿಂದ ಏನು ಪ್ರಯೋಜನ, ಸಾಹೇಬ್ರೆ? ಅಡಿಗೆಯೋನ ಗೂಡಿನಿಂದ ದೆವ್ವದ ಕತ್ತಲೆ ಕೋಣೆಗೆ ಲಕ್ಷ್ಮಣ ಅದನ್ನ ಒಯ್ದಿದ್ರೆ ಹೆಚ್ಚಲ್ಲ."

ಸನ್ನೆ ಮಾಡಿ ಆಳನ್ನು ಸಮೀಪಕ್ಕೆ ಕರೆದ ದಿವಾಕರ. ದಡಗುಂಟೆ ಬೆದರುತ್ತಾ ಸಮೀಪಕ್ಕೆ ಬಂದು ಕೈಕಟ್ಟಿದ.

"ಬಂದೆ ಬುದ್ದಿ."

"ಈ ದೀಪಕ್ಕೆ ಎಣ್ಣೆ ಭರ್ತಿ ಮಾಡಿ ಹಚ್ಚಿಟ್ರೆ ಎಷ್ಟು ಹೊತ್ತು ಉರಿಯುತ್ತೆ?"

"ರಾತ್ರಿ ಹಚ್ಚಿದ್ರೆ ಬೆಳಗಾನ ಉರೀತದೆ... ನಾಳೆ ಹತ್ಗಂಟೆ ಹೊತ್ನಾಗೆ ಆರಬೋದು."

"ನಾಪತ್ತೆ ಆಗಿರೊ ಲಾಂದ್ರದಲ್ಲಿ ತೊಟ್ಟು ಎಣ್ಣೆ ಇರ್ಲಿಲ್ಲ. ಬಹಳ ದಿನದಿಂದ ಹಾಕಿರೋದೂ ಕಾಣೆ. ಎಣ್ಣೆ ಇಲ್ಲದ ದೀಪವನ್ನು ಲಕ್ಷ್ಮಣ ಅಡಿಗೆ ಕೋಣೆಯಿಂದ ಒಯ್ದು, ಎಣ್ಣೆ ಇಲ್ಲ ಅಂತ ಆಮೇಲೆ ಗೊತ್ತಾಗಿರಬೇಕು. ದೀಪ ಹೊತ್ತಿಸೊ ಪ್ರಯತ್ನ ಮಾಡಿಲ್ಲ. ಕೋಣೆಯಲ್ಲಿ ಬೆಂಕಿಕಡ್ಡಿ, ಬೆಂಕಿ ಪೊಟ್ಟಣ ಸಿಕ್ಕಿಲ್ಲ. ಲಕ್ಷ್ಮಣ ಕತ್ತಲಿನಲ್ಲಿ ಹಾಗೇ ಕೂತುಬಿಟ್ಟ... ಆ ಲಾಂದ್ರನ ಹಾರಿಸೊ ಅಗತ್ಯ ಯಾರಿಗಿತ್ತು?"

ಎಸ್.ಐ. ಗೊಣಗು ಸ್ವರ ಹೊರಡಿಸುತ್ತಾ ಗೌಡನ ಕಡೆಗೆ, ಆಳಿನ ಕಡೆಗೆ ನೋಡಿದ. ಮತ್ತೆ ಯಾವುದೊ ನೆನಪು ಬಂತು. ಮುಖ ಎತ್ತಿದ.

"ಆ ಟೇಪ್‌ರಿಕಾರ್ಡರ್ ಲಕ್ಷ್ಮಣನಿಗೆ ಸೇರಿದ್ದೆ?"

ನೇರವಾಗಿ ಬಂತು ಗಂಭೀರ ಉತ್ತರ.

"ಯಾಕೆ ಸತಾಯಿಸ್ತಾ ಇದೀರಿ? ರಾತ್ರಿಯೇ ಹೇಳ್ದೆ ಅದು ನನ್ನ ತಮ್ಮನ ಸ್ವತ್ತು

ಅಂತ... ಮತ್ತೆ ನನ್ನ ತಮ್ಮ ಯಾರು ಅಂತೀರಾ?... ನನ್ನ ತಮ್ಮ ಕೋಟೆಗೌಡ! ಅದನ್ನ ಲಕ್ಷ್ಮಣ ಒಬ್ಬನೇ ಅಲ್ಲ, ಮನೆಯೋರೆಲ್ಲಾ ಉಪಯೋಗಿಸ್ತಿದ್ರು... ಸಾಹೇಬ್ರೆ, ಮನೆ ಜನ ಹಜಾರದಲ್ಲಿ ಕಾಯ್ತಾ ಇದಾರೆ. ನೀವು ಯಾರ ಹೇಳಿಕೆ ತೊಗೊಳೊದಾದ್ರೂ ಸರಿ"

"ನನಗೆ ಎಲ್ಲರ ಹೇಳಿಕೆಯೂ ಬೇಕು, ಗೌಡರೆ. ನಿಮ್ಮ ಹೇಳಿಕೆ ಮುಗೀತೂಂತ ತಿಳೀಬೇಡಿ. ಮತ್ತೆ ಮತ್ತೆ ಕೇಳ್ತೀನಿ, ಮನೆ ಮಂದಿ ಯಾರೂ ಎಲ್ಲಿಗೂ ಹೋಗಬಾರದೂಂತ ತಿಳಿಸಿ."

"ತಿಳಿಸ್ತೀನಿ. ಯಾಕೊ ಬಲು ಫಜೀತಿಗೆ ಬಂತು. ದೆವ್ವ ನಮಗೆ ಕಾಡ್ತಿದೆ... ಡಿ.ಐ.ಜಿ.ಗೆ ಫೋನ್ ಮಡಲೇಬೇಕು." ಲಘು ಬೆದರಿಕೆ ತೋರಿಸಿದ ಬಿಳಿಗೌಡ.

"ಡಿ.ಐ.ಜಿ. ಒಂದು ವಾರ ರಜ" ಗೌಡನ ಬಾಯಿ ಬಡಿದ.

3

ಗಂಟಲು ಕೇಕರಿಸಿ ಹಿಂಬಾಗಿಲಿನಿಂದ ಬಂದವನು ದಿವಾಕರನ ಕಡೆಗೆ ಕೈ ಎತ್ತಿ "ಗುಡ್ ಮಾರ್ನಿಂಗ್, ಸರ್" ಎಂದ.

ಪಟ್ಟಿ ಪಾಯಿಜಾಮ, ಪಟ್ಟೆ ಷರಟಿನ ಮಲಗುವ ಉಡುಪು. ಬುಟ್ಟಿಯಂತಹ ಕಪ್ಪು ಟಓಪಿ, ದಪ್ಪ ಮೀಸೆ.

ದಿವಾಕರ ಏನು ಪ್ರತಿ ನುಡಿಯದೆ ಕೈ ಆಡಿಸಿ ಗೌಡನನ್ನು ಮೆಲ್ಲನೆ ಕೇಳಿದ.

"ಯಾರಿದು?"

"ನನ್ನ ತಮ್ಮ ಕೋಟೆಗೌಡ."

ಸಮೀಪಕ್ಕೆ ಬಂದ ಕೋಟೆಗೌಡ ಆಳಿಗೆ ಹೇಳಿ ಎರಡು ಕುರ್ಚಿ ತರಿಸಿ ಹಿಪ್ಪೆ ಮರದ ಕೆಳಗೆ ಹಾಕಲು ಹೇಳಿದ. ಬಿಳಿಗೌಡ ಸ್ಥಳದಿಂದ ಸರಿದು ಹೋದ.

"ಇನ್ಸ್‌ಪೆಕ್ಟರ್ ಸರ್...."

"ಅಲ್ಲ, ಸಬ್ ಇನ್ಸ್‌ಪೆಕ್ಟರ್ ದಿವಾಕರ."

"ಕ್ಷಮಿಸಿ, ಮಿಸ್ಟರ್ ದಿವಾಕರ. ರಾತ್ರಿಯಿಂದ ನಾವು ಬೋನಿನಲ್ಲಿ ಸೇರಿದ ಪ್ರಾಣಿಗಳು. ನಮ್ಮಣ್ಣ ಹೊರಗೆ ಬರೋಕೆ ಯಾರನ್ನೂ ಬಿಟ್ಟಿಲ್ಲ. ನನ್ನ ಕೇಳೋದು ಏನಾದ್ರು ಇರಬೋದು. ಇವತ್ತು ನಾನು ಸಿಟಿಗೆ ಹೋಗ್ಬೇಕು. ಹೇಳಿ ಹೋಗೋಣ ಅಂತ ಬಂದೆ."

"ಕೋಟೆಗೌಡರೆ, ಅದೇ ಮಾತು ನಿಮ್ಮಣ್ಣನಿಗೆ ಹೇಳ್ತಾ ಇದ್ದೆ. ಅವರಿಗೆ ಬೇಸರವಾಗಿದೆ. ಯತ್ನವಿಲ್ಲ ಒಂದೆರಡು ಗಂಟೆ ಕಾಲ ಮನೆಯೋರು ಎಲ್ಲೂ ಹೋಗದೆ

ನನಗೆ ಸಹಕಾರ ಕೊಟ್ರೆ ಉಪಕಾರ ಮಾಡಿದ ಹಾಗೆ."

"ಉಪಕಾರ ಅಲ್ಲ, ನಮ್ಮ ಕರ್ತವ್ಯ. ಸಹಕಾರ ಕೊಡೋಣ. ನಮ್ಮಣ್ಣ ಆಗಲೇ ತಿಳಿಸ್ದ. ಇಲ್ಲಿ ತನಿಖೆ ಪ್ರಾರಂಭ ಆಗಿದೆಯಂತೆ. ನಡೆದಿರೋದು ಒಂದು ವಿಚಿತ್ರ ಭಯಾನಕ ಪ್ರಸಂಗ. ಒಬ್ಬ ಆತುರದ ಹುಚ್ಚು ಯುವ, ಮರಣದೊಂದಿಗೆ ಸರಸ ಆಡಲಿಕ್ಕೆ ಹೋಗಿ ಸೋತಿದ್ದಾನೆ. ಪ್ರೇಮಕ್ಕೆ ಬಲಿ ಆಗಿದ್ದಾನೆ. ಅವನ ವಿಷಯದಲ್ಲಿ ನಾವು ಹೇಳೋದೇನಿದೆ?... ನೀವು ಇರಲೇಬೇಕು ಅಂತೀರಿ. ಸಿಟಿಗೆ ಹೋಗೋದು ಬೇಡಾಂತ ಇದ್ದುಬಿಡ್ತೀನಿ."

ಕೊಟೇಗೌಡ ಸಿಗರೇಟು ನೀಡಿದ. ಎಸ್.ಐ. ಅದನ್ನು ಬೇಡವೆಂದಾಗ ತಾನೊಂದು ಹಚ್ಚಿದ.

"ದಡಗುಂಟೆ, ಎರಡು ಕಾಫಿ ತರಲಿಕ್ಕೆ ಹೇಳು ಭಗವಂತನಿಗೆ" ಗೌಡ ಕೂಗಿ ಹೇಳಿದ. ಅದನ್ನೂ ನಿರಾಕರಿಸಿದ ಅಧಿಕಾರಿ.

"ಕ್ಷಮಿಸಿ, ಕೋಟೆಗೌಡ. ಇದು ಸಣ್ಣ ವಿಷಯ ಆದ್ರೂ ನಮ್ಮ ಸಾಹೇಬರಿಗೆ ದೊಡ್ಡ ವಿಷಯ. ನಾನು ಡ್ಯೂಟಿ ಮೇಲೆ ಇರೋವಾಗ ಇಲ್ಲಿ ಕಾಫಿ ಕುಡಿಯೋದು ಆಕ್ಷೇಪಣೆಗೆ ದಾರಿ... ಇದು ನೀವು ಕೊಡೊ ಹೇಳಿಕೆ ಅಂತ ತಿಳೀಬೇಡಿ. ನನ್ನ ಪ್ರಶ್ನೆ ಬೇಡ. ನೀವೇ ಶುರು ಮಾಡಿ"

"ಇವೆಲ್ಲಾ ಶುರು ಆಗಿದ್ದು ಲಕ್ಷ್ಮಣ ಈ ಮನೇಲಿ ಕಾಣಿಸಿಕೊಂಡ ಮೇಲೆ. ಸುಮಾರು ನಾಲ್ಕು ತಿಂಗಳ ಹಿಂದೆ ಕಾಲುವೆ ಪಕ್ಕದಲ್ಲಿ ಪುಷ್ಪಾ ವಾಕಿಂಗ್ ಹೊರಟಾಗ ಅವನ ಪರಿಚಯ ಆಯ್ತಂತೆ. ಮನೆಗೆ ಬರ್ತಿದ್ದ ವಿಚಾರವಾದಿ ಯುವಕ ಗುಂಪಿನ ಉತ್ಸಾಹದ ಹುಡುಗ ನಮ್ಮಣ್ಣನ ಸಂಗಡ ಒಂದೆರಡು ಸಾರಿ ಜಾತಿ, ಮೂಢನಂಬಿಕೆ ಮೇಲೆ ಚರ್ಚೆ ಮಾಡ್ದ. ಪುಷ್ಪಳಿಂದ ಅವನಿಗೆ ಈ ಮನೆಯ ಪರಿಚಯ ಆಯ್ತು. ಯಾರಿಗೂ ಗೊತ್ತಿಲ್ಲ. ಘನವಾದ ಪ್ರೇಮ! ಅದರ ಮುಮೆ ಜಾತಿ, ಅಂತಸ್ತು, ವಿವೇಚನೆ ಎಲ್ಲಾ ಹಾರಿಹೋದ್ವು. ಲಕ್ಷ್ಮಣನಿಗೆ ಏನೂ ಇರಲಿಲ್ಲ. ತನ್ನೊಬ್ಬನ್ನ ಸಾಕಿಕೊಳ್ಳೊ ಶಕ್ತಿಯೂ ಇಲ್ಲದೋನು. ನಾಳೆ ಇವಳೇ ಅವನ್ನ ಸಾಕಬೇಕು. ಅವರ ಮದುವೆ ಅಸಾಧ್ಯ ಅಂತ ಕಡಾಖಂಡಿತವಾಗಿ ಹೇಳಿಬಿಟ್ಟ ನಮ್ಮಣ್ಣ. ಬಿಳಿಗೌಡನ ಮಾತು ಅಂದ್ರೆ ಕೋರ್ಟಿನ ತೀರ್ಪು. ಜಾತಿ, ಕಂದಾಚಾರ, ಸಂಪ್ರದಾಯ, ಕುಲಗೌರವ ಅಂದ್ರೆ ಪ್ರಾಣ ಕೊಡ್ತಾನೆ... ಈಗ ನೊಡಿ ಕೂರನಗೆರೆ ಹತ್ರ ನಮ್ಮಪ್ಪನಿಂದ ಬಂದ ಮೂವತ್ತು ಎಕರೆ ಜಮೀನಿದೆ ಅಲ್ಲಿ ಏನೂ ಬೆಳೆಯೋದಿಲ್ಲ. ಕಾರ್ಖಾನೆ ಹಾಕೋರು ಎಷ್ಟೋ ಜನ ಬಂದ್ರು. ಒಂದಕ್ಕೆರಡು ಬೆಲೆ ಕೊಡ್ತೀನಿ ಅಂದ್ರೂ ತಲೆ ಆಡಿಸ್ಲಿಲ್ಲ. ಅಪ್ಪನಿಂದ ಬಂದ ಆಸ್ತಿ, ಮಾರೋದೆ ಅಂತ ಕಂದಾಯಕ್ಕೆ ನೇಣುಹಾಕೊಳ್ತಾ ಇದಾನೆ... ವಿಷಯ ಬಿಟ್ಟು ಏನೊ ಮಾತಿಗೆ ಬಂದೆ."

"ಚೆನ್ನಮ್ಮನ ಚಾಳಿ ಸ್ನೇಹಲತಾಗೆ ಹತ್ಕೊಮಡ್ತು ಅಂತ ಆಡ್ತಿದ್ವಿ."

"ಹಾಗೆ ಅನ್ನಿ, ಚೆನ್ನಮ್ಮನ ಪ್ರೇಮ ವಿಫಲವಾಗಿದ್ದಕ್ಕೆ ಅವಳು ದೆವ್ವ ಆದ್ಲು.

ಇವಳು ಯಾಕೆ ಹಾಗಾಗ್ಬೇಕು? ನಾನು ಮಿಲಟರಿಯಲ್ಲಿದ್ದ ಮನುಷ್ಯ. ದೆವ್ವ, ಭೂತ, ಆತ್ಮ ಅನ್ನೋದರಲ್ಲಿ ಮೊದಲು ನಂಬಿಕೆ ಇರಲಿಲ್ಲ. ನಮ್ಮ ಕಮ್ಯಾಂಡರ್ ದೆವ್ವ ಇದೇಂತ ಸ್ವಂತ ಅನುಭವದಿಂದ ಹೇಳ್ತಿದ್ರು. ನನಗೂ ನಂಬಿಕೆ ಬಂತು...ನಮ್ಮ ವಂಶದಲ್ಲಿ ಇದೊಂದು ಕಪ್ಪು ಕಥೆ. ನನ್ನ ಸೋದರತ್ತೆ ಚೆನ್ನಮ್ಮ ಬೇರೆ ಮತದೋನ್ನ ಪ್ರೀತಿಸಿ ಮದುವೆ ಆಗೊ ಘಟ್ಟಕ್ಕೆ ಬಂದ್ಲು. ನಮ್ಮ ತಾತ ಅವಳ ಪ್ರೇಮ ಸಪ್ಪಿಸಿ, ವಂಶದ ಘನತೆ ಕಾಪಾಡೋದಕ್ಕೆ ಇಲ್ಲಿಗೆ ಬಂದು ನೆಲಸಿದ. ಅವಳು ಸತ್ತು ಹೋದ್ಲು. ಅವಳ ಆತ್ಮ ಇಲ್ಲಿ ಸುತ್ತಾಡಿದೆ. ಬಿಳಿ ಸೀರೆ ಉಟ್ಟು ಈ ಸರಹದ್ದಿನಲ್ಲಿ ಸುತ್ತಾಡ್ತಾಳೇಂತ ಇಲ್ಲಿ ಜನ ಹೇಳ್ತಾರೆ. ನಾನು ನೊಡಿಲ್ಲ. ನಮ್ಮಣ್ಣನಿಗೆ ಇದರಲ್ಲಿ ಪೂರಾ ನಂಬಿಕೆ. ಅವಳ ದೆವ್ವದ ಕೋಣೆಗೆ ಗೌರವ ಸಲ್ಲಿಸ್ತಾನೆ. ವಂಶದ ಗೌರವ ಉಳಿಬೇಕು ಅನ್ನೋದು, ಚೆನ್ನಮ್ಮನ ಗತಿ ಮಗಳಿಗೆ ಬರೋದು ಬೇಡ ಅನ್ನೋದು ಅಣ್ಣನ ಸಂಕಲ್ಪ... ಲಕ್ಷ್ಮಣನಿಗೆ ತನ್ನ ಆಸೆ ಕೈಗೂಡೋದಿಲ್ಲಾಂತ ತಿಳೀತು. ಹುಚ್ಚು ಪ್ರೇಮ ಧೂರ್ತ ಸಾಹಸಕ್ಕೆ ಪ್ರೇರೇಪಿಸಿತ್ತು. ಚೆನ್ನಮ್ಮನಿಂದಲೇ ಮದುವೆಗೆ ಒಪ್ಪಿಗೆ ತರ್ತೀನಿ ಅಂದ ಧೈರ್ಯಸ್ಥ. ದೆವ್ವದ ಕೋಣೆಗೆ ಹೋಗೋದು ಬೇಡಾಂದೆ ನಾನು. ನಮ್ಮಣ್ಣ, ಲಕ್ಷ್ಮಣ ಇಬ್ಬರೂ ಜಗ್ಗೋರಲ್ಲ... ಆಮೇಲೆ ನಾನು ಲಕ್ಷ್ಮಣನಿಗೇ ಉತ್ತೇಜನ ಕೊಟ್ಟೆ. ಯಾಕೇಂತ ನೀವು ಕೇಳಬೋದು, ಸ್ನೇಹಲತಾ ಈ ಕಾಲದ ವಿಚಾರವಾದಿ ಯುವತಿ. ಅಂತರ್ಜಾತಿಯ ವಿವಾಹ ಅಪರೂಪ ಅಲ್ಲ, ಪಾಪವೂ ಅಲ್ಲ. ಈ ಮನೇಲಿ ಅವಳಿಗೆ ಒಬ್ಬರಾದ್ರೂ ಬೆಂಬಲ ಕೊಡಬೇಡವೆ? ಅವಳಿಗಾಗಿ ಆರಿಸಿಕೊಂಡಿರೊ ಹುಡುಗನಿಗೆ ನನ್ನ ಅಡ್ಡಿ ಯಾಕೆ? ಅವಳು ಸಂತೋಷವಾಗಿ ಬದುಕಲಿ ಅಂತ ಹುಡುಗನ್ನ ಸಾಹಸಕ್ಕೆ ಹಾರೈಸಿದೆ. ಹುಡುಗ ದೆವ್ವನ ಒಲಿಸಿಕೊಂಡು ಬಂದಿದ್ದಕ್ಕೆ ರುಜುವಾತು ಕೊಡ್ತೀನಿ ಅಂತ. ನನ್ನ ಟೇಪ್ ರೆಕಾರ್ಡರ್ ಕೇಳಿ ತೊಗೊಂಡು ಹೋದ. ಅದರಲ್ಲಿ ಏನು ರೆಕಾರ್ಡ್ ಆಗಿದೆಯೊ ಗೊತ್ತಿಲ್ಲ."

"ಟೇಪ್ ರೆಕಾರ್ಡರ್ ನಿಮ್ಮದು ಅಂತ ಬಿಳಿಗೌಡರು ಹೇಳಿದ್ರು."

"ಅದನ್ನ ಬೊಂಬಾಯಿಯಿಂದ ತಂದೆ. ಎಲ್ಲರೂ ಅದನ್ನ ಉಪಯೋಗಿಸ್ತಿದ್ರು."

"ನಿನ್ನೆ ದಿನ ನಡೆದಿದ್ದೇನು?"

"ಲಕ್ಷ್ಮಣ ದೀಪ ಆರಿದಾಗ ಬಂದ. ದೀಪ ಬಂದ ಮೇಲೆ ಇಲ್ಲೇ ಊಟ ಮಾಡ್ದ. ದೆವ್ವದ ಕೋಣೆಗೆ ಹೋಗೋದು ಮೊನ್ನೆಯೇ ಹೇಳಿದ್ದ. ಅಣ್ಣ ಹೋಗೋದು ಬೇಡಾಂತ ಕಡೇ ಸಾರಿಗೆ ಹೇಳ್ದ. ನಾನು, ಸ್ನೇಹ ಒಲ್ಲದ ಮನಸ್ಸಿನಲ್ಲಿ ಹಾರೈಸಿದ್ವಿ, ಹನ್ನೊಂದೂವರೆ ಹೊತ್ತಿಗೆ ಲಕ್ಷ್ಮಣ ನನ್ನ ಕೋಣೆಗೆ ಬಂದು ಟೇಪ್ ರೆಕಾರ್ಡರ್ ಎತ್ಕೊಂಡ."

"ಮನೆಯೋರೆಲ್ಲಾ ಒಟ್ಟಾಗಿ ಬೀಳ್ಕೊಟ್ರೆ?"

"ಊಹುಂ, ಈಗ ಕಗ್ಗತ್ತಲೆ ಮನೆ. ದೀಪ ಮತ್ತೆ ಹೋಗಿತ್ತು. ಮನೆಯೋರು ಅವರವರ ಕೋಣೆಗಳಲ್ಲಿದ್ದರು."

"ದೆವ್ವದ ಕೋಣೆನ ಈ ಮನೆಯ ಯಾವ ಕೋಣೆಯಿಂದ ನೋಡೋದಿಕ್ಕೆ

ಸಾರ್ಧ್ಯೆಯ?

“ಯಾರ ಕೋಣೆಯಿಂದಲೂ ದೆವ್ವದ ಕೋಣೆ ಕಾಣೋದಿಲ್ಲ.”

“ಲಕ್ಷ್ಮಣ ಜೊತೇಲು ಏನು ಒಯ್ದ?”

“ಎಡಗೈಲಿ ಟೇಪ್ ರೆಕಾರ್ಡರ್, ಬಲಗೈಲಿ ಲ್ಯಾಂಪ್ ಹಿಡಿದು ಹೊರಟ. ಅದೇ ಕಡೆ ನಾನು ಅವನನ್ನ ನೋಡಿದ್ದು”

“ಯಾವ ಲಾಂದ್ರ ಅದು?”

“ನನ್ನ ಕೋಣೆ ಲಾಂದ್ರವಂತೂ ಅಲ್ಲ.”

“ಲಾಂದ್ರಗಳನ್ನ ನೋಡಿ. ಸೊಗಸಾದ ಲಾಂದ್ರಗಳು! ನೀವು ತಂದ್ರಂತೆ ಅವನ್ನ ಈ ಮನೆಗೆ”

“ನನಗೆ ಅಪರೂಪವಾದ ವಸ್ತುಗಳನ್ನ ಸಂಗ್ರಹಿಸೊ ಹುಚ್ಚು.”

“ಆಗ ವರದಪ್ಪ ಎಲ್ಲಿದ್ದ?”

“ನಮ್ಮಣ್ಣನ ಮಗನ ಕೋಣೇಲಿ, ನಾಗರಾಜಪ್ಪ ನಮ್ಮಣ್ಣನ ಮಗ.”

“ವರದಪ್ಪ ತನ್ನ ಪ್ರತಿಸ್ಪರ್ಧಿನ ತಡೆಯಲಿಲ್ಲವೆ?”

“ತಡೆಯೋಕೆ ಪ್ರಯತ್ನ ಮಾಡ್ದ. ಏನೂ ನಡೀಲಿಲ್ಲ... ಪ್ರತಿ ಸ್ಪರ್ಧೆ ಎಲ್ಲಿ ಬಂತು, ಸಾರ್. ಆಗ ಲಕ್ಷ್ಮಣ ಪ್ರೇಮದ ಸ್ಪರ್ಧಿ ಅಲ್ಲ. ಬಲಿಯಾಗೋದಿಕ್ಕ ಹೊರಟ ಮೇಕೆ.”

“ಆಮೇಲೆ?”

“ಹನ್ನೆರಡು ಗಂಟೆಗೆ ಸರಿಯಾಗಿ ದೆವ್ವದ ಕೋಣೆಯಿಂದ ಒಂದು ಚೀತ್ಕಾರ ಕೇಳ್ತು. ನಾನು ಬಾಗಿಲಿನಿಂದ ಇಣಿಕ್ದೆ. ನಮ್ಮಣ್ಣ ಅದೇ ಕಾಲಕ್ಕೆ ಹಜಾರದಲ್ಲಿ ಕಾಣಿಸ್ದ. ಪೊಲೀಸ್‌ಗೆ ತಿಳಿಸೋದಕ್ಕೆ ಹೋಗ್ತಿದೀನಿ ಅಂದ. ಯಾರೂ ಹೊರಗೆ ಬರಬಾರದೂಂತ ಅಪ್ಪಣೆ ಕೊಟ್ಟ. ಅವನೇ ಹೋಗಿ ಫೋನ್ ಮಾಡಿ ಬಂದ.”

“ಚೀತ್ಕಾರ ಕೇಳಿದ್ದು ಸರಿಯಾಗಿ ಹನ್ನೆರಡು ಗಂಟೆಗೆ ಅಂತೀರಾ?”

ಕೂಗು ಕೇಳಿದುದು ಸರಿಯಾಗಿ ಹನ್ನೊಂದು ಐವತ್ತೈದಕ್ಕೆ ಎಂಬ ಬಿಳಿಗೌಡನ ಹೇಳಿಕೆ ತಲೆಯಲ್ಲಿ ನುಸುಳಿ ಹೋಯಿತು.

“ಸರಿಯಾಗಿ ಹನ್ನೆರಡು ಗಂಟೆ ಆಗ. ದೆವ್ವ, ಪಿಶಾಚಿಗಳ ಸಂಚಾರದ ವೇಳೆ ಅದು ಅಂತಾರೆ.”

ದಿವಾಕರ ಅವನ ಕೈಗಡಿಯಾರ ನೊಡಿದ. ತನ್ನ ಗಡಿಯಾರಅದಕ್ಕಿಂತ ಐದು ನಿಮಿಷದಷ್ಟು ಹಿಂದಿದೆ!

“ನೀವು ಆ ಕೋಣೆಗೆ ಎಂದಾದ್ರು ಹೋಗಿದ್ರಾ?”

ಬುಜ ಏರಿಸಿದ ಕೋಟೆಗೌಡ.

“ದೆವ್ವದ ಕೋಣೆಗೆ! ಆ ಕೋಟಲೆ ಬೇಡ ನನಗೆ. ಧೈರ್ಯವೂ ಇಲ್ಲಾನ್ನಿ. ಐವತ್ತು ವರ್ಷದಿಂದ ವರ್ಷಕ್ಕೆ ಒದ್ಸಾರಿ ಮಾತ್ರ ಅದರ ಬಾಗಿಲು ತೆಗೀತಾರೆ. ಅದು ಪುರೋಹಿತರು ಮಾತ್ರ. ಚೆನ್ನಮ್ಮ ಯುಗಾದಿಯ ಮಾರನೆ ದಿನ ಬಾಗಿಲು ತೆಗೆಯೋಕೆ ಅನುಮತಿ ಕೊಟ್ಟಿದ್ಲಂತೆ. ವರ್ಷದ ತೊಡಗಿನ ದಿನ ಅವಳ ಪ್ರೇಮ ಆರಂಭ ಆಗಿರಬೇಕು. ಇಲ್ಲಾ ಮುಕ್ತಾಯವಾಗಿರಬೇಕೂಂತ ತೋರತ್ತೆ. ಅದೊಂದು ದಿನ ಬಿಟ್ಟು ಮತ್ತೆ ಯಾವಾಗ ಬಾಗಿಲು ತಎಗೆದ್ರೂ ಅನಾಹುತ ಖಂಡಿತ ಅಂತ ಕಟು ಎಚ್ಚರಿಕೆ ಕೊಟ್ಟಿದ್ಲಂತೆ. ತೆಗೆದರೆ ಏನಾಗತ್ತೇಂತ ಯಾರೂ ಪರೀಕ್ಷೆ ಮಾಡ್ಲಿಲ್ಲ. ಲಕ್ಷ್ಮಣ ಪರೀಕ್ಷೆ ಮಾಡ್ದ....!”

“ಲಕ್ಷ್ಮಣನ ಸಾವಿನಿಂದ ಯಾರಿಗೆ ಲಾಭ?”

ತಲೆ ಕುಣಿಸಿದ ಕೋಟೆಗೌಡ. ಟೋಪಿ ತೆಗೆದ.

“ಯಾರಿಗೂ ಲಾಭ ಇಲ್ಲ, ಸಾರ್. ನಷ್ಟ ಆಗಿದ್ದು ನನ್ನ ಅಣ್ಣನ ಮಗಳಿಗೆ. ಪ್ರೇಮಿ ಇಲ್ಲವಾದ.”

“ವರದಪ್ಪನಿಗೆ ಲಾಭ ಆಗಲಿಲ್ಲವೆ?”

“ವರದಪ್ಪ ಸ್ನೇಹಲತಾನ ಬಯಸಿ ಬಂದೋನಲ್ಲ. ನಮ್ಮಣ್ಣ ಅವನ್ನ ಸರಿಯಾದ ಅಳಿಯ ಅಂತ ಗೊತ್ತು ಮಾಡ್ಕೊಂಡು ಮಾತುಕತೆ ನಡೆಸ್ದ. ಆಮೇಲೆ ಶುರು ಆಗಿದ್ದು ಲಕ್ಷ್ಮಣ ಕಾಟ, ಹುಲ್ಲು ಕೆರೆ ನಾಗೇಗೌಡ ನಮ್ಮಣ್ಣನ ಸ್ನೇಹಿತ, ಭಾರಿ ಶ್ರೀಮಂತ. ಅವನ ಮಗ ವರದಪ್ಪನಿಗೆ ಹತ್ತಾರು ಕಡೆ ಹೆಣ್ಣು ಕೊಡೋರು ಕಾದಿದಾರೆ.”

“ಇನ್ನು ನೀವು ಸಿಟಿಗೆ ಹೋಗಬಹುದು. ಅಗತ್ಯವಾದರೆ ಮತ್ತೆ ಕಾಣ್ತೀನಿ” ಕೋಟೆಗೌಡ ಟೋಪಿ ತಲೆಗೆ ಒತ್ತಿ ಹೊರಬಿದ್ದ.

4

ನಾಟಕದಲ್ಲಿ ಒಬ್ಬ ಎಡಪಾರ್ಶ್ವಕ್ಕೆ ಸರಿದಾಗ ಮತ್ತೊಬ್ಬ ಬಲಪಾರ್ಶ್ವದಿಂದ ಪ್ರವೇಶಿಸುವಂತೆ, ಕೋಟೆಗೌಡ ನಿರ್ಗಮಿಸುವುದನ್ನೇ ಕಾದಿದ್ದ ನಾಗರಾಜಪ್ಪ ದಪ್ಪನೆಯ ಚರ್ಮದ ಚೀಲ ಹಿಡಿದು ಒಂದು ಕುರ್ಚಿ ಎಳೆದು ಕುಳಿತ.

“ಗೌಡರ ಮಗ ಅಲ್ಲವೆ?”

ಚಕಿತನಾದರೂ ಗಂಭೀರವಾಗಿ ಕೇಳಿದ ಎಸ್.ಐ.

“ಹೌದು, ನಾಗರಾಜಪ್ಪ.”

ನೀಳಗೂದಲು ತುಂಬಿದ ತಲೆ. ನಗೆ ಮುಖ, ತೀಕ್ಷ್ಣ ಕಣ್ಣುಗಳು. ನಾಲ್ಕಾರು

ಬಣ್ಣಗಳ ಅಡ್ಡ ಗೆರೆಗಳ ಎಲಿಫೆಂಟ್ ಬಾಟಮ್ ಪ್ಯಾಂಟು, ತುಂಬು ತೋಳಿನ ಷರಟು.

"ಮಾರಾಟದ ಪ್ರತಿನಿಧಿ ಇರ್ಬೇಕು"

ನಾಗರಾಜಪ್ಪ ಕುರ್ಚಿಯಲ್ಲಿ ಮುಂದಕ್ಕೆ ಸರಿದ.

"ಅದಕ್ಕಿಂತ ಹೆಚ್ಚಾಗಿ ಮಾತು ಖರ್ಚು ಮಾಡೋ ಕಸುಬು... ವಿಮಾ ಏಜೆಂಟ್, ಹೋದ ವರ್ಷ ಇಪ್ಪತ್ತೈದು ಲಕ್ಷದ ವ್ಯವಹಾರ ಪೂರೈಸಿ ಕೊಟ್ಟೆ. ಹೋದ ಸಾರಿಯ ಬಹುಮಾನ ನನಗೆ ಬಂದಿದ್ದು, ಈ ಸಾರಿ ಮಳೆ ಇಲ್ಲದೆ ಬಿಸಿನೆಸ್ ಡಲ್ ಆಗಿದೆ"

"ಮಳೆ ಇಲ್ಲದ ಕಡೆ ಬೆಳೆ ತೆಗೆಯೊ ಜಾತಿಯೋರು. ಈಗ ಯಾಕೆ ಬಂದ್ರಿ?"

"ನಿಮ್ಮಿಂದ ಕೇಳಿಸಿಕೊಳ್ಳದೆ ನಾನೇ ಬರೋದು ಗೌರವ ಅನ್ನಿಸ್ತು. ಚಿಕ್ಕಪ್ಪನಿಗೆ ಸಿಟಿಗೆ ಹೋಗೊ ಹಾಗೆ ಮಾಡಿ ಕೊಟ್ರೆ. ನನಗೂ ಹಾಗಾಗ್ಲಿ ಅಂತ. ನಾನೇ ನೇರವಾಗಿ ಬಂದೆ. ಯಾಕೆ ಗೊತ್ತೆ? ನಮ್ಮ ಜೀವವಿಮೆ ಅಭಿವೃದ್ಧಿ ಅಧಿಕಾರಿ ಇನ್ನರ್ಧ ಗಂಟೇಲಿ ಇಲ್ಲಿಗೆ ಬರ್ತಾನೆ ನನ್ನ ಕರಕೊಂಡು ಹೋಗೋದಿಕ್ಕೆ. ಮೊದಲು ನನ್ನ ಪ್ರಶ್ನೆ ಕೇಳಿ ನಿಮ್ಮ ಕೆಲಸ ಮಾಡಿಬಿಡಿ.. ಭಾರಿ ಕುಳ ಹಿಡಿದಿದೀವಿ ನೀಲಸಂದ್ರದಲ್ಲಿ. ಐವತ್ತು ಸಾವಿರದ ಪಾಲಿಸಿ."

"ಸರಿ, ಹೇಳ್ಬಿಡಿ" ನಗೆಮುಖ ಮಾಡಿದ.

"ಆ ಲಕ್ಷ್ಮಣನಿಗೆ ಒಂದು ನೂರು ಸಾರಿಯಾದ್ರೂ ಹೇಳಿರಬೇಕು ನಾನು."

"ಏನಂತ?" ಕುರ್ಚಿಯಲ್ಲಿ ಸರಿದು ಕಾತರ ತೋರಿದ.

"ಹತ್ತು ಸಾವಿರದ ಒಂದು ಪಾಲಿಸಿನಾದ್ರು ತೊಗೋ ಅಂತ. ತೊಗೊಂಡಿದ್ರೆ ಉಸಿರೆತ್ತದೆ ಹಣ ಎಣಿಸ್ತಿತ್ತು ಕಾರ್ಪೊರೇಷನ್. ಅವನಿಗೆ ಅದೃಷ್ಟ ಇಲ್ಲ. ನನಗೆ ಬಿಸಿನೆಸ್ ಇಲ್ಲ.... ಇನ್ಷೂರ್ ಮಾಡಿದ್ರೂ ಕಂತು ಕಟ್ಟೋದಿಕ್ಕೆ ಅವನಲ್ಲಿ ಹಣ ಇರ್ತಿರ್ಲಿಲ್ಲ ಅನ್ನಿ."

ಅಧಿಕಾರಿಯ ಕಾತರ ಸೋರಿಹೋಯಿತು.

"ನನಗೆ ಬೇಕಾಗಿರೋದು ನಿಮ್ಮ ಜೀವವಿಮೆ ವಿಷಯ ಅಲ್ಲ. ಅವನು ಸಾಯೋದಿಕ್ಕೆ ಮೊದಲಿನ ವಿಷಯ."

"ಸಾಯೋದಿಕ್ಕೆ ಮೊದಲು ಲಕ್ಷ್ಮಣ ಬಡವ. ಯಾವುದೋ ಆಸ್ತಿ ಬರುತ್ತೇಂತ ಹೇಳ್ತಿದ್ದ. ಕನಸು ಕಾಣೋನಿಗೆ ಒಳ್ಳೇ ಚೆಲುವು. ಆ ಚೆಲುವಿಗೆ ನನ್ನ ತಂಗಿ ಮಾರುಹೋದ್ಲು. ಇವಳು ಓದ್ತಾ ಇರೋದು ಬಿ.ಎ. ಅವನು ಪಿ.ಯು.ಸಿ.ಗೆ ಓದು ಬಿಟ್ಟೋನು. ಇವಳು ದೊಡ್ಡ ಗೌಡರ ಸಾಹುಕಾರಿತಿ ಮಗಳು. ಅವನು ಜಾತಿ ಕಾಣದೋನು. ಮತ್ತೆ ಸಿಗರೇಟಿಗೆ ಕಾಸಿಲ್ಲದೋನು."

ದಿವಾಕರ ಅವನಿಂದ ವಿಷಯ ಹೊರಡಿಸುವ ಸಲುವಾಗಿ ತುಸು ಬೇಸರವಾದರೂ

ತೋರ್ಪಡಿಸದೆ ಹೇಳಿದ.

"ನನ್ನ ಮಾತಿನ ದಾರಿಗೆ ಬನ್ನಿ, ಸಣ್ಣ ಗೌಡರೆ."

"ಹುಂ... ನಮ್ಮ ಮನೇಲಿ ಐವತ್ತು ವರ್ಷದಿಂದ ಕೊಳೀತಾ ಇದೆ ಹಲೆ ಕಥೆ. ನಮ್ಮಜ್ಜಿ ಪಿಶಾಚಿ ಆಗ್ಬೇಕೆ? ಅದೂ ನಮ್ಮ ಮನೆ ಹಿಂದಿನ ಕೋಣೇಲಿ! ಅವಳು ಕೊಟ್ಟ ಅಪ್ಪಣೆಗೆ ನಮ್ಮಪ್ಪನ ತಲೆತೂಗಿ ನಡೆಯಬೇಕೆ? ಚೆನ್ನಮ್ಮನ ದಾರಿ ನೀನು ಹಿಡೀಬೇಡ ಅಂತ ನನ್ನ ತಂಗಿಗೆ ಕಳಕಳಿ ಹೇಳ್ದ. ಲಕ್ಷ್ಮಣ ಮೂಲದಿಂದಲೇ ಪರ್ಮಿಷನ್ ತರ್ತೀನೀಂತ ಹಠ ತೊಟ್ಟ. ಗಂಡೆದೆ ಅಂದ್ರೆ ಅದು!.. ಒಟ್ನಲ್ಲಿ ಪ್ರೇಮ ಅನ್ನೋದು ಸಿನಿಮಾದಲ್ಲಿ ಮಾತ್ರ. ಇಂತಾ ಹಳ್ಳಿಯಲ್ಲಂತೂ ಇಂಪಾಸಿಬಲ್."

ದಿವಾಕರ ಮುಖ ಮುದುರಿದ.

"ಲಕ್ಷ್ಮಣ ಕೋಣೆಗೆ ಹೋಗಿದ್ದು, ಅಲ್ಲಿ ನಡೆದಿದ್ದೂ ಹೇಳಿ."

"ಹೇಗೆ ಹೋದನೋ ಅದೇ ಗೊತ್ತಿಲ್ಲ. ಇನ್ನು ಅಲ್ಲಿ ಏನಾಯ್ತು ಅನ್ನೋದು ಹೇಗೆ ಹೇಳ್ಲಿ?... ಮಧ್ಯ ರಾತ್ರಿಗೆ ಭಯಾನಕ ಕೂಗು ಕೇಳಿಸ್ತು ಅಂತ ಹೇಳ್ದ ವರದಪ್ಪ. ಲಕ್ಷ್ಮಣ ಹೋದ ಅಂತ ಅರ್ಥ ಅಂದುಕೊಮಡೆ... ಅವನು ಪಾಲಿಸಿ ತೊಗೊಂಡಿದ್ರೂ ಸ್ವಲ್ಪ ಫಜೀತಿ ಆಗ್ತಿತ್ತು ಅನ್ನಿ. ಅವನಿಗೆ ವಾರಸುದಾರ್ರು ಯಾರೂ ಇಲ್ಲ ನೋಡಿ."

"ಏನು ಮಾಡಿದ್ರಿ ಕೂಗು ಕೇಳಿಸಿದಾಗ?" ಗದರಿ ಕೇಳಿದ.

"ನನಗೆಲ್ಲಿ ಕೇಳಿಸ್ತು ಕೂಗು? ವರದಪ್ಪ ಕೇಳ್ತು ಅಂದ. ಅದಕ್ಕೆ ಮೊದಲು ನಿದ್ರೆ ಮಾಡ್ತಿದ್ದೆ. ಆಮೇಲೆ ಒಳ್ಳೇ ನಿದ್ರೆ ಬಂತು. ಬೆಳಗಾದ ಮೇಲೆ ನನಗೆ ಗೊತ್ತಾಗಿದ್ದು, ಲಕ್ಷ್ಮಣ ನಿಜವಾಗಿ ಪೂರ್ತಿಯಾಗಿ ಸತ್ತಿದಾನೇಂತ."

ನಾಗರಾಜಪ್ಪ ಹಿಡಿತಕ್ಕೆ ಸಿಗುವ ಆಸಾಮಿ ಅಲ್ಲ ಎನಿಸಿತು ಅಧಿಕಾರಿಗೆ.

"ವರದಪ್ಪ ನಿಮ್ಮ ಕೋಣೇಲಿ ಏನು ಮಾಡ್ತಾ ಇದ್ರು?"

"ಮೊದಲಿಂದ ಅವನಿಗೆ ನನ್ನ ತಂಗಿ ಎಲ್ಲಿ ಲಕ್ಷ್ಮಣನ ಪಾಲಾಗ್ತಾಳೊ ಅನ್ನೋ ಚಿಂತೆ. ಲಕ್ಷ್ಮಣನ ಪ್ರಯೋಗ ಕಾಯ್ತಾ ಕತ್ತಲೇಲಿ ಕೂತಿದ್ದ."

"ಕತ್ತಲೆಯಲ್ಲಿ?"

"ಹೌದು, ದೀಪ ಹೋಗಿತ್ತಲ್ಲಾ. ಈ ದೇಶದಲ್ಲಿ ಬೆಳಕಿಗೂ ವಿಮೆ ಇಳಿಸ್ಬೇಕೂಂತ ಕಾಣುತ್ತೆ."

"ತಥ್! ಬೇಕಾದ್ದು ಮಾತ್ರ ಹೇಳ್ರಿ."

"ವರದಪ್ಪ, ನನ್ನ ಎಬ್ಬಿಸ್ದ. ನಾನು ಏಳ್ಲಿಲ್ಲ. ಕೋಣೆಯಿಂದ ಬಂದು ನಮ್ಮಪ್ಪನ ಜೊತೆ ಮಾತಾಡಿರಬೇಕು.... ಆಮೇಲೆ ನೀವು ಬಂದಿರಬೇಕು."

"ಲಕ್ಷ್ಮಣ ತನ್ನೊಂದಿಗೆ ಟೇಪ್ ರೆಕಾರ್ಡರ್, ಲಾಂದ್ರ ಒಯ್ದಿದ್ದ ನಂತಲ್ಲಾ."

"ಕತ್ತಲೆ ಕೋಣೆ ಅಂತ ಲಾಂದ್ರ ಒಯ್ದಿರಬಹುದು. ಬೇಜಾರಾಗತ್ತೇಂತ ರೆಕಾರ್ಡ್ ಸಂಗೀತ ಕೇಳೋದಿಕ್ಕೆ ರೆಕಾರ್ಡರ್ ಒಯ್ದಿದ್ರೆ ಆಶ್ಚರ್ಯ ಇಲ್ಲ... ಲಾಂದ್ರಗಳ ವಿಷಯ ಅಂಕಲ್‌ಗೆ ಗೊತ್ತು. ಅವರೇ ಅಂತಾವೆಲ್ಲಾ ಕೂಡಿ ಹಾಕೋದು."

ನೇರವಾಗಿ ಕುಳಿತ ದಿವಾಕರ ತಲೆ ತುರಿಸಿದಿ.

"ನೀವು ಹಿಡಿತಕ್ಕೆ ಸಿಗೋರಲ್ಲ, ನಾಗರಾಜಪ್ಪ. ನೀವು ಹೇಳ್ತಾ ಇರೋದು ಕೇಳಿದ್ರೆ ನಿಮಗೆ ಮನೆ ವಿಷಯದಲ್ಲಿ ಯಾವ ಜವಾಬ್ದಾರಿಯೂ ಇಲ್ಲಾಂತ ತೋರತ್ತೆ. ಲಕ್ಷ್ಮಣನ ಸಾವಿನಿಂದ ಯಾರಿಗೆ ಲಾಭ ಆಯ್ತು?"

"ಇದೇನು ಹೀಗೆ ಕೇಳ್ತೀರಿ? ಸಣ್ಣ ಮಗುವೂ ಊಹಿಸಿ ಹೇಳತ್ತೆ. ವರದಪ್ಪನಿಗಲ್ಲವೆ ಲಾಭ ಆಗಿದ್ದು?"

"ನಿಜ, ವರದಪ್ಪನ ಹಾದಿಯ ಮುಳ್ಳು ಅದಾಗಿ ಸರಿದು ಹೋಯ್ತು... ಲಕ್ಷ್ಮಣ ಹೇಗೆ ಸತ್ತ?"

"ನೀವು ತಿಳಿದಿರೊ ಸಂಗತಿಗಳನ್ನ ನನ್ನಿಂದ ಹೊರಡಿಸ್ತಾ ಇದೀರಿ."

"ಹೇಳಿ, ಪರವಾಗಿಲ್ಲ."

"ನಿಮ್ಮ ಡಾಕ್ಟರು ಹೇಳ್ತಾರೆ."

"ನೀವು ಹೇಳೀಪ್ಪ."

"ಲಕ್ಷ್ಮಣ ದೆವ್ವ ಸಾಯಿಸ್ಲಿಲ್ಲ. ದೆವ್ವ ಎಲ್ಲಿದೆ, ಸ್ವಾಮಿ? ನಾವು, ನೀವೇ ದೆವ್ವಗಳು. ಧೈರ್ಯವಾಗಿ ದೆವ್ವ ಕೋಣೆ ಸೇರಿದ ಲಕ್ಷ್ಮಣ. ಆಮೇಲೆ ಕತ್ತಲಲ್ಲಿ ಒಂಟಿ ಇದ್ದೋನಿಗೆ ಕ್ರಮೇಣ ಭೀತಿ ಆವರಿಸಿದ. ಆಗ ಹೊರಕ್ಕೆ ಬಂದ್ರೆ ಅವಮಾನ, ಹೇಡಿತನ. ಹಾಗೇ ಕುಳಿತು ಹೃದಯ ಸ್ತಂಭನ ಆಗಿ ಸತ್ತಿರಬೇಕು. ಕ್ಲಿಯರ್ ಕೇಸ್ ಆಫ್ ಹಾರ್ಟ್ ಫೈಲ್ಯೂರ್!"

ಸುಸ್ತಾದ ಸಬ್ ಇನ್ಸ್‌ಪೆಕ್ಟರ್.

"ಇನ್ನು ನೀವು ಹೋಗಬೋದು."

ಎದ್ದವನು ಮುಂದಕ್ಕೆ ಹೆಜ್ಜೆ ಸರಿಸಲಿಲ್ಲ.

"ನನ್ನದೊಂದು ಆಕ್ಷೇಪಣೆ ಇದೆ ನಿಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ...."

"ಹಿದಾಯತ್ ಸಾಹೇಬರ ಮೇಲೆ?" ಬೆರಗಾದ.

"ಅವರಾದ್ರೆ ಹೆಚ್ಚೇನು? ಬೆಳಿಗ್ಗೆ ಸ್ವಲ್ಪ ಸೀರಿಯಸ್ ಆಗಿದ್ರು. ನಾನು ಕೇಳ್ಲಿಲ್ಲ... ರಿಸರ್ವ್ ಪೊಲಿಸ್ ಕಾಲೋನಿಗೆ ಹೋಗಿ ಇಪ್ಪತ್ತೈದು ಇನ್ಷೂರೆನ್ಸ್ ಕೇಸ್ ಹಿಡಿದು ಎಲ್ಲಾ ಕೆಲಸ ಮಾಡಿದ್ದೋನು ನಾನು. ಇನ್ಸ್‌ಪೆಕ್ಟರಿಗೆ ತಲೆ ಕೆಡಿಸಿ ಕೈವಾಡ ಚಲಾಯಿಸಿ ಎಲ್ಲಾ ಬಿಸಿನೆಸ್ ಲಪಟಾಯಿಸ್ದೋನು ಇನ್ನೊಬ್ಬ ಏಜೆಂಟ್ ಸಮೀರ್ ಪಾಷ!... ಎಂಥಾ ಜಾತಿ ವಾಂಛಲ್ಯ!"

ಹಲ್ಲು ಮಸೆಯುತ್ತಾ ಚೀಲ ಎತ್ತಿಕೊಂಡು ನಡೆದುಬಿಟ್ಟ ನಾಗರಾಜಪ್ಪ.

5

ಎರಡನೇ ಸಾರಿಗೆ ಬೆರಳು ಬಡಿಯುತ್ತಲೇ ಬಾಗಿಲು ತೆರೆದು ನಿಂತಳು. ಪುಷ್ಪಲತಾ. ಬಿಳಿಗೌಡ ಇನ್ಸ್‌ಪೆಕ್ಟರೊಂದಿಗೆ ಕೋಣೆಯೊಳಕ್ಕೆ ಬಂದ. ಮಂಚದ ಮೇಲೆ ನಿದ್ರಾವಸ್ಥೆಯಲ್ಲಿದ್ದ ಕಿರಿಯ ಮಗಳನ್ನು ಗಮನಿಸಿ ಪುಷ್ಪಾಗೆ ಸನ್ನೆಯಲ್ಲಿ ಹೊರಕ್ಕೆ ಕರೆದ.

"ಸಬ್ ಇನ್ಸ್‌ಪೆಕ್ಟರ್ ಸಾಹೇಬ್ರು ನಿನ್ನ, ನಿನ್ನ ತಂಗಿನ ಎರಡು ಮಾತು ಕೇಳಬೇಕು ಅಂತಾರೆ. ಅವಳು ನಿದ್ರೆ ಮಾಡ್ತಿದಾಳೆ. ನಿನಗೆ ತಿಳಿದಿದ್ದು ಸರಿಯಾಗಿ ಹೇಳು, ತಾಯಿ. ಏನೂ ಸಂಕೋಚಪಡಬೇಡ. ದಿವಾಕರಪ್ಪ ಅಂದ್ರೆ ನಮ್ಮ ಮನೆಯೋರಿದ್ದ ಹಾಗೆ."

ಸಂದರ್ಭ ಅರಿತ ಅನುಭವಿ ಗೌಡ ತಾನಾಗಿಯೇ ಸ್ಥಳದಿಂದ ಕಾಲು ತೆಗೆದ. ಎಸ್.ಐ. ಎರಡು ಕ್ಷಣಗಳಲ್ಲಿ ಪುಷ್ಪಾಳ ನಿಲುವು, ರೂಪು ಅಳೆದ.

ನೀಲಿ ವೃತ್ತಗಳ ಬಿಳುಪು ವಾಯಿಲ್ ಸೀರೆ. ಗಂಟು ಹಾಕಿದ ತಲೆಗೂದಲು. ದೊಡ್ಡ ಕಣ್ಣುಗಳ ಅಂದವಾದ ಮುಖ.

"ಕೂತ್ಕೊಳಿ. ಪುಷ್ಪಲತಾ ಅಲ್ಲವೆ ನಿಮ್ಮ ಹೆಸರು?"

"ಹೌದು, ಪುಷ್ಪಲತಾ. ನನ್ನ ತಂಗಿ ಸ್ನೇಹಲತಾ. ಬೆಳಿಗ್ಗೆ ನಮ್ಮ ತಂದೆ ಹೇಳಿದ್ರು ನೀವು ನನ್ನ ಭೇಟಿ ಮಾಡಬಹುದೂಂತ."

"ನಿನ್ನೆ ರಾತ್ರಿ ನಡೆದಿದ್ದು ದುರದೃಷ್ಟದ ಸಂಗತಿ."

"ಲಕ್ಷ್ಮಣ ದುರದೃಷ್ಟವಂತ. ಅವನಿಗೆ ಆ ಗತಿ ಬರುತ್ತೆ ಅಂತ ತಿಳಿದೂ ಅವನ್ನ ಅಲ್ಲಿಗೆ ಕಳಿಸಿದ ನಾವು ಮಹಾ ಕಟುಕರು. ಅವನ ಹಠವೇ ಸಾವಿಗೆ ಕಾರಣ ಆಯ್ತು?"

"ನಿಮ್ಮ ತಂಗಿಗೂ ಅವನಿಗೂ ಪ್ರೀತಿ ಬೆಳೆದಿತ್ತು, ಇಬ್ಬರಿಗೂ ಜಾತಿ, ಅಂತಸ್ತು, ಓದು ಎಲ್ಲದರಲ್ಲೂ ಬಹಳ ವ್ಯತ್ಯಾಸ ಇತ್ತು. ಹಾಗಿದ್ದೂ ಆಕೆ ಅವನಲ್ಲಿ ಮನಸ್ಸು ಹೂಡಿದ್ದು ಆಶ್ಚರ್ಯ, ವಿಚಿತ್ರ."

"ಅದಕ್ಕೆ ಕಾರಣ ಅವನ ಮುಖದ ಚೆಂದ. ಅವನು ಆಡ್ತಾ ಇದ್ದ ಚೂಪು ಮಾತು. ಹುಡುಗ ಕ್ರಾಂತಿಕಾರಿ. ಹಳೇದು ಕಂಡರೆ ಆಗದು. ಎಲ್ಲದರಲ್ಲೂ ಹೊಸತು ಬೇಕು ಅನ್ನೋನು. ನಾನೇ ಮಾರು ಹೋಗಿದ್ದೆ ಅವನಿಗೆ..."

ಮಾತು ನಿಂತಿತು. ಅವಳ ಮುಖದಲ್ಲಿ ಲಜ್ಜೆಯ ಮಾಸಲು ರಂಗು ಕಾಣಿಸಿತು. ದಿವಾಕರ ಅದನ್ನು ತಪ್ಪದೆ ಗಮನಿಸಿದ.

ಅವಳಿಂದಲೇ ಮಾತು ಸಾಗಿತು.

"ನಾನು ನನ್ನ ತಂದೆ ಲಕ್ಷ್ಮಣನ್ನ ತಡೆದ್ವಿ. ಹೋಗ್ಬೇಡ ಅಂದ್ವಿ. ನಮ್ಮ ಮನೇಲೂ ನಾನಾ ಬುದ್ಧಿಗಳ ಜನ. ನನ್ನ ಚಿಕ್ಕಪ್ಪ, ನನ್ನ ತಂಗಿ ಅವನಿಗೆ ಹೋಗೂಂತ ಉತ್ತೇಜನ ಕೊಟ್ರು."

ಎಸ್.ಐ. ಮತ್ತೆ ಐದು ನಿಮಿಷಗಳಷ್ಟು ಕಾಲ ವಿವರಣೆ ಪಡೆದ. ಹೇಳಿಕೆ ಪುನರಾವರ್ತನೆಯಾಗಿತ್ತು. ಲಕ್ಷ್ಮಣ ಎಂಟೂಕಾಲು ಗಂಟೆಗೆ ಊಟ ಮಾಡಿದ್ದು. ಹನ್ನೊಂದುಕಾಲಿಗೆ ಕೋಣೆಗೆ ಹೊರಟಿದ್ದು, ಹನ್ನೊಂದು ಐವತ್ತೈದಕ್ಕೆ ಸರಿಯಾಗಿ ಕಿರಿಚಿದ್ದು...

"ಕೂಗು ಕೇಳಿ ಬಂದಾಗ ನೀವು ಏನು ಮಾಡಿದ್ರಿ?"

"ಆ ಕೂಗು ಕೇಳಿ ಬರೋದಿಕ್ಕೆ ಐದು ನಿಮಿಷ ಮೊದಲೇ ಕೋಣೆಯಿಂದ ಹಜಾರಕ್ಕೆ ಬಂದಿದ್ದೆ..."

"ಯಾಕೆ?" ಹುಬ್ಬೇರಿಸಿದ.

"ದೆವ್ವದ ಕೋಣೆಯಲ್ಲಿ ಇಬ್ಬರೂ ಮಾತಾಡ್ತಾ ಇದ್ದಿದ್ದು ಚೆನ್ನಾಗಿ ಕೇಳಿಸ್ತು..."

"ಹೇಳಿ ಮುಂದೆ" ಅತ್ಯಾತುರದಿಂದ ಮುಖ ಮುಂದೆ ತಂದ.

"ಸುಮಾರು ಐದು ನಿಮಷಿ ಅಸ್ಪಷ್ಟವಾಗಿ ಮಾತು ಕೇಳಿಸ್ತು. ಆ ಮೇಲೆ ಕೂಗು ಕೇಳ್ತು. ಗಾಬರಿಯಿಂದ ಕೋಣೆಗೆ ಬಂದೆ. ಅಲ್ಲಿ ನನ್ನ ತಂಗಿ ಇರ್ಲಿಲ್ಲ...."

"ಹುಂ, ಹುಂ....." ಅಡ್ಡಿ ಮಾಡದೆ ಮುಂದಕ್ಕೆ ಹೇಳುವಂತೆ ಸೂಚಿಸಿದ.

"ಆಗ ಧೈರ್ಯ ಎಲ್ಲಿಂದ ಬಂತೋ ಗೊತ್ತಿಲ್ಲ. ನಾನು ಹಿಂಭಾಗಕ್ಕೆ ಓಡಿದೆ...."

ನಿಮಿರಿ ಕುಳಿತ ಅಧಿಕಾರಿ.

"ಆಗ ಹಿಂದಿನ ಬಾಗಿಲು ತೆಗೆದಿತ್ತೆ?"

"ಲಕ್ಷ್ಮಣ ಆ ಬಾಗಿಲು ತೆಗೆದೇ ಕೋಣೆಗೆ ಹೋಗಿದ್ದು."

"ಆಮೇಲೇನಾಯ್ತು?"

"ಹುಚ್ಚಳ ಹಾಗೆ ಮೆಟ್ಟಿಲು ಹತ್ತಿ ಹೋದೆ.... ಆ ಹೊತ್ತಿಗೆ ನನ್ನ ತಂಗಿ ಸ್ನೇಹ ದೆವ್ವದ ಕೋಣೆ ಬಾಗಿಲು ತಟ್ತಾ ಇದ್ಲು. ನಾನು ಅವಳನ್ನ ನಿಧಾನವಾಗಿ ಇಳಿಸಿಕೊಂಡು ಬಂದು ಕೋಣೆಗೆ ಸೇರಿಸ್ದೆ. ಒಂದು ನಿದ್ರೆಗುಳಿಗೆ ನುಮಗಿಸಿ ಮಲಗಿಸ್ದೆ."

ತುಟಿ ಕಚ್ಚಿ ಕತ್ತು ಸವರಿಕೊಂಡ. ಅನಿರೀಕ್ಷಿತ ಹೇಳಿಕೆ!

"ಇದು ಹೊಸ ವಿಷಯ ನಿಮ್ಮಿಂದ ಕೇಳಿದ್ದು. ನಿಮ್ಮ ತಂದೆ, ಚಿಕ್ಕಪ್ಪ ಈ ಸಂಗತಿ ಹೇಳ್ಲಿಲ್ಲ."

"ನಾನು ಕೋಣೆ ಬಾಗಿಲವರೆಗೆ ಹೋಗಿ ಸ್ನೇಹಾನ ಇಳಿಸಿಕೊಂಡು ಬಂದಿದ್ದು

ಅವರು ನೋಡಿರಲಾರ್ರು. ಬಹುಶಃ ಹೆದರಿಕೆಯಿಂದ ಹೊರಕ್ಕೆ ಬಂದಿಲ್ಲ ಅವರು."

ಗೋಣು ಆಡಿಸಿದ ದಿವಾಕರ.

"ಈ ಮನೆಯ ಹುಡುಗಿಯರು ಆ ಹೊತ್ನಲ್ಲಿ ಕೋಣೆ ಹತ್ರ ಹೋಗೋದಿಕ್ಕೆ ಹೆದರಿಲಿಲ್ಲ? ಲೋಕ ಚೆನ್ನಾಗಿ ಕಂಡ ಗೌಡರು, ಮಿಲಟರಿಯಲ್ಲಿ ಕೆಲಸ ಮಾಡಿದ ಚಿಕ್ಕಪ್ಪ, ಯುವಕ ಅಣ್ಣ ಹೆದರಿಬಿಟ್ರ?"

"ಇದಕ್ಕೆ ಏನೂ ಹೇಳಲಾರೆ."

"ಆ ವಿಷಯದಲ್ಲಿ ಇನ್ನೇನೂ ಕೇಳೋದಿಲ್ಲ. ಆಗ ನೀವು ಮಾತು ನಿಲ್ಲಿಸಿದ್ರಿ. ಹೇಳ್ತಾ ಇದ್ರಿ ನೀವೇ ಲಕ್ಷ್ಮಣನಿಗೆ ಮಾರುಹೋಗಿದ್ರೀಂತ."

ತಲೆ ತಗ್ಗಿತು. ಮೆಲು ಧ್ವನಿಯಲ್ಲಿ ಹೇಳಿದಳು.

"ಈ ಮನೇಲಿ ಯಾರಾದ್ರು ಒಬ್ಬರು ಹೇಳ್ತಾರೆ ಅದನ್ನ. ನಾನೇ ಲಕ್ಷ್ಮಣನ್ನ ಮೊದಲು ಪರಿಚಯ ಮಾಡ್ಕೊಂಡೋಳು. ನನಗೆ ಮೆಚ್ಚಿಗೆ ಆಗಿತ್ತು. ಅವನ ಚೆಂದ, ಹರಿತದ ಮಾತು. ಅವನು ನನಗೆ ಸಾಟಿ ಅಲ್ಲ ಅನ್ಸಿದ್ರೂ ಅವನಿಗೆ ಸೋತಿದ್ದೆ. ಈ ಮನೆಗೆ ಬರೋದಿಕ್ಕೆ ಶುರು ಮಾಡ್ದ. ಅವನಿಗೆ ತಂದೆ ಅಡ್ಡಿ ಮಾಡ್ಲಿಲ್ಲ. ತಿಂಗಳು ಕಳೆಯೋದ್ರಲ್ಲಿ ನನ್ನೊಂದಿಗೆ ಮಾತು ಕಡಿಮೆ ಮಾಡ್ದ. ನನ್ನ ತಂಗಿ ಜೊತೇಲಿ ಮಾತು, ಸ್ನೇಹ ಹೆಚ್ಚಾಗಿತ್ತು. ಇಬ್ಬರಿಗೂ ಪ್ರೇಮ ಬೆಳೀತು. ನನ್ನ ತಂಗಿ ಬಲು ಬೇಗ ತೀರ್ಮಾಣ ತೊಗೊಂಡ್ಲು. ಅವನ್ನ ಮದುವೆ ಆಗೊ ನಿರ್ಧಾರಕ್ಕೆ ಬಂದ್ಲು... ಆಮೇಲೆ ಈ ಪ್ರಮಾದ ನಡೆದಿದ್ದು."

"ಥ್ಯಾಂಕ್ಸ್, ನಿಮ್ಮ ಹೇಳಿಕೆಯಿಂದ ಬಹಳ ಉಪಯೋಗ ಆಯ್ತು. ನಮ್ಮ ಸಾಹೇಬರ ಮುಂದೆ ತಲೆ ಎತ್ತಿ ನಾಲ್ಕು ಮಾತು ಹೆಚ್ಚಾಗಿ ಆಡೊ ಅವಕಾಶ ಆಯ್ತು, ಮತ್ತೆ ಬಂದಾಗ ಇದೇ ರೀತಿ ಬೇಜಾರು ಮಾಡ್ಕೊಳ್ದೆ ವಿಷಯ ತಿಳಿಸಿ."

ಉತ್ಸಾಹ ಬೆರೆತ ಗೊಂದಲದ ಮನದಲ್ಲಿ ಎದ್ದು ನಿಂತ.

ಜಾಲನೂರು ರೇಂಜ್ ಪೊಲೀಸ್ ಸ್ಟೇಷನ್‌ನಲ್ಲಿ ಕುಳಿತಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಹಿದಾಯತ್ ನಾಲ್ಕಾರು ಪುಟಗಳನ್ನ ಓದಿ ಮುಗಿಸಿದ ಮೇಲೆ ಬೆಳ್ಳನೆಯ ಬಕ್ಕ ತಲೆಯ ಮೇಲಿನ ಬೆವರು ಬೆರಳಿನಿಂದ ಎಳೆದು ಹಾಕಿದ.

"ನಿನ್ಗೆ ಗುಮಾನಿ ಬಂತು. ಅಲ್ಲಿ ಇಲ್ಲಿ ಕಣ್ಣಾಡ್ಸಿ ಸೊಲ್ಪ ಜಾಸ್ತಿ ಕೈ ಆಡಿಸ್ಬುಟ್ಟೆ. ನಂಗೆ ಕ್ವಾಪ ಏರ್ತು. ಏಳ್ ತಿಂಗಳ್ಗೆ ಹುಡ್ಗೋನು ಅಂದ್ಬುಟ್ಟೆ... ಈಗ ನನ್ನಗೆ ಅನ್ಸಸ್ತದೆ ನಾನು ಹತ್ತು ತಿಂಗಳ್ಗೆ ಹುಡ್ಗೋನು ಅಂತ... ದಿಮಾಖ್ ಓಡೋದಿಲ್ಲ. ಇನ್ವೆಸ್ಟಿಗೇಷನ್ ನಂದು, ಕೆಲ್ಸ ಎಲ್ಲಾ ನಿಂದು. ನೀನ್ ಮಾಡ್ತಾ ಇರೋದೆಲ್ಲಾ ಠೀಕ್ ಇದೆ. ಬರಾಬರ್ ಇದೆ. ದಿವಾಕ್ರು."

ದಿವಾಕರ ದಂಗಾದ. ಸಾಹೇಬ ಮುಕ್ತ ಕಂಠದಲ್ಲಿ ತನ್ನ ಪ್ರಶಂಸೆಗೆ ತೊಡಗಿದ್ದಾನೆ!

"ಸ್ವಾಮಿಗಳ ತನಿಖೆ ಕೆಲಸದಲ್ಲಿ ಒಳ್ಳೆ ಹೆಸರು ಬಮದ್ರೆ ನನಗೂ ತೃಪ್ತಿ, ನಂದೀಶ ರಜ ಹೋಗಿದಾನೆ. ಅವನೂ ಇದ್ದಿದ್ರೆ ನನಗೆ ಅನುಕೂಲ ಇತ್ತು..."

"ತಥ್ ಇಸ್ಕಿ! ನಂದೀಶ ನಮಕ್ ಹರಾಂ... ಅವ್ನು ರಜ ಹೋದ್ರೆ ಸೈತಾನ್ ಹೋಯ್ತು. ಅವನ್ ಮುಖ ನನ್ಗೆ ಆಗೋದಿಲ್ಲ.... ಏನು ಹೇಳ್ತಾನೆ?.... ಜಾಲ್ನೂರು ಅಂಧೇರಿ ನಗರಿ ಅಂತೆ. ನಾನು ಚೌಪಟ್ ರಾಜ ಅಂತೆ!"

"ಹಾಗೆ ಹೇಳಿದ್ನಂತೇನು, ಸ್ವಾಮಿ?" ತಲೆಕೆರೆದ.

"ನೀನೂ ನಟ್‌ಕಟ್ ಇದ್ದಿ. ಜನ ಸುಳ್ಳು ಹೇಳ್ತಾರೇನೊ?"

"ಬಿಡಿ, ಸ್ವಾಮಿ. ಹಾಳು ಚಾಡಿ ಮಾತು. ಈ ಡಿಪಾರ್ಟ್‌ಮೆಂಟು ಅರ್ಧ ಕೆಟ್ಟಿರೋದೇ ಚಾಡಿ ಮಾತಿನ ಹಾವಳಿಯಿಂದ. ಹೇಳಿಕೆಗಳೆಲ್ಲಾ ಓದಿದ್ರಾ?'

"ಅರ್ಧ ಓದ್ದೆ. ನಿನ್ನ ಕೆಲಸ ಠೀಕ್ ಅಂದೆ. ಯಾಕೆ?"

"ಅಸ್ವಾಭಾವಿಕ ಮರಣದಲ್ಲಿ ಸಂಶ ಕಂಡಿರೋದ್ರಿಂದ."

"ಅಲ್ಲ ಕಣೊ. ಡಾಕ್ಟರ್ ಫೋನ್ ಮಾಡಿದ್ದ..."

"ಪೋಸ್ಟ್ ಮಾರ್ಟಂ ವರದಿ ಬಂತೇನು?" ಧಿಗ್ಗನೆ ಕೇಳಿದ.

"ಲೊ, ಏಳ್ ತಿಂಗಳ್ನೋತೆ. ರಿಪೋರ್ಟ್ ನಾಳೆ ಬರ್ತದೆ. ಆದ್ರೂ ಒಂದು ವಿಚಾರ ಹೇಳ್ದ ಡಾಕ್ಟರು. ಸತ್ತೋದ್ನಲ್ಲಾ ಅವನ ಹೊಟ್ಟೆ ಒಳ್ಗೆ ನಿದ್ರೆ ಔಷ್ತಿ ಕಾಣ್ಸಿದೆಯಂತೆ. ಡೆತ್ ಕೇಸು ಉದ್ದ ಅಗಲ ಆಗ್ತಿದೆ."

"ಅದಕ್ಕೆ ಸ್ವಾಮಿ ನನಗೆ ಸ್ವಲ್ಪ ಸಂಶಯ ತಟ್ಟುತ್ಸೇ ಉದ್ದ ಅಗಲ ಅಳಿಯೋಕೆ ಶುರು ಮಾಡ್ದೆ. ಗೌಡನ ಮನೇಲಿ ಒಬ್ಬೊಬ್ಬ ಒಂದೊಂದು ಹೊಸ ಸಂಗತಿ ಹೇಳಿ ಕೇಸ್‌ಗೆ ಹೊಸ ಹೊಸ ರೂಪ ಕೊಡ್ತಿದಾರೆ... ಮುಂದಿನ ಹೇಳಿಕೆ ಓದಿ ನೋಡಿ, ಸಾರ್."

ನಮ್ರವಾಗಿ ಪುಟ ಹೊಂದಿಸಿ ಕೊಟ್ಟ. ಅದು ಮನೆ ಆಳು ದಡಗುಂಟೆ ಹೇಳಿಕೆ.

ದಡಗುಂಟೆಯ ಹೇಳಿಕೆಯಲ್ಲಿ ವಿಶೇಷವಿರಲಿಲ್ಲ. ಐವತ್ತು ದಾಟಿದ ಆಳಿನ ಪ್ರಕಾರ ಲಕ್ಷ್ಮಣ ದೆವ್ವದ ಕೋಣೆಗೆ ಹೋಗುವ ವಿಷಯವೇ ಅವನಿಗೆ ತಿಳಿಯದಂತೆ. ಲಾಂದ್ರ, ಟೇಪ್‌ರೆಕಾರ್ಡರ್ ಒಯ್ದ ಸಂಗತಿಯನ್ನೂ ಕಾಣದವ. ಮಧ್ಯರಾತ್ರಿಯ ಚೀತ್ಕಾರ ಅವನಿಗೆ ಕೇಳಿಸಲಿಲ್ಲ. ಅದಕ್ಕೆ ಕಾರಣ, ಬೆಳಗಿನಿಂದ ಕೆಲಸ ಮಾಡಿ ಆಯಾಸಗೊಂಡವನಿಗೆ ಹಜಾರದ ಮೂಲೆಯಲ್ಲಿ ಗಾಢ ನಿದ್ರೆ. ಪೋಲೀಸರ ಆಗಮನದ ನಂತರವೇ ಅವನಿಗೆ ಲಕ್ಷ್ಮಣನ ಮರಣದ ವಿಚಾರ ತಿಳಿದಿದ್ದ.... ಪುಷ್ಪಾ, ಅವಳ ನಂತರ ಸ್ನೇಹ ಇಬ್ಬರೂ ಲಕ್ಷ್ಮಣನಲ್ಲಿ ಹೊಮದಿದ್ದ ಪ್ರೇಮದ ಸಂಗತಿ ಬಲ್ಲವನು. ಬಿಳಿ ಗೌಡರ ದೊಡ್ಡ ವಂಶಕ್ಕೆ ಲಕ್ಷ್ಮಣ ಸೇರುವುದುನ್ನು ಅವನು ಸಹಿಸ. ಲಕ್ಷ್ಮಣ ಜಾತಿ ಇಲ್ಲದ ಅನರ್ಹ ಮನುಷ್ಯ! ವರದಪ್ಪ ಬಿಳಿಗೌಡನ ಅಳಿಯನಾಗಲು

ಸರ್ವವಿಧದಲ್ಲೂ ಯೋಗ್ಯ.... ಆರಿದ ಲಾಂದ್ರ ಅಡಿಗೆಯ ಕೋಣೆಯಿಂದ ದೆವ್ವದ ಕೋಣೆಗೆ ಹೇಗೆ ಬಂತೆಂಬುದು ತಿಳಿಯದು. ದೆವ್ವದ ಕೋಣೆಯಲ್ಲಿ ಇಣಿಕಿ ನೋಡುವ ಉದ್ಧಟತನಕ್ಕೆ ಯಾವತ್ತಿಗೂ ಹೋದವನಲ್ಲ. ದೆವ್ವಗಳ ಅಸಿತ್ವ, ಚರ್ಚೆಗಳಲ್ಲಿ ನಂಬಿಕೆ ಇದೆ...

ಸಾಹೇಬನ ಮಾತಿಗೆ ದಿವಾಕರ ಕೈ ಹಿಸುಕಿಕೊಂಡು ಮಾತು ಹಾರಿಸಿದ.

"ದಡಗುಂಟೆಗೆ ಸ್ವಲ್ಪ ಗೊತ್ತಿರಬೋದು. ಹಾಳಾದೋನು ಗುಟ್ಟು ಬಿಡೋದಿಲ್ಲ."

"ಗೌಡರ ಮನೆ ನೌಕರ್ ಇಮಾನ್ದಾರ್ ಇರ್ತಾನೆ."

ಹಿದಾಯತ್ ಸಿಗರೇಟಿನ ಬೂದಿ ಕೊಡವಿ ಮತ್ತೊಮ್ಮೆ ಎಳೆದ. ಅಡಿಗೆ ಆಳು ಭಗವಂತನ ಸ್ಟೇಟ್‌ಮೆಂಟ್ ಮೇಲೆ ಅವನ ಕಣ್ಣು ಹರಿದಿತ್ತು.

ಭಗವಂತ ಐದು ವರ್ಷಗಳ ಹಿಮದೆ ಬಿಳಿಗೌಡನ ಮನೆ ಸೇರಿದವನು. ಏಳು ವರ್ಷಗಳ ಹಿಂದೆ ಬಿಳಿಗೌಡನ ಹೆಂಡತಿ ಸತ್ತಿದ್ದು. ಕೋಟೆಗೌಡನೂ ಅವಿವಾಹಿತನಾಗಿದ್ದ ಕಾರಣ ಅಡಿಗೆಯವನ ಅಗತ್ಯ ಆ ಮನೆಗೆ ಬಹಳವಾಗಿತ್ತು. ಗೌಡನ ಆಶ್ರಯ ಸುಖಕರವಾಗಿದ್ದುದರಿಂದ ನಿಷ್ಪೃಹತೆಯಿಂದ ದುಡಿತ ಸಾಗಿಸುತ್ತಿದ್ದಾನೆ.... ಗೌಡನ ಹೆಣ್ಣುಮಕ್ಕಳ ಪ್ರಣಯ ತಿಳಿದವನಾದರೂ ತುಟಿ ಎರಡು ಮಾಡದ ಚತುರ.... ಶನಿವಾರ ರಾತ್ರಿಯೆ ಲಕ್ಷ್ಮಣನ ಸಾಹಸ ತಿಳಿದಿತ್ತು. ಅದರ ಉಸಾಬರಿ ತನಗೆ ಬೇಡವೆಂದು ಅಡಿಗೆ ಮನೆಯಲ್ಲಿ ಮಲಗಿದ್ದ... ರಾತ್ರಿ ಒಂದು ಹೊತ್ತಿನಲ್ಲಿ ಯಾರೊ ಅಡಿಗೆ ಕೋಣೆಯಲ್ಲಿ ಅಡ್ಡಾಡಿದ ಹಾಗೆ ಆಯಿತಂತೆ! ಕತ್ತಲಿನಲ್ಲಿ ಕಣ್ಣಿನ ಮಬ್ಬು. ಅದು ಯಾರೆಂದು ತಿಳಿಯದು... ನಂತರ ಏಕಾಏಕಿ ಎಚ್ಚರ. ಕತ್ತಲಿನಲ್ಲಿ ಹಜಾರಕ್ಕೆ ಬಂದು ಕಿಟಕಿಯಿಂದ ಇಣುಕಿದ. ಅಲ್ಲಿಗೆ ದೆವ್ವದ ಕೋಣೆ ಕಾಣದು.....

ನಿಧಾನವಾಗಿ ಒಮದೊಂದೇ ಪದ ಬಿಡಿಸಿ ಓದುತ್ತಿದ್ದವನು ಮತ್ತಷ್ಟು ಓದಿ ತಲೆ ಎತ್ತಿದ ಹಿದಾಯತ್.

"ಲಚ್ಮನ ಹನ್ನೊಂದು ಐವತ್ತೈದು ಟೈಂಗೆ ಕಿರಿಚ್ದ. ಭಗ್ವಂತ ಹೇಳ್ತಾನೆ ಸುಮಾರು ಹನ್ನೊಂದೂವರೆವಳ್ಗೆ ಲಚ್ಮನ ಮೆಟ್ಟಲು ಇಳಿದು ಹೋದ ಅಂತ. ಅದು ಹೆಂಗೆ?"

ದಿವಾಕರ ವಿವರಣೆ ಕೊಟ್ಟ.

"ಭಗವಂತನಿಗೆ ಆ ಕಿಟಕಿಯಿಂದ ದೆವ್ವದ ಕೋಣೆ ಕೂಡ್ತಾ ಇರ್ಲಿಲ್ಲ. ಆಗ ಸುಮಾರು ಹನ್ನೊಂದೂವರೆ ದಾಟಿರಬೇಕು. ಅವನ ಕೈಲೂ ಒಂದು ಮಣಕು ಹಿಡಿದ ಗುಂಡನೆ ಹಳೆ ಗಡಿಯಾರ ಇದೆ. ಬಹುಶಃ ಹೋದೋನು ಲಕ್ಷ್ಮಣ ಅಂತ ಅವನ ಅಭಿಪ್ರಾಯ. ಕೋಟೆಗೌಡ ಹೇಳೋ ಹಾಗೆ ಲಕ್ಷ್ಮಣ ಹನ್ನೊಂದೂವರೆ ಹೊತ್ನಲ್ಲಿ ಅವನ ಕೋಣೆಯಿಂದ ಟೇಪ್ ರೆಕಾರ್ಡರ್ ಒಯ್ದನಂತೆ. ಅಂದರೆ ದೆವ್ವದ ಕೋಣೆ ಬಾಗಿಲವರೆಗೆ ಹೋಗಿದ್ದ ಲಕ್ಷ್ಮಣ ಮೆಟ್ಟಿಲು ಇಳಿದು ಬಂದು ರೆಕಾರ್ಡ್ ಒಯ್ದ ಅನ್ನೋಣವೆ?"

ಹೇಳಿಕೆಯ ಓದು ಮುಂದಕ್ಕೆ ಸಾಗಿತು.

ಭಗವಂತನಿಗೆ ಕೋಣೆಯಿಂದ ಚೀತ್ಕಾರ ಕೇಳಿದಾಗ ಎಚ್ಚರವಿತ್ತು. ಆಗ ಹನ್ನೊಂದೂ ಐವತ್ತೈದು ಎಂಬುದಕ್ಕೆ ಅವನ ಹಳೆ ಗಡಿಯಾರದ ಸಾಕ್ಷಿಯಂತೆ. ಮಣುಕು ಗಡಿಯಾರ ಕತ್ತಲಿನಲ್ಲಿ ಹೊಳೆಯದಿದ್ದರೂ ಅವನದು ಅದೇ ಖಚಿತ ಅಭಿಪ್ರಾಯ. ನಂತರ ಹೊರ ಬರಲಿಲ್ಲ ಅವನು. ತುದಿ ಒಡೆದ, ಮಸಿ ಹಿಡಿದ ಆರಿದ ಲಾಂದ್ರ ಅವನ ಗೂಡಿನಿಂದ ಹೇಗೆ ಮಾಯವಾಯಿತೆಂದು ಅವನಿಗೆ ತಿಳಿಯದು. ಬಹುಶಃ ಕತ್ತಲಿನಲ್ಲಿ ಕೋಣೆಗೆ ಬಂದವನು ಅದನ್ನು ಒಯ್ದಿರಲಿಕ್ಕೆ ಸಾಧ್ಯ. ಲಾಂದ್ರದ ಬಗ್ಗೆ ನಿರ್ಲಕ್ಷ್ಯತೆ ತೋರಲು ಕಾರಣ ಅವನ ಸೋಮಾರಿತನ.

ಓದು ಮುಗಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಕಣ್ಣರಳಿಸಿ ಗಂಭೀರತೆ ಪ್ರಕಟಿಸಿದ.

“ಏನೇನೊ ಕರಾಮತ್ ಆಗದೆ ಅಲ್ಲಿ.”

“ಅದು ಮೊದಲ ನೋಟಕ್ಕೆ ಗೊತ್ತಾಯ್ತು. ನನ್ನ ತಲೆ ಉಳಿಸಿಕೊಳ್ಳೋದಿಕ್ಕೆ....”

“ನನ್ದು, ನಿಮ್ದು ಇಬ್ಬರ್ದು ತಲೆ ಅನ್ನು.”

“ನಮ್ಮಿಬ್ಬರ ತಲೆ ಉಳಿಸಿಕೊಳ್ಳೋದಿಕ್ಕೆ ಫಿಂಗರ್ ಪ್ರಿಂಟ್, ಲೋಟ, ಲಾಂದ್ರ, ಫ್ಯೂಸ್ ಕಟ್ ಔಟ್ ಅಂತ ಮ್ಯೂಸಿಯಂ ಬೆಳೆಸಿದ್ದು.”

“ಮತ್ತೆ ಲಾಂದ್ರಾಗೆ ಏನ್ ಮಾಡ್ತಿಯೊ, ದಿವಾಕ್ರು?”

ಕಹಿ ನುಂಗಿದಂತೆ ಮುಖ ಮಾಡಿದ ಎಸ್.ಐ. ಸಣ್ಣ ವಿಷಯ ಬೇಡವೆನ್ನುವ ಸಾಹೇಬ ಎರಡು ಸಾರಿ ಲಾಂದ್ರದ ಮಾತು ಎತ್ತಿದ್ದ.

“ಅದು ಸಿಗದಿದ್ರೂ ಪರವಾಗಿಲ್ಲ.”

“ಹುಂ! ಹಂಗೆ ಇರ್ಬೇಕು ಭಾತಿ. ಗೌಡನ್ದು ಮನೆ ಒಳ್ಗೆ ಇನ್ನೂ ಐದು ಲಾಂದ್ರ ಇದೆ ಅಂದಿ... ಒಂದು ಲಾಂದ್ರ ತಕ್ಕೊಂಡಿ ತುದಿ ಒಡ್ಡಿ, ಒಳ್ಗೆ ಮಸಿ, ಎಣ್ಣೆ ಖಾಲಿ ಮಾಡ್ಸು. ಅದು ನಿನ್ದು ಮಹಜರ್ ಮ್ಯೂಸಿಯಂಗೆ ಜಮಾಯಿಸ್ಕೊ.”

ನಗೆ ತಡೆದು ಹಣೆ ಒರೆಸಿದ ದಿವಾಕರ.

“ಈಗ ಚಾಮಗೆರೆಗೆ ಹೋಗ್ಬೇಕು. ಇನ್ನೆರಡು ಸ್ಟೇಟ್‌ಮೆಂಟ್ ಬಾಕಿ ಇದೆ.”

“ವರದಪ್ಪಂದು, ಆ ಲಡ್ಕಿದು... ಹುಂ?”

“ಹೌದು, ವರದಪ್ಪ ಹೊರಟೋಗಿದ್ದ. ಆ ಹುಡುಗಿ ನಿದ್ರೆ ಗುಳಿಗೆ ನುಂಗಿ ಮಲಗಿಬಿಟ್ಟಿದ್ಲು.”

“ದಿವಾಕ್ರು, ಸೊಲ್ಪ ಹೋಷಿಯಾರ್. ಲಡ್ಕೀದು ಸ್ಟೇಟ್‌ಮೆಂಟ್ ತಗೋವಾಗ ಅವಳ್ದು ಮುಖ ಜಾಸ್ತಿ ನೋಡ್ಬೇಡ. ಲಚ್ಮನ್‌ಗೆ ಮೊಹಬತ್ ಮಾಡಿದ್ದು ಹುಡುಗಿ ಅದು.”

ದಿವಾಕರನ ಮೊಟಾರ್ ಸೈಕಲ್ ಚಾಮಗೆರೆಗೆ ಬಂದಾಗ ಐದು ಗಂಟೆ ಆಗಿತ್ತು. ಅಡಿಗೆ ಆಳು ಭಗವಂತ ಗೌರವದಿಂದ ಒಳಕ್ಕೆ ಕರೆದೊಯ್ದ. ಬಿಳಿಗೌಡ ತೋಟದ ಕಡೆಗೆ ಹೋಗಿದ್ದ. ಸಿಟಿಗೆ ಹೋದ ಕೋಟೆಗೌಡ, ಐವತ್ತು ಸಾವಿರದ ವಿಮಾ ಪಾಲಿಸಿದಾರನನ್ನು ಬಲೆಗೆ ಹಾಕಲು ನೀಲಸಂದ್ರ ಸೇರಿದ್ದ ನಾಗರಾಜಪ್ಪ ಇಬ್ಬರೂ ಹಿಂತಿರುಗಿರಲಿಲ್ಲ.

ಸೋದರಿಯರಿಬ್ಬರೂ ಕೋಣೆಯಲ್ಲಿ ಇಸ್ಪೇಟ್ ಆಡುತ್ತಿದ್ದರು.

ಹ್ಯಾಟ್ ತೆಗೆದು ಅವರ ಮುಂದೆ ನಿಂತ ಎಸ್.ಐ. ಕ್ಷಣ ಅವಾಕ್ಕಾದ. ಸೋದರಿಯರಿಬ್ಬರದೂ ಸರಿ ಸುಮಾರು ಒಂದೇ ರೂಪು, ಒಂದೇ ಗಾತ್ರ. ಸ್ನೇಹಲತಾ ಮುಖದಲ್ಲಿ ದುಃಖ ಉಳಿದಿತ್ತು.

“ಮತ್ತೆ ಬರ್ತೀನಿ ಅಂತ ಬೆಳಿಗ್ಗೆ ಹೇಳ್ದೋನು ಸಂಜೆಗೇ ಹಾಜರಾಗಿದೀನಿ. ಅವತ್ತಿನ ಕೆಲಸ ಅವತ್ತೇ ಆಗಿಬಿಡಬೇಕು ಅನ್ನೋ ಕಾಯಿಲೆಯೋನು ನಾನು. ಸ್ನೇಹಲತಾರ ಬಾಯಿಂದ ಎರಡು ಮಾತು ಕೇಳಿ ನನ್ನ ಕಡತ ಸಾಹೇಬ್ರಿಗೆ ಒಗೆದು ಬಿಡೋಣಾಂತ.”

ಕೋಣೆಯಲ್ಲಿ ಸುತ್ತಲೂ ನೋಡಿದ. ಪುಷ್ಪಲತಾ ಎದ್ದು ನಿಂತಳು.

“ಕೂತ್ಕೊಳ್ಳಿ. ಸಾರ್. ನಾನು ಹೇಳಿದ್ದೇ ನನ್ನ ತಂಗಿಯೂ ಹೇಳೋದು. ನಾನು ಏನು ಹೇಳ್ದೆ ಅಂತ ಅವಳಿಗೆ ತಿಳಿಸಿದೀನಿ. ಈಗ ದುಃಖದಲ್ಲಿದ್ದಾಳೆ. ಆದಷ್ಟು ಕಡಿಮೆ ಕೇಳಿದ್ರೆ ಒಳ್ಳೇದು”

ಅವಳ ಧ್ವನಿಯಲ್ಲಿ ಬೇಡಿಕೆ ಇತ್ತು.

“ಖಂಡಿತ, ಅಗತ್ಯವಾದಷ್ಟು ಮಾತ್ರ ನಾನು ಕೇಳೋದು. ಲಕ್ಷ್ಮಣನ ಕೂಗು ಕೇಳಿದ ಕೂಡಲೇ ನೀವು ದೆವ್ವದ ಕೋಣೆ ಸೇರಿ ಬಾಗಿಲು ಬಡಿದ್ರಿ ಅನ್ನೊ ಅಸಾಧ್ಯ ಸಂಗತಿನ ನಿಮ್ಮಕ್ಕ ಹೇಳಿದ್ರು. ಅದು ನಿಜವೆ?”

ಸ್ನೇಹಲತಾ ನೀಳವಾಗಿ ಉಸಿರು ಹಾಕಿದಳು.

“ಊಹಿಸೋದಿಕ್ಕೆ ಅದು ಅಸಾಧ್ಯ ನಿಜ. ಆದರೆ ನಾನು ಹಾಗೆ ಮಾಡಿದ್ದು ಸತ್ಯ. ಯಾಕೆ ಹಾಗೆ ಮಾಡ್ದೆ ಹೇಳಲಾರೆ. ಆಗ ನನಗೆ ಧೈರ್ಯ ಎಲ್ಲಿಂದ ಬಂತು ಅನ್ನೋದು ನನಗೇ ಗೊತ್ತಿಲ್ಲ.”

ಸವಿಯಾಗಿತ್ತು ಸ್ವರ. ರೂಪದಲ್ಲಿ ಸಾಮ್ಯ ಕಂಡರೂ ಅವಳದು ಸೋದರಿಯಿಂದ ಭಿನ್ನವಾದ ಕಂಠ.

ದಿವಾಕರ ಮುಖ ಅರಳಿಸಿದ.

“ನಿಮ್ಮ ಶುದ್ಧ ಪ್ರೇಮದ ಪ್ರೇರೇಪಣೆ ಅದು. ಇಲ್ಲವಾದ್ರೆ ಆ ಹೊತ್ನಲ್ಲಿ, ಆ ಸನ್ನಿವೇಶದಲ್ಲಿ ಅಂತಹ ಸಾಹಸ ಅಸಾಧ್ಯ... ಈಗ ಕೋಣೆಯಿಂದ ಏನಾದ್ರು ಸದ್ದು ಬಂತೆ?”

"ಇಲ್ಲ, ಪೂರ್ಣ ನಿಶ್ಶಬ್ದ."

"ನೀವು ರಾತ್ರಿ ಹನ್ನೊಂದೂವರೆ ಸಮಯದಲ್ಲಿ ಏನು ಮಾಡ್ತಿದ್ರಿ?"

"ಇದೇ ಕೋಣೆಯಲ್ಲಿ ಪ್ರತಿ ನಿಮಿಷವನ್ನೂ ಎಣಿಸ್ತಾ ಇದ್ದೆ."

"ನೀವು ಕೋಣೆಯ ಕಡೆಗೆ ಹೋಗಿದ್ದು ಯಾರೂ ನೋಡಲಿಲ್ಲವೆ?"

"ಗೊತ್ತಿಲ್ಲ."

"ನಿಮ್ಮಕ್ಕ ನಿಮ್ಮನ್ನ ಅಲ್ಲಿಂದ ಮೆಟ್ಟಿಲು ಇಳಿಸಿ ಕರಕೊಂಡು ಬಂದಿದ್ದು ನೆನಪಿದೆಯೆ?"

"ನೆನಪಿದೆ. ಆಮೇಲೇನಾಯ್ತೊ ಗೊತ್ತಿಲ್ಲ."

"ನೀವು ಹನ್ನೊಂದೂವರೆಗೆ ಸ್ವಲ್ಪ ಮೊದಲು ಅಥವಾ ಆಮೇಲೆ ಆ ಕೋಣೆಗೆ ಹೋದ್ರಿ. ಲಕ್ಷ್ಮಣನ ಜೊತೇಲಿ ಮಾತಾಡಿದ್ರಿ. ಅದಕ್ಕೆ ಮೊದಲು ಲಕ್ಷ್ಮಣ ಕೋಣೆಯಿಂದ ಇಳಿದು ಬಂದಿದ್ದ. ಇಷ್ಟಕ್ಕೂ ನಾನು ಸಾಕ್ಷಿ ಹೇಳಿಸ್ತೀನಿ. ಏನಾದ್ರು ಹೇಳ್ತೀರಾ?"

ಪುಷ್ಪಲತಾ ಬೆಚ್ಚಿದಳು. ತೀಕ್ಷ್ಣ ನೋಟ ಬೀರಿದಳು ಸ್ನೇಹಲತಾ. ಅಳುಕು ಧ್ವನಿ ಏರಿತು.

"ಸುಳ್ಳು! ನೀವು ಹೇಳೋದು ಸುಳ್ಳು. ನನ್ನ ಹೆದರಿಸ್ತಾ ಇದೀರಿ. ನಾನು ಅಲ್ಲಿಗೆ ಹೋಗಿದ್ದು ಹನ್ನೊಂದು ಐವತ್ತೈದು ಆದಮೇಲೆ... ಕೂಗು ಕೇಳಿದ ಮೇಲೆ! ಲಕ್ಷ್ಮಣ ಕೋಣೆಯಿಂದ ಹೊರಕ್ಕೆ ಬರ್ಲಿಲ್ಲ. ನಾನು ಒಳಕ್ಕೆ ಹೋಗ್ಲಿಲ್ಲ."

ಒಂದೇ ಸಮನೆ ಹರಿದ ಕಣ್ಣೀರನ್ನು ಕರವಸ್ತ್ರದಿಂದ ಒರೆಸಿದಳು. ಪುಷ್ಪಾ ಎಸ್.ಐ. ಕಡೆಗೆ ಸಿಡಿ ನೋಟ ಹಾಕಿದಳು.

"ಸಾರ್, ನನ್ನ ತಂಗಿ ದುಃಖದಲ್ಲಿದ್ದಾಳೆ. ಈಗ ಅವಳ ಮನಸ್ಸು ಕೆಟ್ಟಿದೆ. ನೀವು ಇನ್ನೊಂದು ಸಾರಿ ಬಂದು ಕಾಣೋದು ಒಳ್ಳೇದು."

"ಇನ್ನೊಂದು ಪ್ರಶ್ನೆ ಮಾತ್ರ ಕೇಳ್ತೀನಿ. ಈಗ ಲಕ್ಷ್ಮಣ ತೀರಿ ಹೋದ.... ನಿಮ್ಮ ತಂದೆ ಗೊತ್ತು ಮಾಡಿರೋ ವರದಪ್ಪನ್ನ ಮದುವೆ ಆಗೋಕೆ ಒಪ್ತೀರಾ?"

ತನಿಖೆಗೆ ಸಂಬಂಧಿಸದ ಪ್ರಶ್ನೆ. ಸ್ನೇಹಾಳ ಮುಖದಲ್ಲಿ ಚಿಂತೆ ಕಾಣಿಸಿತು.

"ಪರವಾಗಿಲ್ಲ. ದಯವಿಟ್ಟು ಹೇಳಿ. ನಮಗೆ ನಿಮ್ಮ ಉತ್ತರಬೇಕು" ನಯವಾಗಿ ಒತ್ತಾಯಿಸಿದ.

"ಮುಂದಿನ ವಿಷಯ ಯೋಚನೆ ಮಾಡಿಲ್ಲ. ಬಿ.ಎ.ಗೆ ಕಟ್ಟಿದೀನಿ ಪರೀಕ್ಷೆ ಆದ ಮೇಲೆ ನೋಡೋಣ."

ಸೆರಗಿನಿಂದ ಕಣ್ಣೊತ್ತಿದಳು. ಅಳು ಉಮ್ಮಳಿಸಿ ಬಂತು. ಅಳುತ್ತಲೇ ಹೇಳಿದಳು.

"ಲಕ್ಷ್ಮಣ ಸಾಯೋದಿಕ್ಕೆ ನಾನೇ ಕಾರಣ. ಅವನಿಗೆ ದೆವ್ವದ ಕೋಣೆಗೆ ಹೋಗಿ

ಬಾ ಅಂದೋಳು ನಾನೇ.... ದೆವ್ವದಲ್ಲಿ ನನಗೆ ನಂಬಿಕೆ ಇರ್ಲಿಲ್ಲ.... ಲಕ್ಷ್ಮಣ ಗೆಲುವಿನಿಂದ, ಕೋಣೆ ಇಳಿದು ಬರ್ತಾನೇಂತ ಕಾದಿದ್ದೆ... ನಾನು ಕೆಟ್ಟೆ!"

"ಸಮಾಧಾನ ತಂದ್ಕೊಳ್ಳಿ, ಎಲ್ಲಾ ಒಳ್ಳೆದಕ್ಕೆ ಆಗಿದೆ ಅಂತ ನೆಮ್ಮದಿ ತಂದ್ಕೊಳ್ಳಿ... ತೊಂದರೆ ಕೊಟ್ಟೆ, ಕ್ಷಮಿಸಿ."

ದಿವಾಕರ ಹೊರಡುವ ಮೊದಲು ಮೂಲೆಯ ಸ್ಟೂಲ್ ಮೇಲಿದ್ದ ಲಾಂದ್ರ ನೋಡಿದ. ಗಾಜಿನ ಯಾವ ಭಾಗವೂ ಒಡೆಯದ, ಚೆನ್ನಾಗಿ ಒರೆಸಿಟ್ಟ ಲಾಂದ್ರ ಅದು.

ಹಿಂಬಾಗಿಲಿನಿಂದ ಹೊರ ಬಿದ್ದು ಹಳೆಯ ಕಟ್ಟಡದ ಮುಂದೆ ನಿಂತಾಗ ಕೋಣೆಯ ಕಾವಲಿಗೆ ನಿಂತ ಪೇದೆ ಸೆಲ್ಯೂಟ್ ಹಾಕಿದ.

ಮೆಟ್ಟಿಲು ಏರಿ ಹಾಳು ಸುರಿಯುವ ದೆವ್ವದ ಕೋಣೆಯ ಬಾಗಿಲು ಮುಂದೆ ಬಂದ. ಮೊಹರು ಸರಿಯಾಗಿತ್ತು. ಬಾಗಿಲಿಗೆ ಕಿವಿ ಹಚ್ಚಿದಾಗ ಒಳ ಕಿಟಕಿ ಗಾಳಿಗೆ ಕರಗುಟ್ಟುವುದು ಕೇಳುತ್ತಿತ್ತು. ನಿಧಾನವಾಗಿ ಇಳಿದು ಕಟ್ಟಡದ ಹಿಂದಕ್ಕೆ ದೃಷ್ಟಿ ಹರಿಸಿದ.

ಗಾಳಿ ಆಡಿದರೂ ಚಿತ್ರದಲ್ಲಿ ಕೊರೆದಂತೆ ಅಚಲವಾಗಿ ನಿಂತ ಹಿಪ್ಪೆಮರಗಳು ಸೂರ್ಯಾಸ್ತಕ್ಕೆ ಮೊದಲು ತುಸು ಭಯಾನಕ ಆವರಣ ಸೃಷ್ಟಿಸಿದ್ದವು. ಪಕ್ಕದಲ್ಲಿ ರಾಗಿ ಹುಲ್ಲಿನ ಎರಡು ಬಣವೆಗಳು. ದೂರದವರೆಗೆ ದೊಡ್ಡ ಆವರಣವನ್ನು ಹಿಡಿದ ಬೇಲಿಯ ಚೌಕಟ್ಟು.

ಸಂಜೆಯ ಮಂಕು ಆವರಣ ತಲೆಯಲ್ಲಿ ವಿಚಾರ ಹಿಂಜಿಸಿತು.

ಚೆನ್ನಮ್ಮನ ಆತ್ಮ ಇಲ್ಲೆಲ್ಲಾ ಹರಿದಾಡಿರಬೇಕು. ಅದಕ್ಕೆ ಸೇಡಿನ ದಾಹ, ಸ್ವಾರ್ಥ. ಕೋಣೆಯ ಬಾಗಿಲು ತೆರೆಯಬಾರದೆಂಬ ವಿಚಿತ್ರ ಹಠ! ಹಠಕ್ಕೆ ಲಕ್ಷ್ಮಣನ ಬಲಿ?

ಇಂತಹ ಢೋಂಗಿ ಕಥೆಗಳಿಗೆ ತಾನು ಜಗ್ಗುವವನಲ್ಲ. ಲಕ್ಷ್ಮಣನ ಮರಣದಿಂದ ಈ ಮನೆ ಮಂದಿಯಲ್ಲಿ ಆದ ಪರಿಣಾಮ?

ಶ್ರೀಮಂತಗೌಡ ವಂಶದ ಘನತೆ ಉಳಿಸುವಂತೆ, ಕಾಲಿಟ್ಟ ಪೀಡೆ ತಾನಾಗಿಯೇ ಕಳೆದು ಹೋಯಿತು. ಅದು ಬಿಳಿಗೌಡನ ಹರ್ಷವಿರಬಹುದು.

ವರದಪ್ಪ ತನ್ನ ತಂಗಿಯನ್ನು ಮದುವೆಯಾದರೆ ದೊಡ್ಡ ಮೊತ್ತದ ಜೋಡಿ ಪಾಲಿಸಿಯೊಂದು ಸಿಗಬಲ್ಲದೆಂಬ ಹುಚ್ಚು ಆಸೆ ಆ ಬೇಜವಾಬ್ದಾರ ನಾಗರಾಜಪ್ಪನಿಗೆ.

ಪುಷ್ಪಲತಾಗೆ ತನ್ನಿಂದ ಹಾರಿ ಹೋದ ಪ್ರೇಮಿ: ಸ್ನೇಹಲತಾಗೆ ದಕ್ಕಲಿಲ್ಲವೆಂಬ ನೆಮ್ಮದಿ.

ಲಕ್ಷಣವಾದ, ಓದಿದ, ಅಂತಸ್ತಿಗೆ ತಕ್ಕ ಹುಡುಗಿ ತನಗೆ ಉಳಿಯಿತೆಂಬ ಸುಮ್ಮಾನ ವರದಪ್ಪನಿಗೆ... ಅವನ ಹೇಳಿಕೆ ತನಗಿನ್ನೂ ಸಿಕ್ಕಿಲ್ಲ!

ಧಣಿ ಬಿಳಿಗೌಡರ ಮರ್ಯಾದೆ ಉಳಿದು, ಸರಹದ್ದಿನಲ್ಲಿ ಜನರು ಗುಸುಗುಸು ಮಾತು ತಪ್ಪಿತಲ್ಲ ಎಂಬುದು ಮನೆ, ಆಳು ದಡಗುಂಟೆಗೆ, ಅಡಿಗೆ ಆಳು ಭಗವಂತನಿಗೆ

ಸಮಾಧಾನ.

ಅಣ್ಣನ ಚಿಂತೆ ತನಗೂ ಚಿಂತೆ. ದೆವ್ವದ ಅಸ್ತಿತ್ವದಲ್ಲಿ ಜಿಜ್ಞಾಸೆ ಹೊಂದಿದ ಕೋಟೆಗೌಡ ಲಕ್ಷ್ಮಣನ ಪ್ರಯೋಗದಿಂದ ದೆವ್ವ ಉಂಟೆಂಬ ನಿರ್ಧಾರ ತಳೆದಿದ್ದಾನೆ.

ಆತುರದಲ್ಲಿ ಕೈಗೊಂಡ ತೀರ್ಮಾನದ ಫಲ ಎಂದು ಮನಸ್ಸಿನಲ್ಲಿ ತುಮುಲ ನಡೆಸಿರಬಹುದಾದ ಸ್ನೇಹಲತಾಗೆ ತತ್ಕಾಲಕ್ಕೆ ದುಃಖವಾದರೂ ಕ್ಲಿಷ್ಟ ಸಮಸ್ಯೆ ಬಗೆಹರಿದಂತೆ.

ದೆವ್ವದ ಕೈಲಿ ಮರಣ ಹೊಂದುವವರು ರಕ್ತ ಕಾರಿ ಸಾಯುವುದು ಸಾಮಾನ್ಯವೆಂದು ಕೇಳಿರುವೆ... ಇಲ್ಲಿ ಲಕ್ಷ್ಮಣನ ಹಿಸುಕಿದ ಕತ್ತು ಜೋಲಿದೆ ಸಾವಿಗೆ ಮೊದಲು ಅವನು ಚೀತ್ಕಾರ ಹಾಕಿದ. ಸತ್ತವನ ಮುಖದಲ್ಲಿ ನೋವು, ನರಳುವಿಕೆಯ ಗುರುತು ಕಾಣದು....

"ಸ್ವಾಮಿ..."

ಕರೆಯಿಂದ ಭುಜ ಏರಿಸಿದ ದಿವಾಕರ ಹಿಂದಕ್ಕೆ ತಿರುಗಿದ. ಹತ್ತಡಿ ದೂರಕ್ಕೆ ಬಿಳಿಗೌಡ ನಿಂತಿದ್ದ. ಪಕ್ಕದಲ್ಲಿ ಅಡಿಗೆ ಆಳು ಭಗವಂತ.

"ಸುಮ್ಮನೆ ಬಂದಿದ್ದೆ, ಗೌಡರೆ..."

"ನಗೆ ಮುಖದಲ್ಲಿ ಬರೋರಲ್ಲ. ನಮ್ಮನ್ನ ಸುಮ್ಮನೆ ಇರಗೊಡೊರೂ ಅಲ್ಲ."

ಕಂಠದಲ್ಲಿ ಒರಟು ಕಂಡಿತ್ತು.

"ಏನು ಹಾಗಂದ್ರೆ?" ಅಷ್ಟೆ ಒರಟು ಸ್ವರದಲ್ಲಿ ಕೇಳಿದ.

"ಕೋಪ ಮಾಡ್ಕೊಬೇಡಿ. ನಿಮಗೆ ನೂರು ಸಾರಿ ಇಲ್ಲಿಗೆ ಬರೋದಿಕ್ಕೆ ಅಧಿಕಾರ ಕೊಟ್ಟಿದ್ದಾರೆ ದಿಪಾರ್ಟ್‌ಮೆಂಟಿನೋರು... ಬೇಸರದ ವಿಷಯ ಇಷ್ಟೇ. ನಿಮ್ಮ ಸಾಹೇಬ್ರೇ ಹೇಳಿದ್ರು ಇದು ಅಸ್ವಾಭಾವಿಕ ಮರಣ ಅಂತ. ನಿಮ್ಮ ಇಚ್ಛೆ ಪ್ರಕಾರ ದೇಹವನ್ನ ವೈದ್ಯ ಪರೀಕ್ಷೆಗೆ ಒಪ್ಪಿಸಿದ್ವಿ. ನಿಮ್ಮ ಕಾಟ ತಪ್ಪಲಿಲ್ಲ. ನಮ್ಮ ಹೇಳಿಕೆಗಳೆಲ್ಲಾ ಯಾಕೆ, ಸ್ವಾಮಿ?... ಇದೇನು ಕೊಲೆ ಪ್ರಕರಣವ? ದುಃಖದಲ್ಲಿರೊ ನನ್ನ ಮಗಳನ್ನೂ ಬಿಡದೆ ಪ್ರಶ್ನೆ ಹಾಕಿ ಸತಾಯ್ಸಿದ್ರೆ ಅವಳ ಮನಸ್ಸು ಹೆಂಗಾಗಿರ್ಬೇಕು. ಇದೇ ಮನಸ್ಸಿಗೆ ಹಚ್ಕೊಂಡು ಅವಳು ಹೆಚ್ಚು ಕಡಿಮೆ ಮಾಡಿಕೊಂಡ್ರೆ ಗತಿ?"

ಅವನ ನಿರೀಕ್ಷೆಗೆ ವಿರುದ್ಧವಾಗಿ ದಿವಾಕರ ಸ್ವಲ್ಪವೂ ಕೋಪಗೊಳ್ಳದೆ ಶಾಂತವಾಗಿ ನುಡಿದ.

"ನೀವು ಹೇಳಿದ್ದು ತಪ್ಪು ಅಂದನೆ, ಗೌಡರೆ? ನಮ್ಮ ಸಾಹೇಬ್ರು. ಇಷ್ಟೆಲ್ಲಾ ಕೈಹಾಕೋದಿಕ್ಕೆ ಒಪ್ಪೋರೂ ಅಲ್ಲ. ಆದರೆ ಪರಿಸ್ಥಿತಿ ಬಿಗಡಾಯಿಸೊ ಸೂಚನೆ ತೋರಿದೆ. ತನಿಖೆ ಅಧಿಕಾರಿ ಅವರು... ಈ ಹೇಳಿಕೆಗಳಿಂದ ನಿಮಗೂ ಒಳ್ಳೆಯದಾಗಬೋದು. ತೊಂದರೆ ಆಗಿರೋದಿಕ್ಕೆ ಕ್ಷಮಿಸಿ."

ಬಿಳಿಗೌಡ ಹಸುನ್ಮುಖನಾದ.

"ಒಂದು ವಿಷಯ ಮರೆತಿದ್ದೆ ನಮ್ಮ ಕಥೆ ಹೇಳೋವಾಗ. ನನ್ನ ಸೋದರತ್ತೆ ಚೆನ್ನಮ್ಮ ಸತ್ತಮೇಲೆ ಅವಳನ್ನು ನಮ್ಮ ತೋಟದಲ್ಲೇ ಕಿರುನೆಲ್ಲಿ ಮರದ ಹತ್ರ ಧಫನ್ ಮಡಿದ್ರು..."

"ಹುಂ, ಹುಂ. ನನ್ನ ದಫೇದಾರ ಅದನ್ನ ಹೇಳಿದ ಜ್ಞಾಪಕ."

"ದಫನ್ ಮಡಿ ಸಣ್ಣ ಸಮಾಧಿ ಕಟ್ಟಿದ್ರು. ಆ ಸ್ಥಳದ ಸುತ್ತಲೂ ಹತ್ತಡಿ ಅಳತೆವರೆಗೆ ಒಂದು ಹುಲ್ಲುಗರಿಯೂ ಹುಟ್ಟಲ್ಲ! ಇದಕ್ಕೆ ನೀವು ಪೊಲೀಸ್ ಇಲಾಖೆಯ ಕಡೆಯಿಂದ ಏನು ಅರ್ಥ ಕೊಡ್ತೀರಿ?"

"ಚೆನ್ನಮ್ಮ ಸಮಾಧಿ ಹತ್ತಿರದಲ್ಲಿ ಇದೆಯೇ?"

ಚಕಿತಕೊಂಡು ಕೇಳಿದ.

"ಇದೆ."

"ಬನ್ನಿ, ನೋಡೋಣ."

"ಈಗ ಸೂರ್ಯ ಮುಳುಗೋ ಹೊತ್ತು. ಅಂಥಾ ಕಡೆ ಹೋಗಬಾರದು.... ಆಯ್ತು, ಬನ್ನಿ, ನಿಮ್ಮ ಮನಸ್ಸಿನಲ್ಲಿರೊ ಕುಟುಕು ಹೋದ್ರೆ ಸಾಕು. ಇಲ್ದಿದ್ರೆ ಇನ್ನೂ ಹತ್ತು ಪ್ರಶ್ನೆ ನಮ್ಮ ಮೇಲೆ ಧಾಳಿಮಾಡಾವು."

ಬಿಳಿಗೌಡ ಅಧಿಕಾರಿಯನ್ನು ಹಿಪ್ಪೆ ಮರಗಳಿಂದ ಆಚೆಗೆ ಕರೆದೊಯ್ದ. ಅಡಿಗೆ ಆಳು ಭಗವಂತ ಮೌನವಾಗಿ ಅವರನ್ನು ಹಿಂಬಾಲಿಸಿ ನಡೆದ,

ಮನೆಯಿಂದ ಹಿಂಭಾಗಕ್ಕೆ ಅರ್ಧ ಫರ್ಲಾಂಗ್‌ನಷ್ಟು ಹರಡಿದ್ದ ಹೊಲದ ಕೊನೆಯವರೆಗೆ ಬಂದರು. ತುರಾಯಿನಂತೆ ಹರಡಿ ನಿಂತ ಕಿರು ನೆಲ್ಲಿ ಮರದ ಪಕ್ಕಕ್ಕೆ ಸಣ್ಣ ಹಳೆಯ ಸಮಾಧಿ. ಹಚ್ಚಿದ ಸುಣ್ಣ ಬಣ್ಣಗೆಟ್ಟಿದೆ. ಬಿಳಿಗೌಡ ಹೇಳಿದಂತೆ ಅದರಿಂದ ಹತ್ತು ಅಡಿಗಳ ಅಳತೆಗೆ ಸುತ್ತಲೂ ಮಾಸಲು ಬಿಳುಪಿನ ಒಣ ಭೂಮಿ. ಒಂದು ಎಳೆ ಹುಲ್ಲೂ ಕಾಣದು!

"ಇದು ವಿಚಿತ್ರ. ಗೌಡರೆ. ಇದಕ್ಕೆ ಡಿಪಾರ್ಟ್‌ಮೆಂಟಿನ ಉತ್ತರ ಇಲ್ಲ ಅರ್ಥವೂ ಕೊಡೋಹಾಗಿಲ್ಲ."

ಗೌಡ ಮತ್ತಷ್ಟು ವಿಶ್ವಾಸ ಪಡೆದು ಹೇಳುತ್ತಿದ್ದ.

"ಇಲ್ಲಿಗೆ ನಾವು ಬರೋದು ಅಪರೂಪ. ಚೆನ್ನಮ್ಮ ಅಂದ್ರೆ ನಮಗೆ ಗೌರವದ ಜೊತೆಗೆ ಭಯವೂ ಇದೆ. ಅವರ ಪ್ರಭಾವ ಎಲ್ಲಿವರಿಗೆ ತಟ್ಟಿದೆ ಅನ್ನೋದು ನಿಮಗೂ ಗೊತ್ತಾಗಿದೆ."

"ಗೊತ್ತಾಗ್ತಾ ಇದೆ...."

ಕಣ್ಣು ಹಾಗೆಯೇ ಎಡಕ್ಕೆ ಹರಿಸಿದ ದಿವಾಕರ ದೃಷ್ಟಿ ಸ್ಥಿರಗೊಳಿಸಿದ. ಉಸಿರಾಟ ಏರಿತು. ಮಾತಿಲ್ಲದೆ ತೋರು ಬೆರಳು ಎಡ ದಿಕ್ಕಿಗೆ ಹಿಡಿದ. ಬಿಳಿಗೌಡ ಅವನು

ತೋರಿದ ಕಡೆಗೆ ನಿಟ್ಟಿಸಿದ.

ಕಿರು ನೆಲ್ಲಿ ಮರದಡಿಯಲ್ಲಿ ಮಸಿ ಹಿಡಿದ ಲಾಂದ್ರ!

6

ಸಬ್ ಇನ್ಸ್‌ಪೆಕ್ಟರ್ ನಿಧಾನ ಹೆಜ್ಜೆಗಳಲ್ಲಿ ಮರದ ಬುಡಕ್ಕೆ ಬಂದು ಲಾಂದ್ರದ ಮುಂದೆ ನಿಂತು ಅದನ್ನ ಮುಟ್ಟದೆ ಬಾಗಿ ನೋಡಿದ.

ಗಾಜಿನ ತುದಿ ಒಡೆದು. ಒಳಗೆ ಹೊಗೆ ಹತ್ತಿದ ಅದೇ ಲಾಂದ್ರ. ಹಿಂದಿನ ರಾತ್ರಿ ದೆವ್ವದ ಕೋಣೆಯಲ್ಲಿ ಶವದ ಎಡ ಪಕ್ಕದ ಮಂಚದ ಮೇಲೆ ಕಂಡ ಆರಿದ ಲಾಂದ್ರ!

"ಇಲ್ಲಿಗೆ ಹೇಗೆ ಬಂತು ಇದು?"

ಗೌಡನತ್ತ ನೋಡದೆ ಕೇಳಿದ.

"ಇದೂ ಸೋಜಿಗ.... ಚೆನ್ನಮ್ಮ ಹೀಗೆ ಮಾಡಿ ಏನಾದ್ರು ಎಚ್ಚರಿಕೆ ಕೊಡ್ತಾ ಇದಾಳೊ ಏನೊ!"

ಎಸ್.ಐ. ಗೌಡನ ಕಡೆ ನೋಡಿ ಜೇಬಿನಿಂದ ಕರವಸ್ತ್ರ ತೆಗೆದ.

"ಈ ಕೇಸ್‌ನಲ್ಲಿ ಲಾಂದ್ರದ ಪಾತ್ರ ದೊಡ್ಡದು. ಎಣ್ಣೆ ಇಲ್ಲದ ಈ ದೀಪ ಲಕ್ಷ್ಮಣನ ಸಾವಿನ ಮೇಲೆ ಬೆಳಕು ಹಾಕತ್ತ. ಈ ಪ್ರಕರಣದಲ್ಲಿ ಕೈವಾಡ ನಡೆಸಿರೊ ವ್ಯಕ್ತಿಯ ಬೆರಳು ಗುರುತು ಇದರ ಮೇಲೆ ಇರ್ಬೇಕು..."

ದಿವಾಕರ ದೀಪದ ಕಡೆಗೆ ತಿರುಗಿದ. ನಿಧಾನವಾಗಿ ಹೆಜ್ಜೆ ಸರಿಸಿ ಬಂದ... ಏನಾಯಿತೆಂದು ಅರಿಯುವ ಮೊದಲೇ ಅಡಿಗೆ ಆಳು ಭಗವಂತ ಲಾಂದ್ರವನ್ನೆತ್ತಿಕೊಮಡು ಮಿಂಚಿನ ವೇಗದಲ್ಲಿ ಓಡಿದ.

"ಏಯ್, ನಿಲ್ಲೊ!... ಕೊಡು ಲಾಂದ್ರ..."

ಅಪ್ರತಿಭನಾದ ಅಧಿಕಾರಿ ಬುದ್ಧಿಗೆಟ್ಟವನಂತೆ ಅರಚಿದ.

ಲಾಂದ್ರ ಹಿಡಿದ ಅಡಿಗೆಯವ ಮತ್ತಷ್ಟು ವೇಗದಲ್ಲಿ ಬೇಲಿ ತೂರಿ ಧಾವಿಸಿದ.

ಬಿಳಿಗೌಡ ಧಾವಿಸುತ್ತಿದ್ದ ಅಡಿಗೆಯವನ ದಿಕ್ಕಿಗೆ ಬಾಯಿತೆರೆದು ನಿಂತು ಕಣ್ಣು ಕಿರಿದು ಮಾಡಿ ನಿಟ್ಟಿಸಿದ.

"ಬಡ್ಡಿ ಹೈದನ್ನ ನೋಡಿದ್ರಾ, ಸ್ವಾಮಿ ಸತ್ತು ಹೋದೋನ ಮೇಲೆ ಬೆಳಕು ಹಾಕತ್ತೆ ಅಂದ್ರಲ್ಲಾ ಆ ದೀಪನ ಎತ್ಕೊಂಡು ದೌಡಾಯಿಸಿಬಿಟ್ನಲ್ಲಾ!... ಒಳ್ಳೆ ಚಿಗರೆ ಸ್ವಾಮಿ ಅವನು."

ಮುಖಭಂಗಿತನಾದ ದಿವಾಕರ ಗೌಡನನ್ನು ನುಂಗುವಂತೆ ನೋಡಿದ.

"ನನ್ನ ಏನಂತ ತಿಳಿದ್ರಿ? ನಾನು ರೇಸ್ ಕುದುರೆ. ಅವನು ಕಾಲಿಗೆ ರೆಕ್ಕೆ ಕಟ್ಟಿದ್ರೂ ಅವನ ಬಿಡೊ ಪಿಂಡ ಅಲ್ಲ ಇದು... ಗೌಡರೆ, ನಿಮ್ಮಿಂದ ಬಹಳ ಕೆಲಸ ಇದೆ. ಬಂದು ವಿಚಾರಿಸಿಕೊಳ್ಳೀನಿ."

ಬಿಳಗೌಡ ಎರಡು ಕೈ ಒರಟಾಗಿ ಅಲುಗಿಸಿದ.

"ನನ್ನ ಏನ್ರಿ ವಿಚಾರಿಸಿಕೊಳ್ಳೋದು? ಕೈಕೊಟ್ಟು ಹೋದ ಭಗವಂತ. ಅವನ ಮೇಲಿನ ಕೋಪ ನನ್ನ ಮೇಲೆ ಬಿಡ್ತೀರಾ. ನನ್ನಿಂದ ಕೆಲಸ ಅನ್ನೊ ಮಥು ಮತ್ತೆ ಆಡೀರಿ, ಜೋಕೆ. ನಾನು ನಾಳೆ ಡಿ.ಐ.ಜಿ.ನ ಕಂಡು ಬರ್ತೀನಿ."

ಚರ್ಚೆಗೆ ನಿಲ್ಲಲು ವೇಳೆ ಇರಲಿಲ್ಲ. ಸಬ್‌ಇನ್ಸ್‌ಪೆಕ್ಟರ್ ಮೋಟಾರ್ ಸೈಕಲ್ ಚಲಾಯಿಸಿ ಗೌಡನ ಜಮೀನಿನ ಪಕ್ಕದ ರಸ್ತೆಯಲ್ಲಿ ಹಾದು ಕೆರೆ ದಂಡೆಯ ಮೇಲೆ ಸರಿದು ಹೋದ. ಕೆರೆಯ ತೂಬಿನ ಪಕ್ಕದ ಕಾಲು ಹಾದಿಯಲ್ಲಿ ಓಡುತ್ತಿದ್ದ ಭಗವಂತ. ಅಲ್ಲಿ ಮೋಟಾರ್ ಸೈಕಲ್ ಹಾಯುವಂತಿರಲಿಲ್ಲ.

ವಾಹನ ನಿಲ್ಲಿಸಿದ ದಿವಾಕರ ಪ್ಯಾಂಟಿನ ತಳ ಮಡಿಸಿ ಬೂಟು ಕಳಚಿ ಹಾಕಿದ.

"ನಿಲ್ಲೊ, ಮಗನೆ! ಗುಂಡು ಹಾರಿಸ್ತೀನಿ..."

ರಿವಾಲ್ವರ್ ಇರಲಿಲ್ಲವಾದರೂ ಬೆದರು ಗುಂಡು ಹಾರಿಸಿದ. ರೇಸ್ ಕುದುರೆಯ ವೇಗದಲ್ಲಿ ಅವನನ್ನು ಬೆನ್ನಟ್ಟಿ ಹೋದ.

ಭಗವಂತ ಅತೀವ ಆಯಾಸಗೊಮಡಿದ್ದ. ಮುಂದೆ ಚಲಿಸಲಾರದಂತಾಗಿ ನಿಂತು ಹಿಂದಕ್ಕೆ ನೋಡಿದ. ಕೇವಲ ಇಪ್ಪತ್ತು ಗಜಗಳಷ್ಟು ಹತ್ತಿರಕ್ಕೆ ಬಂದಿದ್ದ ಅಧಿಕಾರಿ. ಗುಂಡು ಹಾರಿಸುವನೆಂಬ ಭಯ.

ಭಗವಂತನಿಗೆ ಏನೂ ತೋರಲಿಲ್ಲ. ಲಾಂದ್ರ ನೆಲಕ್ಕೆ ಬಾರಿಸಿದ.

"ಏಯ್, ಬೇಡ...!"

ಅಧಿಕಾರಿಯ ಎಚ್ಚರಿಕೆಯನ್ನು ಲೆಕ್ಕಿಸದೆ ದೀಪವನ್ನು ಐದಾರು ಸಾರಿ ರಪರಪನೆ ಬಡಿದ. ಲಾಂಧ್ರದ ಗಾಜು ನುಚ್ಚು ನೂರಾಗಿ ತಳ, ಪಿಡಿ ಜಜ್ಜಿ ಹೋದವು.

ದಿವಾಕರ ಅವನ ಮೇಲೆ ಹೆಬ್ಬುಲಿಯಂತೆ ಜಿಗಿದು ಬಿದ್ದ. ಅವನ ದೇಹದ ಭಾರಕ್ಕೆ ಸಿಕ್ಕಿ ಅಡಿಗೆಯವ ನೆಲ ಹಿಡಿದು ಏದುಸಿರು ಹಾಕಿದ. ಮಾತು ಕಷ್ಟದಿಂದ ಹೊರ ಬಂತು.

"ತಪ್ಪಾಯ್ತು... ತಪ್ಪಾಯ್ತು, ಸಾಹೇಬ್ರೆ... ಉಸಿರು ಕಟ್ತಾ ಇದೆ.... ಬಿಡಿ, ದಮ್ಮಯ್ಯ..."

ಮೇಲೆದ್ದ ಅಧಿಕಾರಿ ಅವನನ್ನು ಕಾಲಿನಿಂದ ಬಲವಾಗಿ ಝಾಡಿಸಿದ. ಭಗವಂತ ನಿಧಾನವಾಗಿ ಎದ್ದು ಎದೆ ಉಜ್ಜಿದ.

"ಯಾಕೊ ಹೈವಾನ್, ದೀಪ ಎತ್ಕೊಂಡು ಓಡಿದ್ದು? ದೀಪ ಜಜ್ಜಿ ಬಿಟ್ರೆ ಬದುಕ್ದೆ ಅಂದ್ಕೊಂಡಿಯಾ? ಈಗ ನಿನ್ನ ಜಜ್ತೀನಿ..."

ಪ್ಯಾಂಟಿನ ಮಡಿಕೆ ಬಿಚ್ಚಿ ಮುಂದೆ ಬಂದ. ಎರಡೂ ಕೈ ಎತ್ತಿ ಹಿಂದಕ್ಕೆ ಹೆಜ್ಜೆ ಇಟ್ಟ ಭಗವಂತ.

"ಒದಿಬೇಡ್ರೆ, ಸಾಹೇಬ್ರೆ ಎಲ್ಲಾ ಹೇಳ್ತೀನಿ. ನಂದು ಚಿಟಿಕಿ ತಪ್ಪಿಲ್ಲ."

"ಒದೆಯೋದಿಲ್ಲ, ಹೇಳು."

ಅವನಿಗೆ ಏದುಸಿರು ಇನ್ನೂ ನಿಂತಿರಲಿಲ್ಲ.

"ನೀವು ಹೇಳಿದ್ರಿ ಆ ಲಾಂದ್ರ ಈ ಕೇಸ್‌ನಲ್ಲಿ ಬಹಳ ಕೆಲಸ ಮಾಡಿ ಕೊಡ್ತದೆ ಅಂತ... ನಂಗೆ ಗಾಬರಿ ಆಯ್ತು. ಎತ್ಕೊಂಡು ಓಡೋದೆ... ಆ ಲಾಂದ್ರ ಅಡಿಗೆ ಕೋಣೇದು, ಸ್ವಾಮಿ... ತಪ್ಪು ಮಾಡ್ದೆ ಅಂತ ಗೊತ್ತಾಗಿಲ್ಲ..."

ಎಸ್.ಐ. ಮತ್ತಷ್ಟು ಮುಂದೆ ಬಂದ. ಭಗವಂತ ನೆಲಕ್ಕೆ ಉದ್ದಕ್ಕೂ ಮಲಗಿ ಅವನ ಪಾದಗಳನ್ನು ಹಿಡಿದ.

"ಅಯ್ಯಯ್ಯೊ! ಹೊಡೀಬೇಡಿ"

ಅವನ ತಲೆಗೊಂದು ಬಾರಿಸಿದ.

"ಹೊಡೆಯೋದಿಕ್ಕೆ ಮೊದಲೇ ಅದೆಷ್ಟು ಹೊಡ್ಕೊಳ್ತಿಯೊ, ಸುವ್ವರ್... ಸಮಾಧಿ ಹತ್ರ ಹೇಗೆ ಬಂತು ಲಾಂದ್ರ?"

"ದೇವರಾಣೆ ಗೊತ್ತಿಲ್ಲ. ಅಲ್ಲೇ ನೋಡಿದ್ದು ನಾನು."

ಆ ಮನೆಯಲ್ಲಿ ಐದು ವರ್ಷದಿಂದ ಇರೋನು ನೀನು. ಈಚೆಗೆ ಅಲ್ಲಿ ಏನೇನು ನಡೀತಾ ಇದೆ ಅನ್ನೋದು ಗೊತ್ತಿದೆ ನಿನಗೆ. ಲಕ್ಷ್ಮಣನ್ನ ದೆವ್ವ ಸಾಯಿಸ್ಲಿಲ್ಲ. ಅದರಲ್ಲಿ ಏನೊ ರಹಸ್ಯ ನಡೀತಾ ಇದೆ. ಅವೆಲ್ಲಾ ನಿನಗೆ ಗೊತ್ತು."

"ದೆವ್ವ ಸಾಯಿಸ್ಲಿಲ್ವೆ? ಹಾಗಾದ್ರೆ ಹೇಗೆ ಸತ್ತ, ಸ್ವಾಮಿ?... ನಾನೇನೂ ಕಾಣೆ. ಈಚೆಗೆ ಮನೇಲಿ ಏನು ನಡೀತು ಅಂತ ತಿಳಿದಷ್ಟು ಹೇಳ್ತೀನಿ.... ನನ್ನ ತಪ್ಪಿಲ್ಲಾಂತ ದೇವರು ಮುಟ್ಟಿ ಹೇಳ್ತೀನಿ."

"ಎಲ್ಲಾ ನಮ್ಮ ಸಾಹೇಬರ ಮುಂದೆ ಹೇಳು ಬಾ. ಎತ್ಕೊ ಆ ಒಡಕು ದೀಪನ."

ಸೂರ್ಯ ಮುಳುಗಿ ಕತ್ತಲು ಆವರಿಸತೊಡಗಿತ್ತು. ಲಾಂದ್ರ ಹಿಡಿದ ಭಗವಂತ ಅವನೊಂದಿಗೆ ನಡೆದು ಕೆರೆಯ ತುಂಬು ಸೇರಿದ. ಬೂಟು ಏರಿಸಿದ ಎಸ್.ಐ. ಮೋಟಾರ್ ಸೈಕಲ್ ಹಿಡಿದು ಅವನಿಗೆ ಹಿಂದೆ ಕೂಡಲು ಹೇಳಿದ.

"ಉದಿರಾಡ್ದೆ ಕೂತ್ಕೊ. ಮಿಸುಕಾಡಿದ್ರೆ ತುಂಡು ಮಾಡ್ತೀನಿ."

ಬಾಣಂದೂರಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಇರಲಿಲ್ಲ. ಪೊಲೀಸ್ ಜಿಲ್ಲಾಧಿಕಾರಿಯನ್ನು ಕಾಣಲು ಸಿಟಿಗೆ ಹೋಗಿದ್ದವನು ರಾತ್ರಿ ಎಂಟಾದರೂ ಬಂದಿರಲಿಲ್ಲ. ವಾಹನ ಜಾಲನೂರಿಗೆ ಹಿಂತಿರುಗಿತು.

"ನೋಡು, ಭಗವಂತ. ನಮ್ಮ ಸಾಹೇಬರ ಮುಂದೆ ನಿನ್ನ ಹಾಜರ್ ಮಾಡಿ ಹೇಳಿಕೆ ತಗೋಬೇಕಾಗಿತ್ತು. ಅವರು ಇಲ್ಲ... ಇಲ್ಲಿ ನಿನ್ನ ಸೊಳ್ಳೆ ಕೋಣೆಗೆ ಹಾಕಬೇಕೂಂತ ಅನ್ನಿದೆ. ನೀನು ತಪ್ಪಿತಸ್ಥ ಅಲ್ಲಾಂತಲೂ ಅನ್ಸತ್ತೆ."

"ಹಾಗನ್ಕೊಂಡ್ರೆ ನನ್ನ ಪುಣ್ಯ."

"ಹೇಳೋದೆಲ್ಲಾ ಹೇಳ್ಬಿಡು."

"ನಾನು ಒಕ್ಕಲಿಗ ಅಲ್ಲ. ಸಾಹೇಬ್ರೆ – ನಾಯರ್ ಜಾತಿ."

"ನೀನು ಮಾತಾಡಿದ ತಕ್ಷಣವೇ ಅದು ಗೊತ್ತಾಯ್ತು. ಈಗ ಜಾತಿ ವಿಷಯ ಬೇಡ. ಸರಿಯಗಿ, ಸತ್ಯವಾಗಿ ಹೇಳು."

"ಸತ್ಯವಾಗಿ ಹೇಳ್ತೀನಿ. ಈ ಲಾಂದ್ರ ಅಡಿಗೆ ಕೋಣೇದು. ಅಂದ್ರೆ ನನಗೆ ಸೇರಿದ್ದು. ಎಲೆಕ್ಟ್ರಿಕ್ ದೀಪ ಹೋದಾಗ್ಲು ಇದನ್ನ ನಾನು ಹಚ್ತಾ ಇರ್ಲಿಲ್ಲ. ಹಜಾರದ ದೀಪ ಅಡಿಗೆ ಮನೆಗೆ ಚೆನ್ನಾಗಿ ಬೀಳ್ತಿತ್ತು. ನಾನು ಸೋಮಾರಿ ಅಂತ ಆಳು ದಡಗುಂಟೆ ಅದನ್ನ ಒರೆಸೋ ಗೋಜಿಗೆ ಹೋಗಿರ್ಲಿಲ್ಲ. ಲಾಂದ್ರ ದೆವ್ವದ ಕೋನೆ ಸೇರಿದ್ದು ಹೇಗೇಂತ ಗೊತ್ತಿಲ್ಲ. ಆ ಕೋಣೆಯಿಂದ ಚೆನ್ನಮ್ಮನ ಸಮಾಧಿ ಹತ್ರ ಹೇಗೆ ಬಂತು ಅನ್ನೋದೂ ಗೊತ್ತಿಲ್ಲ. ಸಮಾಧಿ ಹತ್ರ ಇದನ್ನ ನೋಡ್ದಾಗ ನನಗೂ ಸೋಜಿಗ. ಜೊತೆಗೆ ಭಯ. ನೀವು ಸಣ್ಣ ವಿಷಯದಲ್ಲೂ ಬಲು ಹುಷಾರ್ ಅಂತ ಗೌಡರು ದಿನವೆಲ್ಲಾ ಹೇಳ್ತಾ ಇದ್ರು. ನನ್ನ ಬುದ್ಧಿಗೆ ಮಂಕು ಬಡೀತು. ಸರಿಯೋ, ತಪ್ಪೋ ಅಂತ ಯೋಚನೆ ಮಾಡೋದಿಕ್ಕೆ ಸಮಯ ಇರ್ಲಿಲ್ಲ. ಹುಚ್ಚನ ಹಾಗೆ ಎತ್ಕೊಂಡು ಓಡ್ದೆ... ಲಕ್ಷ್ಮಣನ ಜೊತೇಲಿ ಒಂದೆರಡು ಸಾರಿ ಮಾತಾಡಿದೀನಿ. ಅವನು ಜಾಸ್ತಿ ಮಾತಾಡ್ತಾ ಇದ್ದಿದ್ದು ಆ ಕಿರಿ ಹುಡುಗಿ ಸಂಗಡ. ಒಂದೊಂದು ಸಾರಿ ಕೋಟೆಗೌಡರ ಹತ್ರ ಮಾತಾಡ್ತಿದ್ದ... ಈಗೊಂದು ತಿಂಗಳಿಂದ ಮನೇಲಿ ಏನೇನೊ ನಡೀತಾ ಇದೆ. ಬಿಳಿ ಗೌಡರಿಗೆ ಲಕ್ಷ್ಮಣ ಹೋದ್ರೆ ಸಾಕು ಅನ್ನೋಷ್ಟು ಬೇಸರ ಆಗಿತ್ತು. ಮಗನ ಜೊತೇಲಿ ಆ ಮಾತು ಆಡ್ತಿದ್ರು."

"ಲಕ್ಷ್ಮಣನ್ನ ಹಾರಿಸಿ ಬಿಡೋಣಾಂತ?"

"ಸ್ವಲ್ಪ ಹೆಚ್ಚು ಕಡಿಮೆ ಅದೇ ತರದ ಮತು. ನಾಗರಾಜಪ್ಪ ಬುದ್ಧಿವಂತ ಅಲ್ಲ. ಕೆಟ್ಟೋರೂ ಅಲ್ಲ, ಅಪ್ಪನ ಮಾತು ಉಡಾಫೆ ಮಾಡ್ತಿದ್ರು. ಅವರಿಗೆ ಇನ್ಷೂರೆನ್ಸ್ ಅಂತ ಊರೂರು ಅಲೆಯೋದೊಂದು ಬಿಟ್ಟು ಬೇರೆ ಕೆಲಸ ಇಲ್ಲ. ಬೇರೆ ಮಾತೂ ಬೇಡ. ಬಿಳಿಗೌಡರು ತಮ್ಮನ ಜೊತೆಯಲ್ಲೂ ಲಕ್ಷ್ಮಣನ ವಿಚಾರ ಆಡ್ತಿದ್ರು. ಕೋಟೆಗೌಡರು ಲಕ್ಷ್ಮಣನ ಪರ ಇದ್ದಹಾಗೆ ಕಾಣಿಸ್ತು ನನಗೆ."

"ವರದಪ್ಪನೊಂದಿಗೂ ಮಾತು ಸಾಗಿರಬೇಕು."

"ಉಹುಂ, ದೊಡ್ಡೆಗೌಡರು ವರದಪ್ಪನೊಂದಿಗೆ ಅಷ್ಟು ಮಾತಾಡ್ತಾ ಇರ್ಲಿಲ್ಲ. ವರದಪ್ಪ ಕೋಟೆಗೌಡ ಬಹಳ ಮಾತಾಡೋರು. ಏನೇನು ಮಾತಾಡಿದ್ರು ಅಂತ

ಹೇಳಲಾರೆ. ಒಟ್ನಲ್ಲಿ ಎಲ್ಲಾ ಮಾತೂ ಲಕ್ಷ್ಮಣನಿಗೆ ಸಂಬಂಧಿಸಿತ್ತು ಅನ್ನೋದು ಖಾತ್ರಿ... ಲಕ್ಷ್ಮಣ ದೆವ್ವದ ಕೋಣೆಗೆ ಹೋಗ್ತಾನೆ ಅಂತ ಕೇಳ್ದಾಗ ನಿಜವಾಗ್ಲು ನನಗೆ ಭಯ. ಸೋಜಿಗ ಒಂದೂ ಆಗ್ಲಿಲ್ಲ. ನನಗೆ ಯಾವತ್ತೂ ನಿದ್ದೆ ಜಾಸ್ತಿ. ನಿನ್ನೆಯೂ ಅಷ್ಟೇ. ಹತ್ತೂ ಮುಕ್ಕಾಲರಲ್ಲಿ ದೀಪ ಹೋಯ್ತಂತೆ, ಆಮೇಲೆ ಹಜಾರದಲ್ಲಿ ಬಿಳಿಗೌಡ, ಕೋಟೆಗೌಡ, ಆ ಹೆಣ್ಣು ಮಕ್ಕಳು ಎಲ್ಲಾ ಕತ್ತಲಲ್ಲೇ ಓಡಾಡಿದಾರೆ... ಆಗ ಘಂಟೆ ಎಷ್ಟೋ ಸರಿಯಾಗಿ ಗೊತ್ತಿಲ್ಲ. ಹನ್ನೊಂದುವರೆ ಇದ್ರೂ ಇರಬೋದು. ನನ್ನ ಕೋಣೆಗೆ ಯಾರೊ ಬಂದ್ರು! ನನಗೆ ನಿದ್ದೆ ಮಬ್ಬು. ಆಗಲೇ ಲಾಂದ್ರ ಒಯ್ದಿರಬೇಕು. ಅಷ್ಟೊಂದು ಲಾಂದ್ರ ಇದ್ವು ಮನೇಲಿ. ಅಡಿಗೆ ಮನೆ ಲಾಂದ್ರವನ್ನೇ ಒಯ್ದಿದ್ದು ನನ್ನ ಗ್ರಹಚಾರ. ಎಣ್ಣೆ ಇಲ್ಲದ ಒಡಕು ಲಾಂದ್ರ!... ಇನ್ನೂ ಸ್ವಲ್ಪ ಹೊತ್ತಾಯ್ತು. ದೆವ್ವದ ಕೋನೆಯಿಂದ ಯಾರೊ ಮತಾಡ್ತಾ ಇದ್ದಿದ್ದು ಚೂರು ಚೂರು ಕೇಳ್ತು. ಅರ್ಧ ನಿದ್ರೆ, ಅರ್ಧ ಎಚ್ಚರ ನನಗೆ. ಆಮೇಲೆ ಕೂಗು ಕೇಳಿಸ್ತು. ನಿದ್ರೆ ಬಲವಾಗಿ ಎಳೀತು. ಬೆಳಿಗ್ಗೆ ನೀವು ಆಳಿನ ಕೈಲಿ ಎಲ್ಲಾ ಲಾಂದ್ರಗಳನ್ನ ತರಿಸಿದ್ದು ನೋಡ್ದೆ.ಆಗಲೆ ನನಗೆ ಗೊತ್ತಾಗಿದ್ದು ನನ್ನ ಅಡಿಗೆ ಕೋಣೆಯ ಲಾಂದ್ರ ನಾಪತ್ತೆ ಅಂತ."

"ನಿನ್ನಿಂದ ಹೆಚ್ಚು ಉಪಯೋಗ ಆಗ್ಲಿಲ್ಲ, ಭಗವಂತ. ಬೆಳಗ್ಗೆ ಯಾಕೆ ಬೇರೆ ತರಹ ಹೇಳಿಕೆ ಕೊಟ್ಟೆ?"

ಮುಖ ಕಿವಿಚಿ ಕೈ ಕೈ ಹಿಸುಕಿದ.

"ಅದರಿಂದ ಏನೂ ನಷ್ಟ ಆಗ್ಲಿಲ್ಲ. ಆರಿದ ಲಾಂದ್ರ ನೋಡ್ದೆ. ತಲೆ ಕೆಡ್ತು. ಇಷ್ಟೊಂದಕ್ಕೆ ಕೈ ಹಾಕಿದ್ದು ಆ ಲಾಂದ್ರದಿಂದಲೇ... ಬಿಳಿಗೌಡ ಆ ಲಾಂದ್ರನ ಕೋಣೆಯಿಂದ ಹಾರಿಸಿ ಸಮಾಧಿ ಹತ್ರಕ್ಕೆ ತಂದಿಟ್ಟ ಅಂತ ಭಾವಿಸ್ತೀನಿ ಸದ್ಯಕ್ಕೆ..."

ಏಕಾಏಕಿ ಸುಮ್ಮನಾದ ದಿವಾಕರ. ತನ್ನ ಮೇಲಿನ ಅಧಿಕಾರಿಯ ಮುಂದೆ ಆಡಬೇಕಾದ ಮಾತುಗಳನ್ನು ಅಡಿಗೆಯವನ ಮುಂದೆ ಆಡಿದ್ದ! ತನ್ನ ಬಗೆಗೇ ಜಿಗುಪ್ಸೆಗೊಮಡು ಮುಂದೆ ಕೇಳಿದ.

"ದೆವ್ವದ ಕೋಣೆಯಲ್ಲಿದ್ದ ಆ ಟೇಪ್ ರೆಕಾರ್ಡರ್ ಯಾರದು?

ಭಗವಂತನ ಕಣ್ಣು ಗುಡ್ಡೆಗಳು ಸುತ್ತಿದವು.

"ದೆವ್ವದ ಕೋಣೆಯಲ್ಲಿ ಟೇಪ್ ರೆಕಾರ್ಡರ್ ಇತ್ತೇನು? ಅದು ನಂಗೆ ಗೊತ್ತಿಲ್ಲ."

"ಕಪ್ಪು ಬಣ್ಣದ ಟೇಪ್ ರೆಕಾರ್ಡರ್...."

"ಕಾಫಿ ಬಣ್ಣದ್ದು ಇರಬೇಕು..."

ಎಸ್.ಐ. ತುಸು ಚಕಿತಗೊಂಡರೂ ಅದನ್ನು ತೋರ್ಪಡಿಸಲಿಲ್ಲ.

"ಕಾಫಿ ಬಣ್ಣದ ರೆಕಾರ್ಡರ್ ಅಂತಲೇ ಕಾಣುತ್ತೆ. ಯಾರಿಗೆ ಸೇರಿದ್ದು ಅದು?"

"ಲಕ್ಷ್ಮಣನ ಹುಡುಗೀದು... ಸ್ನೇಹಲತಾದು."

"ಇನ್ನೊಂದು ರೆಕಾರ್ಡರ್ ಇರ್ಬೇಕು ಮನೇಲಿ."

"ಕೋಟೆಗೌಡರ ಹತ್ರನೂ ಒಂದಿದೆ. ಅದೇ ಇರ್ಬೇಕು ನೀವು ಕಪ್ಪು ಬಣ್ಣದ್ದು ಅಂದಿದ್ದು... ಲಕ್ಷ್ಮಣ ಬಹಳ ಉಪಯೋಗಿಸ್ತಿದ್ದ ಆ ಹುಡುಗಿ ರೆಕಾರ್ಡರ್‌ನ. ಇಬ್ಬರೂ ನಾಟಕ ಅಭ್ಯಾಸ ಮಡ್ತಿದ್ರು ಅನ್ಸತ್ತೆ ನನಗೆ."

"ಟೇಪ್ ರೆಕಾರ್ಡರ್‌ನಲ್ಲಿ ನಾಟಕ?"

"ನಾಟಕ ಅಲ್ಲ ಅಂದ್ರೂ ಮಾತುಕತೆ ಅದು."

"ಸ್ವಲ್ಪ ವಿವರವಾಗಿ ಹೇಳು."

"ವಾರದ ಹಿಂದೆ ಒಂದು ದಿನ ಮನೆಯಲ್ಲಿ ದೊಡ್ಡೋರು ಯಾರೂ ಇರ್ಲಿಲ್ಲ..."

"ಅವತ್ತು ಏನಾಯ್ತು?" ಕೈತಟ್ಟಿ ಉತ್ತೇಜಿಸಿದ.

"ಗೌಡರ ಕಿರಿ ಮಗಳು, ಲಕ್ಷ್ಮಣ ಇಬ್ಬರೇ ಕೋಣೇಲಿ ರೆಕಾರ್ಡರ್ ಹಾಕ್ಕೊಮಡು ಕೂತಿದ್ರು. ಆಡಿದ್ದೇ ಮಾತು ಆಡ್ತಿದ್ರು. ಆಡಿದ್ದೆಲ್ಲಾ ಟೇಪಿಗೆ ಸೇರ್ಸಿದ್ರು. ಸೇರ್ಸಿದ್ದು ಮತ್ತೆ ಮತ್ತೆ ಅವರೇ ಟೇಪಿನಿಂದ ಕೇಳ್ತಿದ್ರು."

ಎಸ್.ಐ. ಕಣ್ಣು ಮುಚ್ಚಿದ. ಅವನ ಕಲ್ಪನೆಗೆ ಯಾವುದೋ ರೂಪ ಬರ್ತಿತ್ತು.

"ಕಾಫಿ ಕಲರ್ ಟೇಪ್ ರೆಕಾರ್ಡರ್ ಈಗ ಎಲ್ಲಿದೆ?"

"ಕಿರಿ ಹುಡುಗಿ ಕೋಣೆಯಲ್ಲಿ."

"ದೊಡ್ಡ ಹುಡಗಿ ಕೋಣೆಯೂ ಅದೇ ಅಲ್ಲವೇ?"

"ಹೌದು."

"ಅವಳು ಟೇಪ್ ರೆಕಾರ್ಡರ್ ಉಪಯೋಗಿಸೋದಿಲ್ಲವೆ?"

"ಒಂದು ದಿನವೂ ನೊಡ್ಲಿಲ್ಲ ನಾನು."

"ಆ ಮನೆಯಲ್ಲಿ ಮತ್ತೆ ಬೇರೆ ಯರೂ ರೆಕಾರ್ಡರ್‌ನಲ್ಲಿ ನಾಟಕದ ಅಭ್ಯಾಸ ಮಾಡಲಿಲ್ಲವೆ?"

"ಕೋಟೆ ಗೌಡ, ವರದಪ್ಪ ಮಾತುಕತೆ ರೆಕಾರ್ಡ್ ಮಾಡಿರಬೇಕು."

"ಈಗ ಹೋಗಬೋದು ನೀನು."

ಕೈ ಜೋಡಿಸಿದ ಭಗವಂತ. ತೆರೆದ ಪಂಜರದ ಹಕ್ಕಿಯಂತೆ ಹೊರಗಿದ್ದ.

7

ಸರ್ಕಲ್ ಇನ್ಸ್‌ಪೆಕ್ಟರ್ ಹಿದಾಯತ್ ಹೇಳಿದ ಕಹಿ ಮಾತಿನಿಂದ ದಿವಾಕರ ಹೌಹಾರಿದ.

"ಮತ್ತೆ ಡಿ.ಐ.ಜಿ. ಒಂದು ವಾರ ರಜ ಅಂತ ಕೇಳಿದೆನಲ್ಲಾ, ಸಾರ್."

"ಡಿ.ಐ.ಜಿ.ನೇ ಇದ್ಕೆ ರುಜು ಮಾಡ್ಬೇಕು? ಕೆಟ್ಟು ಪೇಪರ್‌ಗೆ ರುಜು ಮಾಡೋದ್ಕೆ ಆ ಸಂತೆ ಆಫೀಸ್‌ನಲ್ಲಿ ನೂರು ಜನ."

"ಕೆಟ್ಟ ಸುದ್ದಿ, ಸ್ವಾಮಿ" ಮುಖ ಹಿಂಡಿದ.

ನಾಲಗೆಯಿಂದ ಮೆಲಿನ ಹಲ್ಲು ಸಾಲು ಸವರಿಕೊಂಡ ಹಿದಾಯತ್.

"ಸುದ್ದ ಅಲ್ಲ, ದಿವಾಕ್ರು. ನಾಳೆ ನಿನ್ ಆರ್ಡರ್ ಬಂದ್ರೆ ಹೆಚ್ಚಲ್ಲ. ನಿನ್ನೆ ಎಸ್.ಪಿ. ಆಫೀಸ್‌ನಲ್ಲಿ ಅದೇ ಮಾತು. ಆ ಗೌಡ ದೊಡ್ ಸಾಹೇಬರ್‌ಗೆ ಏನ್ ಹೇಳ್ಬಿಟ್ಟಿ ದಿಮಾಕ್ ಕೆಡಸಿಬುಟ್ನೊ ಅಲ್ಲಾಗೆ ಗೊತ್ತು. ನಿಂಗೆ ಸಸ್ಪೆಂಡ್ ಮಡ್ತಾರೇಂತ್ ಆಫೀಸ್ ತುಂಬಾ ಬೊಂಬ್ಡಿ."

"ಗೌಡ ಸಾವಿರ ಹೇಳಬೋದು. ನಾನು ಈಗ ಮಾಡಿರೋದ್ರಲ್ಲಿ ತಪ್ಪೇನಿದೆ ನೀವು ಹೇಳಿ."

ವಿಶ್ವಾಸದ ಭರದಲ್ಲಿ ಮುಖ ಮುಂದೆ ತಂದ. ಕಿರುಗಣ್ಣಿನಲ್ಲಿ ನಿಟ್ಟಿಸಿದ ಇನ್ಸ್‌ಪೆಕ್ಟರ್.

"ತಪ್ಪು ಯಾಕೆ ಇಲ್ಲ ಹೇಳು. ನೀನು ಹೇಳ್ದೆ ಇದು ಅನ್‌ನ್ಯಾಚುರಲ್ ಡೆತ್ ಅಂತ. ಅದ್ಕೆ ಇರೋದು ಸೆಕ್ಷನ್ ಒನ್ ಸೆವೆಂಟಿಫೋರ್ ಸಿ.ಆರ್.ಪಿ.ಸಿ.... ನಾನು, ನೀನು ಸ್ಪಾಟ್ ನೋಡಿ ಮಾಮೂಲು ಇನ್ವೆಸ್ಟಿಗೇಷನ್ ಮಾಡಿದ್ರೆ ಸಾಕು. ನನ್ದು ತಲೆ ಕಾಯ್ತೀನಿ ಅಂತ ನೀನು ಮಾಡಿದ್ದೇನೊ? ಗೌಡನ್ ಮನೆ ಸಾಮಾನೆಲ್ಲಾ ಬೀದಿಗೆ ಎಳ್ದಿ ಪುಟದ್ಮೇಲೆ ಪುಟ ಬರೆದ್ಬುಡು ಅಂತ ಹೇಳಿದ್ನೆ? ಮಹಜರ್ ಅಂದ್ರೆ ಮ್ಯೂಸಿಯಂ?"

"ಲಕ್ಷ್ಮಣನ ಹೊಟ್ಟೇಲಿ ನಿದ್ರೆ ಔಷಧಿ ವಸ್ತು ಸಿಕ್ಕಿದ ಅಂತ ತಿಳಿದ ಮೇಲೂ ಸುಮ್ಮನಿರಬೇಕಾಗಿತ್ತೆ?"

ದಿವಾಕರ ಹಣೆ ಬೆರವರು ಒರಸಿದ.

"ಸಮಾಚಾರ ಅದಲ್ಲ ಕಣೊ. ಮಸೀದಿಗೆ ಬಣ್ಣ ಹೊಡೊಯೋದ್ಕೆ ಹೋಗಿ ಮಸೀದಿ ತಲೆ ಮೇಲೆ ಬೀಳಿಸ್ಕೊಮಡಿ."

"ನಾವು ಗೌಡನ ಮನೆ ವಸ್ತುಗಳನ್ನ ಬೀದಿಗೆ ಎಳೀಲೂ ಇಲ್ಲ ಪುಟಗಟ್ಲೆ ಬರೀಲೂ ಇಲ್ಲ. ಅವರನ್ನ ನಾಲ್ಕು ಪ್ರಶ್ನೆ ಕೇಳ್ದೆ. ಹೇಳಿದ್ದು ಗುರುತು ಹಾಕ್ಕೊಂಡೆ. ತನಿಖೆ ನಿಮ್ಮದು ಅಂತ ಕೈ ಸ್ವಲ್ಪ ಮುಂದೆ ಮಾಡಿದ್ದು ನನ್ನ ತಲೆಗೇ ಬಂತಲ್ಲಾ, ಸಾರ್."

"ನೀನು ಏಳ್ ತಿಂಗಳ್ನೋನು. ಗೌಡನ್ ಮನೇಲಿ ಫಿಂಗರ್‌ಪ್ರಿಂಟ್ ತಕ್ಕೊಂಡಿ?"

"ಯಾರ ಬೆರಳು ಗುರುತೂ ತೊಗೊಂಡಿಲ್ಲ."

ಗಾಬರಿಯಿಂದ ಉತ್ತರಿಸಿದ.

"ಅವನ್ ಚೊಕರಿಗೆ ಕೊಶ್ಚನ್ ಮಾಡಿದ್ದು ನೆಪ ಮಾಡ್ಕೊಂಡ್ಬಿಟ್ಟ ಗೌಡ. ನಿನ್

ಹಾಗೇ ಅವ್ನು ಟೆನಿಸ್ ಬಾಲ್‌ಗೆ ಫುಟ್‌ಬಾಲ್ ಮಾಡ್ದ."

"ಅವನ ಮಗಳಿಗೆ ನಾನು ಪ್ರಶ್ನೆ ಹಾಕಿ ಸತಾಯಿಸ್ಲಿಲ್ಲ. ಬಿಳಿಗೌಡ ಯಾಕೆ ಹೀಗೆ ಮಾಡ್ದ ಅಂತ ಹೇಳ್ತೀನಿ. ನಿನ್ನೆ ಮಧ್ಯಾಹ್ನ ನಿಮಗೆ ತಿಳಿಸಿದ ಹಾಗೆ ಸಂಜೆ ಚಾಮಗೆರೆಗೆ ಹೋಗಿದ್ದೆ. ಚೆನ್ನಮ್ಮನ ಸಮಾಧಿ ಹತ್ರ ಆರಿದ ಲಾಂದ್ರ ಸಿಕ್ತು..."

"ಸಿಕ್ತು...?"

"ಅದರಲ್ಲೇನೂ ವಿಶೇಷ ಕಾಣೆ. ಅನ್ನ ಎತ್ಕೊಳ್ಳೋದ್ರಲ್ಲಿ ಅಡಿಗೆ ಆಳು ಭಗವಂತ ಅದನ್ನ ಹಾರಿಸ್ಕೊಂಡು ಓಡ್ದ..."

"ಓಡ್ದ..."

"ಸ್ವಲ್ಪ ಕೇಳಿ, ಸ್ವಾಮಿ. ಲಾಂದ್ರನ ಒಡೆದು ಹಾಕ್ದ..."

"ಅರೆ ಇಸ್ಕಿ!... ಹುಂ, ಹೇಳು."

"ಅವನ್ನ ಹಿಡಿದು ನಿನ್ನೆ ಇಲ್ಲಿಗೆ ತಂದಿದ್ದೆ. ನೀವು ಎಸ್.ಪಿ. ಹತ್ರ ಹೋಗಿದ್ದೋರು ವಾಪಸ್ ಬಂದಿರ್ಲಿಲ್ಲ. ಭಗವಂತ ಹಾಗೆ ದೀಪ ಹಾರಿಸ್ಕೊಂಡು ಹೋಗಿದ್ದು ತಪ್ಪು. ಅವನು ಹಾಗೆ ಮಾಡಿದ್ದು ಗಾಬರಿಯಿಂದ. ಕೇಸ್‌ನಲ್ಲಿ ಅವನ ಕೈವಾಡ ಇಲ್ಲಾಂತ ನನ್ನ ದೃಢ ನಂಬಿಕೆ. ಇದರಲ್ಲಿ ಗೌಡನ ಕರಾಮತ್ ಇದೆ. ಮತ್ತೆ ಬಂದು ವಿಚಾರಿಸ್ಕೊಳ್ತೀನಿ ಅಂದೆ... ಬೆಳಗಾಗುತ್ಲೆ ಡಿ.ಐ.ಜಿ. ಆಫೀಸಿಗೆ ಹೋಗಿ ನನ್ನ ವಿಚಾರಿಸಿಕೊಳ್ಳೋದಿಕ್ಕೆ ಕೈ ಹಾಕಿದಾನೆ... ನೀವು ನನ್ನ ಕೈ ಬಿಡ್ತಾ ಇದೀರಿ..."

....ದವಡೆ ಮೇಲು ಕೆಳಗು ಆಡಿತು. "ಇಲ್ಲ" ಅರ್ಥದಲ್ಲಿ ತಲೆ ಆಡಿಸಿದ ಹಿದಾಯತ್ ಅತೀವ ನಿಸ್ಸಾಹಾಯಕತೆಯಲ್ಲಿ ಮುಖ ಮುಂದೆ ತಂದ.

"ನನ್ಗೆ ಈಗ ಏನ್ ಮಾಡು ಅಂತೀಯ, ಬೇಟಾ? ನಿನ್ಗೆ ಸಸ್ಪೆಂಡ್ ಆದ್ರೆ ನಂಗೆ ಖುಷಿ? ಒಸಿ ಆ ಗೌಡನ್ಗೇ ಹೋಗಿ ನೋಡ್ತೀಯಾ...?" ಧ್ವನಿ ಮೆಲ್ಲನೆ ಹರಿಸಿದ.

ದಿವಾಕರ ಅಸಹ್ಯದಲ್ಲಿ ಮುಖ ಕಿವಿಚಿದ.

ಬಿಳಿಗೌಡನನ್ನು ಕಂಡು ದಯೆ ಬೇಡುವುದು? ತನ್ನ ಘನತೆಗೆ ಚ್ಯುತಿ!

"ಛೇ! ನನ್ನ ಇಲಾಖೆಗೆ ಅವಮಾನ. ನಾಳೆ ಗೌಡ ನಮ್ಮ ತಲೆಮೇಲೆ ಕೂತ್ಕೊತಾನೆ. ನಾನೆ ಡಿ.ಐ.ಜಿ.ನ ಕಾಣ್ತೀನಿ. ಸ್ವಾಮಿ."

"ನನ್ ಮತು ಕೇಳೊ, ದಿವಾಕ್ರು..."

ಪೇದೆ ಹಳದಿ ಕವರ್ ತಂದಿಟ್ಟ.

"ನಾಳೆ ಬರ್ತದೆ ಆರ್ಡರ್ ಅನ್ನೋದು ಈಗ್ಲೇ ಮುದ್ದಾಂ ಬಂತೊ ಏನೊ, ದಿವಾಕ್ರು..."

ತಳಮಳದಲ್ಲಿ ಕನ್ನಡಕ ಏರಿಸಿ ಕವರ್ ಎತ್ತಿಕೊಂಡ ಇನ್ಸ್‌ಪೆಕ್ಟರ್. ದಿವಾಕರನ ನರಗಳು ಬಿಗಿಯಾದವು. ಪೇದೆ ನಿರಾತಂಕವಾಗಿ ಹೇಳಿದ.

"ಇದನ್ನ ಡಾಕ್ಟರು ಕಳಿಸಿದ್ರು, ಮಹಾಸ್ವಾಮಿ."

ಕನ್ನಡಕ ತೆಗೆದು "ಹಾಯ್" ಎಂದ ಹಿದಾಯತ್.

"ಕವರ್ ಕೊಟ್ಟ ಗಂಟೆ ಮ್ಯಾಲೆ ಹೇಳ್ತಿ, ಗೂಬೆ!"

ಗದರಿದವ ದಿವಾಕರನ ಕಡೆ ತುಟಿ ಉಬ್ಬಿಸಿದ.

"ಪೋಸ್ಟ್ ಮಾರ್ಟಮ್ ರಿಪೋರ್ಟು ಕಣೊ."

ಮತ್ತೆ ಕನ್ನಡಕ ಏರಿತು. ದವಡೆ ಬಿಗಿಯಾಯಿತು. ವೈದ್ಯನ ಪರೀಕ್ಷಾ ವರದಿ ಓದಿದ ಹಿದಾಯತ್‌ನ ಮುಖದಲ್ಲಿ ರಂಗೇರಿತು.

"ನಿಂದು ನಸೀಬ್ ಚೆಂದಾಗಿದೆ....ತೊಕ್ಕೊ..."

ಅವನು ನೀಡಿದ ಕಾಗದವನ್ನು ಓದಿದ ದಿವಾಕರ.

ವೈದ್ಯನ ವರದಿಯಂತೆ ಮೃತನ ಹೊಟ್ಟೆಯಲ್ಲಿ ಬಲವಾದ ನಿದ್ರಕಾರಕ ವಸ್ತು ದೊರೆತಿತ್ತು. ಸಾವು ಸುಲಭವಾಗಿ ಉಂಟಾಗುವಂತೆ ಮಾಡಲು ಅದರ ಪ್ರಯೋಗವಾಗಿತ್ತು. ಕುತ್ತಿಗೆ ಹಿಸುಕಿದುದರಿಂದ ಉಸಿರು ಕಟ್ಟಿ ಆದ ಮರಣ ಅದು. ಕೊಲೆ ಎಂಬುದು ಖಚಿತವಾದ ಅಭಿಪ್ರಾಯ. ಮೃತನ ಕುತ್ತಿಗೆಯ ಮೇಲೆ ಎರಡು ಒತ್ತಡದ ಗುರುತುಗಳು. ಶನಿವಾರ ರಾತ್ರಿ ಹನ್ನೊಂದರಿಂದ ಹನ್ನೆರಡು ಗಂಟೆಯೊಳಗೆ ಆಗಿರಬಹುದಾದ ಕೊಲೆ!

ಗಾಳಿ ತುಂಬಿದ ಚೆಂಡಿನಂತಾದ ದಿವಾಕರ ತನ್ನನ್ನ ಹಾಗೆಯೇ ಹದಕ್ಕೆ ತಂದುಕೊಂಡ.

"ನಿದ್ರಕಾರಕ ವಸ್ತು ಅಂತ ಅನುಭವದ ಅಭಿಪ್ರಾಯ ಕೊಟ್ಟಿದ್ದಾರೆ ಡಾಕ್ಟರು. ಅದು ಯಾವುದು ಅಂತ ನಿಧಾನವಾಗಿ ಗೊತ್ತಾಗಬೇಕು. ಇನ್ನು ಬಿಳಿಗೌಡನ್ನ ವಿಚಾರಿಸಿಕೊಳ್ತೀನಿ."

ಹಿದಾಯತ್‌ಗೂ ಕಾವು ಏರಿತ್ತು.

"ಅವನ್ಗೆ ಸೊಂಟ ಮುರಿ – ನಾನು ಕಣ್ ಮುಚ್ಕೊಳ್ತೀನಿ."

"ತನಿಖೆ ಸೆಕ್ಷನ್ ಬದಲಾಯಿಸೋದಿಕ್ಕೆ ನಿನ್ನೆಯಿಂದ ಪುರಾವೆ ಹುಡುಕುತ್ತಿದ್ದೆ. ಈಗ ಸೆಕ್ಷನ್ ತ್ರೀ ನಾಟ್‌ಟು ಐ.ಪಿ.ಸಿ. ಹಾಕಿ ಅವನ್ನ, ಅವನ ಬಳಗನ ಮಣ್ಣು ಮಾಡ್ತೀನಿ."

"ರೀ ಇನ್ವೆಸ್ಟಿಗೇಷನ್ ಸ್ಪಾಟ್‌ಗೆ ಎ.ಎಸ್.ಪಿ. ಬರ್ಬೇಕು. ಎಸ್.ಪಿ.ಗೆ ಈಗ್ಲೇ ಮೆಸೇಜ್ ಕೊಡ್ಬೇಕು."

ಇನ್ಸ್‌ಪೆಕ್ಟರ್ ಗಡಿಬಿಡಿಯಿಂದ ಎದ್ದ.

ತನಿಖೆಯ ಸೆಕ್ಷನ್ ಬದಲಿಸಿ ಮರುತನಿಖೆ ಎಂದೊಡನೆ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಜೀಪು ಚಾಮಗೆರೆಗೆ ಸಾಗಿತು. ಸ್ಥಳದ ಪರಿಶೀಲನೆ ಮುಗಿಸಿ,

ಸೂಚನೆ ಕೊಟ್ಟ ಅಧಿಕಾರಿ ನಿರ್ಗಮಿಸುತ್ತಲೇ ದಿವಾಕರ ಇನ್ಸ್‌ಪೆಕ್ಟರಿಗೆ ನಮ್ರವಾಗಿ ಸೂಚಿಸಿದ.

"ಸಾರ್, ನೀವು ಬಿಳಿಗೌಡನ್ನ ಸ್ವಲ್ಪ ಆ ಹಿಂಬಾಗದ ಕಟ್ಟಡದ ಹತ್ರಕ್ಕೆ ಕರಕೊಮಡು ಹೋಗಿ. ನಾನು ಇಲ್ಲಿ ಕೈ ಚಲಾಯಿಸ್ಬೇಕು."

ಕಿವಿಯಲ್ಲಿ ಇನ್ನಷ್ಟು ಹೇಳಿದ. ಹಿದಾಯತ್ ಪ್ರಶ್ನೆ ಹಾಕದೆ ಹಿಂಭಾಗಕ್ಕೆ ನಡೆದು ಗೌಡನಿಗೆ ಬರ ಹೇಳಿದ.

ದಿವಾಕರ ಹಜಾರದಲ್ಲಿ ನಿಂತು ಕಣ್ಣು ಹೊರಳಿಸಿದ. ತನ್ನ ಕೆಲಸಕ್ಕೆ ಹೇಳಿ ಮಾಡಿಸಿಟ್ಟ ಸಮಯ! ಕೋಟೆಗೌಡ, ನಾಗರಾಜಪ್ಪ ಮನೆಯಲಿಲ್ಲ. ಸ್ನೇಹಲತಾ ಹೊರ ಕೋಣೆಯಲ್ಲಿ ಪುಸ್ತಕ ಹಿಡಿದು ಕುಳಿತಿದ್ದಾಳೆ. ಮಂಡ್ಯಕ್ಕೆ ಹೋಗಿದ್ದಾಳೆ ಪುಷ್ಪಲತಾ. ಬಿಳಿಗೌಡ ಹಿಂಭಾಗದಲ್ಲಿ. ಅವನ ಅಪ್ಪಣೆಗೆ ಕಾಯುವವರಂತೆ ನಿಂತ ದಡಗುಂಟೆ ಹಾಗೂ ಭಗವಂತ.

ದಿವಾಕರ ನೇರವಾಗೆ ಸ್ನೇಹಲತಾಳ ಕೋಣೆ ಪ್ರವೇಶಿಸಿದ. ಗೋಡೆಯ ಕಪಾಟಿಗೆ ಬೀಗ ಹಾಕಿರಲಿಲ್ಲ. ಮೇಲಿನ ಖಾನೆಯಲ್ಲಿ ಕಂದು ಬಣ್ಣದ ಟೇಪ್ ರೆಕಾರ್ಡರ್ ಕಾಣಿಸಿತು. ಅದರ ಪಕ್ಕದಲ್ಲಿ ಜೋಡಿಸಿದ ಮೂರು ಟೇಪ್‌ಗಳು ಅಷ್ಟನ್ನೂ ತೆಗೆದುಕೊಂಡು. ಪೊಲೀಸ್ ವ್ಯಾನ್‌ನಲ್ಲಿ ಮುಚ್ಚಿಟ್ಟು ಮನೆಯ ಹಿಂಭಾಗಕ್ಕೆ ಸರಿದ.

"ಪ್ರಶ್ನೆ ಹಾಕಿ, ಸಾರ್" ಎಸ್.ಐ. ಸಾಹೇಬನಿಗೆ ನಿವೇದಿಸಿದ.

"ಇಸ್ಟಾರ್ಟ್ ಮಾಡಿದ್ದೋನು ನೀನೇ... ಎಳೀ ತಲ್ವಾರ್"

ಎಂದು ದೆವ್ವದ ಕೋಣೆಯ ತಳಭಾಗದಲ್ಲಿ ಕುರ್ಚಿ ಹಾಕಿಸಿಕೊಂಡು ಕುಳಿತ.

ಪ್ಯಾಡ್, ಪೆನ್ ಹಿಡಿದ ದಿವಾಕರಗೌಡನ ಪಕ್ಕಕ್ಕೆ ಕುಳಿತ. ಹಿದಾಯತ್ ಪ್ರಾರಂಭಿಸಿದ.

"ಸರ್ಕಾರದ್ದು ಕೆಲ್ಸ ದೇವರ್ದು ಕೆಲ್ಸ ಅಂತಾನೆ ನಮ್ ದಿವಾಕ್ರು."

"ನಿಜ, ಸ್ವಾಮಿ. ಒಳ್ಳೇ ಕೆಲಸಗಾರ" ಗೌಡ ಪ್ರತಿ ನುಡಿದ.

"ಒಳ್ಳೆ ಕೆಲಸ್‌ಗಾರ್‍ಗೆ ಟಾಂಗ್ ಹೊಡೆಯೋದ್ಕೆ ನೋಡಿದ್ರೆ ಅಲ್ಲಾ ಸುಮ್ಕಿರ್‍ತಾನೆ? ಗೌಡ್ರು. ನೀವು ಬಗ್ಗಿದ್ರೆ ಜುಟ್ ಹಿಡೀತೀರಿ. ನಿಗರಿ ನಿಂತ್ರೆ ಕಾಲು ಹಿಡೀತೀರಿ. ನಿಮ್ದು ಮಾತ್ಗೆ ಡಿ.ಐ.ಜಿ. ದಿವಾಕ್ರುನ ಸಸ್ಪೆಂಡ್ ಮಾಡ್ಬಿಡ್ತಾರೆ?.... ದಿವಾಕ್ರು, ಗೌಡರ್ದು ಸ್ಟೇಟ್‌ಮೆಂಟ್ ತಗೊ."

ಒರಟಾಗಿ ಅಣತಿ ಕೊಟ್ಟು ಸಿಗರೇಟು ಹಚ್ಚಿದ. ನಂದೀಶನ ಬದಲಿಗೆ ಬಂದಿದ್ದ ದಫೇದಾರ್ ಎಸ್.ಐ. ನಿಂದ ಪೆನ್, ಪ್ಯಾಡ್ ತೆಗೆದುಕೊಂಡ.

"ಬಿಳಿಗೌಡರೆ, ಇದು ಕೊಲೆ ಪ್ರಕರಣ ಅಂತ ಗೊತ್ತಾಯ್ತಲ್ಲ?"

ಮೆದುವಾಗಿ ಕೇಳಿದ ದಿವಾಕರ. ಗೌಡ ಕೈಕಟ್ಟಿದ.

"ಎ.ಎಸ್.ಪಿ. ಸಾಹೇಬ್ರು ಹೇಳಿದ್ರಲ್ಲಾ, ಸ್ವಾಮಿ... ನನಗೆ ಈಗಲೂ ನಂಬಿಕೆ ಇಲ್ಲ.

ಐವತ್ತು ವರ್ಷದ ಕಥೆಗೆ ನಿಮ್ಮ ಇಲಾಖೆ ಏನೇನೊ ಬಣ್ಣ ಹಾಕ್ತಿದೆ. ಕೊಲೆ ಎಲ್ಬಂತು, ಸ್ವಾಮಿ? ಆಗಿರೋದೇನೂಂತ ಇಡೀ ಊರಿನ ಸಾಕ್ಷಿ ಕೊಡಿಸ್ತೀನಿ."

"ನೀವು ಬಹಳ ವಿಷಯ ಮುಚ್ಚು ಮರೆ ಮಾಡಿದೀರಿ. ಕೊಲೆ ಪ್ರಕರಣ ನಿನ್ನ ದೆವ್ವದ ಕೈಂದ ಆಗಿರೊ ಅಸ್ವಾಭಾವಿಕ ಮರಣ ಅಂತ ಪೊಲೀಗೆ ಮೋಸ ಮಾಡೊ ಪ್ರಯತ್ನ ಮಾಡಿದೀರಿ."

"ಶಿವಶಿವ! ಮುಚ್ಚು ಮರೆ. ಮೋಸ ಮಾಡೋದಿದ್ರೆ ಸಾವಿನ ಸುದ್ದಿ ನಿಮಗೆ ಫೋನ್ ಮಾಡ್ತಲೇ ಇರ್‍ಲಿಲ್ಲ. ನಾಲ್ಕು ಆಳು ತೊಗೊಂಡು ದೇಹ ದಫನ್ ಮಾಡಿಸಿ ಕೊಡ್ತಿದ್ದೆ."

"ಈ ಕೊಲೆ ಆಗೋದಿಕ್ಕೆ ಹದಿನೈದು ದಿನಗಳ ಮುಂಚಿನಿಂದ ನಿಮ್ಮ ಮನೆಯಲ್ಲಿ ಒಂದೊಂದು ಕೋಣೆಯಲ್ಲೂ ಮಸಲತ್ತು ನಡೆದಿದೆ. ಎಲ್ಲಾ ತಿಳಿದಿದ್ದೂ ನೀವು ಕೊಲೆಗೆ ಅವಕಾಶ ಕೊಟ್ಟಿದ್ದೀರಿ... ಕೊಲೆಗೆ ಕೈ ಹಚ್ಚಿದೀರಿ."

ಬಿಳಿಗೌಡ ಪ್ರತಿಕ್ರಿಯೆ ತೋರದೆ ಮೌನವಾಗಿ ನಿಂತಿದ್ದ.

"ನಿಮ್ಮ ಮನೆ ಒಳ್ಗೆ ಇನ್ನೊಂದು ಟೇಪ್ ರೆಕಾರ್ಡರ್ ಐತೇಂತ ಯಾತ್ಕೆ ಹೇಳ್ನಿಲ್ಲಾ, ಗೌಡ್ರು?"

ಪ್ರಶ್ನೆ ಹಾಕಿದ ಹಿದಾಯತ್ ಸುಟ್ಟ ಸಿಗರೇಟು ತುಂಡನ್ನು ನೆಲಕ್ಕೆ ಹೊಸಕಿದ.

"ಅದನ್ನ ನಿಮ್ಮ ಸಬ್ ಇನ್ಸ್‌ಪೆಕ್ಟರ್ ಕೇಳ್ಲಿಲ್ಲ, ಸ್ವಾಮಿ. ನಾನಾಗಿ ಯಾಕೆ ಹೇಳ್ಲಿ?"

ಮತ್ತೆ ಪ್ರಶ್ನೆ ಹಾಕಲಿಲ್ಲ ಇನ್ಸ್‌ಪೆಕ್ಟರ್. ಪ್ರಶ್ನೆ ಮುಂದುವರಿಸಲು ಎಸ್.ಐ.ಗೆ ಸೂಚಿಸಿದ.

"ನೀವು ಹನ್ನೊಂದು ಐವತ್ತೈದರಲ್ಲಿ ಆ ಕೋಣೆಯಿಂದ ಕೂಗು ಕೇಳಿಸಿಕೊಂಡಿದ್ದು ಹೇಳಿದ್ರಿ. ಅದಕ್ಕೆ ಮೊದಲು ಆ ಕೋಣೆಯಲ್ಲಿ ಇಬ್ಬರು ಮಾತಾಡ್ತಾ ಇದ್ದಿದ್ದು ಯಾಕೆ ನಮಗೆ ಹೇಳ್ಲಿಲ್ಲ?"

"ಅದು ಕೇಳಿಸ್ಲಿಲ್ಲ."

"ಶನಿವಾರ ರಾತ್ರಿ ಪ್ರತಿ ನಿಮಿಷ ಗಡಿಯಾರ ನೋಡ್ತಿದ್ದೆ ಅಂತ ಹೇಳಿದ್ರಿ....ಕೂಗಿಗೆ ಮೊದಲು ಮಾತು ಯಾಕೆ ಕೇಳ್ಲಿಲ್ಲ?... ಕೇಳ್ತು. ಆದರೆ ಅದನ್ನ ನಮಗೆ ತಿಳಿಸಲಿಲ್ಲ. ನಿಮ್ಮ ಮನೇಲಿ ನಿದ್ರೆಯ ಮಬ್ಬಿನಲ್ಲಿರೋರಿಗೆ ಅದು ಕೇಳಿದೆ."

"ಯಾರಿಗೆ?" ಗಾಬರಿಯಿಂದ ಕೇಳಿದ.

"ಇಬ್ಬರಿಗಂತೂ ಕೇಳಿದೆ. ನಿಮ್ಮ ಮಗಳು ಅದನ್ನ ಕೇಳಿಸಿಕೊಂಡಿ ಇರೋದು ನಮಗೆ ಮುಖ್ಯ."

"ನನ್ನ ಮಗಳಿಗೆ?"

"ಹೌದು, ಪುಷ್ಪಲತಾಗೆ... ಗೌಡರೆ. ಇನ್ನೂ ನಾಟಕ ಆಡ್ತೀರಾ? ನಿಮಗೆ

ಪ್ರತಿಯೊಂದೂ ಗೊತ್ತಿದೆ. ಶನಿವಾರ ರಾತ್ರಿ ಹತ್ತೂ ಮುಕ್ಕಾಲರ ಹೊತ್ನಲ್ಲಿ ವಿದ್ಯುತ್ ಇಲಾಖೆಯ ಲೈನ್‌ಮನ್ ನಿಮ್ಮ ಮನೆ ಮುಂದಿನ ಕಂಬ ಹತ್ತಿದ್ದು ಗೊತ್ತಿಲ್ಲಾಂತೀರಾ?"

"ಗೊತ್ತಿಲ್ಲ."

"ಹನ್ನೊಂದೂವರೆ ಮೇಲೆ ದೆವ್ವದ ಕೋಣೆಯಿಂದ ಒಬ್ಬ ಇಳಿದು ಬಂದ ಅನ್ನೋದೂ ಗೊತ್ತಿಲ್ಲ?"

"ಗೊತ್ತಿಲ್ಲ" ಎಂದು ಗೋಣು ಆಡಿಸಿದ ಬಿಳಿಗೌಡ.

"ಕೋಣೆಯಿಂದ ಕೂಗು ಕೇಳಿದ ಮೇಲೆ ನಿಮ್ಮ ಕಿರಿ ಮಗಳು ದೆವ್ವದ ಕೋಣೆ ಬಾಗಿಲಿಗೆ ಓಡಿ ಬಂದು ತಟ್ಟಿದ್ದು, ಅವಳನ್ನ ಸಂತೈಸಿ ನಿಮ್ಮ ಹಿರಿ ಮಗಳು ಕರಕೊಂಡು ಹೋಗಿದ್ದು ಇವೆಲ್ಲಾ ಗೊತ್ತಿರಬೇಕು."

ಹಿದಾಯತ್ ಚಕಿತಗೊಂಡಿದ್ದ. ಬಿಳಿಗೌಡ ಕುರ್ಚಿಯಲ್ಲಿ ಸರಿದಾರಿ ಕಣ್ಣು ಮುಚ್ಚಿ ಹಣೆ ಸವರಿಕೊಂಡ.

"ಲೈನ್‌ಮನ್ ಕಂಬ ಹತ್ತಿದ್ದು ಕಾಣೆ. ಜಾಲನೂರಿನಿಂದ ಅವನ್ನ ಕರೆಸಿದ್ರೆ, ನನಗೆ ಹೇಳದೆ ಕಂಬ ಹೇಗೆ ಹತ್ತಾನೆ ಅವನು... ಇಷ್ಟು ನಿಜ ಕೂಗಿಗೆ ಮೊದಲು ಕೋಣೆಯಲ್ಲಿ ಇಬ್ಬರು ಮಾತಾಡಿದ್ದು ಕೇಳ್ತು. ಆದರೆ ಕೋಣೆಯಿಂದಲೇ ಬಂತೇ ಅಂತ ಈಗಲೂ ಸಂಶಯ.... ಮೆಲ್ಲಗೆ ಆಡಿದ ಅಸ್ಪಷ್ಟ ಮಾತುಗಳು!.... ಕೂಗು ಕೇಳಿ ಬಂದ ಮೇಲೆ ನನ್ನ ಕಿರಿ ಮಗಳು ಅಲ್ಲಿಗೆ ಹೋಗಿ ಬಾಗಿಲು ಬಡಿದದ್ದು. ಹಿರಿ ಮಗಳು ಅವಳನ್ನು ಕರಕೊಂಡು ಬಂದಿದ್ದು ನಿಜ. ಯಾಕೆ ಹೇಳ್ಲಿಲ್ಲ ಅಂತ ಕೇಳ್ತೀರಿ... ಹೇಗೆ ಹೇಳ್ಲಿ?.... ಇಬ್ಬರೂ ಹೆಣ್ಣು ಮಕ್ಕಳು. ವಿಷಯ ತಿಳಿಸಿದ್ರೆ ರಂಪ ಮಾಡ್ತೀರಿ. ಸ್ಟೇಷನ್‌ಗೆ ಕರೇಸ್ತೀರಿ... ವಿಷಯ ಮುಚ್ಚಿಟ್ಟಿದ್ದು ತಪ್ಪಾಯ್ತು. ಅದನ್ನೇ ಬೆಟ್ಟ ಮಾಡಿ ನಮ್ಮನ್ನ ಕೊಲ್ಲಬೇಡಿ, ಸ್ವಾಮಿ."

ಹಿದಾಯತ್ ಮತ್ತೊಂದು ಸಿಗರೇಟ್ ಹೊತ್ತಿಸಿದ್ದ.

"ಸೈತಾನ್ ಕೋನೆ ಒಳ್ಗೆ ಮಾತಾಡಿದ್ದು ಗೌಡ್ರು ಅಂತ ಯಾತಕ್ಕೆ ಹೇಳ್ಬಾರ್ದು, ದಿವಾಕ್ರು?"

ಕಂಗಾಲಾದ ಬಿಳಿಗೌಡ.

"ಅಲ್ಲಿವರೆಗೆ ಹೋಗ್ಬೇಡಿ, ಸಾರ್. ಆ ಕೋಣೆ ಒಳಗೆ ಹೋಗೋದೇನು ಬಂತು. ವರ್ಷಕ್ಕೆ ಒಂದ್ಸಾರಿ ಬಾಗಿಲು ತೆಗೆದಾಗ್ಲೂ ನಾನು ಅಲ್ಲಿ ಇಣುಕೋದಿಲ್ಲ. ನಮ್ಮ ಚೆನ್ನಮ್ಮನ ಕೋಪ."

"ಚೆನ್ನಮ್ಮ, ಚೆನ್ನಮ್ಮ ಅಂತ ಯಾತ್ಕೆ ಹಂಗೆ ಹೇಳ್ತೀರಿ, ಗೌಡ್ರು. ಚೆನ್ನಮ್ಮಗೆ ನಾವು ಚಾರ್ಜ್ ಮಾಡೋಕೆ ಆಯ್ತದೆ? ಅವಳ್ದು ನಂಟ್ರು ನಿಮ್ಗೆ ತಾನೆ ಕೇಳೋದು."

ಸಬ್‌ಇನ್ಸ್‌ಪೆಕ್ಟರ್ ಮುಂದುವರಿದ.

"ದೆವ್ವದ ಕೋಣೆಯಿಂದ ಆರಿದ ಲಾಂದ್ರ ಎತ್ತಿದೋರು ನೀವು..."

ಬಿಳಿಗೌಡ ಏನೊಂದೂ ಹೇಳಲಿಲ್ಲ. ದಿವಾಕರ ಮತ್ತಷ್ಟು ಹೇಳಿದ.

"ಮೊನ್ನೆ ಸಂಜೆ ಇಲ್ಲಿಗೆ ಬಂದಾಗ ಚೆನ್ನಮ್ಮನ ಸಮಾಧಿ ಮಾತು ಎತ್ತಿ ನನ್ನ ಅಲ್ಲಿಗೆ ಬರೊ ಹಾಗೆ ಮಾಡಿದ್ರಿ. ಅದಕ್ಕೆ ಮೊದಲೇ ಆರಿದ ಲಾಂದ್ರವನ್ನ ಆ ಮರದ ಕೆಳಗೆ ಇರಿಸಿದ್ರಿ. ನಿಮ್ಮ ಉದ್ದೇಶ ಇಷ್ಟೇ – ನಾನು ಸಮಾಧಿ ಹತ್ರ ಲಾಂದ್ರ ನೋಡಿದರೆ ಚೆನ್ನಮ್ಮನ ಕೈವಾಡದಲ್ಲಿ ನನಗೆ ನಂಬಿಕೆ ದೃಢವಾಗಲಿ ಅಂತ. ಕೊಲೆ ಅನ್ನೋ ಭಾವನೆಯೇ ತಲೆಗೆ ಬರಬಾರದೂಂತ."

ಬಿಳಿಗೌಡ ಆಯಾಡಗೊಂಡಂತೆ ಕಾಣಿಸಿದ.

"ಲಾಂದ್ರ ದೆವ್ವದ ಕೋಣೆ ಹೇಗೆ ಸೇರ್ತೊ ಗೊತ್ತಿಲ್ಲ. ಅಲ್ಲಿಂದ ಅದನ್ನ ಯಾರು ಮಾಯ ಮಾಡಿದ್ರೋ ದೇವರು ಬಲ್ಲ. ಆದರೆ..."

"ಸಮಾಧಿ ಹತ್ರಕ್ಕೆ ತಂದೋರು ಮಾತ್ರ ನೀವೇ."

"ಹೌದು."

ಗೌಡನ ಉತ್ತರದಿಂದ ದಿವಾಕರನೇ ಚಕಿತಗೊಂಡಿದ್ದ.

"ಎಲ್ಲಿಂದ ತಂದ್ರಿ?"

"ಅಗೋ, ಆ ಹುಲ್ಲು ಬಣವೆ ಮೇಲೆ ಬಿದ್ದಿತ್ತು. ಅದನ್ನ ಎತ್ಕೊಂಡು ಬಂದು ನೆಲ್ಲಿ ಮರದ ಬುಡಕ್ಕಿಟ್ಟೆ."

"ಲಾಂದ್ರನ ಭಗವಂತ ಹಾರಿಸಿಕೊಂಡು ಓಡಿದಾಗ ಯಾಕೆ ಸುಮ್ಮನೆ ನಿಂತ್ರಿ? ಅವನ್ನ ಯಾಕೆ ಬೈಲಿಲ್ಲ."

"ಅವನು ಹದ್ದಿನ ಹಾಗೆ ಅದನ್ನ ಚಣದಲ್ಲಿ ಎತ್ಕೊಂಡು ಚಿಗರೆ ಹಾಗಿ ಓಡಿದ್ರೆ ಅವನ್ನ ತಡೆಯೋದು ನನಗೆ ಸಾಧ್ಯವಿತ್ತೆ? ನನ್ನ ಬೈಗಳು ಅವನ್ನ ಸೇರೋದೆಲ್ಲಿ?"

ದಿವಾಕರ ಎರಡು ಪುಟಗಳ ಹೇಳಿಕೆಗೆ ಬಿಳಿಗೌಡನ ಸಹಿ ಪಡೆದ.

8

ಬಿಳಿಗೌಡನ ಮನೆಯವರ ಬೆರಳು ಗುರುತುಗಳಿದ್ದ ದಪ್ಪನೆಯ ಹಾಳೆಗಳನ್ನು ಲಕೋಟೆಯಲ್ಲಿಟ್ಟು ಅಂಟು ಹಾಕಿದ ಹಿದಾಯತ್. ದಿವಾಕರ ಸ್ಟೇಷನ್ ಮುಂದೆ ಮೋಟಾರ್ ಸೈಕಲ್ ನಿಲ್ಲಿಸಿದ ಮೆದುಸದ್ದು ಕೇಳಿತು. ಸಾವಕಾಶವಾಗಿ ಎದ್ದು ಅಲ್ಮೈರಾದಿಂದ ಕಪ್ಪು ಬಣ್ಣದ ಟೇಪ್ ರೆಕಾರ್ಡರ್ ತೆಗೆದು ಮೇಜಿಗಿರಿಸಿದ.

"ನಿನ್ಗೇ ಕಾಯ್ತಾ ಇದ್ದೆ. ಸಿಟಿಯಿಂದ ಇದು ಬಂದಿ ಅರ್ಧ ಗಂಟೆ ಆಯ್ತು. ಇದರ್ ಮ್ಯಾಗೆ ಫಿಂಗರ್ ಪ್ರಿಮಟ್ ತಕ್ಕೊಂಡಿದ್ದಾಯ್ತು. ಇದರ್ ಜಿಮ್ಮೆದಾರಿ ನಿನ್ದು.

ಕೋಣೆ ಪ್ರವೇಶಿಸಿದ ದಿವಾಕರ ಹಿಂದಕ್ಕೆ ಸಾಗಿ ಮೋಟಾರ್ ಸೈಕಲ್‌ನ ಪಕ್ಕದ ಪೆಟ್ಟಿಗೆಯಿಂದ ಟವೆಲ್‌ನಲ್ಲಿ ಸುತ್ತಿಟ್ಟ ಕಂದು ಬಣ್ಣದ ಟೇಪ್ ರೆಕಾರ್ಡರ್ ಹಿಡಿದು ಬಂದ.

ಎರಡು ಯಂತ್ರಗಳನ್ನೂ ಮೇಜಿನ ಮೇಲೆ ಒಂದರ ಪಕ್ಕದಲ್ಲಿ ಮತ್ತೊಂದು ಇಟ್ಟ. ಒಂದು ನೇರವಾಗಿ ನಿಲ್ಲುವಂತಹ ಹೊಳಪು ಕಪ್ಪು ಬಣ್ಣದ ರೆಕಾರ್ಡರ್. ಮತ್ತೊಂದು ಮೇಜಿನ ಮೇಲೆ ಅಗಲವಾಗಿ ಹರಡಿದ ಬಣ್ಣದ ರೆಕಾರ್ಡರ್. ಮತ್ತೊಂದು ಮೇಜಿನ ಮೇಲೆ ಅಗಲವಾಗಿ ಹರಡಿದ ಕಂದು ಬಣ್ಣದ ತುಸು ಹಳೆಯ ಯಂತ್ರ. ಎರಡೂ ಜಪಾನ್ ತಯಾರಿಕೆಯವು.

"ಇವು ಮೂರು ಸ್ನೇಹಲತಾ ಕೋಣೆಯಿಂದ ತಂದಿರೋ ಕ್ಯಾಸೆಟ್‌ಗಳು."

ಎಂದು ಕಂದು ಬಣ್ಣದ ರೆಕಾರ್ಡರ್‌ನಲ್ಲಿ ಟೇಪ್ ಇಟ್ಟು ಗೋಡೆಯ ಸ್ವಿಚ್ ರಂಧ್ರಕ್ಕೆ ಸಂಪರ್ಕ ಕೊಟ್ಟು ಯಂತ್ರ ಚಲಾಯಿಸಿದ.

"ಅವತ್ತು ಶನ್ವಾರ ದೀಪ ಇರ್ಲಿಲ್ಲ. ಕಪ್ಪು ರೆಕಾರ್ಡರ್‌ನಲ್ಲಿ ಸೆಲ್ ಇತ್ತು?"

ಹೊಸ ಸಂಗತಿ ಗ್ರಹಿಸಿದಂತೆ ಕೇಳಿದ ಇನ್ಸ್‌ಪೆಕ್ಟರ್.

"ಇತ್ತು, ಈಗಲೂ ಅದೇ ಇರೋದು."

ಟೇಪ್‌ನಿಂದ ಕನ್ನಡ ಚಿತ್ರಗೀತೆಗಳು ಹೊರಬಿದ್ದವು. ಮತ್ತೊಂದು ಟೇಪ್ ಬಳಸಿದಾಗ ಹಳೆಯ ಹಿಂದಿ ಚಿತ್ರಗಳ ಹಾಡುಗಳು.

ಮೂರನೆಯ ಟೇಪ್ ಹಾಕಿದ. ಕೆಲವು ಕ್ಷಣಗಳ ಕಾಲ ಸದ್ದಿಲ್ಲದೆ ಸುತ್ತಿತು ಸುರುಳಿ. ನಂತರ ಧ್ವನಿ ಮೂಡಿತು.

"ಯಾರು?... ಯಾರು ನೀನು?"

ಗಾಬರಿಯ ಪ್ರಶ್ನೆ. ಗಂಡು ಕಂಠ. ಕೆಲವು ಸೆಕೆಂಡುಗಳು ನಿಶ್ಶಬ್ದ.

"ಹಹ್ಹ! ಗೊತ್ತಿಲ್ಲವೆ?... ಗೊತ್ತಿದೆ... ನಾನು ಚೆನ್ನಮ್ಮ. ನನ್ನೊಂದಿಗೆ ಮಾತಾಡೋದಿಕ್ಕೆ ಬಂದೋನು ನೀನು."

ಗುಹೆಯಿಂದ ಹರಿದು ಬರುವಂತಹ ಗಂಭೀರ ಮೃದು ಸವರ. ಹೆಣ್ಣಿನ ಉತ್ತರ ಅದು.

"ನಿನ್ನ ಒಪ್ಪಿಗೆ, ಆಶೀರ್ವಾದ ಪಡೆಯೋದಿಕ್ಕೆ ಬಂದಿದೀನಿ... ನೀನು ಕಾಣ್ತಾ ಇಲ್ಲ... ನೀಣು ಅಂದರೆ ನನಗೆ ಭಕ್ತಿ ಗೌರವ... ಚೆನ್ನಮ್ಮ. ನಿನಗೆ ಅನ್ಯಾಯ ಆಯ್ತು. ಸ್ನೇಹಲತಾಗೂ ಅಂಥ ಅನ್ಯಾಯ, ಸಾವು ಬೇಡಾಂತ ಬೇಡಿಕೊಳ್ಳೋದಿಕ್ಕೆ ಈ ಕೋಣೆಗೆ ಬಂದೆ."

ಆತುರದ ಕಳಕಳಿಯ ಬೇಡಿಕೆ. ಧ್ವನಿಯಲ್ಲಿ ಧೈರ್ಯ. ಅದರ ಹಿಂದೆಯೇ ಮತ್ತೊಂದು ಸ್ವಾಭಾವಿಕ ಧ್ವನಿ ಕೂಡಿತು.

"ಅಷ್ಟು ಬೇಗ ಬೇಗೆ ಹೇಳಬಾರದು. ಸ್ವಲ್ಪ ನಿಧಾನ... ಓಕೆ?"

ನಿಧಾನವಾಗಿ ಪುನರುಚ್ಚರಿಸಿತು ಗಂಡು.

"ಈ ಕೋಣೆ ಬಾಗಿಲು ತೆಗಿಬಾರದುಂತ ಅಪ್ಪಣೆ ಮಾಡಿದ್ದೆ."

ಕಟುವಾಗಿತ್ತು ಕೇಳಿಕೆ. ಮತ್ತೆ ಸದ್ದಿಲ್ಲ.

"ಸರಿಯಾ?" ಮಧ್ಯೆ ನುಸುಳಿದ ನುಡಿ.

"ಸರಿ."

"ಅಪ್ಪಣೆ ಮೀರುವಂತ ಪ್ರೇಮ ನಮ್ಮದು. ನಾನು ಪ್ರಾಣ ಬಿಡೋದಿಕ್ಕೆ ಸಿದ್ದ. ಆದರೆ ಸ್ನೇಹಲತಾನ ಬಿಡಲಾರೆ. ಅವಳೂ ನನ್ನ ವಿಷಯದಲ್ಲಿ ಹಾಗೆಯೇ – ಬಿಳಿಗೌಡ ಅವನ ತಾತನ ಹಾಗೆ ಹಠ ಹಿಡಿದಿದ್ದಾನೆ ಹಠ ದುರಂತಕ್ಕೆ ಕಾರಣ ಆದೀತು. ಅವನಿಗೆ ತಿಳಿವಳಿಕೆ ಹೇಳಬೇಕು ನೀನು."

ಹೇಳಿಕೆ ದೃಢವಾಗಿತ್ತು.

"ಹೇಗೆ?" ಮಧ್ಯೆ ಮೆಚ್ಚಿಗೆ ಪಡೆಯಲು ಕೇಳಿಕೆ.

"ಉಹೂಂ.... ತಿಳಿವಳಿಕೆ ಹೇಳಬಾರದೆ ನೀನು ಅಂತ ಹೇಳಿದ್ರೆ ಚೆನ್ನಾಗಿರತ್ತೆ."

"ಆಯ್ತು"

ಮತ್ತೆ ಮುಂದುವರಿಯಿತು ಮಾತು.

"ಅವನು ಕೋಣೆಗೆ ಬಂದ್ರೆ ಹೇಳಬೋದು. ಅವನು ಬರೋದಿಲ್ಲ. ನನ್ನ ಮಾತು ಹೇಳು. ಅವನ ಮಕ್ಕಳ ಮೇಲೆ ನನಗೆ ಕೋಪ ಇಲ್ಲ."

"ಹೆಣ್ಣು ಮಗಳ ಮೇಲೆ ಕೋಪ ಇಲ್ಲ ಅಂತ ಹೇಳ್ಬೇಕು."

ತಿದ್ದುಪಡಿ ಬಂತು. ಹಿಂದೆಯೇ ಜೋಡಿ ನಗೆ!

ವಾಕ್ಯದ ಪುನರುಚ್ಚಾರವಾಯಿತು.

"ನಾನು ಸ್ನೇಹಲತಾನ ಮದುವೆ ಆಗ್ತೀನಿ."

"ಅದಕ್ಕೆ ನನ್ನ ಆಶೀರ್ವಾದ ಇದೆ. ಜಾತಿ ಅಂತಸ್ತು ವ್ಯತ್ಯಾಸವಾದರೂ ನಿಮ್ಮಿಬ್ಬರದು ಜನ್ಮಾಂತರದ ನಂಟು. ನಾಳೆಯಿಂದ ಈ ಕೋಣೆ ಬಾಗಿಲು ತೆಗೆದುಬಿಡೋಕೆ ಹೇಳು. ಇನ್ನು ಮುಂದೆ ನಾನು ಇಲ್ಲಿ ಕಾಣಿಸಿಕೊಳ್ಳೋದಿಲ್ಲ... ಸಂತೋಷದಿಂದ ಮದುವೆ ಆಗಿ ಸುಖವಾಗಿ ಬಾಳಿ."

ಮತ್ತಷ್ಟು ಸುತ್ತಿತು ಟೇಪು. ಹಿಂದಿನ ಸಂಭಾಷಣೆ ತಿದ್ದುಪಡಿಗಳೊಂದಿಗೆ ಪದೇ ಪದೇ ಪುನರುಚ್ಚಾರವಾಯಿತು. ನಂತರ ಯಾವ ಧ್ವನಿಯೂ ಹೊರಬೀಳಲಿಲ್ಲ.

ದಿವಾಕರ ರೆಕಾರ್ಡರ್ ಆಫ್ ಮಾಡಿದ. ತದೇಕಚಿತ್ತದಿಂದ ದವಡೆ ಬಿಗಿಸಿ ಕೇಳುತ್ತಿದ್ದ ಹಿದಾಯತ್ ತಟಕ್ಕನೆ ನುಡಿದ.

"ಸೈತಾನ್ ಚೆನ್ನಮ್ಮ. ಲಚ್ಮನ ಇಬ್ಬರ್ದು ಜೊತೆ ಮಾತಾಡಿದ್ದು ಇನ್ನೂ ಎರಡು ಜನ..."

"ನಾಲ್ಕು ಮಂದಿ ಹಾಗೆ ಕೇಳತ್ತೆ. ಇಬ್ಬರೇ ಮಾತಾಡಿರೋದು. ಸಂಭಾಷಣೆಗೆ ಕಂಠ ಬದಲಾಯಿಸಿಕೊಂಡಿದಾರೆ. ಮಧ್ಯೆ ಮಾತುಗಳನ್ನ ಒಬ್ಬರಿಗೊಬ್ಬರು ತಿದ್ದಿದಾರೆ."

"ಇದು ಸೈತಾನ್ ಕೋಣೆ ಒಳಗೆ ನಡ್ದಿರೋದಲ್ಲ. ಮಾಮೂಲಿ ಕೋಣೆ ಒಳ್ಗೆ ನಾಟ್ಕ ಪ್ರಾಕ್ಟೀಸ್ ಆಗದೆ."

"ಇದು ಹೇಳೋದಿಕ್ಕೆ ಬಹಳ ಹೊತ್ತು ತೊಗೊಂಡ್ರಿ."

"ಇನ್ಸ್‌ಪೆಕ್ಟರ್ ಆಗೋದ್ಕೂ ಬಹಳ ವರ್ಷ ತಕ್ಕೊಂಡೆ."

ಗಹಗಹಿಸಿ ತಲೆ ಸವರಿಕೊಂಡ. ಮತ್ತೆ ಗಂಭೀರನಾಗಿ ಹೇಳಿದ.

"ಈಗ ಈ ಕಪ್ಪು ಮೆಷಿನ್‌ಗೆ ಚಾಲೂ ಮಾಡು.।

ಕಪ್ಪು ಬಣ್ಣದ ಟೇಪ್ ರೆಕಾರ್ಡರ್‌ನಲ್ಲಿದ್ದ ಟೇಪು ಹಿಂದಕ್ಕೆ ಸುತ್ತಿಸಿದ.

"ಈ ಟೇಪು ಇದೇ ರೆಕಾರ್ಡರ್‌ನಲ್ಲಿದ್ದಿದ್ದು."

ಬಟನ್ ಒತ್ತಿದೊಡನೆ ಧ್ವನಿ ಮೂಡಿತು.

"ಯಾರು?... ಯಾರು ನೀನು?"

"ಹಹ್ಹ! ಗೊತ್ತಿಲ್ಲವೆ?.... ಗೊತ್ತಿದೆ... ನಾನು ಚೆನ್ನಮ್ಮ. ಏನು ನನ್ನೊಂದಿಗೆ ಮಾತಾಡೋದಿಕ್ಕೆ ಬಂದೋನು ನೀನು."

"ನಿನ್ನ ಒಪ್ಪಿಗೆ, ಆಶೀರ್ವಾದ ಪಡೆಯೋದಿಕ್ಕೆ ಬಂದಿದೀನಿ.... ನೀನು ಕಾಣ್ತಾ ಇಲ್ಲ... ನೀನು ಅಂದರೆ ನನಗೆ ಭಕ್ತಿ, ಗೌರವ.... ಚೆನ್ನಮ್ಮ, ನಿನಗೆ ಅನ್ಯಾಯ ಆಯ್ತು. ಸ್ನೇಹಲತಾಗೂ ಅಂಥ ಅನ್ಯಾಯ, ಸಾವು ಬೇಡಾಂತ ಬೇಡಿಕೊಳ್ಳೋದಿಕ್ಕೆ ಈ ಕೋಣೆಗೆ ಬಂದೆ."

"ಈ ಕೋಣೆ ಬಾಗಿಲು ತೆಗಿಬಾರದಂತ ಅಪ್ಪಣೆ ಮಾಡಿದ್ದೆ."

"ಅಪ್ಪಣೆ ಮೀರುವಂತ ಪ್ರೇಮ ನಮ್ಮದು. ನಾನು ಪ್ರಾಣ ಬಿಡೋದಿಕ್ಕೆ ಸಿದ್ದ. ಆದರೆ ಸ್ನೇಹಲತಾನ ಬಿಡಲಾರೆ. ಅವಳೂ ನನ್ನ ವಿಷಯದಲ್ಲಿ ಹಾಗೆಯೇ... ಬಿಳಿಗೌಡ ಅವನ ತಾತನ ಹಾಗೆ ಹಠ ಹಿಡಿದಿದ್ದಾನೆ. ಹಠ ದುರಂತಕ್ಕೆ ಕಾರಣ ಆದೀತು. ಅವನಿಗೆ ತಿಳಿವಳಿಕೆ ಹೇಳಬಾರದೆ ನೀನು?"

"ಅವನು ಕೋಣೆಗೆ ಬಂದ್ರೆ ಹೇಳಬೋದು. ಅವನು ಬರೋದಿಲ್ಲ. ಅವನಿಗೆ ನನ್ನ ಮಾತು ಹೇಳು. ಅವನ ಮಗಳ ಮೇಲೆ ಕೋಪ ಇಲ್ಲ."

"ನಾನು ಸ್ನೇಹಲತಾನ ಮದುವೆ ಆಗ್ತೀನಿ."

"ಅದಕ್ಕೆ ನನ್ನ ಆಶೀರ್ವಾದ ಇದೆ. ಜಾತಿ, ಅಂತಸ್ತು ವ್ಯತ್ಯಾಸವಾದರೂ

ನಿಮ್ಮಿಬ್ಬರದು ಜನ್ಮಾಂತರದ ನಂಟು... ನಾಳೆಯಿಂದ ಈ ಕೋಣೆಯ ಬಾಗಿಲು ತೆಗೆದುಬಿಡೋಕೆ ಹೇಳು. ಇನ್ನು ಮುಂದೆ ನಾನು ಇಲ್ಲಿ ಕಾಣಿಸಿಕೊಳ್ಳೋದಿಲ್ಲ... ಸಂತೋಷದಿಂದ ಮದುವೆ ಆಗಿ ಸುಖವಾಗಿ ಬಾಳಿ."

ದಿವಾಕರ ನಿರೀಕ್ಷಿಸಿದಂತೆ ಸಂಭಾಷಣೆ ಅಲ್ಲಿಗೆ ಮುಗಿಯಬೇಕಿತ್ತು. ಆದರೆ ಟೇಪ್‌ನಿಂದ 'ಸೊರ್' ಎಂಬ ಗಾಳಿ ಮೊರೆತ ಕೇಳಿ ಬಂತು. ಧ್ವನಿ ಮುಂದಕ್ಕೆ ಸಾಗಿತು.

"ಹಹ್ಹಹ್ಹ! ನೀವು ಸುಖವಾಗಿದ್ರೆ ನನಗೆ ಸುಖ ಏನು ಬಂತು? ನನ್ನ ಆತ್ಮಕ್ಕೆ ಶಾಂತಿ ಎಲ್ಲೀದು? ನನ್ನ ದುರಂತ ಮತ್ತೆ ಬಿಳಿಗೌಡನ ಮನೆಯಲ್ಲಿ ಕಾಣಿಸ್ಕೊಬೇಕು."

ಏಕಾಏಕಿ ಬದಲಾಗಿತ್ತು ಹೆಣ್ಣಿನ ಕೋಮಲ ಸ್ವರ. ಮೊದಲಿನ ಸಂಭಾಷಣೆಯಿಂದ ವಿಭಿನ್ನವಾದ ಗಡಸು ಕಂಠ. ಅತೀವ ಕರ್ಕಶ!

"ಇದು ಮೋಸ, ಚೆನ್ನಮ್ಮ... ದ್ರೋಹ!"

ಮತ್ತೆ ಹೆಣ್ಣಿನ ಧ್ವನಿ ಬರಲಿಲ್ಲ.

"ಬೇಡ!...ಬೇಡ!!...ಬೇಡ!!!"

ಆರ್ತಸ್ವರ ಬಂತು. ಅದರ ಹಿಂದೆಯೇ ಗಟ್ಟಿಯಾಗಿ ಕೇಳಿ ಬಂತು ಚೀತ್ಕಾರ!

ಹಿದಾಯತ್ ಬೆಚ್ಚಿದ ಟೇಪು ಮತ್ತಷ್ಟು ಸುತ್ತಿತು. ಮುಂದೆ ಯಾವ ಮಾತೂ ಅದರಿಂದ ಹೊರಬೀಳಲಿಲ್ಲ.

ದಿವಾಕರ ತಲೆಯಲ್ಲಿ ಚಕ್ರ ಸುತ್ತಿಸಿದ.

ಮೊದಲು ಕೇಳಿದ ಟೇಪ್‌ನಲ್ಲಿ ಅಭ್ಯಾಸ ಮಾಡಿದ ಮಾತುಗಳು. ಧ್ವನಿ ಬದಲಿಸಿದ ಎರಡು ಕಂಠಗಳು.... ಸಂತೋಷದಿಂದ ಮದುವೆ ಆಗಿ ಸುಖವಾಗಿ ಬಾಳಿ ಎಂಬುದೇ ಅಲ್ಲಿನ ಕಡೆಯ ವಾಕ್ಯ.

ಎರಡನೆ ಸಾರಿ ಪ್ರಯೋಗಿಸಿದ ಟೇಪ್‌ನಲ್ಲಿ ಅವೇ ಮಾತುಗಳು. ಮಧ್ಯೆ ತಿದ್ದುಪಡಿ. ನಗೆ ಇಲ್ಲದೆ ಪರಿಷ್ಕೃತವಾದ ಸಂಭಾಷಣೆ... ಮುಂದುವರಿದ ಹೆಣ್ಣಿನ ಮಾತಿನಲ್ಲಿ ಅತೀವ ಕರ್ಕಷತೆ. ಅಂತ್ಯದಲ್ಲಿ ಚೀತ್ಕಾರ!

ಹಿದಾಯತ್ ಅವನ ಮಗ್ನತೆಗೆ ಭಂಗ ತಂದ.

"ಸೈತಾನ್ ಕೋನೆ ಒಳ್ಗೆ ಇದೂನೂ ರೆಕಾರ್ಡರ್ ಇತ್ತೊ ಏನೋ ದಿವಾಕ್ರು."

ಕಂದು ಬಣ್ಣದ ಯಂತ್ರದ ಕಡೆಗೆ ತೋರಿದ.

"ಸೈತಾನ್ ಕೋಣೇಲಿ ಇದ್ದದ್ದು ಕಪ್ಪು ರೆಕಾರ್ಡರ್ ಒಂದೇ. ಈ ರೆಕಾರ್ಡರ್ ಹುಡುಗಿ ಕೋಣೇದು."

"ಗೌಡನ್ದು ಮನೆ ಒಳ್ಗೆ ಮುಷ್ಕರಿ ನಡ್ದದೆ."

"ಮುಷ್ಕರಿ ಅಲ್ಲ, ಸಾರ್. ನೀವು ಹೇಳೊ ಹಾಗೆ ಕರಾಮತ್."

"ಇಲ್ಲಿ ಮಾತಾಡಿದ್ದು ಜೋಡಿ ಯಾವ್ದು?"

"ಗಂಡು ಧ್ವನಿ ಲಕ್ಷ್ಮಣಂದು. ಹೆಣ್ಣು ಡುಪ್ಲಿಕೇಟ್ ಚೆನ್ನಮ್ಮ।

"ಡೂಪ್ಲಿಕೇಟ್ ಚೆನ್ನಮ್ಮ! ಇದ್ಕೆ ಎರಡು ಮೆಷಿನ್ ಯಾಕೆ?"

"ಕಂದು ಬಣ್ಣದ ರೆಕಾರ್ಡರ್ ಬಳಸಿ ಮೊದಲು ರಿಹರ್ಸಲ್ ನಡೆಸಿದಾರೆ. ಅದರಿಂದ ಸರಿಯಾದ ಆಯ್ದ ಮಾತುಗಳನ್ನ ಮತ್ತೆ ರೆಕಾರ್ಡ್ ಮಾಡೋದಿಕ್ಕೆ ಕಪ್ಪು ರೆಕಾರ್ಡರ್ ಬಳಸಿದಾರೆ. ಆಮೇಲೆ ಕಪ್ಪು ಯಂತ್ರ ದೆವ್ವದ ಕೋಣೆಗೆ ಹೋಗಿದೆ."

"ಎರಡು ರೆಕಾರ್ಡಿಂಗ್ ಒಳ್ಗೂ ಯತ್ವಾಸ ಕಾಣಸ್ತದೆ."

"ಹೌದು, ವ್ಯತ್ಯಾಸ ಕೊನೆ ಭಾಗದಲ್ಲಿದೆ..."

ಎಂದು ಎರಡು ಯಂತ್ರಗಳನ್ನೂ ಮತ್ತೆ ಚಲಾಯಿಸಿ ಸಾಹೇಬನಿಗೆ ವಿವರಣೆ ಕೊಟ್ಟ.

"ಸಂತೋಷದಿಂದ ಮದುವೆ ಆಗಿ ಸುಖವಾಗಿ ಬಾಳಿ ಅನ್ನೋ ಕಡೆ ಮೊದಲನೆ ರೆಕಾರ್ಡಿಂಗ್ ಮುಗಿದಿದೆ. ಎರಡನೆ ರೆಕಾರ್ಡಿಂಗ್‌ನಲ್ಲಿ ಇದ್ದಕ್ಕಿದ್ದ ಹಾಗೆ ಕೋಪದ ಮಾತು ಸೇರಿದೆ. ಆಮೇಲೆ ಚೀತ್ಕಾರ ಕೇಳತ್ತೆ."

ನಾಲಗೆ ಹೊರ ಹಾಕಿ ಗಾಢವಾಗಿ ಯೋಚಿಸುತ್ತಿದ್ದ ಹಿದಾಯತ್.

"ಅದು ಹೇಗೆ ಸ್ವಾಮಿ?" ಅಚ್ಚರಿಯಿಂದ ಕೇಳಿದ.

"ಎರಡ್ನೇ ರೆಕಾರ್ಡಿಂಗ್ ಒಳ್ಗೆ ಚೆನ್ನಮ್ಮ ಕ್ವಾಪದಿಂದ ಮಾತಾಡಿರೋದು ಗಂಡ್ಸು ಕುತ್ಗೆ ಒಳ್ಗೆ."

ಹೌದು, ಹಿದಾಯತ್‌ನ ಮಾತು ನಿಜ. ಪರಿಷ್ಕೃತ ರಿಕಾರ್ಡಿಂಗ್‌ನಲ್ಲಿ ಅಧಿಕವಾಗಿ ಸೇರಿರುವ ಮಾತು ಗಂಡಸಿನ ಕಂಠ!

ಅದು ಲಕ್ಷ್ಮಣ ಬದಲಿಸಿ ಆಡಿರುವ ಕಂಠವೇ? ಲಕ್ಷ್ಮಣ ಸ್ವರ ಬದಲಿಸುವ ಅಗತ್ಯವಿಲ್ಲ.

ದಿವಾಕರ ಮೂರನೆಯ ಸಾರಿಗೆ ಬೇಸರವಿಲ್ಲದೆ ಟೇಪುಗಳಿಂದ ಧ್ವನಿ ಮೂಡಿಸಿ ಎಚ್ಚರಿಕೆಯಿಂದ ಕೇಳಿದ.

ಚೆನ್ನಮ್ಮನ ಉಗ್ರ ಸ್ವರ ಗಂಡಸಿನ ಸ್ವರದಂತೆ ಕೇಳಿರಬಾರದೇಕೆ?.... ಖೋಟಾ ಚೆನ್ನಮ್ಮ!

"ಈ ರಿಕಾರ್ಡಿಂಗ್ ಸೈತಾನ್ ಕೋಣೆ ಒಳ್ಗೆ ಆಗಿಲ್ಲಾಂತ ನೀನು ಗ್ಯಾರಂಟಿ ಮಾಡ್ಕೊಳ್ಳೊ, ದಿವಾಕ್ರು."

ಇನ್ಸ್‌ಪೆಕ್ಟರ್ ಬೆಂಕಿ ಪೊಟ್ಟಣಕ್ಕೆ ಸಿಗರೇಟು ಹಚ್ಚಿದ.

“ಅದು ಗ್ಯಾರಂಟಿ, ಸಾರ್. ನಾನು ಆ ರಾತ್ರಿ ಈ ರೆಕಾರ್ಡರ್ ನೋಡಿದಾಗ ಅದರಲ್ಲಿ ಟೇಪ್ ಸುತ್ತುತ್ತಾ ಇದ್ದದ್ದು ನೋಡ್ದೆ. ರೆಕಾರ್ಡ್ ಆಗ್ತಾ ಇರ್ಲಿಲ್ಲ. ರೆಕಾರ್ಡ್ ಆದ ಟೇಪು ಹಿಂದಕ್ಕೆ ತಿರುಗ್ತಿತ್ತು... ಅಷ್ಟೇ ಅಲ್ಲ. ನಾನು ಆ ಕೋಣೆಯಲ್ಲಿದ್ದಾಗ ಗಾಳಿಯ “ಸುಂಯ್” ಶಬ್ದ ಕೇಳ್ತಿತ್ತು. ಕಿಟಕಿಯ ಒಂದು ಷಟರ್ ಪಟಪಟ ಆಡ್ತಿತ್ತು. ಆ ಶಬ್ದ ಯಾವುದೂ ಇಲ್ಲಿ ರೆಕಾರ್ಡ್ ಆಗಿಲ್ಲ... ಲಕ್ಷ್ಮಣ ಯಂತ್ರ ಒಯ್ದಿದ್ದು ದೆವ್ವದ ಕೋಣೆಯಲ್ಲಿ ಚೆನ್ನಮ್ಮನೊಡನೆ ನಡೆಸೋ ಸಂಭಾಷಣೆಯನ್ನು ರೆಕಾರ್ಡ್ ಮಾಡೋಕೆ. ಆದರೆ ರೆಕಾರ್ಡ್ ಆದ ಸಂಭಾಷಣೆಯನ್ನೇ ತನ್ನೊಂದಿಗೆ ಯಾಕೆ ಒಯ್ದ?”

“ಬಿಳಿಗೌಂಡಂಗೆ ಟೋಪಿ ಹಾಕೋದ್ಕೆ ಕಣೊ. ದಿವಾಕ್ರು, ನೀನು ದಿವಾಕರ ಅಲ್ಲ. ಒಂದೊಂದ್ಸಾರಿ ಎಮ್ಮೆಕರ.”

ಎಮ್ಮೆಕರ ಎಚ್ಚೆತ್ತಂತೆ ಎದ್ದು ನಿಂತ.

“ಎಚ್ಚರ ಕೊಟ್ರಿ, ಸ್ವಾಮಿ. ಟೇಪ್‌ರೆಕಾರ್ಡರ್‌ಗೆ ಸಂಬಂಧಪಟ್ಟ ವ್ಯಕ್ತಿ ಸಂಗಡ ಮಾತಾಡಬೇಕು.”

“ಈಗ ಚಾಮ್ಗೆರೆಗೆ ಹೋಯ್ತಿ.”

“ಒಂದೊಂದು ವಿಷಯಕ್ಕೂ ಪಕ್ಕದ ಕೋಣೆಗೆ ಹೋಗೊಹಾಗೆ ಅಲ್ಲಿಗೆ ಹೋಗ್ತಿದೀನಿ... ಸಾರ್, ಶನಿವಾರ ರಾತ್ರಿ ನೋಡ್ಬೇಕಾಗಿತ್ತು ನೀವು. ನನ್ನ ಮನೆ ಅಂಗಳದಲ್ಲಿ ಎಲೆಕ್ಟ್ರಿಕ್ ತಂತಿ ಕಿತ್ತು ಬಿದ್ದಿತ್ತು. ಅದನ್ನೇ ಲೆಕ್ಕಿಸದೆ ಹೋದೆ ಆ ಹೊತ್ನಲ್ಲಿ.”

“ಸರ್ಕಾರದ್ದು ಕೆಲ್ಸ ದೇವರ್ದು ಕೆಲಸ ನೋಡು.” ವ್ಯಂಗ್ಯದಲ್ಲಿ ಹೇಳಿದ.

“ಸಾವಿನ ವಿಷಯದಲ್ಲಿ ಸಂಶಯ ಬಂತು. ಚಕಚಕಿ ಅಂತ ಸಿಕ್ಕಿದ ವಸ್ತುಗಳಿಗೆಲ್ಲಾ ದುರ್ಬೀನು ಹಾಕ್ಬಿಟ್ಟೆ.”

“ನಿನ್ದು ಮಹಜರ್ ಅಂದ್ರೆ ಮ್ಯೂಸಿಯಂ ಅಂತ ಸಾವ್ರ ಸರ್ತಿ ಹೇಳಿದೀನಿ.... ಇನ್ನೂ ಯಾರ್ದು ಫಿಂಗರ್ ಪ್ರಿಂಟ್ ಬಾಗಿ ಇದೆಯೋ?”

“ಯಾರದೂ ಇಲ್ಲ...”

ಎಂದವನು ನಾಲಗೆ ಕಟ್ಟಿ ಮೈ ಹೊರಳಿಸಿ ಹೇಳಿದ.

“ಬೆರಳು ಗುರುತು ಇರಲಿ. ಆಸಾಮಿ ಇನ್ನು ನೋಡೋಕಾಗಿಲ್ಲ ಮರೆತೇ ಬಿಟ್ಟಿದ್ದೆ. ನಾನು ಸಸ್ಪೆಂಡ್ ಆಗ್ತೀನಿ ಅನ್ನೊ ಗಾಬರೀಲಿ. ಈ ಕೇಸಿನ ಸೆಕ್ಷನ್ ಬದಲಾಯಿಸೋದ್ರಲ್ಲಿ ಮಂಕು ಬಡಿದಿತ್ತು.”

“ಯಾರೊ ಅದು ನಿನ್ ಕಣ್ಗೆ ದೂರ ನಿಂತೋನು?”

“ವರದಪ್ಪ.”

“ಅವನ್ಗೇ ಕರಸ್‌ಬಿಡೋವ.”

“ಬೇಡ, ಅವನ ಹತ್ರಕ್ಕೆ ಹೋದ್ರೆ ನನ್ನ ಮಹಜರ್ ಇನ್ನಷ್ಟು ದೊಡ್ಡದಾಗುತ್ತೆ.

ನಿಮಗೆ ಜಮ್ಮೇದಾರಿ ಇನ್ನೂ ಹೆಚ್ಚಲಿ."

"ನನ್ನು ಮನೆಗೆ ಹಾಳ್ ಮಾಡ್ತಿ!"

9

ತೆಂಗಿನ ತೋಟವನ್ನ ಬಳಸಿ ಮೋಟಾರ್ ಸೈಕಲ್‌ನ ವೇಗ ಹೆಚ್ಚಿಸುತ್ತಲೇ, ಎದುರು ದಿಕ್ಕಿನಿಂದ ಬರುತ್ತಿದ್ದ ಮತ್ತೊಂದು ಮೋಟಾರ್ ಸೈಕಲ್ ಕಾಣಿಸಿತು. ದಿವಾಕರ ತನ್ನ ವಾಹನ ನಿಲ್ಲಿಸಿದ. ಎದುರು ವಾಹನದವ ಪಕ್ಕಕ್ಕೆ ಒಂದು ಸ್ಟ್ಯಾಂಡ್ ಹಾಕಿ ಕೆಳಗಿಳಿದ.

"ಯಾರನ್ನ ಹುಡುಕ್ಕೊಮಡು ಹೋಗ್ತಿದೀರಿ, ಸಾರ್?"

"ಹುಲ್ಲುಕೆರೆ ಅನ್ನೋದು. ನಾನು ಹೋಗ್ತಾ ಇದ್ರೆ ಅದು ಹಿಂದಕ್ಕೆ ಸರೀತಾ ಇದೆ" ಬೆವರು ಒರಸಿದ ಎಸ್.ಐ.

"ಇನ್ನು ನೂರು ಮೈಲಿ ಹೋದ್ರೂ ಅದು ಹಿಂದಕ್ಕೆ ಸರೀತಾ ಇರತ್ತೆ. ಎದುರಿಗೆ ಕಾಣ್ತಾ ಇರೋದು ಚಲ್ಲಕೆರೆ... ಯಾರನ್ನ ಹುಡುಕಿಕೊಂಡು ಹೊರಟ್ರಿ?"

"ಹುಲ್ಲುಕೆರೆ ವರದಪ್ಪ."

"ಹುಲ್ಲುಕೆರೆಗೆ ದಾರಿ ಇದಲ್ಲ. ಅರ್ಧ ಮೈಲಿ ಹಿಂದಕ್ಕೆ ಹೋಗಿ ಬಲಕ್ಕೆ ತಿರುಗಬೇಕು. ವರದಪ್ಪ ಇಗೊ, ಬೇಕಿದ್ರೆ. ನಾನೇ."

ಕೈ ಮುಗಿದು ನಿಂತ ನಗೆ ಮುಖದ ತರುಣ ಗೌಡ.

"ನಾನು ಜಾಲನೂರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದಿವಾಕರ."

ಅಧಿಕಾರಿ ಕೈ ಚಾಚಿದ. ಅದಕ್ಕೆ ಹಾರ್ದಿಕವಾಗಿ ಕೈ ಸೇರಿಸಿದ ವರದಪ್ಪ.

"ನಾನು ನಿಮ್ಮನ್ನ ನೋಡಿದೀನಿ. ಆದರೆ ಸ್ಟೇಷನ್‌ಗೆ ಬರ್‍ಲಿಲ್ಲ. ತರಲೆ ಕೆಲಸ ಯಾವುದೂ ಇರಲಿಲ್ಲ."

"ತರಲೆ ಇದ್ರೇ ಬರಬೇಕೆ? ಸ್ಟೇಷನ್‌ನಲ್ಲಿ ಒಂದು ಕಪ್ ಕಾಫಿ ಕುಡಿಯೋದಿಕ್ಕೆ ಅಡ್ಡಿ ಇಲ್ಲ."

ತರುಣನ ಮೇಲೆ ದೃಷ್ಟಿ ಹರಿಸಿದ.

ಹಂಸ ಬಿಳುಪು ದಟ್ಟಿ ಪಂಚೆ. ತಿಳಿ ನೀಲಿ ಷರಟು. ಹೆಗಲ ಮೇಲೆ ರೇಷ್ಮೆ ವಸ್ತ್ರ. ಚೆನ್ನಾಗಿ ಬಾಚಿಟ್ಟ ತಲೆ. ಕಿವಿಗಳಲ್ಲಿ ಕೆಂಪು ಹರಳುಗಳ ಹತ್ತ ಕಡಕುಗಳು.

"ಚೆನ್ನಾಗಿ ಮಾತಾಡ್ತೀರಿ, ವರದಪ್ಪ. ಈ ಕಡೆ ಹಳ್ಳಿಯೋರ್‍ಗೆಲ್ಲಾ ಮಾತಿನ ಜಾಣತನ ಅಂತ ಕಾಣತ್ತೆ. ನಿಮ್ಮ ಭಾವಮೈದ ನಾಗರಾಜಪ್ಪನೂ ಹೀಗೆ."

"ಆಗಲೇ ಭಾವಮೈದ ಮಾಡಿಬಿಟ್ರಾ? ಜನ ಏನೇನೊ ಆಡ್ತಾ ಇದಾರೆ. ನಾನು ಅವನ ಭಾವ ಆಗೋ ಸಲುವಾಗಿ ಲಕ್ಷ್ಮಣನ್ನ ಇಲ್ಲ ಅನ್ನಿಸ್ದೆ ಅನ್ನೊವರೆಗೆ ಹೋಗಿದೆ ಹಳ್ಳಿಯೋರ ಮಾತು."

"ಈಗ ನಾನು ಬಂದಿದ್ದೇಕೆ ಗೊತ್ತೆ? ನೀವೇ ನನಗೆ ಹೇಳಿಕೆ ಕೊಡಬೇಕಾದ ಕಡೇ ಮನುಷ್ಯ."

ಅವನ ಮುಖಭಾವದಲ್ಲಿ ಬದಲಾವಣೆ ತೋರಲಿಲ್ಲ.

"ನಾನು ಯಾವತ್ತಿಗೂ ಕಡೇ ಮನುಷ್ಯ. ಸೊಸೈಟಿ ಸಾಲಕ್ಕೆ ನನ್ನದೇ ಕಡೇ ಅರ್ಜಿ, ಕಾಲೇಜಿನಲ್ಲಿ ಓದುವಾಗ ಕಡೇ ಬೆಂಚು... ಬಿಳಿಗೌಡನ ಕಣ್ಣಿಗೆ ಬಿದ್ದೋರಲ್ಲಿ ಕಡೇ ಮದುವೆ ಗಂಡು."

ಇಬ್ಬರೂ ನೇರಳೆಮರದ ನೆರಳಿಗೆ ಬಂದರು.

"ಬಿಳಿಗೌಡ ನಿಮ್ಮನ್ನ ಬಹಳ ಆಸೆಯಿಂದ ಆರಿಸಿರಬೇಕಲ್ಲ."

"ನಿಜ, ಆಸ್ತಿ ಮೇಲಿನ ಆಸೆಯಿಂದಲೇ ಆರಿಸಿರೋದು. ಆ ದೊಡ್ಡ ಹುಡುಗಿ ಇನ್ನು ಎಂ.ಎ. ಓದಬೇಕಂತೆ. ಮದುವೆ ಮಾತು ಆಡಿದ್ರೆ ಏನೇನೊ ಅರ್ಥಕೊಟ್ಟು ದೊಡ್ಡ ದೊಡ್ಡ ಮಾತಾಡ್ತಾಳೆ. ಅದಕ್ಕೆ ಬಿಳಿಗೌಡರು ಕಿರಿಯೋಳಿಗೆ ಮದುವೆ ಮಾಡೋಣಾಂತ ನೋಡಿದ್ರು. ಅವಳು ಓದ್ತಾ ಇರೋದು ಬಿ.ಎ. ನಾನು ಬಿ.ಎ.ಗೆ ಕಾಲಿಟ್ಟು ಮನೆಗೆ ಬಂದೋನು. ಅವಳಿಗೆ ಹೆಚ್ಚಾಗಿ ಓದಿರೊ ಸಿಟಿ ಗಂಡು ಬೇಕು. ಅವಳ ತಂದೆಗೆ ಹೆಚ್ಚಾಗಿ ಆಸ್ತಿ ಇರೊ ನಾನು ಬೇಕು. ಈ ಮಧ್ಯೆ ಎಲ್ಲಿಂದ ಬಂದನೊ ಲಕ್ಷ್ಮಣ. ಧೂಮಕೇತು ಕಾಣಿಸಿದ ಹಾಗೆ! ಕೂರನಗೆರೆಗೆ ಬಂದ ಲಕ್ಷ್ಮಣ ಒಂದೇ ತಿಂಗಳಲ್ಲಿ ಯುವಕರನ್ನೆಲ್ಲಾ ಕೂಡಿ ಹಾಕ್ದ. ಜಾತಿ, ಆಚಾಡಿ ಪಿಚಾಡಿ, ಲಂಗು ಲಗಾಮು ಯಾವುದೂ ಇಲ್ಲದೋನು! ವಿಚಾರವಾದಿ ಯುವಕ ಸಂಸ್ಥೆ ಅಂತ ಕಟ್ಟಿದ; ಮೂಢನಂಬಿಕೆ, ಸಂಪ್ರದಾಯ, ಜಾತಿ ಇವುಗಳ ವಿರುದ್ಧ ಹೋರಾಟ ಅಂತ ಹೇಳಿ ಮದುವೆ, ಜಮೀನು, ಪಮಚಾಯತಿ ಎಲ್ಲದಕ್ಕೂ ತಲೆ ಹಾಕ್ದ. ಯುವಕರೆಲ್ಲಾ ಹುಚ್ಚೆದ್ದು ಕುಣಿದ್ರು. ಸ್ನೇಹಲತಾ ಅವನ ಚೆಲುವಿಗೆ, ಮಾತಿಗೆ ಮಾರುಹೋದ್ಲು. ತನಗೆ ಯಾವುದೋ ಆಸ್ತಿ ಬರೋದಿದೆ ಅಂತಲೂ ಹೇಳ್ತಿದ್ನಂತೆ ಲಕ್ಷ್ಮಣ... ನಾನು ಸ್ನೇಹಲತಾ ಮರೆತೆ."

"ಆದರೆ ಅವರ ಮನೆಗೆ ತಪ್ಪದೆ ಬರ್ತಾ ಇದೀರಿ."

"ಅವಳ ಮೇಲಿನ ಆಸೆಯಿಮದ ಬರ್ತಾ ಇರೋನಲ್ಲ ನಾನು. ನಮ್ಮಪ್ಪ ನಾಗೇಗೌಡರು ಆ ಬಿಳಿಗೌಡರು ಖಾಸಾ ಸ್ನೇಹಿತರು. ನಾನು ವರ ಮನೆಗೆ ಹೋಗೋದಿಕ್ಕೆ ಶುರುವಾಗಿ ಹತ್ತು ವರ್ಷ ಆಯ್ತು... ಸರ್. ವಿಪರೀತ ಬಿಸಿಲು. ನಡೀರಿ, ತೋಟಕ್ಕೆ ಹೋಗೋಣ. ನೀವು ಡ್ಯೂಟಿ ಮೇಲಿರೊವಾಗ ನಮ್ಮಿಂದ ಏನೂ ತಗೊಳೊದಿಲ್ಲಾಂತ ಬಲ್ಲೆ... ಇದು ನಮ್ಮ ತೋಟ ಅಲ್ಲ."

ಬಿಸಿಲಿನ ತಾಪಕ್ಕೆ ಬೆವರು ಒರೆಸಿತ್ತಾ "ಬೇಡ" ಎಂದು ಮೂರು ಎಳನೀರು ಕುಡಿದ ಸಬ್ ಇನ್ಸ್‌ಪೆಕ್ಟರ್.

"ಇನ್ನು ನಮ್ಮೂರಿಗೆ ಹೋಗೋಣವೆ?" ವರದಪ್ಪ ಕೇಳಿದ.

"ಯಾಕೆ?"

"ಇದೇನು ಹೀಗೆ ಕೇಳ್ತೀರಿ? ನನ್ನನ್ನೇ ಹುಡುಕ್ಕೊಂಡು ಬಂದ್ರಿ. ಹೇಳಿಕೆ ತೊಗೋಳೋದಿಕ್ಕೆ ಕಾಗದ ಬೇಡವೆ?"

"ಇದೇನು ಹೀಗೆ ಕೇಳ್ತೀರಿ? ನನ್ನನ್ನೇ ಹುಡುಕ್ಕೊಂಡು ಬಂದ್ರಿ. ಹೇಳಿಕೆ ತೊಗೋಳೋದಿಕ್ಕೆ ಕಾಗದ ಬೇಡವೆ?"

"ಹಾಗೆ ನಿಮ್ಮ ಬೆರಳು ಗುರುತುಗಳೂ ಬೇಕು."

ವರದಪ್ಪನಿಗೆ ಮೈ ಅದುರಿತು. ಉತ್ಸಾಹ ಮಾಯವಾಯಿತು. ಅದನ್ನು ತೋರ್ಪಡಿಸದೆ ನಯವಾಗಿ ಕೇಳಿದ.

"ನಾನು ಅಪರಾಧಿ ಅಂತ ಮಾಡಿಬಿಟ್ರಾ?"

"ಬೆರಳು ಗುರುತು ಅಪರಾಧಿಯಿಂದ ಮಾತ್ರ ತೊಗೊಳ್ತಾರಾ? ಬಿಳಿ ಗೌಡನ ಮನೆಯಲ್ಲಿ ಶನಿವಾರ ರಾತ್ರಿ ಇದ್ದೋರದೆಲ್ಲಾ ಬೆರಳು ಗುರುತು ಬೇಕಾಗಿದೆ... ನೀವು ಶನಿವಾರ ರಾತ್ರಿ ನನ್ನ ಭೇಟಿ ಆಗ್ಲಿಲ್ಲ."

"ಬಿಳಿಗೌಡರು ನಮ್ಮನ್ನು ಕೋಣೆಯಿಂದ ಹೊರಗಡೆ ಬರೋದಿಕ್ಕೆ ಬಿಡಲೇ ಇಲ್ಲ... ಬೆಳಿಗ್ಗೆ ನೀವು ಪ್ರಶ್ನೆ ಶುರು ಮಾಡಿದ್ದು ನೋಡ್ದೆ. ತುರ್ತು ಕೆಲಸ ಇತ್ತು. ಹೊರಟುಬಿಟ್ಟೆ."

"ಆಮೇಲೆ ನೀವು ಅಲ್ಲಿಗೆ ಬಂದೇ ಇಲ್ಲ."

"ಸಾವು ಉಂಟಾಗಿರೊ ಮನೆಯಲ್ಲಿ ನ್ನದೇನು ಕೆಲಸ? ಸ್ನೇಹಲತಾಗಂತೂ ಶೋಕಾಚರಣೆ."

"ಈಗ ಲಕ್ಷ್ಮಣ ಇಲ್ಲ. ಮುಂದೆ ಆಕೆ ನಿಮ್ಮನ್ನು ಮದುವೆ ಆಗೋದಾದ್ರೆ ನೀವು ಒಪ್ತೀರಾ?"

"ಹಿಂದೆ ಮದುವೆ ವಿಚಾರ ಬಂದಾಗಲೇ ಪೂರ್ತಿ ಒಪ್ಪಿಗೆ ಕೊಟ್ಟಿರಲಿಲ್ಲ. ಮುಂದಿನದು ಯಾಕೆ ಈಗ?"

"ಯಾಕೆ ಒಪ್ಪಿರಲಿಲ್ಲ?"

"ಕಾಲೇಜಿನಲ್ಲಿ ಓದಿದ ಹಳ್ಳಿ ಹೆಣ್ಣು ಅಂದ್ರೆ ನನಗೆ ಯಾಕೊ ಅಷ್ಟಕ್ಕಷ್ಟೆ. ನನ್ನ ತರ ಇರೊ ಗೌಡನ್ನ ಅವಳು ಮರ್ಯಾದೆಯಿಂದ ಕಾಣೋದೆಲ್ಲಿ? ಹಳ್ಳಿಯಲ್ಲಿ ಹುಟ್ಟಿದೋಳಾದ್ರು ಹಳ್ಳಿಗೆ ಒಗ್ಗಿದೋಳಲ್ಲ. ನಮ್ಮ ಮನೆಗೆ ಹೊಂದಿಕೊಳ್ಳೊ ವಿಷಯದಲ್ಲಿ ನನಗೆ ಸಂದೇಹ. ನಮ್ಮ ತಂದೆ ಬಲವಂತಕ್ಕೆ "ಹುಂ" ಅನ್ನಬೇಕಿತ್ತು. ಮಧ್ಯೆ ಲಕ್ಷ್ಮಣನ

ಧಾಳಿ. ನಾನು ಸ್ವಲ್ಪ ಹೆಚ್ಚು ಕಡಿಮೆ ಅವಳನ್ನು ಮರೆತಿದೀನಿ. ನಮ್ಮಪ್ಪ, ಅವಳಪ್ಪ ಈ ಸಂಬಂಧಕ್ಕೆ ತಯಾರಿದಾರೆ. ಲಕ್ಷ್ಮಣನಿಗೆ ಅಷ್ಟೊಂದು ಸೋತಿದ್ದ ಹುಡುಗೀನ ಅವನು ಸತ್ತ ಮೇಲೆ ನಾನು ಮದುವೆ ಆಗೋದ್ರಲ್ಲಿ ಏನು ಸ್ವಾರಸ್ಯ ಇದೆ... ಸಾಮಾನ್ಯ ಹಳ್ಳಿ ಹೆಣ್ಣು ಸಾಕು ನನಗೆ."

ನಗೆ ಮುಖ ತೋರಿದ ಅಧಿಕಾರಿ ತನ್ನ ವಿಷಯಕ್ಕೆ ನೇರವಾಗಿ ಕಾಲಿಟ್ಟ.

"ಶನಿವಾರ ರಾತ್ರಿ ಯಾರ ಕೋಣೇಲಿದ್ರಿ ನೀವು?"

"ಅದೇ ನೀವು ಹೇಳಿದ ಬಾವಿ ಭಾವಮೈದ ನಾಗರಾಜಪ್ಪನ ಕೋಣೆಯಲ್ಲಿ."

"ಅಷ್ಟು ಹೊತ್ತಿನವರೆಗೆ ಆ ಮನೆಯಲ್ಲಿ ಉಳಿಯೋದಿಕ್ಕೆ ಕಾರಣ?"

"ಲಕ್ಷ್ಮಣ ದೆವ್ವದ ಕೋಣೆಗೆ ಹೋಗ್ತೀನಿ ಅಂದಿದ್ದು ಬಿಳಿಗೌಡರಿಗೆ ತಲೆ ಕೆಟ್ಟಿತ್ತು. ಅವನಿಗೆ ಬುದ್ಧಿ ಹೇಳೋದಿಕ್ಕೆ, ಅವನ್ನ ತಡೆಯೋದಿಕ್ಕೆ ನನಗೂ ಬರಲಿಕ್ಕೆ ಹೇಳಿದ್ರು. ನಾನು ಅವನಿಗೆ ಆ ಹುಚ್ಚು ಸಾಹಸ ಬೇಡಾಂತ ತಡೆಯೊ ಪ್ರಯತ್ನ ಮಾಡ್ದೆ. ಸ್ನೇಹಲತಾನ ನಾನು ಮದುವೆ ಆಗಲ್ಲ, ನೀನೇ ಮದುವೆ ಆಗು ಅಂತಲೂ ಹೇಳಿದೆ. ಕಂದಾಚಾರದ ಬಿಳಿಗೌಡನ್ನ ಒಪ್ಪಿಸಬೇಕಾಗಿತ್ತು. ಅವನು ಚೆನ್ನಮ್ಮನ ಒಪ್ಪಿಗೆ, ಆಶೀರ್ವಾದ ತರ್ತೀನಿ ಅಂತ ಹೋದ."

"ಎಷ್ಟು ಹೊತ್ತಿಗೆ?"

"ಹನ್ನೊಮದೂಕಾಲು ಇರಬಹುದೇನೋ."

"ಜೊತೇಲಿ ಏನೇನು ತೊಗೊಂಡು ಹೋದ?"

"ಅದು ಗೊತ್ತುಲ್ಲ. ನಾನು ಕೋಣೆ ಸೇರ್ದೆ. ಹೊರಗೆ ಇಣಕೋದಿಕ್ಕೂ ಬಿಡಲಿಲ್ಲ ಬಿಳಿಗೌಡರು."

"ಆಮೇಲೆ ಏನಾಯ್ತು?"

"ಎಚ್ಚರವಾಗಿದ್ದೆ. ಹನ್ನೊಂದೂವರೆ ಹೊತ್ನಲ್ಲಿ ಯಾರೋ ಮೆಟ್ಟಿಲ ಮೇಲೆ ಚಲಿಸಿದ ಹಾಗಾಯಿತು...."

"ಆ ಶಬ್ದ ನಿಮ್ಮ ಕೋಣೆವರೆಗೆ ಕೇಳ್ತೆ?"

"ನಿಶ್ಶಬ್ದವಾಗಿತ್ತು ರಾತ್ರಿ. ಶಬ್ದಕ್ಕೇ ಕಾಯ್ತಾ ಇದ್ದೋರು ನಾವು."

"ಶಬ್ದ ಮಾಡಿದ ವ್ಯಕ್ತಿ ಯಾರಿರಬಹುದು?"

"ಹೇಳಲಾರೆ, ಅಲ್ಲಿಗೆ ಏನೂ ಕಾಣೋ ಹಾಗಿರ್ಲಿಲ್ಲ. ಹನ್ನೊಂದು ಮುಕ್ಕಾಲರ ಹೊತ್ನಲ್ಲಿ ಕೋಣೆಯಿಂದ ಯಾರೊ ಮತ್ತೆ ಹೋದ ಹಾಗೆ. ಆ ಸಪ್ಪಳ ಸ್ವಲ್ಪ ಜೋರಾಗಿತ್ತು. ಕೋಣೆಯಿಮದ ಅಸ್ಪಷ್ಟ ಮಾತುಗಳು. ಹನ್ನೊಂದೂ ಐವತ್ತೈದರಲ್ಲಿ ಒಂದು ಕೂಗು ಕೇಳ್ತು... ಆಮೇಲೆ ಸ್ನೇಹಲತಾ ಅಲ್ಲಿಗೆ ಓಡಿ ಕೋಣೆ ಬಾಗಿಲು ತಟ್ಟಿದ್ಲು ಅಂತ ಅವಳ ಅಕ್ಕ ಹೇಳ್ತಾಳೆ. ಅದು ನಾನು ನೊಡ್ಲಿಲ್ಲ."

“ನೀವು ಹೇಳ್ತಾ ಇರೊ ಕಾಲ, ವಿಷಯ ಎಲ್ಲಾ ಸರಿಯಾಗಿವೆ. ಮೊದಲು ನಿಮ್ಮ ಹೇಳಿಕೆ ತೊಗೊಂಡಿದ್ರೆ ಎಷ್ಟೋ ಕೆಲಸ ಕಡಿಮೆ ಆಗ್ತಿತ್ತು... ಒಬ್ಬೊಬ್ಬರು ಒಂದೊಂದು ರೀತಿ ಹೇಳಿದ್ದು. ಒಂದೊಂದು ವಿಷಯ ಮುಚ್ಚಿಟ್ರು. ಕಥೆ ಒಂದು ರೂಪಕ್ಕೆ ತರೋದ್ರಲ್ಲಿ ನನಗೆ ಹೆಣ ಬಿದ್ಹೋಯ್ತು – ವರದಪ್ಪ. ಚೆನ್ನಮ್ಮನ ದೆವ್ವ ಲಕ್ಷ್ಮಣನ್ನ ಕೊಲ್ತು ಅಂದ್ರೆ ನಂಬ್ತೀರಾ?”

“ಪ್ರಶ್ನೆ ಯಾಕೆ ಈಗ? ಅದು ಕೊಲೆ ಅಂತ ತೀರ್ಮಾನ ಮಾಡಿದ್ದು ಎಲ್ಲರಿಗೂ ತಿಳಿದಿದೆ.”

“ನಿಮ್ಮ ಅಭಿಪ್ರಯ ಹೇಳಿ.”

“ದೆವ್ವದಲ್ಲಿ ನಂಬಿಕೆ ಇಲ್ಲಾಂದ್ರೆ ದೆವ್ವದ ಚೇಷ್ಟೆನ ನೋಡಿರೊ ನೂರಾರು ಹಳ್ಳಿಯೋರ ಮಾತಿಗೆ ಏನು ಹೇಳೋದು. ನಂಬಿಕೆ ಇದೆ ಅಂದ್ರೆ ನನ್ನ ಪಕ್ಕಾ ಗಂವಾರ ಅಂತೀರಿ.”

“ಲಕ್ಷ್ಮಣ ಕೊಲೆ ಆಗಿದಾನೇಂತ ನಮಗೆ ರುಜುವಾತುಗಳು ಸಿಕ್ಕಿವೆ.”

“ಪೊಲೀಸ್‌ಗೆ ದೆವ್ವದಲ್ಲಿ ನಂಬಿಕೆ ಇಲ್ಲ. ರುಜುವಾತು ಹುಡುಕ್ತಾರೆ. ರುಜುವಾತು ಸಿಗದಿದ್ರೆ ಸೃಷ್ಟಿ ಮಾಡ್ತಾರೆ.... ಈಗ ಈ ಪ್ರಕರಣದಲ್ಲಿ ನಾನೊಬ್ಬ ಸಂಶಯಿ ಆಗಿದ್ರೂ ಹೆಚ್ಚಲ್ಲ.”

ವರದಪ್ಪ ನಿರ್ವಿಕಾರವಾಗಿ ಹೇಳಿದ.

“ಧೈರ್ಯವಾಗಿ, ನೇರವಾಗಿ ಮಾತಾಡ್ತಾ ಇದೀರಿ. ನೀವೇ ನಿಜವಾದ ಅಪರಾಧಿ ಆಗಿರೋ ಪಕ್ಷಕ್ಕೆ ನನ್ನ ಕೆಲಸ ಸಲೀಸು ಮಾಡಿಕೊಡಿ.”

“ನಿಜ ಹೇಳಿ, ಈಗ ನನ್ನ ಅರೆಸ್ಟ್ ಮಾಡಿ ತೊಗೊಂಡು ಹೋಗೋಕೆ ಬಂದಿದೀರಾ?”

ಉತ್ತರಕ್ಕಾಗಿ ಉಸಿರು ಬಿಗಿಹಿಡಿದ.

“ಖಂಡಿತ ಇಲ್ಲ.”

“ಪೊಲೀಸರ ಬಾಣಕ್ಕೆ ನಾನು ದೊಡ್ಡದಾಗಿ ಕಾಣ್ತಾ ಇರೊ ಗುರಿ. ನಾನು ಸ್ನೇಹಲತಾನ ಮದುವೆ ಆಗೊಸಂಭವ ಇದ್ದುದರಿಂದ ಈ ಸಂಶಯ?”

“ಸಂಶಯ ಏರ್ತಾ ಇದೆ. ಶನಿವಾರ ರಾತ್ರಿ ಸಂಬಂಧವಿಲ್ಲದ ಮನೆಗೆ ಬಂದು ರಾತ್ರಿಯೆಲ್ಲಾ ಅಲ್ಲಿ ಉಳಿದಿದೀರಿ. ನಿಮ್ಮ ಪ್ರತಿಸ್ಪರ್ಧಿ ಸಾವು ಕಾಣೋದಿಕ್ಕೆ ಹೋಗ್ತಿದಾನೆ ಅನ್ನೋದು ತಿಳಿದಿದ್ದೂ ಅದನ್ನ ತಪ್ಪಿಸಿಲ್ಲ. ದೆವ್ವದಲ್ಲಿ ನಂಬಿಕೆ ಇದೇಂತ ಹೆಚ್ಚು ಕಡಿಮೆ ಅಭಿಪ್ರಯ ಪಡ್ತೀರಿ... ಶನಿವಾರದ ನಂತರ ಆ ಮನೆ ಕಡೆ ಸುಳಿದಿಲ್ಲ ನೀವು.”

“ನಿಮ್ಮ ಈ ಮಾತಿಗೆಲ್ಲಾ ಆಗಲೇ ಸಮಜಾಯಿಸಿ ಕೊಟ್ಟಿದೀನಿ.”

“ನಮ್ಮ ಸಾಹೇಬರಿಗೆ ನಿಮ್ಮನ್ನ ಪ್ರಶ್ನೆ ಮಾಡಬೇಕೂಂತ.”

"ಶನಿಕಾಟ! ನೀವು ನೂರು ಪ್ರಶ್ನೆ ಹಾಕಿ. ಸಂತೋಷದಿಂದ ಉತ್ತರ ಕೊಡ್ತೀನಿ. ನಿಮ್ಮ ಸಾಹೇಬರ ವಿಷಯ ಬೇಡ. ಅವರಿಗೆ ಪೋಲೀಸ್ ಕೆಲಸ ಗೊತ್ತಿಲ್ಲಾಂತ ಎಲ್ಲರೂ ಹೇಳ್ತಾರೆ. ಇಂಗ್ಲಿಷ್ ಬರೋದಿಲ್ಲ. ಕನ್ನಡದಲ್ಲಿ ಮಾತಾಡಬೇಡಿ ಅಂತ ನುರು ಜನ ಹೇಳಿದಾರೆ. ಅದೇನು ಸಿಟ್ಟೊ ಕನ್ನಡದ ಮೇಲೆ! ಕನ್ನಡಾನ ಮೊಂಡು ಚಾಕು ಹಾಕಿ ಕುಯ್ತಾರೆ... ಸಾರ್, ಅವರು ಇನ್ಸ್‌ಪೆಕ್ಟರಾಗಿರೋದೇ ಹೆಚ್ಚು. ಕೊನೆವರೆಗೆ ಅವರು ಇನ್ಸ್‌ಪೆಕ್ಟರಾಗೇ ಉಳಿಯೋದು. ಶುದ್ಧ ಅಪ್ರಯೋಜಕ ಅಂತ ಬಾಣಂದೂರು ಸ್ಟೇಷನ್‌ಗೆ ಹಾಕಿದಾರೆ."

"ವರದಪ್ಪ, ಇದು ಮಿತಿ ಮೀರಿದ ಮಾತು."

"ಇದು ನನ್ನ ಮಾತಲ್ಲ. ಈ ಸರ್ಕಲ್‌ಗೆ ಸೇರಿರೊ ಹಳ್ಳಿಯೋರೆಲ್ಲರ ಮಾತು....ಬಿಸಿಲು ಜಾಸ್ತಿ ಆಗ್ತಿದೆ. ನಿಮ್ಮ ಕೆಲಸಕ್ಕೆ ಅಡ್ಡಿ ಬೇಡ. ಬನ್ನಿ, ನಮ್ಮೂರಿಗೆ ಹೋಗೋಣ. ಎರಡೇ ಮೈಲಿ."

ವರದಪ್ಪ ತನ್ನ ವಾಹನ ತೋಟದಲ್ಲೇ ಬಿಟ್ಟು ಅಧಿಕಾರಿಯ ವಾಹನದ ಹಿಂದೆ ಕುಳಿತ. ದಾರಿಯಲ್ಲಿ ಮೆಲ್ಲನೆ ಸಾಗುವಾಗ ಸಬ್‌ಇನ್ಸ್‌ಪೆಕ್ಟರ್ ಕೇಳಿದ.

"ಅಡಿಗೆ ಆಳು ಭಗವಂತ ಹೇಗೆ?"

"ಬಿಳಿಗೌಡರ ಮನೆ ಪಾಲಿಗೆ ನಿಜವಾದ ಭಗವಂತ ಅವನು. ಒಂದು ದಿನಕ್ಕೆ ಅವನಿಲ್ಲ ಅಂದ್ರೆ ಮನೆ ಗತಿ ಮುಗೀತು. ಬಿಳಿಗೌಡರ ಹೆಂಡತಿ ಸತ್ತ ಮೇಲೆ ಅಡಿಗೆಯೋನು ಬೇಕಿತ್ತು. ಕೇರಳದಿಂದ ಬಂದಿದ್ದ ಈ ನಾಯರ್ ಮನೆಗೆ ಸೇರಿಬಿಟ್ಟ. ಅವನ ನಡತೆ ವಿಷಯದಲ್ಲಿ ಈತನಕ ಯಾವ ದೂರೂ ಇಲ್ಲ. ಮನೇನ ತೂಗಿಸಿಕೊಂಡು ಹೋಗ್ತಿದಾನೆ. ಹೆಣ್ಣು ದಿಕ್ಕು ಇಲ್ಲದ ಮನೆ ಅಂದ್ರೆ ಅದು ಮನೆ ಅಲ್ಲ, ಸಾರ್."

"ಹೆಣ್ಣುಗಳು ಇವೆಯಲ್ಲಾ ಆ ಮನೇಲಿ."

"ಆ ಎರಡು ಹೆಣ್ಣು ಮಕ್ಕಳ ವಿಷಯ ಅಲ್ಲ. ಮನೆಗೆ ಗೌಡಿತಿ ಇರ್ಬೇಕು."

"ನಿಜ, ಗೌಡಿತಿ ಇದ್ದಿದ್ರೆ ಈ ಹಗರಣಕ್ಕೆ ಅವಕಾಶವೇ ಇರ್ತಿರ್ಲಿಲ್ಲ... ಲಕ್ಷ್ಮಣ ಕತ್ತಲೆ ಕೋಣೆಗೆ ಒಂದು ಆರಿದ ಲಾಂದ್ರ ತೊಗೊಂಡು ಹೋದ. ಅದು ಅಲ್ಲಿಂದ ನಾಪತ್ತೆ ಆಯ್ತು..."

ಎದುರು ಗಾಳಿಯಲ್ಲಿ ಮಾತು ಸ್ಪಷ್ಟವಾಗಿ ಕೇಳಲಿಲ್ಲ... ಎಸ್.ಐ. ತನ್ನ ಮಾತನ್ನ ಮತ್ತೆ ಹೇಳಿ ವಾಹನದ ವೇಗ ಇನ್ನಷ್ಟು ಇಳಿಸಿದ.

"ಆರಿದ ಲಾಂದ್ರ! ಕತ್ತಲೆ ಕೋಣೆಗೆ? ಕತ್ತಲೆ ಕೋಣೆಗೆ ಹೋಗೋನು ಹಚ್ಚಿದ ಲಾಂದ್ರ ತೊಗೊಂಡು ಹೋಗ್ಬೇಕು ಅನ್ನೋದನ್ನ ಮಗುವೂ ಹೇಳತ್ತೆ. ಆರಿದ ಲಾಂದ್ರವೇ ಒಯ್ದಿದ್ರೆ ಕೋಣೆಯಲ್ಲಿ ಅದನ್ನ ಹಚ್ಚಿ ಕೂಡಬೇಕಾಗಿತ್ತು."

"ಲಾಂದ್ರದಲ್ಲಿ ಎಣ್ಣೆಯೂ ಇರ್ಲಿಲ್ಲ...."

"ಅಲ್ಲಿಗೆ ಲಾಂದ್ರದ ಫೈಲ್ ಕ್ಲೋಸ್ ಮಾಡಿ."

ದಿವಾಕರನಿಗೆ ನಗು ಬಂತು.

"ಲಾಂದ್ರಗಳನ್ನ ಕೋಟೆಗೌಡ ತಂದ್ರಂತೆ."

"ಸರಿ, ಇನ್ನು ನನ್ನ ಆ ಭಾವಿ ಚಿಕ್ಕಮಾವ ಹೇಗೇಂತ ಪ್ರಶ್ನೆ ಹಾಕ್ತೀರಿ... ಕೋಟೆಗೌಡ ಬುದ್ಧಿವಂತರು. ವಿಚಿತ್ರ ಬುದ್ಧಿ! ವಕ್ರವಾಗಿರೋದೆಲ್ಲಾ ಅವರಿಗೆ ಸ್ವಾರಸ್ಯದ, ಅಪರೂಪದ ವಸ್ತುಗಳು, ಮಿಲಿಟ್ರಿ ಮನುಷ್ಯ ಅವರು ದೇಶ ಸುತ್ತಿದೋರು. ಲಾಂದ್ರಗಳನ್ನ ಎಲ್ಲಿಂದಲೂ ತಂದ್ರು. ಚೆನ್ನಾಗಿವೆ ಅವು."

"ಸ್ನೇಹಲತಾ ಕೋಣೆಯಲ್ಲಿ ಒಂದು ಟೇಪ್‌ರೆಕಾರ್ಡರ್ ನೋಡ್ದೆ.... ಕಂದು ಬಣ್ಣದ್ದು."

ವರದಪ್ಪ ತುಸು ಮೌನಗೊಂಡ.

"ಏನ್ಸಾರ್, ನೀವು ಆ ಮನೆಯಲ್ಲಿ ನೋಡದೆ ಉಳಿದಿರೊ ವಸ್ತು ಯಾವುದು?... ಆ ಟೇಪ್‌ರೆಕಾರ್ಡರ್ ನನ್ನದೇ."

"ನಿಮ್ಮದೆ? ನಿಮ್ಮದೂಂತ ಒಂದು ಮಾತು ಬರ್ಲ್ಲಿಲ್ಲ ಅಲ್ಲಿ."

"ನೀವು ಕೇಳ್ಲಿಲ್ಲ. ಅಲ್ಲಿ ಯಾರೂ ಹೇಳ್ಲಿಲ್ಲ. ಅದು ಯಾವ ದೊಡ್ಡ ರಹಸ್ಯದ ವಸ್ತು? ನಾನು ಅದನ್ನ ಸ್ನೇಹಲತಾಗೆ ಕೊಟ್ಟಿದ್ದೆ. ಅದರಲ್ಲಿ ಹಾಡುಗಳನ್ನ ರೆಕಾರ್ಡ್ ಮಾಡ್ತಿದ್ಲು."

"ನೀವು, ಸ್ನೇಹಲತಾ ಇಬ್ರೂ ಯಾವುದಾದ್ರು ಸಂಭಾಷಣೆ ರೆಕಾಡ್ ಮಾಡಿದ್ರಾ ಅದರಲ್ಲಿ?"

"ಬೇಕಾದಷ್ಟು... ಎಲ್ಲಾ ಆ ಲಕ್ಷ್ಮಣ ಬರೋದಿಕ್ಕೆ ಮೊದಲು."

"ಒಂದು ಹೇಳಿ ಉದಾಹರಣೆಗೆ."

"ಯಾವುದೂಂತ ಹೇಳ್ಲಿ? ಕುವೆಂಪು ನಾಟಕದ ಒಂದು ದೃಶ್ಯ..."

"ದೆವ್ವದ ಕೋಣೆ ಮಾತು ಯಾವುದಾದ್ರು..."

ಬೇಸರಗೊಂಡಿದ್ದ ವರದಪ್ಪ.

"ನೋಡಿ, ಸ್ವಾಮಿ. ದೆವ್ವದ ಕೋಣೇದೊ, ಪ್ರೇಮಕಥೆಯೊ, ಸಿನಿಮಾ ಸಂಭಾಷಣೆಯೊ ಏನೇನೊ ರೆಕಾರ್ಡ್ ಮಾಡಿದೀವಿ. ಇಂತದೇ ಅಂತ ಹೇಗೆ ಹೇಳೊದು?"

"ಈಚೆಗೆ ಅದನ್ನ ಎಲ್ಲಿಗಾದ್ರು ಒಯ್ದಿದ್ರಾ?"

"ಎಮಟು ಹತ್ತು ದಿನದ ಮೊದಲು ಊರಿಗೆ ತಂದಿದ್ದೆ. ಮತ್ತೆ ಅವಳಿಗೇ ಕೊಟ್ಟೆ."

"ನಾನು ಸಣ್ಣ ವಿಷಯಕ್ಕೂ ಬಹಳ ಕೇಳ್ತೀನಿ, ಬಹಳ ನೋಡ್ತೀನಿ ಅಂತಾರೆ ನಮ್ಮ ಸಾಹೇಬರು."

"ಆ ಚೌಪಟ್ ರಾಜನ ಸಮಾಚಾರ ಮತ್ತೆ ಯಾಕೆ ಎತ್ತೀರಿ. ಈ ಮಾತು ನಮ್ಮ ಬಿಳಿಗೌಡರು ಹೇಳಿದ್ರು."

"ನೀವು, ಬಿಳಿಗೌಡರು ಒಟ್ಟಾಗಿ ಯಾವುದಾದ್ರೂ ವ್ಯವಹಾರ ಮಾಡ್ತಿದೀರಾ?"

"ಬಿಳಿಗೌಡರು ವಿಪರೀತ ಸಂಪ್ರದಾಯಸ್ಥರು. ಪ್ರತಿಯೊಂದಕ್ಕೂ ಕಂದಾಚಾರ ಮೀನಮೇಷ. ಅವರಿಗೆ ವ್ಯವಹಾರಗಳೇ ಬೇಡ. ನಮ್ಮ ತಂದೆ ನಾಗೇಗೌಡರು ಕೂರನಗೆರೆ ಹತ್ರ ಜಮೀನಿನಲ್ಲಿ ವಜ್ರದ ಕಲ್ಲು ತೊಡಿಸೋ ಕಂಟ್ರಾಕ್ಟ್ ತೊಗೊಂಡಿದಾರೆ. ಐದು ವರ್ಷದಿಂದ ನಡೆಸ್ತಿದಾರೆ...."

"ವಜ್ರದ ಕಲ್ಲು?"

"ಅದು ವಜ್ರ ಅಲ್ಲ. ಕಂದು ಬಣ್ಣದ ಕಲ್ಲುಗಳು. ಆ ಜಮೀನಿನಲ್ಲಿ ಅವು ಸಿಕ್ಕಿವೆ. ಕಲ್ಲುಗಳನ್ನ ಸಂಗ್ರಹಿಸಿ ಬೊಂಬಾಯಿಗೆ ಕಳಿಸಿ ಕೊಡ್ತಾರೆ, ಅಲ್ಲಿ ಅವಕ್ಕೆ ಸಾಣೆ ಹಿಡಿದು ಪಾಲಿಷ್ ಮಾಡಿ ಎಲ್ಲೆಲ್ಲಿಗೊ ಹಾಕ್ತಾರೆ... ಆ ಜಮೀನಿನ ಪಕ್ಕದಲ್ಲೇ ಬಿಳಿಗೌಡರ ಜಮೀನು. ಅದರಲ್ಲೂ ಈ ವಜ್ರದ ಕಲ್ಲುಗಳು ತುಂಬಿವೆ. ಆದರೆ ಬಿಳಿಗೌಡರು ಕಗ್ಗಲ್ಲು! ಒಬ್ಬರ ಮಾತೂ ಕೇಳಲ್ಲ. ಕೋಟೇಗೌಡರು, ನಾನು ಸೇರಿ ಅಲ್ಲಿ ತೋಡೋ ಕೆಲಸಕ್ಕೆ ಇಳಿಯೋಣಾಂತ. ಆಸೆ ಯಾವಾಗ ಕೈಗೂಡುತ್ತೊ ಕಾಣೆ. ಸ್ನೇಹಲತಾ ಮನಸ್ಸು ಮಾಡಿದ್ದೆ ಒಂದು ಚಾನ್ಸ್. ಬಿಳಿಗೌಡರು ಕಿರಿ ಮಗಳ ಮಾತಿಗೆ ಬೆಲೆ ಕೊಡ್ತಾರೆ ಅಂತ ಆ ಮನೆ ಹೇಳೋದು ಸಾರ್..."

"ಏನು?"

"ನೀವೊಬ್ಬರೇ ಹೀಗೆ ಹಳ್ಳಿ ಕಡೆ ಬಂದ್ರೆ ಗಮ್ಮತ್ತಿರೋದಿಲ್ಲ. ನಿಮ್ಮ ಹಿಂದೆ ದಫೇದಾರ್ರೂ ಇರಬೇಕು."

"ದಫೇದಾರ ನಂದೀಶ ರಜದ ಮೇಲೆ ಹೋಗಿದಾನೆ."

ಮಾತು ನಿಮತಿತು. ಎರಡು ಫರ್ಲಾಂಗ್ ದೂರದಲ್ಲಿ ಹುಲ್ಲುಕೆರೆ ಕಾಣಿಸಿತು.

10

ಮೊನಚು ತುದಿಯ ಕ್ಯಾಪ್ ತೆಗೆದು ಹಜಾರದಲ್ಲಿ ದಿವಾಕರ ಕಾಣಿಸಿಕೊಮಡೊಡನೆ ಸ್ನೇಹಲತಾ ಅವನಿಗೆ ಎದುರಾಗಿ ಬಂದು ನಿಂತಳು.

"ನನ್ನ ಟೇಪ್ ರೆಕಾರ್ಡರ್ ಕೊಡಿ ಸಾರ್. ನನ್ನ ಕೇಳದೆ, ನಾನಿಲ್ಲದೆ ಇದ್ದಾಗ ಕೋಣೆಯಿಂದ ತೊಗೊಂಡು ಹೋಗಿದೀರಿ."

ಬಿರುಸಾಗಿ ಕೇಳಿದಳು. ದಿವಾಕರ ನಸುನಗೆ ತೋರಿದ.

"ಕೊಡ್ತೀನಿ. ಯಾವುದೊ ಭಾಷಣೆ ರೆಕಾಡ್ ಮಾಡಬೇಕಿತ್ತು. ತೊಗೊಂಡು ಹೋದೆ. ಅದರ ವಿಷಯಕ್ಕೆ ಕ್ಷಮೆ ಹೇಳೋಣಾಂತ ಬಂದೆ. ದಯವಿಟ್ಟು ನಿಮ್ಮ ಕೋಣೆಗೆ ಬರ್ತೀರಾ?"

ಸ್ನೇಹಲತಾ ಹಿಂಜರಿಯುವಂತೆ ಕಂಡಳ. ಪ್ರತಿ ನುಡಿಯದೆ ತನ್ನ ಕೋಣೆಯ ಕಡೆಗೆ ಸರಿದಳು. ದಿವಾಕರ ಅವಳನ್ನ ಹಿಮಬಾಲಿಸಿ ಬಂದ. ಕೋನೆಯಲ್ಲಿ ಪುಷ್ಪಲತಾ ಇಂಗ್ಲಿಷ್ ವಾರಪತ್ರಿಕೆ ಹಿಡಿದು ಕುಳಿತಿದ್ದಳು. ತನ್ನ ಹಿಂದೆ ಮೆಲ್ಲನೆ ಬಾಗಿಲು ಮುಚ್ಚಿದ.

"ನಿಮ್ಮಿಬ್ಬರ ಸಹಕಾರ ಬೇಕು. ನಿಮಗೆ ತೊಂದರೆ ಕೊಡ್ತಾ ಇರ್ಲಿಲ್ಲ. ಆದರೆ ಇದು ಕೊಲೆ ಕೇಸ್."

ಪುಷ್ಪಲತಾಗೆ ಅದು ಕೊಲೆ ಪ್ರಕರಣವೆಂದು ತಿಳಿದಾಗಿತ್ತು. ಪುಸ್ತಕ ಮಡಿಸಿ ಮೇಜಿನ ಮೇಲೆ ಹಾಕಿ ಅಧಿಕಾರಿಗೆ ಕುಳಿತುಕೊಳ್ಳಲು ಹೇಳಿದಳು.

"ಇದು ಕೊಲೆ ಕೇಸ್ ಅನ್ನಿದ್ದು ನಮ್ಮ ದುರಾದೃಷ್ಟ. ಲಕ್ಷ್ಮಣ ನಮಗೆ ಯಾವ ತರದಲ್ಲೂ ಸಂಬಂಧಪಡದ ವ್ಯಕ್ತಿ. ಇಲ್ಲಿ ಬಂದು ಕೊಲೆ ಆಗಿದ್ದು ನಮಗೆಲ್ಲಾ ದೊಡ್ಡ ಚಿಂತೆ ಆಗಿದೆ. ಕೊಲೆ ಯಾರು ಮಾಡಿದ್ರೂಂತ ತಿಳೀತೆ?"

ಅಕ್ಕ, ತಂಗಿ ಒಬ್ಬರನ್ನೊಬ್ಬರು ನೋಡಿದರು.

"ನಿಮ್ಮ ಸಹಾಯ ಇರೋವಾಗ ಕೊಲೆಗಾರನ್ನ ಹಿಡಿಯೋದು ಕಷ್ಟವಲ್ಲ."

"ನಮ್ಮ ಸಹಾಯ ಅಷ್ಟು ದೊಡ್ಡದೆ? ನನಗೆ ತಿಳಿದದ್ದೆಲ್ಲಾ ಅವತ್ತೇ ನಿಮಗೆ ಹೇಳಿದೆ... ಲಕ್ಷ್ಮಣನ ವಿಷಯ ಮೊದಲು ಚೆನ್ನಾಗಿ ತಿಳಿದಿರಲಿಲ್ಲ. ಅವನಿಗೆ ಆಸ್ತಿ ಬರುತ್ತೇಂತ ಹೇಳ್ತಿದ್ದ. ಅದು ಸುಳ್ಳು. ಯಾವುದೊ ಕೆಟ್ಟ ಗಳಿಗೆ. ಅವನ ಸ್ನೇಹ, ಮಾತು ಅವನ್ನ ಈ ಮನೆಗೆ ಪರಿಚಯ ಮಾಡಿಸ್ತು. ನನ್ನ ತಂಗಿ ಮೇಲೆ ಅದರ ಪರಿಣಾಮ ಜಾಸ್ತು ಆಯ್ತು ಅನ್ನೊಂದೊಂದೇ ಬೇಸರದ ವಿಷಯ. ಅವಳೂ ಈ ವಿಷಯ ಮರೆಯೋದಿಕ್ಕೆ ಪ್ರಯತ್ನ ಪಡ್ತಿದಾಳೆ."

"ಶನಿವಾರ ರಾತ್ರಿ ಕೂಗು ಕೇಳೋದಿಕ್ಕೆ ಮುಂಚೆ... ಏನು ಪ್ರಾರಂಭ ಆಯ್ತಲ್ಲ ಪ್ರಾರಬ್ಧ ಅನ್ನಬೇಡಿ. ಕೇಳಿದ್ದೇ ಕೇಳಿ, ಹೇಳಿದ್ದೇ ಹೇಳ್ಸಿ, ಎಲ್ಲರನ್ನೂ ಬೇಜಾರು ಪಡಿಸೊ ಹುದ್ದೆ ನಮ್ಮದು... ಆ ಕೋಣೆಯಿಂದ ಇಬ್ಬರು ಮಾತಾಡಿದ್ದು ಕೇಳ್ತು ಅಂದ್ರಿ. ನೀವು ಹಜಾರಕ್ಕೆ ಬಂದು ಹಿಂದಕ್ಕೆ ಹೋದಾಗ ನಿಮ್ಮ ತಂಗಿ ಕೋಣೆಯಲ್ಲಿ ಇರಲಿಲ್ಲ. ಹನ್ನೊಂದೂ ಐವತ್ತೈದಕ್ಕೆ ಕೂಗು ಕೇಳಿದ್ರಿ. ದೆವ್ವದ ಕೋಣೆಗೆ ಧಾವಿಸಿದ್ರಿ. ನಿಮ್ಮ ತಂಗಿ ಕೋಣೆ ಬಾಗಿಲು ತಟ್ತಾ ಇದ್ರು. ಅವರನ್ನ ಕರಕೊಂಡು ಬಂದ್ರಿ... ಇಷ್ಟು ವಿಷಯ ತಿಳಿಸಿ ಈ ಕೊಲೆ ಪ್ರಕರಣಕ್ಕೆ ಬ ಎಳಕು ಹಾಕಿದ್ದಕ್ಕೆ ವಂದನೆಗಳು. ನಿಮ್ಮ ಹೇಳಿಕೆಯಿಂದಲೇ ಮುಂದುವರಿಯೋದಿಕ್ಕೆ ಸಾಧ್ಯ ಆಗಿದ್ದು... ಈಗ ಹೇಳಿ. ಆ ದೆವ್ವದ ಕೋಣೆಯಲ್ಲಿ ಲಕ್ಷ್ಮಣನ ಜೊತೆಗೆ ಮಾತಾಡ್ತಿದ್ದೋರು ನೀವೊ, ನಿಮ್ಮ ತಂಗಿಯೊ?"

ಬಾಣದಂತೆ ನಾಟಿದ ಪ್ರಶ್ನೆ! ಅಕ್ಕ, ತಂಗಿಯರಿಗೆ ಎರಡು ಕ್ಷಣ ಗರ ಬಡಿದಿತ್ತು. ಪುಷ್ಪಲತಾ ಬಿರುಸಾಗಿ ಎತ್ತಿದ ಮುಖದಲ್ಲಿ ಉಗ್ರತೆ ಕಂಡಿತು.

"ನಾನು ಅಥವಾ ನನ್ನ ತಂಗಿ ಲಕ್ಷ್ಮಣನ ಜೊತೆಗೆ ಆ ಕೋಣೆಯಲ್ಲಿ ಮಾತಾಡಿದ್ವಿ ಅನ್ನೊ ಕಲ್ಪನೆ ಯಾಕೆ ಮಾಡಿಕೊಳ್ತೀರಿ. ಕೋಣೆಗೆ ಲಕ್ಷ್ಮಣ ಒಳಗಿನಿಂದ ಬೀಗ ಹಾಕ್ಕೊಂಡಿದ್ದ ಅನ್ನೋದು ಮರೆತಿದ್ದೀರಿ."

"ನಿಮಗಾಗಿ ಅವನು ಬಾಗಿಲು ತೆರೆದಿರಬಹುದು."

"ನನ್ನ ತಂಗಿ ಅಲ್ಲಿ ತಟ್ಟಿದ್ದು ಮುಚ್ಚಿದ ಬಾಗಿಲನ್ನ."

"ಆಕೆ ಕೋಣೆಯಿಂದ ಹೊರ ಬಂದ್ರು. ಅವನು ಮತ್ತೆ ಒಳಗಿನಿಂದ ಬೀಗ ಹಾಕಿದ... ಆಕೆ ಬಾಗಿಲು ತಟ್ಟಿದ್ರು."

ತಡೆ ಇಲ್ಲದೆ ಹರಿದ ಉತ್ತರದಿಂದ ಪುಷ್ಪಲತಾ ಸೊರಗಿದಂತಾದಳು.

"ಅದಕ್ಕೆ ಒಂದೇ ಬೀಗದ ಕೈ ಇರೋದು. ಅದು ಒಳಗಡೆ ಲಕ್ಷ್ಮಣನ ಹತ್ರ ಇತ್ತು."

"ಒಂದು ಡೂಪ್ಲಿಕೇಟ್ ಬೀಗದ ಕೈ ಮಾಡಿಸೋದು ಕಷ್ಟದ ಕೆಲಸ ಅಲ್ಲ."

"ಇನ್ಸ್‌ಪೆಕ್ಟರ್...!"

"ನಾನು ಸಬ್ ಇನ್ಸ್‌ಪೆಕ್ಟರ್... ಸ್ವಲ್ಪ ಮೆಲ್ಲಗೆ ಮಾತಾಡಿ."

"ಇಲ್ಲ... ನಾನು ಕಿರಿಚ್ತೀನಿ, ನಮ್ಮ ತಂದೇನ, ಚಿಕ್ಕಪ್ಪನ ಕರೆಸ್ತೀನಿ..."

ಹೆಜ್ಜೆ ಸರಿಸಿದಳು.

"ನಿಲ್ಲಿ! ಸ್ವಲ್ಪ ತಾಳ್ಮೆ ಇರಲಿ"

ಎಂದು ಮೌನವಾಗಿ ನಿಂತಿದ್ದ ಸ್ನೇಹಲತಾ ಕಡೆಗೆ ತಿರುಗಿ ಅಧಿಕಾರಯುತವಾಗಿ ಹೇಳಿದ.

"ನೀವು ಟೇಪ್‌ರೆಕಾರ್ಡರ್ ಕೇಳಿದ್ರಿ. ಕೊಡ್ತೀನಿ. ನನ್ನ ಪ್ರಶ್ನೆಗೆ ನಿಜವಾದ ಉತ್ತರ ಹೇಳಿ... ನೀವು ಚೆನ್ನಮ್ಮನ ಹಾಗೆ ಧ್ವನಿ ಬದಲಾಯಿಸಿಕೊಂಡು ಲಕ್ಷ್ಮಣನೊಂದಿಗೆ ಈ ಕೋಣೆಯಲ್ಲಿ ಕೂತು ಆ ಸಂಭಾಷಣೆ ಯಾಕೆ ರೆಕಾರ್ಡ್ ಮಾಡಿದ್ದು?"

ಬೆದರಿಮದ ಸ್ನೇಹಲತಾ ಎರಡು ಕೈಗಳಿಂದ ಮುಖ ಮುಚ್ಚಿಕೊಂಡಳು, ಅಕ್ಕ ಅವಳನ್ನು ಅಚ್ಚರಿಯಿಂದ ನೋಡಿದಳು.

"ನಿಜ ಹೇಳಿ. ನನ್ನ ತನಿಖೆ ಕೆಡಿಸಬೇಡಿ."

ಕಟುವಾಗಿ ಒತ್ತಾಯಪಡಿಸಿದ ಅಧಿಕಾರಿ.

"ಹೌದಾ, ಸ್ನೇಹ?" ಮೆಲ್ಲನೆ ಕೇಳಿದಳು ಸೋದರಿ.

ಹೌದೆಂದು ತಲೆ ಹಾಕಿದಳು ತಂಗಿ. ಪುಷ್ಪಲತಾ ನಿಟ್ಟುಸಿರು ಹಾಕಿ ನುಡಿದಳು.

"ನನ್ನ ಕ್ಷಮಿಸಿ, ಸಾರ್. ಈ ವಿಷಯ ನನಗೆ ತಿಳೀದು. ತಿಳಿದಷ್ಟು ಮುಚ್ಚುಮರೆ ಇಲ್ಲದೆ ಹೇಳಿದೀನಿ. ನಾನು ಇಲ್ಲಿದ್ದ ಆ ಟೇಪ್‌ರೆಕಾರ್ಡರ್‌ನ ಯಾವತ್ತೂ ಬಳಸಿದೋಳಲ್ಲ."

"ಬಳಸಿರೋದು ನಿಮ್ಮ ತಂಗಿ....ಸ್ನೇಹಲತಾ, ನಿಮ್ಮ ಸಹಕಾರ ಬೇಕೂಂತ ಮತ್ತೆ ಕೇಳ್ತಿದೀನಿ."

ಕಣ್ಣೊರೆಸಿಕೊಂಡಳು ಸ್ನೇಹಲತಾ, ಎಸ್.ಐ. ಕುಳಿತುಕೊಂಡ.

"ನಾನು, ಲಕ್ಷ್ಮಣ ಮದುವೆ ಆಗಬೇಕೂಂತ ಗಟ್ಟಿ ಮನಸ್ಸು ಮಾಡಿ ಬಿಟ್ಟಿದ್ವಿ. ನಮ್ಮ ತಂದೆ ಚೆನ್ನಮ್ಮನ ದೆವ್ವದಲ್ಲಿ ನಂಬಿಕೆ ಇಟ್ಟಿದ್ರು. ದೆವ್ವದಿಂದ ಒಪ್ಪಿಗೆ, ಆಶೀರ್ವಾದ ತಂದ ಹಾಗೆ ರುಜುವಾತು ತೋರಿಸಿದ್ರೆ ತಂದೆ ಒಪ್ತಾರೆ ಅಂತ ಲಕ್ಷ್ಮಣನೇ ನನಗೆ ಹೇಳ್ದ. ನಾನು "ಹುಂ" ಅಂದೆ. ಲಕ್ಷ್ಮಣ ದೆವ್ವದ ಕೋಣೇಲಿ ಚೆನ್ನಮ್ಮನ ಜೊತೇಲಿ ಸಂಭಾಷಣೆ ನಡೆಸಿದ ಹಾಗೆ ಮಾತುಗಳನ್ನ ರೆಕಾರ್ಡ್ ಮಾಡಿದ್ವಿ. ನಾನು ಗಂಟಲು ಬದಲಾಯಿಸಿ ಚೆನ್ನಮ್ಮ ಆದೆ. ನಾಲ್ಕೈದು ಸಾರಿ ರೆಕಾರ್ಡ್ ಮಾಡಿದ್ವಿ. ಸಂಭಾಷಣೆನ ಸರಿಯಾಗಿ ಒಂದು ಕಡೆ ರೆಕಾರ್ಡ್ ಮಾಡೋದಿಕ್ಕೆ ಚಿಕ್ಕಪ್ಪನ ರೆಕಾರ್ಡರ್ ತೊಗೊಂಡು ಬಂದೆ. ಒಪ್ಪವಾಗಿ ರೆಕಾರ್ಡ್ ಮಾಡಿದ್ವಿ. ಶನಿವಾರ ರಾತ್ರಿ ಲಕ್ಷ್ಮಣ ಅದನ್ನ ದಎವ್ವದ ಕೋಣೆಗೆ ಒಯ್ದು, ಅಲ್ಲಿಂದ ಬಂದ ಮೇಲೆ ನಮ್ಮ ತಂದೆ ಮುಂದೆ ಹಾಕಬೇಕೂಂತ ಇದ್ದ. ಗೌಡರು ಅದನ್ನ ನಂಬಿ, ನನ್ನ ಒತ್ತಾಯಕ್ಕೂ ಸೋತು ನಮ್ಮ ಮದುವೆ ಮಾಡಿಸಬೇಕಾಗಿತ್ತು. ನಮಗೆ ಬೇಕಾದ ಹಾಗೆ ರೆಕಾರ್ಡ್ ಮಾಡಿದ್ವಿ. ಅಲ್ಲಿ ಆದದ್ದೇ ಬೇರೆ. ಲಕ್ಷ್ಮಣ ರೆಕಾರ್ಡರ್ ಒಯ್ದ. ಅವನಿಗೆ ದೆವ್ವ ಇಲ್ಲಾಂತ ಖಾತ್ರಿ... ಆದರೆ ಚೆನ್ನಮ್ಮನ ದೆವ್ವ ನಿಜವಾಗಿ ಬಂದುಬಿಡ್ತು. ಲಕ್ಷ್ಮಣನಿಗೆ ಸಾವು ಕಾಣಿಸ್ತು!"

ಪುಷ್ಪಲತಾ ಬೊಂಬೆಯಂತೆ ನಿಂತು ತಂಗಿಯ ಮಾತು ಕೇಳಿದಳು. ಎಸ್.ಐ. ಉಸಿರೆಳೆದುಕೊಂಡ.

"ಧ್ವನಿಯನ್ನು ಎಚ್ಚರಿಕೆಯಿಂದ ಕೇಳಿ ಡೂಪ್ಲಿಕೇಟ್ ಚೆನ್ನಮ್ಮ ನೀವೇ ಅಂತ ನಿರ್ಧಾರಕ್ಕೆ ಬಂದೆ. ಲಕ್ಷ್ಮಣನ ಧ್ವನಿ ನಾನು ಕೇಳಿರಲಿಲ್ಲ. ಆದ್ರೂ ಅದು ಲಕ್ಷ್ಮಣನ ಕಂಠ ಅಂತ ಅವನ ಪರಿಚಯದೋರಿಂದ ಗೊತ್ತು ಮಾಡಿಕೊಂಡೆ... ಆಮೇಲೆ ಕಪ್ಪು ಟೇಪ್ ರೆಕಾರ್ಡರ್‌ನ ನಿಮ್ಮ ಚಿಕ್ಕಪ್ಪನಿಗೆ ಹಿಂತಿರುಗಿಸಿದ್ರಾ?"

"ಹೌದು."

"ಅಂದ್ರೆ ನಿಮ್ಮಲ್ಲಿ ನಾಲ್ಕು ಟೇಪ್ ಇರಬೇಕು. ಎರಡರಲ್ಲಿ ಕನ್ನಡ, ಹಿಂದಿ, ಸಿನಿಮಾ ಹಾಡುಗಳು. ಮೂರನೇದು ನಿಮ್ಮ ರಿಹರ್ಸಲ್‌ಗೆ ಬಳಸಿದ್ರಿ. ನಾಲ್ಕನೇದು ಸರಿಯಾದ ಸಂಭಾಷಣೇನ ಸಂಗ್ರಹಿಸಿದ್ದ... ಆ ನಾಲ್ಕನೆ ಟೇಪ್‌ನ ಲಕ್ಷ್ಮಣ ಕಪ್ಪು ರೆಕಾರ್ಡರ್‌ಗೆ ಸೇರಿಸಿ ಒಯ್ದಿದ್ದ."

"ಹೌದು."

"ನೀವು ಸಂಭಾಷಣೆ ರೆಕಾರ್ಡ್ ಮಾಡಿದ ಮೇಲೆ ಕಂದು ಬಣ್ಣದ ರೆಕಾರ್ಡರ್‌ನ ಯಾರಾದ್ರು ತೊಗೊಂಡು ಹೋಗಿದ್ರಾ?"

ಸ್ನೇಹಲತಾ ಕೆಲವು ಕ್ಷಣ ಯೋಚಿಸಿದಳು.

"ವರದಪ್ಪ ಒಂದು ದಿನ ತೊಗೊಂಡು ಹೋಗಿದ್ರು."

"ಜೊತೆಗೆ ಆ ನಾಲ್ಕು ಟೇಪುಗಳು...?"

"ಸರಿಯಾಗಿ ನೆನಪಿಲ್ಲ. ಬಹುಶಃ ಮೂರು ಒಯ್ದಿರಬೇಕು. ನಾಲ್ಕನೇದು ಮಾತ್ರ ಒಯ್ದಿರಲಿಲ್ಲ. ಅದನ್ನ ಲಕ್ಷ್ಮಣ ತನ್ನಲ್ಲೇ ಇಟ್ಟುಕೊಂಡಿದ್ದ."

ದಿವಾಕರ ಎದ್ದು ನಿಂತ.

"ಸ್ನೇಹಲತಾ, ನಿಮ್ಮ ಹೇಳಿಕೆಗೆ ತುಂಬಾ ಥ್ಯಾಂಕ್ಸ್. ನೀವು ಅಥವಾ ಪುಷ್ಪಲತಾ ದೆವ್ವದ ಕೋಣೆಯಲ್ಲಿ ಲಕ್ಷ್ಮಣನೊಂದಿಗೆ ಮಾತಾಡಿಲ್ಲಾಂತ ಗೊತ್ತು. ಆದರೂ ಹಾಗೆ ಪ್ರಶ್ನೆ ಮಾಡ್ದೆ. ನೀವು ರೆಕಾರ್ಡ್ ಮಾಡಿದಷ್ಟು ಮಾತ್ರ ನಿಮಗೆ ಗೊತ್ತು. ಆಮೇಲೆ ಏನು ನಡೆದಿದೆ ಅನ್ನೋದು ನಿಮಗೆ ಗೊತ್ತಿಲ್ಲ. ಇನ್ನೆರಡು ದಿನಗಳಲ್ಲಿ ಹೇಳ್ತೀನಿ."

"ನನ್ನ ಮೇಲೆ ಸಂಶಯ ಇಲ್ಲ ತಾನೆ/"

ಅಳು ಕಂಠದಲ್ಲಿ ಕೇಳಿದಳು.

"ಇಲ್ಲ... ಅದನ್ನ ಇನ್ನೆರಡು ದಿನಕ್ಕೆ ಅಧಿಕೃತವಾಗಿ ಹೇಳ್ತೀನಿ.... ಪುಷ್ಪಲತಾ ನಿಮಗೂ ಅದೇ ಮಾತು ಅನ್ವಯಿಸುತ್ತೆ."

"ಥ್ಯಾಂಕ್ಸ್."

ಕೋಣೆಯಿಂದ ಹೊರ ಬಂದ ದಿವಾಕರ ಯಾಂತ್ರಿಕವಾಗಿ ಮನೆಯ ಹಿಂಭಾಗಕ್ಕೆ ನಡೆದ. ಹುಲ್ಲಿನ ಕಂತೆಗಳನ್ನು ಒಟ್ಟುವ ಆಳುಗಳಿಗೆ ಸೂಚನೆ ಕೊಡುತ್ತಿದ್ದ ಬಿಳಿಗೌಡ ಅಧಿಕಾರಿಯನ್ನು ಕಂಡು ವಿಧೇಯತೆಯಿಂದ ಬಂದು ನಿಂತ.

ಮನೆಯಲ್ಲಿ ನಡೆದ ಹಗರಣ ಕೊಲೆ ಎಂದಾದ ಮೇಲೆ ಅವನ ಬಿರುಸು ತಣ್ಣಗಾಗಿತ್ತು.

"ಬನ್ನಿ, ಸಾಹೇಬ್ರೆ" ಎಂದು ಎದುರುಗೊಂಡ.

"ಬರ್ತನೆ ಇದೀನಲ್ಲಾ. ಗೌಡರೆ."

"ಸುಮ್ಮನೆ ಬಂದ್ರೇನು? ಏನೊ ಜ್ಞಾಪಿಸಿಕೊಂಡು ಬಂದಿದೀರಿ" ಕೃತಕ ನಗೆ ತೋರಿದ.

ಒಂದೊಂದು ವಿಚಾರ ಜ್ಞಾಪಿಸಿಕೊಂಡಾಗಲೆಲ್ಲಾ ಇಷ್ಟು ದೂರ ಬರಬೇಕಲ್ಲ. ನನಗೆಷ್ಟು ಬೇಜಾರಾಗಿರಬೇಕು. ನಿಮ್ಮ ಮನೆಯಲ್ಲಂತೂ ಒಬ್ಬೊಬ್ಬರು ಒಂದೊಂದು ತರಹ ಹೇಳಿ ತಲೆ ಕೆಡಿಸಿಬಿಟ್ಟಿದ್ದಾರೆ. ನಮ್ಮ ಸಾಹೇಬರೂ, ಅದು ಬೇಡ ಇದು ಬೇಡ

ಅಂತ ಹೇಳ್ತಲೇ ಎಲ್ಲಾ ಬೇಕೂಂತ ಕೇಳಿಬಿಡ್ತಾರೆ... ಅದರ ಮೇಲೆ ಡಿ.ಐ.ಜಿ. ಹತ್ರ ನೇರವಾಗಿ ಹೋಗೋರ ಕಾಟ..."

ಬಿಳಿಗೌಡ ಹಿಂದಕ್ಕೆ ಕೈಕಟ್ಟಿದ.

"ಆಗ್ಲಿ, ಸ್ವಾಮಿ. ನನ್ನ ರೇಗಿಸ್ತಾ ಇದೀರಿ. ನಾನು ಡಿ.ಐ.ಜಿ. ಸಾಹೇಬರ ಹತ್ರ ಹೋಗಿದ್ದು ನಿಮ್ಮ ಮೇಲೆ ಚಾಡಿ ಹೇಳೋದಿಕ್ಕಲ್ಲ. ನಮಗೆ ಆಗ್ತಿರೊ ತೊಂದರೆ ಕಡಿಮೆ ಮಾಡೀಂತ ಬೇಡೋದಿಕ್ಕೆ."

"ಅದಕ್ಕೇ ಚಾಡಿ, ಅಂತ ಕರೆಯೋದು... ನೋಡಿ, ಗೌಡರೆ. ಈ ಕೇಸ್ ವಿಪರೀತ ಕ್ಲಿಷ್ಟವಾಗ್ತಾ ಇದೆ. ನೀವು ಮನೆ ಯಜಮಾನರು ಅನ್ನಿಸಿಕೊಮಡೋರು ಮೊದಲನೆ ದಿನ ಒಂದು ರೀತಿ ಹೇಳಿದ್ರಿ. ಆಮೇಲೆ ಇನ್ನೇನೊ ಹೇಳಿದ್ರಿ... ಶನಿವಾರ ರಾತ್ರಿ ಕೋಣೇಲಿದ್ದೋರಿಗೆಲ್ಲಾ ಹೊರಕ್ಕೆ ಬರಬೇಡಿ ಅಂತ ಹೇಳಿ ಹಜಾರದ ಕತ್ತಲೆಯಲ್ಲಿ ಅಡ್ಡಾಡಿದೀರಿ. ಹಾಗಿದ್ರೂ ಒಂದಿಬ್ಬರು ಬಂದಿದ್ದಾರೆ. ಸಾಕಷ್ಟು ಬುದ್ಧಿವಂತಿಕೆ, ಧೈರ್ಯ, ವಿವೇಚನೆ ಇರೊ ನಿಮ್ಮ ತಮ್ಮ, ಮಗ ಯಾಕೆ ಹೊರಕ್ಕೆ ಬರಲಿಲ್ಲ ಅಂತ ಆಶ್ಚರ್ಯ. ಸಾವಿನ ಕೋಣೆಗೆ ಹೊರಟೋನ್ನ ನೀವು ತಡೆಯೊ ಪ್ರಯತ್ನ ಮನಸಾರೆ ಮಾಡಿಲ್ಲ. ನಿಮ್ಮ ಹೆಣ್ಣು ಮಕ್ಕಳು ದೆವ್ವದ ಕೋಣೆ ಹತ್ರ ಹೋಗಿದ್ದ ಸಂಗತಿ ಬೇರೆಯೋರು ನನಗೆ ಹೇಳಿದ ಮೇಲೆ ನೀವು ಒಪ್ಕೊಂಡ್ರಿ... ಲಾಂದ್ರನ ಬಣವೆಯಿಂದ ಎತ್ತಿ ಸಮಾಧಿ ಹತ್ರ ಇಟ್ಟು ಗೊತ್ತಿಲ್ಲದ ಹಾಗೆ ನಿಂತ್ರಿ. ಆಪಾದನೆ ಭಾರ ನಿಮ್ಮ ಮೇಲೆ ಎಷ್ಟು ಜಾರಿದೆ ಅನ್ನೋದು ಗೊತ್ತಾಯ್ತೆ?"

ಬಿಳಿಗೌಡ ತನ್ನಲ್ಲಿ ಮಹತ್ತರ ಯೋಚನೆಗೆ ಸಿಕ್ಕಿದ್ದ. ಸರಳವಾದ ಉತ್ತರ ನೀಡಿದ.

"ಮುಚ್ಚುಮರೆ ಮಾಡಿದೀನಿ. ನೀವು ಅಂದ್ರೆ ನನಗೆ ಅಷ್ಟು ಹೆದರಿಕೆ. ಸ್ವಾಮಿ."

"ಇದು ಸಮಜಾಯಿಷಿ ಅಲ್ಲ... ನಿಮ್ಮ ಕೂರನಗೆರೆ ಜಮೀನಿನಲ್ಲಿ ಏನಾದ್ರೂ ಮಾಡೋದು ಬಿಟ್ಟು ಸುಮ್ಮನೆ ಇದೀರಂತೆ."

ಸಂಬಂಧವಿಲ್ಲದ ಮಾತು ಅವನ ಹುಬ್ಬೇರಿಸಿತು.

"ಅದು ಬಂಜರು ಭೂಮಿ."

"ಉಳುಮೆ ಬೇಡ, ಅದರಲ್ಲಿ ಯಾವುದೊ ಬೆಲೆಬಾಳೊ ಕಲ್ಲು ಸಿಗುತ್ತೇಂತ ಗೊತ್ತಿದ್ರೂ ಕೈಕಟ್ಟಿ ಕೂತಿದೀರಿ. ನೀವು ಸಾಹಸಿ ಅಲ್ಲ."

ಗೌಡನಿಗೆ ಬೇಸರ ಬಂತು.

"ಹೌದು, ನಾನು ಹೇಡಿ. ನನ್ನ ಯಾವ ಹೆಸರಿನಿಂದ ಬೇಕಾದ್ರೂ ಕೂಗಿ. ನನ್ನ ರಕ್ತಕ್ಕೆ ಹಳೇದು ಸೇರಿದೆ. ಕಂದಾಚಾರ, ಮೂಢನಂಬಿಕೆ ಇದ್ರೇ ಬದುಕಿನಲ್ಲಿ ಚೆಂದ ಇರೋದು. ನಿಮ್ಮ ಹಾಗೇ ಲಕ್ಷ್ಮಣನೂ ನನ್ನ ರೇಗಿಸ್ತಿದ್ದ. ನಾನು ಅದಕ್ಕೆಲ್ಲಾ ಸಡಿಲ ಆಗ್ತಿರಲಿಲ್ಲ.... ಸಾಹೇಬ್ರೆ, ಕೂರನಗೆರೆ ಜಮೀನಿನಲ್ಲಿ ಚಿನ್ನ ಸಿಗೋದಿದ್ರೂ ಅದು ಹಾಗೇ ಇರಲಿ. ಅಪ್ಪನ ಕಾಲದ ಭೂಮಿ ಮಾರೋದು ಬೇಡ. ತೋಡೋದೂ

ಬೇಡ... ಸ್ನೇಹಲತಾ ಮದುವೆ ಆದ ಮೇಲೆ ಏನಾದ್ರು ಮಾಡೋಣಾಂತ ಇದೀನಿ."

"ನಿಮ್ಮ ಕಿರಿ ಮಗಳ ಮಾತಿಗೆ ಬೆಲೆ ಕೊಡ್ತೀರಿ ಅಂತ ಕೇಳ್ದೆ. ಆಕೆ ಆ ಭೂಮಿಯಲ್ಲಿ ಚಿನ್ನ ತೋಡೋಣ ಅಂದ್ರೆ ಖಂಡಿತ ಹುಂ ಅನ್ನಿ."

ಅವನಿಗೆ ಒಣ ನಗೆ ಬಂತು.

"ಆಗಬೋದು. ಅವಳಿಗೋಸ್ಕರ ಅಲ್ಲದೆ ಈ ಹಗರಣಕ್ಕೆ ಸಿಕ್ಕಿ ನಿಮ್ಮ ಕೋಟಲೆಗೆ ಒಳಗಾಗಿರೋದು."

ಕೋಟೆಗೌಡರನೊಮದಿಗೆ ಬರುತ್ತಿದ್ದ ವರದಪ್ಪ ಕಾಣಿಸಿದ.

"ನಿಮಗೋಸ್ಕರ ಬಂದೆ, ಸಾರ್. ಇಲ್ಲಿ ಯಾವ ಕೆಲಸವೂ ಇರಲಿಲ್ಲ" ತರುಣ ಗೌಡ ಅಲ್ಲಿಂದಲೇ ಹಾಸ್ಯದಲ್ಲಿ ಕೂಗಿ ಹೇಳಿದ.

"ನನಗೋಸ್ಕರ?"

"ಮತ್ತೇನ್ರಿ. ಶನಿವಾರದಿಂದ ಈ ಮನೇಲಿ ಕಾಣಿಸ್ಲಿಲ್ಲ ನಾನು ಅಂತ ಹೇಳಿದ್ರಿ. ಸಂಶಯ ತಪ್ಪಿಸೋದಿಕ್ಕೆ ಈ ಮನೆಗೆ ಕೆಲಸ ಇಲ್ಲದೆ ಹಾಜರಿ ಕೊಟ್ಟಿದೀನಿ."

ಅದಕ್ಕೆ ಮತ್ತೇನೂ ಹೇಳದೆ ದಿವಾಕರ ಕೋಟೆಗೌಡನಿಗೆ ಸನ್ನೆ ಮಾಡಿ ಕರೆದ.

"ಬನ್ನಿ ಹಾಗೇ ಹೋಗಿಬರೋಣ."

ಹೊಲದ ದಿಕ್ಕಿಗೆ ಕೈ ತೋರಿದ.

"ಸಮಾಧಿ ಹತ್ರಕ್ಕೆ... ಹುಂ, ನಡೀರಿ"

ಎಂದು ನಗುತ್ತಾ ಜೊತೆಗೂಡಿದ ಕೋಟೆಗೌಡ.

"ಪೋಲೀಸ್ ಪೀಡೆ ಅಂತ ಬೇಜಾರು ಮಾಡ್ಕೋಬೇಡಿ. ಇದು ನನ್ನ ನಿಮ್ಮ ವಿಚಾರ ಅಷ್ಟೆ. ನೀವು ಮಿಲಿಟರಿಯಲ್ಲಿ ಸಾರ್ಜೆಂಟ್ ಆಗಿದ್ರಾ?"

"ಹೊ! ಅಷ್ಟು ದೊಡ್ಡ ಪಟ್ಟ ಕೊಟ್ರಿ, ಬರೀ ಸಿಪಾಯಿ ಆಗಿದ್ದೆ. ನಾನು ಹೈಸ್ಕೂಲಿಗೇ ಓದು ಬಿಟ್ಟೋನು. ಹಳ್ಳಿ ಹಿಡಿಸ್ತಾ ಇರಲಿಲ್ಲ. ಸೈನ್ಯ ಸೇರ್ದೆ. ಆಮೇಲೆ ಅದೂ ಸರಿಬೀಳಲಿಲ್ಲ. ಅನಾರೋಗ್ಯದ ಸರ್ಟಿಫಿಕೇಟ್ ಮಾಡ್ಸಿ ಸೈನ್ಯದಿಂದ ಕಳಚಿಕೊಂಡು ಬಂದೆ."

"ಮರೆಮಾಚದೆ ಹೇಳ್ತಾ ಇದೀರಿ, ಸಂತೋಷ. ನೀವು ಯಾಕೆ ಮದುವೆ ಆಗ್ಲಿಲ್ಲ?"

"ಮೊದಲಿನಿಂದ ಮದುವೆ ಅನ್ನೊ ಆಸಕ್ತಿಯೇ ಬರ್ಲಿಲ್ಲ. ನಮ್ಮ ಅತ್ತಿಗೆ ತೀರಿಹೋದ ಮೇಲೆ ಮನೆಗೆ ಯಜಮಾನಿತಿ ಇಲ್ಲದ ಹಾಗಾಯ್ತು. ಅಣ್ಣ ನನ್ನ ಮದುವೆಗೆ ಒತ್ತಾಯ ಮಾಡಿದ್ರು. ನಾನು ನಾಗರಾಜಪ್ಪನಿಗೆ ಮದುವೆ ಮಾಡಿಸಿ ಗೌಡಿತಿನ ಮನೆಗೆ ಬರೊ ಹಾಗೆ ಮಾಡಿ ಅಂತ ಮಾತು ಹಾರಿಸ್ದೆ."

"ಕೂರನಗೆರೆ ಜಮೀನಿನಲ್ಲಿ ನಿಮಗೆ ಪಾಲು ಇಲ್ಲವೆ?"

"ಇದೆ, ಐದನೆ ಒಂದು ಪಾಲು." ಇಡೀ ಆಸ್ತಿಯಲ್ಲೂ ಐದನೆ ಒಂದು ಪಾಲು."

ಚಕಿತಗೊಮಡ ಎಸ್.ಐ. ಅವನ ಪ್ರಶ್ನೆಗೆ ಮೊದಲೇ ವಿವರಣೆ ಕೊಟ್ಟ ಕೋಟೆಗೌಡ.

"ನಮ್ಮ ತಂದೆಗೆ ಬಿಳಿಗೌಡ, ನಾನು ಇಬ್ಬರೇ ಮಕ್ಕಳು. ತಂದೇದು ಸ್ವಯಾರ್ಜಿತ ಆಸ್ತಿ. ತಾತ ನಂಜನಗೂಡಿನಿಂದ ಬಂದಾಗಲೇ ಬರಿಕೈ. ತಂದೆ ಆಸ್ತಿನ ಎರಡುಪಾಲು ಮಾಡಬೇಕಿತ್ತು, ನಿಜ. ಅಣ್ಣ ಮಕ್ಕಳೊಂದಿಗರು. ನಾನು ಮಿಲಿಟರಿ ಸೇರಿದ ಗುಂಡುಗೋವಿ. ನನಗೆ ಆಸ್ತಿ ಪಾಲು ಬೇಡ ಅಂದಿದ್ದೆ. ತಂದೆ ಉಯಿಲು ಬರೆದು ತೀರಿಹೋದ್ರು. ಬಿಳಿಗೌಡ, ಅವರ ಮಗ, ಅವರ ಇಬ್ಬರು ಹೆಣ್ಣುಮಕ್ಕಳು, ನಾನು ಸಮನಾದ ಐದು ಭಾಗಕ್ಕೆ ಬಾಧ್ಯಸ್ಥರಾದ್ವಿ. ನನ್ನ ಅಡ್ಡಿ ಇರ್ಲಿಲ್ಲ. ಒಬ್ಬಂಟಿ ಮನುಷ್ಯನಿಗೆ ಎಷ್ಟು ಬೇಕು? ಕೂರನಗೆರೆ ಜಮೀನಿನ ವಿಷಯದಲ್ಲಿ ಅಣ್ಣನಿಗೆ ಕಟುವಾಗಿ ಹೇಳ್ದೆ. ಅದನ್ನ ಮನೆಯೋರೆಲ್ಲ ಒಪ್ಪಿದ್ರು. ಆದರೆ ಅಣ್ಣ ಕಲ್ಲುಬಂಡೆ. ಆ ಜಮೀನಿನಲ್ಲಿ ಬೆಲೆಬಾಳೊ ಕಲ್ಲುಗಳು ತುಂಬಿವೆ. ಪಕ್ಕದಲ್ಲೇ ನಾಗೇಗೌಡರು ಹಣ ಬೊಗಸೆ ತುಂಬಾ ಇದಾರೆ. ಅದನ್ನ ನೋಡಿದ್ರೂ ಕಣ್ಣು ಮುಚ್ಚಿದಾರೆ ಅಣ್ಣ. ಎಂಥ ಮೂಢತನ! ವರದಪ್ಪನ ಕೈಲಿ ಹೇಳಿಸ್ದೆ. ನೋಡೋಣಾಂತ ಈಗ ಸ್ವಲ್ಪ ಇಳಿದಿದಾರೆ. ನಾನು ಮಿಲಿಟರಿಬಿಟ್ಟು ಬಂದ ಮೇಲೆ ಬರಿ ಕೈಲಿ ಕೂತಿದೀನಿ. ಈ ಹಳ್ಳಿ ಬಿಟ್ರೆ ಬೇರೆ ನೆಲೆ ಇಲ್ಲ. ಕೂರನಗೆರೆ ಜಮೀನು ತೋಡೋ ಕೆಲಸಕ್ಕೆ ಕಾದಿದೀನಿ. ಸದ್ಯಕ್ಕೆ ಅವಕಾಶ ಇದ್ದೂ ಕೈಕಟ್ಟಿ ಕುಳಿತಿರೋ ಪರಿಸ್ಥಿತಿ."

"ನಿಮಗೆ ಅವಕಾಶ ಬರತ್ತೆ. ಯೋಚನೆ ಮಾಡ್ಬೇಡಿ. ವರದಪ್ಪ ಸ್ನೇಹಲತಾನ ಮದುವೆ ಆದ ಕೂಡ್ಲೆ ನೀವು ಚಿನ್ನ ತೋಡ್ತೀರಿ... ನಿಮ್ಮ ಕಪ್ಪು ಟೇಪ್‌ರೆಕಾರ್ಡರ್..."

ಅವನ ಮಾತು ಪೂರೈಸಲು ಬಿಡದೆ ತಟ್ಟನೆ ಕೇಳಿದ ಕೋಟೆಗೌಡ.

"ಎಲ್ಲಿ ನನ್ನ ಟೇಪ್‌ರೆಕಾರ್ಡರ್? ಅದನ್ನ ಕೊಡಿಸಿಕೊಡಿ."

"ಕೊಡಿಸಿ ಕೊಡ್ತೀನಿ ಇನ್ನೆರಡು ದಿನದಲ್ಲಿ. ನಮ್ಮ ಸಾಹೇಬ್ರು ಇಟ್ಕೊಂಡಿದಾರೆ.... ನಿಮ್ಮ ರೆಕಾರ್ಡರ್ ಲಕ್ಷ್ಮಣ ಯಾಕೆ ಎತ್ಕೊಂಡು ಹೋದಾಂತ ಹೇಳ್ತೀರಾ?"

"ಬಹುಶಃ ಕತ್ತಲೆ ಕೋಣೆಯಲ್ಲಿ ಬೇಜಾರಾದ್ರೆ ಸಂಗೀತ ಕೇಳೋಣಾಂತ... ಅಥವಾ ದೆವ್ವದ ಸಂಗಡ ನಡೆದ ಮಾತುಗಳನ್ನ ರೆಕಾರ್ಡ್ ಮಾಡಿಕೊಳ್ಳೋದಿಕ್ಕೆ... ಅದು ನಿಮಗೆ ಈ ಹೊತ್ತಿಗೆ ಗೊತ್ತಾಗಿರಬೇಕು. ಅದರಲ್ಲಿ ಏನು ರೆಕಾರ್ಡಾಗಿದೆ, ಸಾರ್?"

"ದೆವ್ವದ ಸಂಗಡ ಮಾಡಿದ ಸಂಭಾಷಣೆ."

ಕೋಟೆಗೌಡ ಬೆರಗಾದ.

"ಏನು ಸಂಭಾಷಣೆ ನಡೆದಿದೆ?"

"ವಿರಾಮವಾಗಿ ಹೇಳ್ತೀನಿ. ನೀವು ಲಕ್ಷ್ಮಣನಿಗೆ ರೆಕಾರ್ಡರ್ ಕೊಟ್ಟಾಗ ಅದರಲ್ಲಿ ಕ್ಯಾಸೆಟ್ ಇತ್ತೇ?"

"ಇರಲಿಲ್ಲ... ಅದು ಖಾಲಿ ರೆಕಾರ್ಡರ್... ಅದನ್ನ ಲಕ್ಷ್ಮಣ ನನ್ನಿಂದ ಹನ್ನೊಂದೂವರೆಗೆ ತೊಗೊಂಡುಹೋದ. ಆಮೇಲೆ ಅದರಲ್ಲಿ ಟೇಪ್ ಸೇರಿಸಿರಬೇಕು."

"ಶನಿವಾರಕ್ಕೆ ಮೊದಲು ನಿಮ್ಮ ರೆಕಾರ್ಡರ್ ಯಾರು ಒಯ್ದಿದ್ರು?"

"ಸ್ನೇಹಲತಾ."

"ಅದನ್ನ ವಾಪಸ್ ಯಾವಾಗ ಕೊಟ್ರು?"

"ಶುಕ್ರವಾರ."

"ಸ್ನೇಹಲತಾ ಕೋಣೆಯಲ್ಲೇ ಕಂದುಬಣ್ಣದ ರೆಕಾರ್ಡರ್ ಇತ್ತು. ಅದನ್ನ ಬಿಟ್ಟು ನಿಮ್ಮ ಯಂತ್ರ ಯಾಕೆ ತಗೊಂಡು ಹೋದ ಲಕ್ಷ್ಮಣ?"

"ಯಾಕೆ ಹಾಗೆ ಮಾಡ್ದ ಅಂತ ಹೇಳಲಾರೆ."

ವಿಷಯದಿಂದ ಹಾರಿದ ದಿವಾಕರ.

"ಸಿಲಿಂಡರ್ ಆಕಾರದ ಲಾಂದ್ರಗಳನ್ನ ನೀವು ಮಿಲಿಟರಿ ಹರಾಜಿನಲ್ಲಿ ತಂದ್ರಿ ಅಂತ ಹೇಳಿದ್ರು ಬಿಳಿಗೌಡರು."

"ಅಲ್ಲ, ಅದನ್ನ ಬೊಂಬಾಯಿಯಿಂದ ತಂದಿದ್ದು. ಫ್ಲೋರಾ ಫೌಂಟನ್ ಚೌಕದಲ್ಲಿ ಅದನ್ನ ಮಾರ್ತಾ ಇದ್ರು. ನೋಡೋದಿಕ್ಕೆ ಚೆನ್ನಾಗಿತ್ತು. ಅರ್ಧ ಡಜನ್ ಹೊತ್ಕೊಂಡು ಬಂದೆ. ಅದರ ಪಾತ್ರ ದೊಡ್ಡದು ಅಂತ ಹೇಳಿದ್ರಿ."

"ನಿಮ್ಮಣ್ಣ ಲಾಂದ್ರದೊಂದಿಗೆ ಚಕಮಕಿ ಆಡಿದಾರೆ. ನನ್ನೊಂದಿಗೆ ಮುಚ್ಚುಮರೆ ಮಾಡಿದಾರೆ."

ಇಬ್ಬರೂ ಸಮಾಧಿಗೆ ಸಮೀಪ ಬಂದರು.

"ನಿಮಗೆ ದೆವ್ವ, ಆತ್ಮ ಇಂತಾದ್ರಲ್ಲಿ ನಂಬಿಕೆ ಇದೆಯೆ?"

ದಿವಾಕರ ಗಂಭೀರವಾಗಿ ಕೇಳಿದ.

"ಇಲ್ಲ"

"ಸಮಾಧಿ ಹತ್ರ ಅವತ್ತು ಕಿರಿಚಿದ್ರಂತೆ..."

ಕಿರುಚುವಂತೆಯೇ ಮುಖ ಮಾಡಿದ ಕೋಟೆಗೌಡ. ಮುಖದಲ್ಲಿ ಭಯ ಮಾಯವಾಗಿ ನಾಚಿಕೆ ಕಂಡಿತು.

"ಭಗವಂತ ಹೇಳಿರಬೇಕು. ಅಂತಾ ವಿಷಯದಲ್ಲಿ ನಂಬಿಕೆ ಇಲ್ಲದಿದ್ರೂ ಹೆದರಿಕೆ ತಪ್ಪೋದಿಲ್ಲ. ಈ ಸಮಾಧಿ ಕಂಡ್ರೆ ಈಗಲೂ ಬಲು ಭಯ.."

"ಹಾಗಾದ್ರೆ ಸಮಾಧಿ ನೋಡೋದು ಬೇಡ ಅನ್ನಿ."

ಇಬ್ಬರೂ ಹಿಂತಿರುಗಿದರು. ಹಿಪ್ಪೆಮರಗಳ ಸಮೀಪಕ್ಕೆ ಬಂದು ನಿಂತ ದಿವಾಕರ. ಇಬ್ಬರನ್ನೂ ಗಮನಿಸುತ್ತಿದ್ದ ಬಿಳಿಗೌಡ, ವರದಪ್ಪ ಅಧಿಕಾರಿಯ ಕರೆಗೆ ನಿಧಾನವಾಗಿ

ಬಂದರು.

"ಏನಾದ್ರು ಹೊಸ ವಿಷಯ, ವಸ್ತು ಸಿಕ್ತೆ?" ವರದಪ್ಪ ಕೇಳಿದ.

"ಅವತ್ತು ಬಿಳಿಗೌಡರು ಸಮಾಧಿ ಹತ್ರ ಲಾಂದ್ರ ತಂದಿಟ್ಟಿದ್ರು. ಇವತ್ತು ಏನ್ ಸಿಕ್ಕೀತು?"

ಬಿಳಿಗೌಡ ಪ್ರತಿ ನುಡಿಯದೆ ಕೈ ಹಿಸುಕಿಕೊಂಡ. ಸಬ್ ಇನ್ಸ್‌ಪೆಕ್ಟರ್ ತಲೆ ಎತ್ತಿ ಹಿಪ್ಪೆ ಮರದ ಎಲೆಗಳ ನಡುವೆ ದೃಷ್ಟಿ ಹರಿಸಿದ. ಅತ್ತಲೇ ದೃಷ್ಟಿ ಒಯ್ದು ಕೋಟೆಗೌಡ ಅಧಿಕಾರಿಯ ಭುಜಕ್ಕೆ ಮೆಲ್ಲನೆ ಬೆರಳು ಬಾರಿಸಿದ.

"ಅದೇನು ನೋಡಿ, ಸಾರ್..."

ಬೆರಳು ಮರದ ರೆಂಬೆಗಳ ಕಡೆ ತೋರಿತು. ರೆಂಬೆಯಿಂದ ತೂಗಾಡುತ್ತಿರುವ ಕಂದು ಟೇಪ್‌ರೆಕಾರ್ಡರ್!

"ನನ್ನ ರೆಕಾರ್ಡರ್..." ವರದಪ್ಪ ಪಿಸುಗಿದ.

"ಹೌದು, ಟೇಪ್‌ರೆಕಾರ್ಡರ್! ವರದಪ್ಪ, ಇದು ಆಳುಗಳಿಗೆ ಗೊತ್ತಾಗೋದು ಬೇಡ. ನೀವೇ ಇಳಿಸಿ ಅದನ್ನ..."

ದಿವಾಕರನ ಸೂಚನೆಗೆ ನಕಾರ ತೋರಿದ ವರದಪ್ಪ. ನೀಳವಾದ ಮರ ಏರಿ ಇಪ್ಪತ್ತೈದು ಅಡಿಗಳ ಎತ್ತರದಿಂದ ತನ್ನ ರೆಕಾರ್ಡರ್ ಇಳಿಸಲು ಅಂದದ ಉಡುಪುಗಳ ವರದಪ್ಪ ಸಿದ್ಧನಾಗಿರಲಿಲ್ಲ.

"ನಾನು ಇಳಿಸ್ತೀನಿ"

ಎಂದ ಕೋಟೆಗೌಡ ಚಕಿತಗೊಳ್ಳುತ್ತಿದ್ದಂತೆ ಅನಾಯಾಸವಾಗಿ ಹಿಪ್ಪೆಮರ ಏರಿ ರೆಂಬೆಯಿಂದ ಟೇಪ್‌ರೆಕಾರ್ಡರ್ ತೆಗೆದು ಕೆಳಗಿಳಿದ,

"ಇದು ಮರದ ಮೇಲಕ್ಕೆ ಹೇಗೆ ಹೋಯ್ತು?"

ವರದಪ್ಪ ಉದ್ರೇಕದಲ್ಲಿ ಕೇಳಿದ.

"ಲಾಂದ್ರ ಸಮಾಧಿ ಹತ್ರ ಬಂದ ಹಾಗೆ."

ಅಧಿಕಾರಿ ಗಹಗಹಿಸಿದ. ಬಿಳಿಗೌಡ ಸಿಡಿದು ಪ್ರತಿಭಟಿಸಿದ.

"ಇದನ್ನ ನಾನು ಮರದ ಮೇಲೆ ಸೇರಿಸಲಿಲ್ಲ ಸ್ವಾಮಿ."

"ಸರಿ, ಯಾರೋ ಸೇರಿಸಿದ್ರು... ವರದಪ್ಪ, ಎರಡು ದಿನ ಆದ ಮೇಲೆ ಇದನ್ನ ಕೊಡ್ತೀನಿ."

ಬಿಳಿಗೌಡ ಸುಧಾರಿಸಿಕೊಳ್ಳುವ ಮೊದಲೇ ಅಧಿಕಾರಿ ವೇಗವಾಗಿ ಹೊರಟುಹೋದ.

* * *

ಆರಿದ ಜಜ್ಜು ಲಾಂದ್ರ, ಎರಡು ಟೇಪ್ ರೆಕಾರ್ಡರುಗಳು. ನಾಲ್ಕು ಟೇಪುಗಳಲ್ಲಿ ಮೂರು ಒಂದು ಕಡೆ, ನಾಲ್ಕನೆಯದು ಮತ್ತೊಂದು ಕಡೆ. ಎಲೆಕ್ಟ್ರಿಕ್ ಕಟ್‌ಔಟ್, ಸ್ಟೇನ್‌ಲೆಸ್ ಸ್ಟೀಲ್ ಲೋಟ, ಎರಡು ನಕ್ಷೆಗಳು, ಹೇಳಿಕೆಯ ಪುಟಗಳು...

ಪಕ್ಕದ ಮೇಜಿನ ಮೇಲೆ ಹರಡಿದ ವಸ್ತು ಸಮುದಾಯದ ಕಡೆ ಕಣ್ಣು ಹರಿಸಿದ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಹಸನ್ಮುಖನಾದ.

"ಇನ್ಸ್‌ಪೆಕ್ಟರ್ ಹಿದಾಯತ್ ಇದಿಷ್ಟನ್ನೇ ಮಹಜರ್ ಮ್ಯೂಸಿಯಂ ಅಂದಿದ್ರೆ ಅವನ ಹೊಣೆಗಾರಿಕೆ ಅರಿವು ಏನೂಂತ ಅರ್ಥವಾಗತ್ತೆ. ಮತ್ತೆ ಅವನೇ ತನಿಖಾಧಿಕಾರಿ! ದಿವಾಕರ, ನೀನು ಹೇಳಿರೋದೆಲ್ಲಾ ಕೇಳಿದ್ದೀನಿ. ಬೆರಳು ಗುರುತುಗಳ ರಿಪೋರ್ಟ್ ಇದೇ ತಾನೆ ಬಂದಿದೆ. ಆ ವರದಿಯೊಂದಿಗೆ ನಿನ್ನ ತನಿಖೆ ಕಾರ್ಯ ಎಷ್ಟರ ಮಟ್ಟಿಗೆ ಫಲಕಾರಿ ಆಯ್ತೂಂತ ತಿಳಿಕೊಬೇಕು."

ದಿವಾಕರ ತನ್ನ ಕಾರ್ಯದಲ್ಲಿ ಪೂರ್ಣ ವಿಶ್ವಾಸವಿಟ್ಟು ಹೇಳಿದ.

"ಈ ಕೇಸ್‌ನಲ್ಲಿ ಬೆರಳು ಗುರುತು ಬಹಳ ಮುಖ್ಯ ಸಾರ್. ಕೊಲೆ ಮಾಡಿದ ವ್ಯಕ್ತಿಗೆ ತನ್ನ ಬೆರಳು ಗುರುತುಗಳು ವಸ್ತುಗಳ ಮೇಲೆ ಬಿದ್ದರೂ ಅವುಗಳ ಕಡೆಗೆ ಗಮನ ಕೊಡಲಾಗದಷ್ಟು ಆತುರದ ಸನ್ನಿವೇಶಗಳು ಉಂಟಾಗಿವೆ. ಹೆಜ್ಜೆ ಗುರುತುಗಳು ಸರಿಯಾಗಿ ಸಿಗಲಿಲ್ಲ. ಕಪ್ಪು ಟೇಪ್‌ರೆಕಾರ್ಡರ್ ಮೇಲೆ ಗುರುತುಗಳು ಕಲಸಿ ಹೋಗಿರಬೇಕು. ಆದರೆ ಅದರೊಳಗಿದ್ದ ನಾಲ್ಕನೆ ಟೇಪ್ ಮೇಲೆ ಬೆರಳು ಗುರುತು ಚೆನ್ನಾಗಿ ಬಿದ್ದಿರಲೇಬೇಕು. ಹಾಗೇ ಆ ವಿದ್ಯುತ್ ಕಟ್‌ಔಟ್ ಮತ್ತು ಲೋಟದ ಮೇಲೆ ಗುರುತು ಬಿದ್ದಾಗ ವ್ಯಕ್ತಿ ಗಡಿಬಿಡಿಯಲ್ಲಿತ್ತು. ಆಗ ಅವನ್ನ ಅಳಿಸುವ ಅರಿವು ಬಂದಿಲ್ಲ. ಆ ಮೂರು ವಸ್ತುಗಳ ಮೇಲೆ ಬೆರಳು ಗುರುತುಗಳು ಮೂಡಿರಲೇಬೇಕು ಅಂತ ನನಗೆ ಖಾತ್ರಿ ಇದೆ. ಅವು ಮೂರೂ ಒಂದೇ ವ್ಯಕ್ತಿಗೆ ಸೇರಿದ್ದು, ಆ ವ್ಯಕ್ತಿಯೇ ಕೊಲೆ ಮಾಡಿರೋದು."

ಮೆಚ್ಚಿಕೆಯ ನೋಟ ಹಾಕಿದ ಎ.ಎಸ್.ಪಿ.

"ನಿನ್ನ ಅದೃಷ್ಟ ಪರೀಕ್ಷೆ ಆಗತ್ತೆ. ಕೊಡು ನಿನ್ನ ವಿವರಣೆ."

ಚೆನ್ನಮ್ಮನ ದೆವ್ವದ ಕೋಣೆಗೆ ಮಹತ್ವ ಕೊಟ್ಟಿರೋನು ಬಿಳಿಗೌಡ ಒಬ್ಬನೇ ಅದಕ್ಕೆ ಹಳ್ಳಿ ಜನ ತಮ್ಮ ಉತ್ಪ್ರೇಕ್ಷೆ, ಕಟ್ಟುಕಥೆ ಕೂಡ್ಸಿದಾರೆ. ನನಗೆ ಆ ಕೋಣೆ ಮೇಲೆ ಮೊದಲನೆ ನೋಟಕ್ಕೆ ನಂಬಿಕೆ ಬರ್ಲಿಲ್ಲ. ಐವತ್ತು ವರ್ಷಗಳ ಹಿಂದೆ ಬಾಗಿಲಿಗೆ ರಂಧ್ರದ ಬೀಗ ಯಾರು ಹಾಕಿದ್ರು? ಐವತ್ತು ವರ್ಷಗಳ ಹಳೆಯತನ ಅಲ್ಲಿ ಕಾಣೋದಿಲ್ಲ... ಲಕ್ಷ್ಮಣ ಆ ಮನೆಗೆ ಪರಿಚಯ ಆದ. ಅವನಿಗೆ ಆಸ್ತಿ ಬರುತ್ತೆ ಅನ್ನೊ ಮಾತಿನ ಮೇಲೆ, ಅವನ ಚೆಂದ, ಮಾತಿನ ವೈಖರಿ ಕಂಡು ಸ್ನೇಹಲತಾ ಅವನಿಗೆ ಸೋತು ಮದುವೆಗೆ ಸಿದ್ಧ ಆದ್ಲು. ಮನೇಲಿ ಯಾರಿಗೂ ಮದುವೆ ಇಷ್ಟ ಇಲ್ಲ. ಬಹುಶಹ ಸ್ನೇಹಲತಾನೂ ಕಡೆಯಲ್ಲಿ ತಾನು ತೊಗೊಂಡು ನಿರ್ಧಾರ ತಪ್ಪು ಅಂದುಕೊಂಡಿರಬೇಕು. ಸಮಸ್ಯೆ ನೀಗಿದರೆ ಸಾಕು ಅಂತ ಆಗಿದೆ... ಅಂಥಾಕಾಲದಲ್ಲಿ ಲಕ್ಷ್ಮಣ ದೆವ್ವದ

ಕೋಣೆಗೆ ಹೋಗೊ ಹಠ ತೊಟ್ಟಿದ್ದು. ಶನಿವಾರ ರಾತ್ರಿ ದೀಪ ಹೋದಾಗ ಏಳೂವರೆ ಹೊತ್ನಲ್ಲಿ ಮನೆಗೆ ಬಂದ. ದೀಪ ಬಂದ ಮೇಲೆ ಎಂಟೂಕಾಲಿಗೆ ಊಟ ಮಾಡ್ದ. ಸುಮಾರು ಹನ್ನೊಂದೂಕಾಲಿಗೆ ದೆವ್ವದ ಕೋಣೆಗೆ ಹೋದ..."

"ಹನ್ನೊಂದೂವರೆ ಅಲ್ಲವೆ?"

"ಕಪ್ಪು ಟೇಪ್‌ರೆಕಾರ್ಡರ್ ಆ ಕಾಲವನ್ನು ಐದು ನಿಮಿಷದ ವ್ಯತ್ಯಾಸದಲ್ಲಿ ಚೆನ್ನಾಗಿ ನಿರ್ಧರಿಸುತ್ತೆ. ಶನಿವಾರ ರಾತ್ರಿ ನಾನು ಆ ಕೋಣೆಗೆ ಹೋದ ಮೇಲೆ ಟೇಪ್ ಸುತ್ತೋದು ನಿಲ್ತು. ಆಗ ಹನ್ನೆರಡು ಗಂಟೆ ನಲವತ್ತೈದು ನಿಮಿಷ. ಅದು ಒಂದು ಗಂಟೆ ಕಾಲ ಸುತ್ತುವ ಟೇಪ್."

"ಅಂದರೆ ಟೇಪ್ ಹನ್ನೊಂದೂ ಮುಕ್ಕಾಲಿಗೆ ಪ್ರಾರಂಭ ಆಗಿದೆ. ಕೋಣೆ ಸೇರಿದ ಮೂವತ್ತು ನಿಮಿಷದ ದೀರ್ಘಕಾಲದ ಮೇಲೆ ರೆಕಾರ್ಡರ್ ಚಾಲೂ ಮಾಡಿದಾನೆ ಲಕ್ಷ್ಮಣ."

"ಹಾಗಲ್ಲ, ಅಷ್ಟು ದೀರ್ಘ ಕಾಲ ಅವನು ಕುಳಿತಿರಲಿಲ್ಲ. ಲಕ್ಷ್ಮಣ ಸುಮಾರು ಹನ್ನೊಂದೂಕಾಲರಲ್ಲಿ ಬೀಗದ ಕೈ ಹಿಡಿದು ಬರಿಗೈಲಿ ಕೋಣೆಗೆ ಬಂದ. ಹನ್ನೊಂದೂವರೆಗೆ ಇನ್ನೊಂದು ವ್ಯಕ್ತಿ ಟೇಪ್‌ರೆಕಾರ್ಡರ್, ಆರಿದ ಲಾಂದ್ರ, ಒಂದು ಲೋಟ ನೀರು ತೊಗೊಂಡು ಮೆಲ್ಲಗೆ ಅವನ ಕೋಣೆ ಪ್ರವೇಶ ಮಾಡ್ತು. ಅದರ ಹತ್ರ ಕೋಣೆಯ ಡೂಪ್ಲಿಕೇಟ್ ಬೀಗದ ಕೈ ಇದೆ... ತನ್ನ ಕೋಣೆಯ ಲಾಂದ್ರ ತಂದರೆ ಸಂಶಯಕ್ಕೆ ಆಸ್ಪದ ಅಂತ ಅಡಿಗೆ ಕೋಣೆಯಿಂದ ತಂದ ಲಾಂದ್ರ ಅದು. ಭಗವಂತ ಆ ಹೊತ್ತಿನಲ್ಲಿ ನಿದ್ರೆ ಮಾಡಿರ್ತಾನೆ ಅಂತ ಅದಕ್ಕೆ ಗೊತ್ತು. ಲಾಂದ್ರದಲ್ಲಿ ಎಣ್ಣೆ ಇಲ್ಲ ಅನ್ನೋದು ಅದಕ್ಕೆ ತಿಳಿಯದು. ಕೋಣೆಗೆ ಬಂದ ಮೇಲೇ ಅದು ಗೊತ್ತಾಗಿರೋದು. ಕತ್ತಲಿನಲ್ಲಿ ಬೆಂಕಿ ಕಡ್ಡಿ ಗೀಚಿ ನೋಡಿರಬೋದು. ಆ ಬೆಂಕಿ ಕಡ್ಡಿಗಳನ್ನ ಅಲ್ಲಿ ಬಿಟ್ಟಿಲ್ಲ. ಟೇಪ್‌ರೆಕಾರ್ಡರ್‌ನ ಸರಿಯಾಗಿ ಹನ್ನೊಂದೂಮುಕ್ಕಾಲಿಗೆ ಹಾಕಬೇಕೂಂತ ಲಕ್ಷ್ಮಣನಿಗೆ ಸೂಚನೆ ಕೊಡುತ್ತೆ. ಲಕ್ಷ್ಮಣ ಅದರ ಕೈ ಗಡಿಯಾರ ನೋಡ್ಕೊಂಡು ತನ್ನ ಗಡಿಯಾರದ ವೇಳೆ ತಿದ್ದಿಕೊಳ್ತಾನೆ. ಆದರೆ ಆ ಕಾಲ ಐದು ನಿಮಿಷ ಮುಂದು! ಶನಿವಾರ ರಾತ್ರಿ ಲಕ್ಷ್ಮಣನ ಕೈಲಿದ್ದ ಗಡಿಯಾರ ಐದು ನಿಮಿಷ ಮುಂದೆ ಅನ್ನೋದು ಮಹಜರ್‌ನಲ್ಲಿ ನಮೂದಿಸಿದ್ದೀನಿ... ಕತ್ತಲೆ ಕೋಣೆಯಲ್ಲಿ ಒಬ್ಬಂಟಿಯಾಗಿ ಕುಳಿತಿದ್ದ ಲಕ್ಷ್ಮಣನಿಗೆ ಬಹಳ ತೊಂದರೆ ಆಗಿದೆ. ಅವನಿಗೆ ಹುರುಪು, ಸ್ಥೈರ್ಯ ಕೊಡುವ ಗುಳಿಗೆ ಅಂತ ಹೇಳಿದ ವ್ಯಕ್ತಿ ಎರಡು ಮಾತ್ರೆಗಳನ್ನ ಅವನಿಗೆ ನುಂಗಿಸಿ ನೀರು ಕೊಡುತ್ತೆ. ಆದರೆ ಅವು ಬಲವಾದ ನಿದ್ರೆ ಗುಳಿಗೆಗಳು! ಬಹುಶಃ ಮಾಂಡ್ರೆಕ್ಸ್‌ನಂತಹ ನಿದ್ರೆಕಾರಕ. ಎರಡೇ ನಿಮಿಷಗಳಲ್ಲಿ ಲಕ್ಷ್ಮಣ ನಿದ್ರೆಯ ಸೆಳೆತಕ್ಕೆ ಸಿಕ್ಕಿ ಕುರ್ಚಿಗೆ ಒರಗ್ತಾನೆ.

ವ್ಯಕ್ತಿ ತನ್ನ ಕರವಸ್ತ್ರ ಬಳಸಿ ಅಥವಾ ಹಾಗೆಯೇ ಅವನ ಕುತ್ತಿಗೆ ಹಿಸುಕಿ ಹಾಕತ್ತೆ. ಲಕ್ಷ್ಮಣ ಸಾಯ್ತಾನೆ – ವ್ಯಕ್ತಿ ತನ್ನ ಕೈ ಗಡಿಯಾರ ನೋಡ್ತಾ ಕೂಡತ್ತೆ.

ಹನ್ನೊಂದೂಮುಕ್ಕಾಲು ಆದ ಕೂಡಲೇ ಟೇಪ್ ರೆಕಾರ್ಡರ್‌ನ ದೊಡ್ಡ ಧ್ವನಿಯಲ್ಲಿ ಚಾಲು ಮಾಡಿ, ಲೋಟ ತೊಗೊಂಡು ತನ್ನ ಬೀಗದ ಕೈನಿಂದ ಬಾಗಿಲು ಬಿಗಿಸಿ ಆತುರದಿಂದ ಮೆಟ್ಟಿಲು ಇಳಿಯುತ್ತೆ. ಆಗ ಶಬ್ದ ತುಸು ಜೋರಾಗಿ ಕೇಳಿದೆ. ಅದನ್ನೇ ಲಕ್ಷ್ಮಣ ಇಳಿದ ಅಂತ ಭಗವಂತ ಭಾವಿಸಿದ್ದು. ಲಾಂದ್ರನ ಕೋಣೆಯಲ್ಲಿ ಮರೆತು ಬಂದಿದೆ ವ್ಯಕ್ತಿ! ಕಟ್ಟಡದ ಹಿಂದಕ್ಕೆ ಲೋಟ ಎಸೆದು ಕತ್ತಲಿನಲ್ಲಿ ಕೋಣೆ ಸೇರತ್ತೆ... ಲಕ್ಷ್ಮಣನ ಕೋಣೆಯಲ್ಲಿ ರೆಕಾರ್ಡರ್‌ನಿಂದ ಹದಿನಾಲ್ಕು ನಿಮಿಷಗಳ ಅವಧಿಯ ಗಟ್ಟಿ ಸಂಭಾಷಣೆ ಕೇಳಿ ಬರತ್ತೆ, ಮಧ್ಯೆ ಬಿಟ್ಟು ಬಿಟ್ಟು ಆಡಿದ ಮಾತುಗಳು. ಆ ಮೇಲೆ ಅರ್ಧ ನಿಮಿಷದ ನಂತರ ಚೀತ್ಕಾರ ಕೇಳುತ್ತೆ! ಸತ್ತ ಲಕ್ಷ್ಮಣನ ಗಡಿಯಾರದ ಪ್ರಕಾರ ಆಗ ಸರಿಯಾಗಿ ಹನ್ನೆರಡು ಗಂಟೆ. ಮನೆಯೋರ ಗಡಿಯಾರಗಳಲ್ಲಿ ಹನ್ನೊಂದೂ ಐವತ್ತೈದು!... ಆ ಮೇಲೆ ಮುಕ್ಕಾಲು ಗಂಟೆಯ ತನಕ ಖಾಲಿ ಟೇಪ್ ಸುತ್ತುತ್ತೆ. ಅದು ನಿಲ್ಲುವ ಹೊತ್ತಿಗೆ ನಾನು ಬಂದಿದೀನಿ. ಸ್ನೇಹಲತಾ ಅಲ್ಲಿಗೆ ಹೋಗಲು ಬಾಗಿಲು ಬಡಿದಿದ್ದು, ಪುಷ್ಪಲತಾ ಅವಳನ್ನ ಕರೆ ತಂದಿದ್ದು ನಿಜ...'

"ಹಾಗಾದ್ರೆ ಹೆಣ್ಣುಮಕ್ಕಳಲ್ಲಿ ಯಾರು ಕೊಲೆ ಮಾಡಲಿಲ್ಲ..?"

"ಇಲ್ಲ."

"ಮನೆಯಲ್ಲಿ ದೀಪ ಹೋಗಿದ್ದು ಕೊಲೆಗಾರನಿಗೆ ಅನುಕೂಲ ಆಯ್ತು."

"ಅದು ಕಲ್ಪಿಸಿಕೊಂಡ ಸನ್ನಿವೇಶ. ಶನಿವಾರ ಸಂಜೆ ಆರೂವರೆಯಿಂದ ಎಂಟರತನಕ ವಿದ್ಯುತ್ ಇಲಾಖೆಯೋರು ದೀಪ ಆರಿಸೋದು ಗೊತ್ತು. ಅದೇ ಗುಂಗಿನಲ್ಲಿ ಅನುಮಾನ ಬರದ ಹಾಗೆ ಹತ್ತೂ ಮುಕ್ಕಾಲರಲ್ಲಿ ಕೊಲೆಗಾರ ಮನೆ ಮುಂದಿನ ವಿದ್ಯುತ್ ಕಂಬ ಹತ್ತಿ ತೆರೆದ ಪೆಟ್ಟಿಗೆಯಿಂದ ಕಟ್‌ಔಟ್ ಎಳೆದು ಅದರ ಫ್ಯೂಸ್ ತಂತಿ ಕಿತ್ತು ಮತ್ತೆ ಅಲ್ಲಿಗೆ ಸೇರಿಸಿ ಇಳಿದ... ಪಕ್ಕದ ಮನೆ ಪುಟ್ಟಯ್ಯ ಆ ಕತ್ತಲಲ್ಲಿ ಅವನ್ನ ಕಂಬದ ಮೇಲೆ ನೋಡಿ ಇಲಾಖೆಯ ಲೈನ್‌ಮನ್ ಅಂತ ತಿಳಿದ. ನಾನು ವಿದ್ಯುತ್ ಇಲಾಖೆಯ ಕಂಪ್ಲೇಂಟ್ ಪುಸ್ತಕ ನೋಡ್ದೆ. ಆ ರಾತ್ರಿ ಚಾಮಗೆರೆಯಿಂದ ಯಾವುದೂ ಕಂಪ್ಲೇಂಟ್ ಇಲ್ಲ. ಲೈನ್‌ಮನ್ ಯಾರೂ ಅಲ್ಲಿಗೆ ಹೋಗಿಲ್ಲ. ಚಾಮಗೆರೆ ಪಂಚಾಯ್ತಿ ಮನೆ ಆಳಿನ ಪ್ರಕಾರ ಅಲ್ಲಿನ ಫೋನ್ ಹನ್ನೆರಡು ಗಂಟೆವರೆಗೆ ಯಾರೂ ಬಳಸಿಲ್ಲ."

"ಪ್ರಾರಂಭದಿಂದಲೇ ಈ ಪ್ರಕರಣ ಸಂಶಯಕ್ಕೆ ಎಡೆಕೊಟ್ಟಿದೆ."

"ಅದರಿಂದಲೇ ನಾನು ಅಷ್ಟೊಂದು ಆಳವಾಗಿ ಏಕದಂ ತನಿಖೆ, ಹೇಳಿಕೆ ಅಂತ ಇಳಿದಿದ್ದು... ದೆವ್ವದ ಕೋಣೆಗೆ ಹೋಗೋ ಲಕ್ಷ್ಮಣ ಟಾರ್ಚು ಒಯ್ಯದೆ ಆರಿದ ಲಾಂದ್ರ ಯಾಕೆ ಒಯ್ಯಬೇಕು? ಅದೂ ಎಣ್ಣೆ ಇಲ್ಲದ ದೀಪ! ಆರಿದ ಲಾಂದ್ರವೇ ನನ್ನ ತಲೇನ ಮೊದಲು ಇರಿದದ್ದು. ಸಂಶಯದ ಮೊದಲನೆ ಪೆಟ್ಟು... ಕೊಲೆಗಾರ ಅದನ್ನ ಕೋಣೆಯಿಂದ ತರೋದು ಮರೆತ. ಆಮೇಲೆ ಗಾಬರಿ ಆಗಿದೆ. ಅದು ಕೋಣೆಯಲ್ಲಿದ್ರೆ ತನಗೆ ತೊಂದರೆ ತಪ್ಪದು. ಮತ್ತೆ ಒಂದು ಹೊತ್ನಲ್ಲಿ ಮೆಲ್ಲಗೆ ಕೋಣೆ ಸೇರಿದಾಗ. ಆಗ ಕೆಳಗೆ ಹಗ್ಗದ ಮಂಚದ ಮೇಲಿದ್ದ ನಮ್ಮ ದಫೇದಾರ್ ನಂದೀಶನಿಗೆ ನಿದ್ರೆ. ದೀಪ

ಹೊರಕ್ಕೆ ತಂದು ಬಣವೆಗೆ ಎಸೆದು ಬಂದ. ಭಗವಂತನ ಮೇಲೆ ಸಂಶಯಕ್ಕೆ ಆಸ್ಪದ! ಬಿಳಿಗೌಡ ಅದನ್ನ ಏಕಾಏಕಿ ಕಂಡು ಸಮಾಧಿ ಹತ್ರಕ್ಕೆ ತಂದಿಟ್ಟ... ಪಕ್ಕದ ಪುಟ್ಟಯ್ಯನ ಮನೆಯಲ್ಲಿ ದೀಪ ಇತ್ತು. ಗೌಡನ ಮನೆಯಲ್ಲಿ ಇರಲಿಲ್ಲ! ಮನೆಯ ಒಳಗಿನ ಫ್ಯೂಸ್ ಸರಿಯಾಗಿದೆ. ಹೊರ ಕಂಬದ ಫ್ಯೂಸ್‌ನಲ್ಲಿ ತಂತಿ ಸುಟ್ಟಿಲ್ಲ, ಕಿತ್ತುಹೋಗಿದೆ. ಹನ್ನೊಂದರಿಂದ ಹನ್ನೆರಡರವರೆಗೆ ನಡೆದಿದ್ದು ಒಬ್ಬರಿಗೆ ಒಂದೊಂದು ತರಹ ಕಂಡಿದೆ, ಕೇಳಿಸಿದೆ. ಟೇಪ್‌ರೆಕಾರ್ಡರ್ ಸಂಭಾಷಣೆ ಮೂವತ್ತು ಅಡಿ ದೂರಕ್ಕೆ ಎಷ್ಟು ಗಟ್ಟಿಯಾಗಿ ಕೇಳಬೇಕೋ ಅಷ್ಟು ಕೇಳಿದೆ. ಕಾದು ಕುಳಿತೋರಿಗೆ ಅದು ಇಬ್ಬರು ಕೋಣೆಯಲ್ಲಿ ಮಾತಾಡಿದ ಹಾಗೆ ಕೇಳಿದೆ... ಇಷ್ಟೆಲ್ಲಾ ಸಂಶಯ ಕಂಡಿದೆ."

"ಈಗ ಕೊಲೆಗಾರನ್ನ ಸರಿಯಾಗಿ ಹೆಸರಿಸಿಬಿಡು."

ದಿವಾಕರ ಕೊಲೆಗಾರನ ಹೆಸರನ್ನು ಚೀಟಿಯಲ್ಲಿ ಬರೆದು ಅದನ್ನು ಮಡಿಸಿ ಅಧಿಕಾರಿಗೆ ಕೊಟ್ಟ. ಅವನಿಗೆ ತನ್ನ ಪತ್ತೆದಾರಿಯಲ್ಲಿ ಅತೀವ ವಿಶ್ವಾಸ.

"ಈಗ ಫಿಂಗರ್ ಪ್ರಿಂಟ್ ವರದಿ ನೋಡಿ, ಸಾರ್. ಕಪ್ಪು ಟೇಪ್‌ರೆಕಾರ್ಡರ್‌ನಲ್ಲಿ ಸೇರಿದ್ದ ಆ ನಾಲ್ಕನೇ ಟೇಪು, ವಿದ್ಯುತ್ ಕಟ್‌ಔಟ್, ಲೋಟ ಇವು ಮೂರರ ಮೇಲೂ ಬಿದ್ದಿರೊ ಬೆರಳು ಗುರುತುಗಳು ಒಬ್ಬನದೇ. ಆ ಒಬ್ಬ ನಾನು ಹೆಸರಿಸಿರೊ ವ್ಯಕ್ತಿ."

ಲಕೋಟೆಯಿಂದ ದಪ್ಪನೆಯ ಹಾಳೆಗಳನ್ನೆಳೆದು ಬೆರಳು ಗುರುತುಗಳ ಫೋಟೊ ಪ್ರತಿಗಳನ್ನು ನೋಡಿ ವರದಿ ಓದಿದ. ಸಬ್‌ಇನ್ಸ್‌ಪೆಕ್ಟರ್‌ನ ಮುಖ ನಿಟ್ಟಿಸಿ ಅವನು ಕೊಟ್ಟಿದ್ದ ಚೀಟಿಯನ್ನು ಬಿಚ್ಚಿ ನೋಡಿದ.

ಕೊಲೆಗಾರ ಕೋಟೆಗೌಡ!

"ನಿನ್ನ ಯಶಸ್ವಿ ಪತ್ತೆದಾರಿಗೆ ಧನ್ಯವಾದಗಳು."

ಅಧಿಕಾರಿ ಹಾರ್ದಿಕವಾಗಿ ಎರಡೂ ಕೈಗಳನ್ನು ಬಳಸಿ ಹಸ್ತಲಾಘವ ನೀಡಿದ. ಇಬ್ಬರೂ ಕುಳಿತರು.

"ಕೋಟೆಗೌಡನ ಮೇಲೆ ಸಂಶಯ ತಟ್ಟಿದ್ದು ಹೇಗೆ?"

"ಭಗವಂತ ಹೇಳ್ದ, ಕೋಟೆಗೌಡ ಟೇಪ್‌ರೆಕಾರ್ಡರ್ ಒಯ್ದಾಗ ಸಮಾಧಿ ಹತ್ರ ಗಟ್ಟಿಯಾಗಿ ಕಿರಿಚಿದ ಅಂತ. ಎಷ್ಟೊಂದು ವರ್ಷಗಳಿಂದ ಕಂಡಿರೊ ಸಮಾಧಿ ಕೋಟೆಗೌಡನ್ನ ಹೆದರಿಸುವಂತ ದೃಶ್ಯ ಅಲ್ಲ. ಅದು ಹೆದರಿಕೆ ಕೂಗಲ್ಲ. ಮನೆಯಿಂದ ದೂರದಲ್ಲಿ ಚೀತ್ಕಾರ ರೆಕಾರ್ಡ್ ಮಾಡಿದ ರೀತಿ ಅದು... ತುಸು ಸಂಶಯ ಏರಿದ ಕೂಡಲೇ ಸಣ್ಣ ನಾಟಕ ಆಡ್ದೆ. ಹಿಪ್ಪೆ ಮರದ ರೆಂಬೆಗೆ ಟೇಪ್‌ರೆಕಾರ್ಡರ್ ಸೇರಿಸ್ದೆ. ಕೋಟೆಗೌಡ ಸಲೀಸಾಗಿ ಮರ ಹತ್ತಿ ಅದನ್ನ ಇಳಿಸಿದ. ಇಪ್ಪತ್ತೈದಡಿ ಎತ್ತರದ ಮರ ಹತ್ತಿದೋನು, ಮನೆ ಮುಂದಿನ ಇಪ್ಪತ್ತು ಅಡಿ ಎತ್ತರದ ಸಿಮೆಂಟ್ ವಿದ್ಯುತ್ ಕಂಬವನ್ನು ಹತ್ತಿ ಫ್ಯೂಸ್‌ನಲ್ಲಿ ಕೈ ಆಡಿಸಿರೋದು ಹೆಚ್ಚಲ್ಲ... ಸಂಶಯ ವಿಪರೀತವಾಗಿ

ಏರಿದ್ದು ಟೇಪ್‌ರೆಕಾರ್ಡರ್ ವಿಷಯದಿಂದ. ಲಕ್ಷ್ಮಣ ಸ್ನೇಹಲತಾ ಕೋಣೆಯಲ್ಲಿದ್ದ ಕಂದು ರೆಕಾರ್ಡರ್ ಸುಲಭವಾಗಿ ಒಯ್ಯಬೋದಿತ್ತು. ಅದು ಬಿಟ್ಟು ಕೋಟೆಗೌಡನ ಕಪ್ಪು ಯಂತ್ರ ತೊಗೊಂಡು ಹೊಗೊ ಅವಶ್ಯಕತೆ ಏನು? ದೆವ್ವದ ಕೋಣೆಗೋಸ್ಕರ ಸಂಭಾಷಣೆ ರೆಕಾರ್ಡ್ ಮಾಡಿದ ಮೇಲೆ ಆ ನಾಲ್ಕನೇ ಟೇಪ್‌ನ ಲಕ್ಷ್ಮಣ ತನ್ನ ವಶದಲ್ಲೇ ಇಟ್ಟಿದ್ದ. ಕಪ್ಪು ರೆಕಾರ್ಡರ್ ಕೋಟೆಗೌಡನ ಹತ್ರ ಇತ್ತು. ಶನಿವಾರದ ದಿನ ಕಪ್ಪು ರೆಕಾರ್ಡರ್‌ಗೆ ಆ ಟೇಪು ಹೇಗೆ ಸೇರ್ತು?... ನನ್ನ ತನಿಖೆಯಿಂದ ಇಷ್ಟು ಹೇಳ್ತೇನಿ. ಲಕ್ಷ್ಮಣ ದೆವ್ವದ ಕೋಣೆಗೆ ಹೋಗ್ತೀನಿ ಅಂತ ಸೂಚಿಸಿದ ಕೂಡಲೇ ಕೋಟೆಗೌಡನಿಗೆ ಮಿದುಳಿನಲ್ಲಿ ಮಿಂಚು ಕಂಡಿದೆ. ದೆವ್ವದ ಕೋಣೆಯಲ್ಲಿ ದೆವ್ವದೊಂದಿಗೆ ಸಂಭಾಷಣೆ ನಡೆಸುವ ನಾಟಕದ ಸೂಚನೆ ಕೊಟ್ಟಿದ್ದಾನೆ. ಸೂಚನೆ ಚೆನ್ನಾಗಿ ಕಂಡಿದೆ. ಲಕ್ಷ್ಮಣ ತನಗೆ ತಕ್ಕ ಹಾಗೆ ಸ್ನೇಹಲತಾಳ ಸಹಾಯದಿಂದ ಸಂಭಾಷಣೆ ರೆಕಾರ್ಡ್ ಮಾಡಿದ. ಆಮೇಲೆ ಕೋಟೆಗೌಡ ಏನೋ ಹೇಳಿ ಆ ಟೇಪ್‌ನ ಅವನಿಂದ ತೆಗೆದುಕೊಂಡ. ಸಂಭಾಷಣೆಯ ನಂತರ ಚೆನ್ನಮ್ಮನ ಹಾಗೆ ಕಂಠ ಬದಲಾಯಿಸಿಕೊಂಡು ಕೋಪದ ಮಾತು ಆಡಿದ್ದು ಸೇರ್ಸಿದಾನೆ. ಕೊನೆಯಲ್ಲಿ ತನ್ನ ಚೀತ್ಕಾರವನ್ನೂ ಸೇರ್ಸಿದಾನೆ. ಹಾಗೆ ಸೇರಿಸಿದ್ದು ಲಕ್ಷ್ಮಣನಿಗೆ ಗೊತ್ತಿರಲಿಲ್ಲ. ಕೋಟೆಗೌಡನ ಸೂಚನೆ ಮೇಲೆ ಲಕ್ಷ್ಮಣ ಬರಿ ಕೈಲಿ ದೆವ್ವದ ಕೋಣೆಗೆ ಹೋದ. ಆಮೇಲೆ ಕೋಟೆಗೌಡ ರೆಕಾರ್ಡರ್, ಲಾಂದ್ರ ಲೋಟ ತೊಗೊಂಡು ಕೋಣೆ ಸೇರಿ ಅವನ ಕೊಲೆ ಮಾಡ್ದ. ಮನೆಯೋರಿಗೆಲ್ಲಾ ಅದು ದೆವ್ವದ ಕೈನಿಂದ ಆದ ಮರಣದ ಹಾಗೆ ಕಾಣ್ತು."

"ಕೊಲೆಗೆ ಉದ್ದೇಶ ಏನು?"

"ಲಕ್ಷ್ಮಣ ಬಿಳಿಗೌಡನಿಗೆ ತಲೆ ನೋವು ತಂದಿದ್ದ. ಸ್ನೇಹಲತಾಗೂ ತನ್ನ ದುಡುಕು ಅರ್ಥವಾಗಿತ್ತು. ಸ್ನೇಹಲತಾ ವರದಪ್ಪನ್ನ ಮದುವೆ ಆಗೋದು ಕೋಟೆಗೌಡನಿಗೆ ಪ್ರಯೋಜನವಾಗುವ ವಿಷಯ. ಬಿಳಿಗೌಡ ಸ್ನೇಹಲತಾಳ ಮಾತು ಅಲ್ಲಗಳೆಯೋನಲ್ಲ. ಕೋಟೆಗೌಡನಿಗೆ ವರದಪ್ಪನೊಂದಿಗೆ ಸೇರಿ ಕೂರನಗೆರೆ ಜಮೀನಿನಲ್ಲಿ ಹರಳು ಕಲ್ಲು ತೋಡುವ ಯೋಜನೆ. ಲಕ್ಷ್ಮಣ ಇಲ್ಲವಾದರೆ ಗೌಡಮನೆತನದ ಗೌರವ, ಘನತೆ ಉಳಿಯುತ್ತೆ. ಈ ಎಲ್ಲಾ ಸಮಸ್ಯೆಗಳಿಗೂ ಒಂದು ಬಾಣ ಸಾಕು ಅಂತ ಕೋಟೆಗೌಡ ಪ್ರಯೋಗಿಸಿದ. ಈ ಪ್ರಕರಣದಲ್ಲಿ ಸ್ವಾರಸ್ಯವೇನು ಅಂದರೆ ಕೋಟೆಗೌಡ ಲಕ್ಷ್ಮಣನ್ನ ಕೊಲೆ ಮಾಡೊ ಸಂಗತಿ ಮನೆಯಲ್ಲಿ ಬಿಳಿಗೌಡ, ಸ್ನೇಹಲತಾ, ವರದಪ್ಪ ಯಾರಿಗೂ ಗೊತ್ತಿರಲಿಲ್ಲ. ಕೊಲೆ ಮಾಡಿದ ಮೇಲೂ ಗೊತ್ತಾಗಲಿಲ್ಲ."

"ನಿನ್ನ ತನಿಖೆ ಎಲ್ಲಾ ರೀತಿಯಿಂದಲೂ ಸರಿಯಾಗಿದೆ. ಕೊಲೆಗಾರನ್ನ ಅರೆಸ್ಟ್ ಮಾಡಬಹುದು."

ಬಣವೆಯಲ್ಲಿ ಸೂಜಿ ಹುಡುಕುವ ಸ್ವಭಾವದವ, ಏಳು ತಿಂಗಳಿಗೆ ಹುಟ್ಟಿದವನೆಂದು ಹಿದಾಯತ್‌ನಿಂದ ಕರೆಸಿಕೊಂಡ, ಸಾಸಿವೆಯನ್ನು ಬೆಟ್ಟ ಮಾಡುವ ಟೆನಿಸ್ ಚೆಂಡನ್ನು ಫುಟ್‌ಬಾಲ್ ಗಾತ್ರದಲ್ಲಿ ನೋಡುವ ಸಬ್‌ಇನ್ಸ್‌ಪೆಕ್ಟರ್ ದಿವಾಕರ ಮತ್ತೊಮ್ಮೆ ಅಧಿಕಾರಿಯ ಕೈ ಕುಲುಕಿ ಹೆಮ್ಮೆಯಿಂದ ಹೊರಬಂದ.

ತಾಟ್ಟಿ ಮೂ

1

ವೃತ್ತಾಕಾರದ ಕೌಂಟರ್ ಹಿಂದೆ ನಿಂತ ಚೂಪು ಮೀಸೆಯ ಬಾರ್‌ಮನ್ ಗೋಡೆಯ ಹೊಳಪು ಗಡಿಯಾರ ನೋಡಿದ. ಹತ್ತು ಗಂಟೆ ಬಾರಿಸಲು ಇನ್ನೂ ಹತ್ತು ನಿಮಿಷ ಇತ್ತು. ದೃಷ್ಟಿ ಮೂಲೆಯ ಕಡೆ ಹರಿಯಿತು. ಕೆಂಪು ಮಫ್ಲರ್, ಕಪ್ಪು ಕನ್ನಡಕ ಧರಿಸಿದ ಮೂಲೆಯವನ ಬೆರಳು ಆಡಿತು. ಕೌಂಟರ್‌ನಲ್ಲಿದ್ದ ಮನುಷ್ಯ ರೆಫ್ರಿಜರೇಟರ್‌ನಿಂದ ಶೀಷೆ ಎಳೆದು ಮುಂದೆ ಬಂದು, ಮೂರು ಖಾಲಿಶೀಷೆಗಳ ಪಕ್ಕದಲ್ಲಿ ಮೇಜಿಗೆ ತಲೆ ಇಟ್ಟವನ ಬೆನ್ನು ತಟ್ಟಿದ, ಆ ವ್ಯಕ್ತಿ ಬಲಗೈ ಚಾಚಿ ಕರಾರುವಾಕ್ಕಾಗಿ ಶೀಷೆಯನ್ನು ಬಲವಾಗಿ ಹಿಡಿದ. ತಲೆ ನಿಧಾನವಾಗಿ ಪಕ್ಕಕ್ಕೆ ಹೊರಳಿತು. ಅರೆ ಮುಚ್ಚಿದ್ದ ಕೆಂಗಣ್ಣುಗಳು ಮಂಕು ಬೆಳಕಿನಲ್ಲಿ ಮಿನುಗಿದವು.

ಕನ್ನಡಕದವನ ಪಕ್ಕಕ್ಕೆ ಬಂದು ಕುಳಿತ. ಶೀಷೆಯ ಬಿರುಡೆ ದೂರಕ್ಕೆ ಚಿಮ್ಮಿತು. ಕಾದು ನಿಂತ ಗ್ಲಾಸ್‌ಗೆ ದ್ರವ ಸುರಿಯಿತು. ಅರ್ಥಹೀನ ರಾಗ ಹೊರಬೀಳುತ್ತಿದ್ದಂತೆ ಗ್ಲಾಸ್ ತುಟಿಗೇರಿತು.

ಕೌಂಟರ್ ಕಡೆಯಿಂದ ರಿಂಗ್ ಆದಾಗ ಬಾರ್‌ಮನ್ ಲಗುಬಗೆಯಿಂದ ಧಾವಿಸಿ ಫೋನ್ ಕಿವಿಗೆ ಹಿಡಿದು ಎರಡು ತುಣುಕು ಮಾತುಗಳ ನಂತರ "ಹೋಲ್ಡ್ ದಿ ಲೈನ್ ಪ್ಲೀಸ್" ಎಂದು ಮತ್ತೆ ಮೇಜಿನ ಕಡೆಗೆ ಬಂದು ಶುನಕ ರಾಗ ಎಳೆಯುತ್ತಿದ್ದವನ ತೋಳು ಹಿಡಿದ.

"ಮಿಸ್ಟರ್ ಮೋಹನ್, ನಿಮಗೆ ಫೋನ್"

"ಆ ಕತ್ತೆ ಮಗನಿಗೆ ನೀನೇ ಏನಾದ್ರೂ ಒಂದು ಉತ್ತರ ಹೇಳ್ಬಿಡು"

ಮತ್ತೇರಿದ ತಲೆ ಗೊಣಗಿತು. ಆ 'ಕತ್ತೆಮಗ' ಯಾರೆಂದು ತಿಳಿಯಲು ಸಾಧ್ಯವಿಲ್ಲದಷ್ಟು ಕುಡಿದು ಇಹ ಮರೆತ ದೇಹ ಅದು, ಮೋಡ ಕವಿದ ಮಿದುಳು.

ಬಾರ್‌ಮನ್ ಅವನ ತೋಳು ಹಿಡಿದು ಎತ್ತಿ ಭುಜಕ್ಕೆ ಒರಗಿಸಿ ಕೌಂಟರ್‌ವರೆಗೆ ಎಳೆದು ತಂದು ಕಿವಿಗೆ ಫೋನ್ ಹೊಂದಿಸಿಕೊಟ್ಟ.

"ಹಲೊ... ಹೊತ್ತು ಗೊತ್ತಿಲ್ಲದ ನಾಯಿ!... ಹೆಂಗೆ ಗೊತ್ತು ನಾನಿಲ್ಲಿ ಇರೋದು..."

ಮೋಹನ ತೊದಲು ಮಾತು ನಿಲ್ಲಿಸಿ ತಲೆ ತೂರಾಡಿಸಿ ನಿಲ್ಲುವುದರಲ್ಲಿ ಅತ್ತಲಿಂದ 'ನಾಯಿ'ಯ ಕ್ಷಿಪ್ರ ಮಾತು ಕೇಳಿಸಿತು. ಅರೆ ಮುಚ್ಚಿದ ಕಣ್ಣುಗಳು ವಿಶಾಲವಾಗಿ ಅರಳಿ ಮಂಕು ಬೆಳಕಿನಲ್ಲಿ ಕೆಂಪು ಮಿನುಗಿಸಿ ಮತ್ತೆ ಅರೆ ಮುಚ್ಚಿದವು. ತುಟಿಗಳು ಅರಳಿ ಬಿಗಿದ ಕೆನ್ನೆಗಳೆರಡರಲ್ಲೂ ಗಂಟು ಮೂಡಿದವು.

"ಹಾಂ... ನಿಮ?... ನನ್ನ ತಂಗೀನ ಕೆಣಕೋಷ್ಟು ಧೈರ್ಯ! ರಕ್ತ ಹೀರಿ ಬಿಡ್ತೀನಿ... ಹಲೋ... ಹಲೋ... ಎಲ್ಲಿಂದ ಮಾತಾಡ್ತಿರೋದು... ಹಲೋ..."

ಡಿಸ್‌ಕನೆಕ್ಟ್ ಆದ ಫೋನನ್ನು ಮತ್ತೆ ಕಟ ಕಟಾಯಿಸಿದ. ಸತ್ವಹೀನ ಕಣ್ಣುಗಳು ರಸ್ತೆ ಕಡೆಗೆ ತಿರುಗಿದವು. ಷೆಲ್‌ವೈಟ್ ಬಣ್ಣದ ಅಂಬಾಸಿಡರ್ ಕಾರು ಮಾಸಲು ಕತ್ತಲಿನಿಂದ ಸ್ಪಷ್ಟವಾಗಿ ಮೈತೋರಿ ನಿಂತಿತ್ತು.

ಹಲ್ಲು ಕಚ್ಚಿದ ಮೋಹನ ತೂರಾಡುತ್ತ ಅತ್ತ ನಡೆದ. ಕಣ್ಣುಗುಡ್ಡೆಗಳನ್ನು ಬಿಗಿದಪ್ಪಲು ಯತ್ನಿಸಿದ ರೆಪ್ಪೆಗಳನ್ನು ಪ್ರಯಾಸದಿಂದ ಅರಳಿಸಿ ಕಾರಿನ ವೀಲ್ ಹಿಡಿದ. ಮಫ್ಲರ್ ಸರಿಪಡಿಸಿಕೊಂಡ ಕನ್ನಕಡಕಧಾರಿ ಹಿಮಬಾಲಿಸಿ ಬಂದು ಅವನ ಪಕ್ಕಕ್ಕೆ ಕುಳಿತ. ಮೋಹನನಿಗೆ ಅವನು ಯಾರೆಂಬುದು ಬೇಕಿರಲಿಲ್ಲ. ಮಿತಿಮೀರಿದ ಕುಡಿತಕ್ಕೆ ಸಿಕ್ಕಿದ ದೇಹಕ್ಕೆ ನಿದ್ರೆಯ ಸೆಳೆತ. ಪಕ್ಕದವನ ಕಡೆ ಸತ್ತ ದೃಷ್ಟಿ ಬೀರಿ ಹೂಂಕರಿಸಿದ.

"ನಾನು ಯಾರು ಗೊತ್ತಾ?" ಪಕ್ಕದವನು ಮೋಹನನ ಭುಜ ಹಿಡಿದ.

"ಯಾರಾದ್ರೆ ನಂಗೇನು?... ಅವನ ಹಾಗೆ ಇನ್ನೊಬ್ಬ ಕತ್ತೆ ಮಗ."

ಕನ್ನಡಕದವ ಬೇಸರಿಸಲಿಲ್ಲ.

"ನಿನ್ನ ತಲೆ ಸರಿ ಇಲ್ಲ. ಸ್ಟೀರಿಂಗ್ ಬಿಡು ನನಗೆ. ಕಾರಿನ ಸ್ಟೀರಿಂಗ್‌ವೀಲ್‌ಗೆ ಕೈ ಹಾಕಿದವನನ್ನು ಮೊಣಕೈನಿಂದ ತಿವಿದು ಕಾರು ಚಿಮ್ಮಿಸಿದ ಮೋಹನ. ರಾತ್ರಿಯಲ್ಲಿ ತಿರುವು ರಸ್ತೆಯಲ್ಲಿ ಭರ್ರನೆ ಸಾಗಿದ ಕಾರು. ಎದುರಿನಿಂದ ಕಣ್ಣು ಕುಕ್ಕಿದ ಮಂದಗತಿಯ ವಾಹನಗಳ ಕಡೆಗೆ ತಿಲ ಮಾತ್ರ ಲಕ್ಷ್ಯಕೊಡದೆ ತನ್ನ ವೇಗದಲ್ಲಿ ಸಾಗಿತು. ಶ್ವಾನರಾಗ ಮತ್ತೆ ಹರಿದು ಬಂತು.

"ಈ ಸಂಗೀತಾನ ಸಾಕುಮಾಡು. ನಿಧಾನವಾಗಿ ಹೋದ್ರೂ ಇಪ್ಪತ್ತು ನಿಮಿಷದಲ್ಲಿ ಮನೆ ಸೇರ್ಬೋದು. ಯಾಕೆ ಈ ಆತುರ? ನನಗೆ ರಸ್ತೇಲಿ ರಾತ್ರಿ ಸಾಯೋ ಇಷ್ಟ ಇಲ್ಲ... ನಿನ್ನ ಹಿತೈಷಿ ನಾನು."

ಪಕ್ಕದವ ಕೆಮ್ಮ ತೊಡಗಿದ. ಮೋಹನ ಪ್ರಯಾಸದಿಂದ ಚೂಪುಗಣ್ಣು ಓರೆ ಮಾಡಿ ರಸ್ತೆ ಕಡೆ ನೋಡುತ್ತಾ ಕಾರು ಚಲಾಯಿಸಿದ.

"ಮೊದಲು ನಿನ್ನ ಗೂರಲಿಗೆ ಮದ್ದು ಮಾಡೋದು ನೋಡು. ಜೇಬು ತುಂಬಿರೋತನಕ ಎಲ್ಲಾ ಹಿತೈಷಿಗಳೇ. ಕಾರು ಯಾವತ್ತಾದ್ರೂ ನಡೆಸಿದ್ದೀಯೇನು?"

ಪಕ್ಕದವ ಮೌನಿಯಾದ.

ಕೆಂಗೇರಿ ಪೊಲೀಸ್ ಸ್ಟೇಷನ್ ಮುಂದೆ ಸಾಲು ಗಟ್ಟಿ ನಿಂತ ಲಾರಿಗಳ ಸಮೀಪದಲ್ಲಿ ಕಾರು ಗಕ್ಕನೆ ನಿಂತಾಗ, ಓವರ್ ಕೋಟ್ ಧರಿಸಿದ ಪೇದೆ ಕಿಟಕಿ ಬಳಿ ನಿಂತು ಒಳಕ್ಕೆ ಇಣಕಿದ.

"ಯಾರ್ದು ಗಾಡಿ?" ಸ್ಟೇಷನ್ ಕಡೆಯಿಂದ ಮತ್ತೊಂದು ಓವರ್ ಕೋಟ್ ಪ್ರಶ್ನಿಸಿತು.

"ಅದೇ ಸಾರ್. ರಾಯರ ತಮ್ಮ. ಮೈಮೇಲೆ ಪೂರ್ತಿ ದೇವರು ಬಂದ್ಬಿಟ್ಟಿದೆ."

ದೇಹದ ನಾಳಗಳೆಲ್ಲಾ ತುಂಬುವಷ್ಟು ಕುಡಿದವನಿಗೆ ಆ ಚಳಿಯಲ್ಲೂ ಮೈ ಬಿಸಿಯಾಯಿತು.

"ಕುಡಿದಿರೋದು ನಿಮ್ಮಪ್ಪ... ನನ್ಮಗನೆ."

ಕಾರು ಸರಕ್ಕನೆ ಚಿಮ್ಮಿ ದಿಣ್ಣೆ ಏರಿ ಬಳಸಿನಲ್ಲಿ ಸರಿದು ಮತ್ತೆ ತಗ್ಗಿಗೆ ಇಳಿದಾಗ ಕಾರೊಂದು ಪಕ್ಕದಲ್ಲಿ ಸಶಬ್ದವಾಗಿ ಹಾದು ಹೋಯಿತು. ಲೋಹ ಘರ್ಷಣೆ ನೀರವತೆಯನ್ನು ತೂರಿ ಬಂತು. ಅಮಲು ಹಿಡಿದ ತಲೆ ಒದರಿತು.

"ಏನದು?"

"ಯಾವನೋ ಬಡಪಾಯಿ ಕಾರು ಉಜ್ಜಿ ಬಿಟ್ಟ. ಸದ್ಯ, ಎದುರಿಗೆ ಸಿಗಲಿಲ್ಲ. ಬಿಡು ವೀಲ್. ಇನ್ನು ಸುಮ್ಮನಿರೋದಿಲ್ಲ ನಾನು."

ವಾಹನ ಗಕ್ಕನೆ ನಿಂತಿತು. ಮಫ್ಲರ್‌ಧಾರಿ ಸ್ಟೀರಿಂಗ್ ವೀಲ್ ಹಿಡಿದ. ಮೋಹನ ಅವನ ಪಕ್ಕದಲ್ಲಿ ತಲೆ ಹಿಂದೆ ಹಾಕಿ ಕಣ್ಣು ಮುಚ್ಚಿದ.

ಹಾಸಗೆ ಹಿಡಿಯಲು ಕಾತರಿಸುವ ದೇಹ. ಒಂದೇ ಸಮನೆ ಹರಿದಾಡುವ ನಿಶ್ಯಕ್ತತೆ, ಏಕೆ ಹೀಗೆ?

ಪೌಲ್ಟ್ರಿ ಫಾರಂ ಅದೆಷ್ಟು ದೂರ? ಛೇ, ಇವನಿಗೆ ಸ್ಟೀರಿಂಗ್ ವೀಲ್ ಹಿಡಿದು ಅಭ್ಯಾಸವಿಲ್ಲ. ನಂಜುಂಡನ ರಕ್ತಹೀರುವುದು ಯಾವಾಗ ಈ ಜಟಕ ವೇಗದಲ್ಲಿ? ಈ ಹೊತ್ತಿಗೆ ತಂಗಿಯ ಗತಿ ಏನಾಗಿರುತ್ತದೆಯೊ!

"ಸಾಕು, ಬಿಡು ಜಾಗ" ಹಲ್ಲು ಕರಗುಟ್ಟಿಸಿದ.

"ಯಾರ ಮೇಲೆ ಇಷ್ಟೊಂದು ಬೆಂಕಿ?" ವೇಗ ತಗ್ಗಿಸದೆ ಕೇಳಿದ ಕನ್ನಡಕದವ.

"ತಿಂಗಳಿಗೆ ಮೂರು ಎಣಿಸೊ ಕುನ್ನಿಗೆ ನನ್ನ ತಂಗಿ ಮೇಲೆ ಕಣ್ಣು... ಏಯ್, ಎಲ್ಲೋ ಕೇಳಿದ ಸ್ವರ. ಯಾರು ನೀನು?" ಎಳೆಯುವ ರೆಪ್ಪೆಗಳನ್ನು ಹಿಗ್ಗಿಸಿ ನೋಡಿದ.

“ನಿನ್ನ ಒಬ್ಬ ಹಿತೈಷಿ” ಗೊಗ್ಗರು ದನಿ ಬಂತು. ಮೋಹನ ಅವನ ಕನ್ನಡಕ ಎಳೆಯಲು ಸೋತ ಕೈ ಹರಡಿದ. ಕಾರಿನ ಹೆಡ್‌ಲೈಟ್ ಒಮ್ಮೆಗೇ ಆರಿ ಹೋಯಿತು. ಕಾರು ಅತ್ತಿತ್ತ ಹೊರಳಿ ವೇಗ ಕುಗ್ಗಿಸಿತು.

“ಏನಾಯ್ತು?”

“ಲೈಟ್ ಹೋಗಿ ಬಿಡ್ತು. ಹಳೇ ಡಬ್ಬ ಕಾರು, ನಾನು ನೋಡ್ಕೋತಿನಿ ಸುಮ್ಮನೆ ಕೂತ್ಕೊ.”

ಮೋಹನ ಕತ್ತು ಮುಂದು ಮಾಡಿ ಗೊಣಗಿದ.

“ಹಾಳು ಡಾಕ್ಟರ್. ಯಾವತ್ತು ಈ ಗಾಡೀನ ಜಂಕ್‌ಗೆ ಹಾಕ್ತಾನೊ.”

ಮಾಸಲು ಬಿಳಿಪು ರಸ್ತೆಯಿಂದ ಎದ್ದು ಧೂಳು ನಾಡಿಕ ಹಿಂಡಿತು. ಗೊಣಗು ನಿಂತು ಕಣ್ಣು ಮೊನಚಾಯಿತು.

“ಯಾವ ಹಳ್ಳಿ ರಸ್ತೆ ಇದು?”

ಬ್ರೇಕಿಗೆ ತಾನೇ ಕಾಲು ಒತ್ತಿದ. ವಾಹನ ನಿಂತಿತು.

“ಇಳಿ ನೀನು.”

ಮೋಹನ ಅವನ ಭುಜವನ್ನು ಹಣೆಯಿಂದ ಗುದ್ದಿದ. ಇಬ್ಬರೂ ಅದಲು ಬದಲು ಸ್ಥಾನ ಹಿಡಿದರು ಕತ್ತಲೆಯೊಂದಿಗೆ ಮೈಗೂಡಿಸಿದ ಮರಗಳು ಭೂತಾಕಾರದಲ್ಲಿ ಗೋಚರಿಸಿದವು.

“ನಾಳೆಯಿಂದ ಎರಡು ಬಾಟಲ್ ಕಡಿಮೆ ಹಾಕು.”

“ಹತ್ತು ಬಾಟಲ್ ಏರಿಸಿದ್ರೂ ಜಗ್ಗೋದಿಲ್ಲ... ಇವತ್ತು ಕೊಂದುಬಿಟ್ಟ ರ‍್ಯಾಸ್ಕಲ್. ಲಿಕ್ಕರ್‌ಗೆ ಯಾವ ಚರಂಡಿ ನೀರೊ ಬೆರಸಿಬಿಟ್ಟ... ಓಹ್, ಇದು ಹೈರೋಡ್ ಅಲ್ಲ.”

ದೀಪವಿಲ್ಲದ ಕಾರು ಮತ್ತಷ್ಟು ಸಾಗಿತು. ರಸ್ತೆಯ ಮೇಲೆ ಮಾಸಲು ವಸ್ತುವೊಂದು ಕಾಣಿಸಿತು.

“ನಿಲ್ಸು”

ಕಾಲ ಮಿಂಚಿತ್ತು. ಪಕ್ಕದವನ ತೀಕ್ಷ್ಣ ಕರೆಗೆ ಮೊದಲೇ ಕಾರು ವಸ್ತುವನ್ನೇರಿ ಧಡಕ್ಕನೆ ಇಳಿದು ಅಡ್ಡಾದಿಡ್ಡಿ ಹರಿದು ನಿಂತು ಹೋಯಿತು.

ಕೆಳಗಿಳಿದ ಮೋಹನ ಆಕಳಿಸಿ ಮೈ ಸೆಟೆಸಿ ತಾನು ಚಕ್ರ ಹರಿಸಿದ. ವಸ್ತುವನ್ನು ಕಾಲಿನಿಂದ ಸ್ಪರ್ಶಿಸಿದ. ಮಾನವ ದೇಹ.

ಕುಡಿತದ ಅಮಲು ಒಂದೇ ಸಾರಿ ಅರ್ಧ ಇಳಿಯಿತು. ಮಿದುಳಿನ ಮೋಡ ಚದುರಿತು.

ಮಫ್ಲರ್‌ಧಾರಿ ಡ್ಯಾಷ್ ಬೋರ್ಡ್‌ನಿಂದ ಟಾರ್ಚ್ ತಂದು ಮುದುರಿ ಬಿದ್ದ

ದೇಹದ ಮೇಲೆ ಬೆಳಕು ಚೆಲ್ಲಿದ.

"ನಿನ್ನ ಹಾಗೆ ಪೀಪಾಯಿ ಕುಡಿದು ಆಕಾಶ ಹೊದ್ದು ಬಿದ್ದಿದ್ದ. ಹರೋ ಹರ ಅನ್ನಿಸಿಬಿಟ್ಟೆ."

ಬೆಳಕು ಒಂದೊಂದೇ ಅಂಗದ ಮೇಲೆ ಹರಡಿತು. ಕಪ್ಪು ಪ್ಯಾಂಟ್, ಹಳದಿ ಕೆಂಪು ಬಟ್ಟೆಗಳ ಅರ್ಧ ತೋಳಿನ ಷರ್ಟ್...

ಮೋಹನನ ಎದೆ ಕುಲುಮೆ ತಿದಿಯಂತೆ ತುಯ್ದಾಡಿತು. ಮಂಜು ಕಣ್ಣುಗಳು ಟಾರ್ಚ್ ಬೆಳಕನ್ನು ಅನುಸರಿಸಿದವು.

ಅರೆ ನರೆತ ತಲೆ ಕೂದಲು. ಅಸ್ಪಷ್ಟ ಮುಖ.

ಕುತ್ತಿಗೆಯಲ್ಲಿ ಬೆಳ್ಳಿ ತಾಯಿತು. ಬಲಗೈ ಬೆರಳಿನಲ್ಲಿ ಹುಲಿಯ ಗುರುತಿನ ಉಂಗುರ. ಹುಲಿ ಚರ್ಮದ ಪಟ್ಟಿಯ ಕೈಗಡಿಯಾರ. ರಕ್ತಸಿಕ್ತ ಮುಖ, ಗುರುತು ಸಿಗದಷ್ಟು ವಿಕಾರವಾಗಿತ್ತು.

ಬಾಯಿ ತೆರೆದು ನೋಡುತ್ತಿದ್ದ. ಮೋಹನ ಸರ್ಪದರ್ಶನವಾದವನಂತೆ ಮುಖ ಎತ್ತಿ ಚೀತ್ಕರಿಸಿದ. ಪಕ್ಕದವ ಟಾರ್ಚ್ ಕೆಡವಿ ಅವನ ತೋಳು ಹಿಡಿದ.

"ಯಾಕೆ ಹಾಗೆ ಕೂಗ್ತೀಯಾ?"

"ನಂಜುಂಡ!"

ಅವನದೇ ಉಂಗುರ, ಅವನದೇ ತಾಯಿತ. ಈ ಕೈಗಡಿಯಾರ ಎಲ್ಲ ಅವನವೇ!

ಕತ್ತಲಿನೊಂದಿಗೆ ಬೆರೆತ ದೇಹದ ಕಡೆಗೆ ಕಂಪಿಸುವ ಕೈ ಚಾಚಿದ. ತನ್ನೊಂದಿಗೆ ಎಷ್ಟೋ ಬಾರುಗಳಲ್ಲಿ ಶೀಷೆಗಳ ಪಾಲುದಾರನಾಗಿ ಅರ್ಧ ರಾತ್ರಿಯ ಬೀದಿ ನಡಿಗೆಗಳಲ್ಲಿ ಸಹಭಾಗಿಯಾದ ನಂಜುಂಡ.

"ಅಂದ್ರೆ ನಿನ್ನ ತಂಗಿ, ಅತ್ಯಾಚಾರ... ಏನೊ ಹೇಳಿದೆಯಲ್ಲಾ ಆ ಆಸಾಮಿ..."

ಭಾರವಾದ ತಲೆಯನ್ನು ಮಗುವಿನಂತೆ ಆಡಿಸಿದ ಮೋಹನ. ಪಕ್ಕದವನ ಬೆನ್ನು ತಟ್ಟಿ ಆತುರವಾಗಿ ಹೇಳಿದ.

"ಹದರ್ಬೇಡ. ಹೇಳಿದ ಹಾಗೆ ಕೇಳು. ಹತ್ತು ಕಾರು"

ವೀಲ್ ಹಿಡಿದು ಮೋಹನ ಮೈ ನಡುಗಿಸಿದ. ಮತ್ತೆ ಕುಸಿದು ಬೀಳುವಷ್ಟು ಆಯಾಸ.

"ಗಾಡಿ ರಿವರ್ಸ್ ಮಾಡಿ ಒಂದೆರಡು ಸಲ ದೇಹದ ಮೇಲೆ ಓಡಾಡ್ಸು." ಗಡಸಾಗಿ ಹೇಳಿದ ಪಕ್ಕದ ಹಿತೈಷಿ. ಮೋಹನ ಭ್ರಮಾಧೀನನಂತೆ ಕಾರು ಹಿಂದಕ್ಕೆ ಚಲಾಯಿಸಿ ದೇಹದ ಮೇಲೆ ಹರಿಸಿದ. ಅವನ ಸೂಚನೆಯಂತೆ ಮತ್ತೆ ಹಿಂದೆ ಮುಂದೆ ಸರಿದು ದೇಹದ ಮೇಲೆ ಮೂರು ನಾಲ್ಕು ಬಾರಿ ಕಾರನ್ನು ಓಡಾಡಿಸಿದ.

ಇಬ್ಬರೂ ಇಳಿದರು. ದೇಹ ಡಿಕ್ಕಿ ಸೇರಿತು. ಕಾರು ಅದೇ ರಸ್ತೆಯಲ್ಲಿ

ಮುಂದುವರೆಯಿತು. ಸಣ್ಣ ಕೆರೆಯ ಅಂಚಿಗೆ ನಿಂತಿತು. ದೇಹ ಡಿಕ್ಕಿಯಿಂದ ಹೊರಕ್ಕೆ ಎಳೆದು ಮೋಹನ ಅವನ ಸಹಾಯದಿಂದ ಏರಿಯವರೆಗೆ ಒಯ್ದು ನೀರಿಗೆ ಎಸೆದ. ಕಾರು ಹಿಂದಕ್ಕೆ ಚಲಿಸಿ ಹೈರೋಡ್ ತಲುಪಿತು.

"ಇದಕ್ಕೆಲ್ಲಾ ಹೆದರಬೇಡ. ಒಂದೊಂದು ಸಾರಿ ಹೀಗೆ ಬೇವಾರ್ಸಿಗಳು ಸಿಕ್ಕಿ ಹೋಗ್ತಾರೆ. ನಿಲ್ಸು ಕಾರು. ಇಲ್ಲಿ ಇಳೀತೀನಿ. ನಿನ್ನ ಮನೆ ಸೇರಿ ಬೆಚ್ಚಗೆ ಮಲಕೊ. ಬೆಳಗ್ಗೆ ಹತ್ತರ ತನಕ ಏಳ್ಬೇಡ."

ಬಾಗಿಲು ತೆರೆದು ಕೆಳಗಿಳಿದ.

ಬೊಂಬೆಯಂತೆ ಕುಳಿತ ಮೋಹನ ನಿರಾಶನಂತೆ ಹೇಳಿದ.

"ಎಲ್ಲೊ ನೋಡಿದೀನಿ. ಗಂಟಲು ಕೇಳಿದೀನಿ. ಯಾವ ಬಾರ್‌ನಲ್ಲೋ..."

"ಹುಚ್ಚು ನಿನಗೆ. ನಾನು ಇದೇ ಮೊದ್ಲು ನಿನ್ನ ನೋಡ್ತಾ ಇರೋದು. ಈಗ ನಿನಗೆ ಕುಡಿದಿದ್ದೆಲ್ಲಾ ತಲೆಗೆ ಏರ್ತಾ ಇದೆ. ನಾನು ಹೇಳಿದ ಹಾಗೆ ನಾಳೆಯಿಂದ ಎರಡು ಬಾಟಲ್ ಕಡಿಮೆ ಮಾಡು. ಮತ್ತೆ ಯಾವಾಗಲಾದ್ರೂ ಬಂದು ಕಾಣ್ತೀನಿ. ನಿನ್ನ 'ಹಿತೈಷಿ' ನಾನು."

'ಹಿತೈಷಿ' ರಸ್ತೆಯ ಅಂಚಿನಲ್ಲಿ ಬಿರುನಡಿಗೆ ಹಾಕಿ ಮರಗಳ ಮಧ್ಯೆ ಮಾಯವಾದ.

"ಅಯೋಗ್ಯ"

ತನ್ನಷ್ಟಕ್ಕೆ ತಾನೇ ಹೇಳಿಕೊಂಡ ಮೋಹನ. ಕೀ ತಿರುಗಿಸಿ ಯಂತ್ರ ಗೊರಗುಟ್ಟಿಸಿದ.

2

ಹೋಸ್ ಗೈಪ್‌ನಿಂದ ಕಾರಿಗೆ ನೀರು ಚಿಮ್ಮುತ್ತಿದ್ದ ಮೋಹನ ಬೂಟು ಸಪ್ಪಳದಿಂದ ಬೆಚ್ಚಿ ಹಿಂದಕ್ಕೆ ತಿರುಗಿದ.

ಕಂಪನಿಯ ಡಾಕ್ಟರ್ ವಾಗೀಶ ಕೋಟು ಜೇಬಿಗೆ ಕೈ ಸೇರಿಸಿ ನಿಂತಿದ್ದ.

"ಚಿಕ್ಕ ಯಜಮಾನರಿಂದ ಇಷ್ಟೊಂದು ಸೇವೆ ನಿರೀಕ್ಷಿಸೋದಿಲ್ಲ ನನ್ನ ಈ ಹಳೆ ಕಾರು. ತೊಗೊಂಡು ಹೋಗಿ ಸುಮ್ಮನೆ ತಂದ್ರೆ ಸಾಕಾಗಿದೆ. ಈ ಸ್ನಾನವೆಲ್ಲಾ ಬೇಡ. ಮಿಸ್ಟರ್ ಮೋಹನ್, ಎಷ್ಟು ತೊಂದ್ರೆ ಆಯ್ತು ಗೊತ್ತೆ. ನಿನ್ನೆ ತುರ್ತಿನ ಕರೆ. ಚಾಮಯ್ಯ ಈಗಲೋ ಆಗಲೋ ಅನ್ನುವಂತಾಗಿತ್ತು. ಆದರೆ ಕಾರು ನಾಪತ್ತೆ. ನಿಮ್ಮ ದಾರಿ ಕಾದು ಸಾಕಾಗಿ ಲಾರಿ ಹಿಡಿದು ಸಿಟಿ ಸೇರಬೇಕಾಯ್ತು. ಮತ್ತೆ ರಾತ್ರಿ ಎಂಟೂವರೆ ಮಂಚೇನಹಳ್ಳಿ ಬುಲಾವ್. ಲಾರಿ ಹಿಡಿದು, ಕಂಪನಿಗೆ ಬಂದು ಮ್ಯಾನೇಜರ್ ಸ್ಕೂಟರ್ ತೊಗೊಂಡು ಮಂಚೇನ ಹಳ್ಳಿ ಯಾತ್ರೆ ಮುಗಿಸಿದ್ದಾಯ್ತು...."

ಮಂಚೇನಹಳ್ಳಿ! ರಾತ್ರಿ ಎಂಟೂವರೆ! ಮೋಹನ ಕೈಲಿದ್ದ ನೀರಿನ ಪೈಪ್ ಕೆಳಕ್ಕೆ

ಬಿತ್ತು. ಪೈಪ್‌ನಿಂದ ರಭಸವಾಗಿ ಚಿಮ್ಮಿ ಬರುತ್ತಿದ್ದ ನೀರು ಕೊಚ್ಚೆ ಸಿಡಿಸಿತು. ಡಾಕ್ಟರ್ ಹಿಂದಕ್ಕೆ ಹಾರಿ ಪ್ಯಾಂಟ್ ಒದರಿದ.

"ಆ ಹೊತ್ನಲ್ಲಿ ಅಲ್ಲಿಗೆ ಯಆಕೆ ಹೋಗಿದ್ರಿ, ಡಾಕ್ಟ್ರೆ?" ಧ್ವನಿ ಕಂಪನ ಕಷ್ಟಪಟ್ಟು ಅಡಗಿಸಿದ.

"ಹೇಳಿದ್ನಲ್ಲಾ, ಕಸಬು ಅಂತಾದ್ದು. ಎರಡು ಕಾಸು ಸಂಪಾದನೆ ಬೇಕಾದ್ರೆ ಅರ್ಧ ರಾತ್ರೀಲಿ ಬೆಟ್ಟಕ್ಕೂ ಹತ್ಬೇಕು. ಚಾಮಯ್ಯ ಬಹುಶಃ ನಾಳೆ ತೀರ್‍ಕೊಬೋದು."

ಚಾಮಯ್ಯನ ಸಾವು ಯಾರಿಗೆ ಬೇಕು? ಮೋಹನನ ಕೈ ಮತ್ತೆ ಪೈಪ್ ಎತ್ತಿಕೊಂಡಿತು. ವಾಗೀಶ ಕಾರಿನ ಸುತ್ತ ನಡೆದು ಬಂದ. ಮೂರು ತಿಂಗಳಿಂದ ನೀರು ಕಾಣದ ಬಿಳಿವಾಹನ ಪೂರ್ಣವಾಗಿ ತೊಯ್ದಿತ್ತು.

"ಈ ಸರ್ವೀಸಿಂಗ್ ಸಾಕು ಮಹರಾಯ್ರೆ. ಪುಗಸೆಟ್ಟೆ ನೀರು ಉಗ್ಗಿಬಿಟ್ಟು ನನ್ನ ಒಲಿಸೋ ನಾಟಕ ಬೇಡ. ಈಗ ಕಾರಿಗೆ ಆಗಿರೋ ಸಂಸ್ಕಾರ ಸಾಕು. ಸ್ವಿಚ್ ಆಡ್ತಾನೆ ಇಲ್ಲ. ಬಲಭಾಗ ನೆಗ್ಗಿ ಹೋಗಿದೆ. ಎಲ್ಲ ನಿನ್ನೆ ರಾತ್ರಿಯ ಸಹವಾಸ. ಹೋದ ವಾರ ಷಾಕ್ ಅಬ್ಸಾರ್ಬರ್ಸ್ ಬದಲಾಯಿಸ್ದೆ. ಇನ್ನೆರಡು ತಿಂಗಳಿಗೆ ಹಾಕಬೇಕಾದ ಸ್ಟೆಪ್ನಿಗೆ ಇವತ್ತೇ ಕಾಲ ಬಂದಿದೆ. ಕೈ ಮುಗಿತೀನಿ. ಬಡವನ ಕಾರು ಮುಟ್ಬೇಡಿ ಇನ್ನು ರಾಯರಿಗೆ ಹೇಳಿ ಅವರ ಕಾರು ಕೊಡಿಸೋ ಭಾರ ನನಗಿರಲಿ."

ಮೋಹನನ ತಲೆ ಮಂಚೇನಹಳ್ಳಿ ರಸ್ತೆಗೆ ಹರಿದಿತ್ತು. ತಾನು ಅತ್ತ ಬಂದಾಗ ರಾತ್ರಿ ಹತ್ತು ದಾಟಿರಬೇಕು. ಅದಕ್ಕೆ ಮೊದಲು ಅಲ್ಲಿ ಡಾಕ್ಟರ್ ವಾಗೀಶ. ಅವನು ನಂಜುಂಡನ ಪಕ್ಕದಲ್ಲಿ ಹಾದು ಹೋದನೆ?

ಕಂಪನಿ ಆಳು ಕಾರು ಒರೆಸತೊಡಗಿದ.

"ಡಾಕ್ಟರೇ, ರಾತ್ರಿ ಆ ರಸ್ತೇಲಿ ಏನಾದರೂ ನೊಡಿದ್ರಾ?" ಮಾತಿಗೆ ಧೈರ್ಯದ ಕವಚ ಹೊದಿಸಿ ಉತ್ತರ ಕಾದು ಉಸಿರು ಹಿಡಿದ.

"ಧೂಳು, ಪಾಪಾಸುಕಳ್ಳಿ.. ಕತ್ತಾಳೆ" ಡಾಕ್ಟರು ಕರವಸ್ತ್ರದಿಂದ ಮೂಗು ಒರೆಸಿದ.

"ನಾನು ಕೇಳಿದ್ದು, ಯಾವುದಾದರೂ ಜೀವನದ ವಸ್ತು...." ನಾಲಗೆ ಕಚ್ಚಿದ.

"ಸ್ಕೂಟರ್ ಬೆಳಕಿಗೆ ಅಡ್ಡ ನಿಮತು ಪಿಳಪಿಳ ಕಣ್ಣಾಡಿಸಿದ ಎರಡು ಮೊಲ. ಸಾಕು ನಿಮ್ಮ ಪ್ರಶ್ನಾವಳಿ. ಆ ಹೊತ್ನಲ್ಲಿ ಸುಡುಗಾಡು ಹಳ್ಳಿಗೆ ಹೋಗಿ ಸುರಕ್ಷಿತವಾಗಿ ಹೇಗೆ ವಾಪಸ್ ಬಂದ್ರಿ ಅಂತ ಕೇಳಿ. ಮೊದಲೇ ಸ್ಕೂಟರ್ ಹಿಂದಿನ ಚಕ್ರದಲ್ಲಿ ಸರಿಯಾಗಿ ಗಾಳಿ ಇರ್ಲಿಲ್ಲ. ಹಾಗೆ ಕುಲುಕಾಡ್ತಾ ಮೈಯೆಲ್ಲಾ ನೆಗ್ಗಿಸಿಕೊಂಡು ಹಳ್ಳಿ ಸೇರಿ ಪೇಷಂಟ್ ನೊಡ್ಕೊಂಡು ಬರೋವಾಗ ಎಂಜಿನ್ ಐದು ಸಾರಿ ಆಫ್ ಆಯ್ತು. ಪಿಕಪ್ ಟ್ರಬಲ್, ಮೊದಲೇ ಬಂಡ ರಸ್ತೆ. ಅದರ ಮೇಲೆ ಕತ್ತಲೆ. ಪಿಶಾಚಿ ಕತೆಗಳೆಲ್ಲಾ ಆಗಲೇ ನೆನಪಿಗೆ ಬರೋದು. ಹೇಗೊ ಬಂದು ಸೇರ್‍ದೆ. ಬಂದ ಕೂಡ್ಲೆ ಪ್ರತಿಜ್ಞೆ ಮಾಡ್ದೆ. ಇನ್ನು ಬದುಕಿರೊ ತನಕ ರಾತ್ರಿ ಹೊತ್ನಲ್ಲಿ ಯಾವ ಹಳ್ಳಿಗೂ ಹೋಗಬಾರದೂಂತ.

ಹಾಗೇ ನಿಮ್ಮ ಕೈಗೆ ನನ್ನ ಗಾಡಿ ಸಿಗದ ಹಾಗೆ ಮಾಡಬೇಕೂಂತ, ನನ್ನ ಗಾಡಿ ಮೇಲೆ ಯಾಕೆ ನಿಮಗೆ ಅಷ್ಟೊಂದು ಕಣ್ಣು? ಉಡಾಯ್ಸಿ ನಿಮ್ಮ ಅಣ್ಣನೋರ ಪಾಂಟಿಯಾಕ್. ಕಾರ್ಖಾನೆ ಹೆರಾಲ್ಡ್ ಕೊಳಿತಾ ಬಿದ್ದಿದೆ."

"ನನಗೆ ಯಾರು ಕೊಟ್ಟಾರು ಕಾರು. ಹೆಸರಿಗೆ ದೊಡ್ಡ ಕಂಪನಿ ಮಾಲೀಕರ ಖಾಸಾ ತಮ್ಮ. ನನ್ನ ಅವಸ್ಥೆ ಗೊತ್ತಿರೋರಿಗೆ ಗೊತ್ತು."

ಆಕಾಶಕ್ಕೆ ತಲೆ ಎತ್ತಿದವನ ಬೆನ್ನು ಸವರಿದ.

"ತಪ್ಪು ಯಾರ್ದು? ಸ್ವಯಂಕೃತಾಪರಾಧ. ನೀವು ಎಷ್ಟು ನಮ್ರವಾಗಿ ಹೇಳಿದ್ರೂ ಯಾರೂ ಒಪ್ಪೋದಿಲ್ಲ. ದೂರದಲ್ಲಿ ಶೀಷೆ ಕಾಣಿಸಿದ್ರೆ ಅದನ್ನ ಹಿಡಿಯೋಕೆ ಬೆಂಕೀಲಿ ನುಗ್ಗೊ ಸಾಹಸಕ್ಕೂ ನೀವು ಸೈ ಅಂತ ಜನ ಆಡೋದ್ರಲ್ಲಿ ಅರ್ಥ ಇದೆ."

ತುಟಿಯವರೆಗೆ ಹಾದು ಬಂದ 'ಫೂಲ್' ಎಂಬ ರೋಷದ ಪದವನ್ನು ತಡೆಯಲು ಸಾಕಷ್ಟು ಶ್ರಮ ವಹಿಸಿದ ಮೋಹನ.

* * *

ಹಸಿರು ಉಲ್ಲನ್ ಕೋಟು, ತಲೆಗೆ ಕೆಂಪು ಚೌಕ ಧರಿಸಿದ ಚಂದ್ರಮ್ಮ ಟ್ಯಾಕ್ಸಿಯಿಂದ ಇಳಿದಾಗ ಮ್ಯಾನೇಜರ್ ಧನಂಜಯ ಪಕ್ಕದಲ್ಲಿ ನಿಂತವನ ಮುಖವನ್ನು ಅಚ್ಚರಿಯಿಂದ ನೋಡಿದ.

"ಹಾಂ, ಅಮ್ಮಾವ್ರು! ಇದೇನು ಇಷ್ಟು ಬೇಗ ಬಂದುಬಿಟ್ರಿ?"

ಸೆಕ್ಷನ್ ಸೂಪರ್‌ವೈಸರ್ ಬೆರಗಾಗಿ ಕೇಳಿದ. ಕಾರಿನಿಂದ ನರ್ಸ್ ಇಳಿದಳು. ಧನಂಜಯ ಚಂದ್ರಮ್ಮನ ಕೈನಿಂದ ಸೂಟ್‌ಕೇಸ್ ತೆಗೆದುಕೊಂಡು ಹಿಂದೆ ನಡೆದ.

ಮನೆಯ ಪೋರ್ಟಿಕೊದಲ್ಲಿ ನಿಂತ ಬಿಗಿ ಸೂಟಿನ ಲಾಯರ್ ಅರವಿಂದ ಸಿಳ್ಳು ಹಾಕಿ ಕೇಳಿದ.

"ಚಂದ್ರಮ್ಮನೋರೆ, ಇದೇನು ಧಿಡೀರ್ ಅಂತ ಇಳಿದುಬಿಟ್ರಿ ತಿಂಗಳಿಂದ ಪ್ರೋಗ್ರಾಂ ಜೋಡಿಸಿದೋರು?... ಎಲ್ಲಿ ರಾಯರು?"

ಎರಡೂ ಕೈ ಆಡಿಸಿ ಚಂದ್ರಮ್ಮನ ಮುಖ ನೋಡಿದ

ಸೊರಗಿದ ಮುಖ. ನೆಮ್ಮದಿ ತಪ್ಪಿದ ಕೆಂಪು ಕಣ್ಣುಗಳು. ನೂರು ಕತೆ ಹೇಳಲು ಕಾತರಿಸಿದ ಬಣ್ಣಗೆಟ್ಟ ತುಟಿಗಳು.

ಆಸಕ್ತಪೂರ್ಣ ಲಾಯರನ್ನು ನಿರಾಶಕ್ತಿಯಿಂದ ನೋಡಿದಳು ಚಂದ್ರಮ್ಮ.

"ಪ್ರವಾಸ ಮಾಡೋದಕ್ಕೂ ಹಣೇಲಿ ಬರೆದಿರಬೇಕು. ಹಣ ಇದ್ರೆ ಆಯ್ತೆ? ರಾಯರು ಹಂಗೆ ಹೋದ್ರು. ನಾನು ಹೀಗೆ ಬಂದೆ."

ಕೋಟು ಬಿಚ್ಚಿ ಕೈಗೇರಿಸಿದಳು.

"ಏನಾಯ್ತು?" ಧನಂಜಯ ಗಾಬರಿಯಿಂದ ಕೇಳಿ ಲಾಯರ್ ಕಡೆ ತಿರುಗಿದ.

"ತಪ್ಪಿದ್ದು ಯಾವಾಗ ಕರ್ಮ. ಅದೇ ಖಾಯಿಲೆ. ಬೆಂಗಳೂರು ಸೇರೊ ತನಕ ಸರಿಯಾಗಿದ್ದೆ. ಆಮೇಲೆ ಶುರು ಆಯ್ತು ನರಕ ಯಾತನೆ. ಸೂಜಿ ಇರಿದ ಹಾಗೆ ಹೊಟ್ಟೆನೋವು. ಯಜಮಾನ್ರು ಕಂಗಾಲಾಗಿ ಟೂರು ಕ್ಯಾನ್ಸಲ್ ಮಾಡ್ತೀನಿ ಅಂದ್ರು. ಬರಿ ಟೂರ್ ಹಾಗಿದ್ರೆ ಪರವಾಗಿಲ್ಲ. ಕಂಪನಿ ಕೆಲಸಕ್ಕೆ ನನ್ನ ಅಡ್ಡಿ. ನೂರು ಸಾರಿ ಹೇಳಿ ಅವರನ್ನ ಒಪ್ಪಿಸಿದ್ದಾಯ್ತು. ನನ್ನ ನರ್ಸಿಂಗ್ ಹೋಂ ಸೇರ್ಸಿ ಪ್ರಯಾಣ ಮಾಡಿದ್ರು. ನಾನು ಹಿಂದಕ್ಕೆ ಬಂದೆ."

ಚಂದ್ರಮ್ಮನ ಮುಖದಲ್ಲಿ ಅತೀವ್ ನೋವು ಕಾಣಿಸಿತು. ಲಾಯರ್ ಸುಮ್ಮನೆ ನಿಂತ. ಮುಂದಿನ ಮಾತು ಆಡದೆ ಅವಳು ನೇರವಾಗಿ ಕೋನೆ ಸೇರಿ ಹಾಸಿಗೆ ಮೇಲೆ ಕುಳಿತಳು. ಸ್ವೆಟರ್ ಏರಿಸಿದಳು. ಬಿಸಿ ನೀರು ತರಲು ನರ್ಸ್ ಅಡಿಗೆ ಮೆ ಕಡೆ ಹೊರಟಮೇಲೆ ಧನಂಜಯ ಲಾಯರೊಂದಿಗೆ ಹೊರ ಬಂದ.

ಅತ್ತಿಗೆಯ ಅನಾರೋಗ್ಯ ಹಾಗೂ ಅವಳೂ ಏಕಾಏಕಿ ಹಿಂತಿರುಗಿದ ಸುದ್ದಿ ಕೇಳಿ ಚಿತ್ರಾ ಧಾವಿಸಿ ಬಂದಳು.

"ಏನಾಯ್ತು, ಅತ್ತಿಗೆ? ಹೈದರಾಬಾದ್ ಅಂತ ಹಾಗೆ ಹೋಗಿ ಹೀಗೆ ಬಂದಿದೀರಿ. ಛೆ, ಹೀಗಾಗಬಾರದಾಗಿತ್ತು. ಅಣ್ಣ ಸುರಕ್ಷಿತವಾಗಿ ಹೊರಟ್ರು ತಾನೆ?"

ತಪ್ಪು ಮಾಡಿದವಳಂತೆ ನೆಲ ನೋಡಿ ಸರಗು ತುದಿಯನ್ನು ಬೆರಳಿನಿಂದ ಸುತ್ತುತ್ತಾ ನಿಂತ ನಾದಿನಿಯನ್ನು ಗಂಭೀರವಾಗಿ ನೊಡುತ್ತಿದ್ದಳು ಚಂದ್ರಮ್ಮ. ಕಣ್ಣು ತಲೆಯ ತುರುಬಿನ ಕಡೆ ತಿರುಗಿತು.

ತುರುಬು ಹಿಡಿದ ಹಳದೆ ತಾಳೆ ಹೂ. ಪ್ರೇಮಿ ಅರವಿಂದನ ಕಾಣಿಕೆ.

"ಹೈದರಾಬಾದ್ ಅಂತ ನಾನು ಹೋಗ್ಲಿಲ್ಲ. ಯಾರಿಗೆ ಬೇಕು ಅದೆಲ್ಲಾ ಅವರನ್ನ ಬೆಂಗಳೂರುತನಕ ಬಿಟ್ಟು ಬರೋದಕ್ಕೇ ಹೋಗಿದ್ದು. ಅಲ್ಲಿಂದ ಪಾಡು ಪಟ್ಟು ಬಂದೆ."

ಫ್ರೂಟ್ ಸಾಲ್ಟ್ ಪುಡಿಯನ್ನು ನೀರಿಗೆ ಹಾಕಿ ನೊರೆಗುಟ್ಟಿಸಿದಳು.

"ಮ್ಯಾಟನಿಗೆ ಹೋಗಿ ಬರ್ತೀನಿ. ಅತ್ತಿಗೆ" ಧ್ವನಿ ಅಡಗಿಸಿ ಕೇಳಿದಳು ಚಿತ್ರಾ.

ದಿಂಬಿಗೆ ಒರಗಿದ ಚಂದ್ರಮ್ಮ ಎದ್ದು ಕುಳಿತಳು.

"ಇದೇನು ಹೊಸತರ? ನಿನ್ನ ಸಿನಿಮಾ ಪ್ರೋಗ್ರಾಂಗೆ ನನ್ನ ಅಪ್ಪಣೆ! ಇವೆಲ್ಲಾ ಕೇಳೋದು ಬಿಟ್ಟು ವರ್ಷ ಆಯ್ತು. ಕಾರು ಸಿದ್ದವಾಗಿದೆ. ಕರಕೊಂಡು ಹೋಗೋಕೆ ಲಾಯರು ಒಂಟಿ ಕಾಲಲ್ಲಿ ಕಾದು ನಿಂತಿದಾರೆ... ಅಂದ ಹಾಗೆ ಎಲ್ಲಿ ಮೋಹನ? ಅವರು ನೂರು ಸರ್ತಿ ನೆನೆಸಿಕೊಂಡ್ರು ಅವನ್ನ. ಅವರಿಗೆ ವ್ಯವಹಾರದ ತೂಕವೆಲ್ಲಾ ಒಂದಾದ್ರೆ, ಇವನ ಚಿಂತೆಯೇ ಇನ್ನೊಂದು. ತಲೆ ಕೆಡಿಸೊ ಹುಡುಗ. ಹೋದ ಸಾರಿ ನಂದಿ ಬೆಟ್ಟದಿಂದ ಬರೋಹೊತ್ತಿಗೆ ಕಾರು ಆಕ್ಸಿಡೆಂಟ್ ಮಾಡಿದ್ದ. ಕ್ಲಬ್‌ನಲ್ಲಿ

ಹೊಡೆದಾಡಿದ್ದ. ವಾರಕ್ಕೊಂದು ಗೋಳು ತಪ್ಪಿದ್ದಲ್ಲ. ನಿನ್ನೆಯಿಂದ ಬಲಗಣ್ಣು ಅದರುತ್ತಾ ಇದೆ. ಏನಾದ್ರೂ ಮಾಡಿದಾನೇನು? ಕುಡಿತ ಕಲಿತೋನು ಬದುಕು ಕಲಿಯೋದು ಯಾವಾಗ?"

ಅಣ್ಣನ ಮೇಲೆ ಒಂದೇ ಸಮನೆ ಹರಿದು ಬಂದ ಕಹಿಮಾತಿನಿಂದ ಬೇಸರಿಸಿದಳು ಚಿತ್ರಾ.

ಅತ್ತಿಗೆಗೆ ಮೋಹನನ ಮೇಲೆ ಎಂದೂ ಒಂದೇ ದೂಷಣೆ!

ಸೆರಗಿನಿಂದ ಕಣ್ಣು ಒತ್ತಿದಳು.

"ಮೋಹನ ಅಂತಾದ್ದೇನೂ ಮಾಡಿಲ್ಲ. ಅವನ್ನ ವಿಚಾರಿಸೋರೆ ಇಲ್ಲ. ಯಾರ ಪಾಪದ ಫಲವೋಕ, ಕುಡಿಯೋದು ಕಲಿತುಬಿಟ್ಟ. ಹಾಳು ಸಹವಾಸ ದೋಷ. ಬೆಳಗಿನಿಂದ ನೋಡಿಲ್ಲ ಅವನ್ನ. ಊಟ ಮಾಡಿದ್ನೊ, ಇಲ್ಲವೊ."

ಅಣ್ಣನ ಮೇಲಿನ ಚಿತ್ರಾಳ ಅನುಕಂಪ ಚಂದ್ರಮ್ಮನಿಗೆ ಹಿಡಿಸಲಿಲ್ಲ. ಗ್ಲಾಸ್‌ನಲ್ಲಿದ್ದ ದ್ರವವನ್ನು ಕುಡಿದು, ಹೊರಡಲು ತಿರುಗಿದವಳಿಗೆ ಹೇಳಿದಳು.

"ನನಗೂ ಸಹಾನುಭೂತಿ ಇದೆ ನಿನ್ನಣ್ಣನ ಮೇಲೆ. ಆದರೆ ದಿನಾ ಕೆಡ್ತಾ ಇರೋದನ್ನ ನೋಡ್ತಾ ಇರೋದು ಹೇಗೆ? ಈಗ ಮೋಹನನ ಜೊತೇಲಿ ತಾನೆ ನೀನು ಸಿನಿಮಾಕ್ಕೆ ಹೋಗೋದು?"

ಚಿತ್ರಾ ಉತ್ತರಿಸಲಿಲ್ಲ. ಮಾರ್ಮಿಕವಾಗಿ ಅತ್ತಿಗೆಯನ್ನು ನೋಡಿದಳು. ಚಂದ್ರಮ್ಮನ ದೃಷ್ಟಿ ಅವಳ ತುರುಬಿನ ತಾಳೆ ಮೇಲೆ ಬಿತ್ತು.

"ನಂಗೆ ಗೊತ್ತಿಲ್ವೆ ನಿನ್ನ ಚಾಳಿ. ಆ ಲಾಯರ್ ನನಗೆ ಸ್ವಲ್ಪಾನೂ ಹಿಡಿಸೋದಿಲ್ಲ. ಕಂಪನಿ ವ್ಯವಹಾರಕ್ಕೆ ಬರೋರು ನಮ್ಮ ಮನೆ ವಿಷಯದಲ್ಲಿ, ನಿನ್ನ ವಿಷಯದಲ್ಲಿ ಬಹಳ ಆಸಕ್ತಿ ತೋರಿಸ್ತಾರೆ. ಆ ಬಿಗಿ ಪ್ಯಾಟ್ ಮಾತು ಮಾತಿಗೆ ಪೋಲಿಗಳ ಹಾಗೆ ಸಿಳ್ಳು ಹಾಕೋದು ನನಗೆ ಸುತರಾಂ ಇಷ್ಟವಿಲ್ಲ. ಕಟ್ಟುಪಾಡು ಮಾಡ್ತೀನಿ ಅಂತ ತಿಳಿಬೇಡ. ಒಬ್ಬಳೇ ತಿರುಗಾಟಕ್ಕೆ ಹೋದ್ರೂ ಬೇಡ ಅನ್ನೋದಿಲ್ಲ. ಅರವಿಂದನ ಜೊತೆ ಯಾಕೆ ನಿನಗೆ? ಅವರ ಮೇಲೆ ಅಷ್ಟೊಂದು ಇಷ್ಟ ಇದ್ರೆ..."

ಮಾತು ಮುಗಿಯುವ ಮೊದಲೇ ಚಿತ್ರಾ ಕೋಣೆಯಿಂದ ಹೊರ ಬಂದಿದ್ದಳು. ತನ್ನ ಪ್ರೇಮಿಯ ಬಗ್ಗೆ ಅತ್ತಿಗೆ ಹೇಳಬಹುದಾದ ಮುಂದಿನ ಮಾರ್ಮಿಕ ನುಡಿಗಳನ್ನು ಕೇಳುವ ಮನಸ್ಸು ಇರಲಿಲ್ಲ.

ಮೋಹನನ ಕೋಣೆ ಬಾಗಿಲು ಹಾಕಿತ್ತು. "ಬಹುಶಃ ಈಗಲೂ ಕುಡಿದೇ ಮಲಗಿರಬೇಕು. ಏಕೆ ಹೀಗಾದ ಚಿಕ್ಕಣ್ಣ?"

ದೊಡ್ಡಣ್ಣ ಅಚಿಜನರಾಯನಿಗೂ ಚಿಕ್ಕಣ್ಣನಿಗೂ ಎರಡೂ ಧ್ರುವಗಳ ಅಂತರ. ಸ್ವಬುದ್ಧಿ, ಸ್ವಶಕ್ತಿಯಿಂದ ನೂರು ಕಾರ್ಮಿಕವರನ್ನು ಕಾಪಾಡುವ ಕಾರ್ಖಾನೆಯ ಒಡೆಯ ಅಚಿಜನರಾಯ. ವಿದೇಶಿ ವಿನಿಮಯ ಗಳಿಸುವ 'ಭಾರತ್ ಕೆಮಿಕಲ್'ನ

ಏಕೈಕ ಮಾಲೀಕ. ತಂದೆಗೆ ಸಮನಾಗಿ ನಿಂತು ತಮ್ಮಿಬ್ಬರನ್ನೂ ಈ ಮಟ್ಟಿಗೆ ಸೊಂಪಾಗಿ ಬೆಳೆಸಿದ ಗೌರವಾನ್ವಿತ ವ್ಯಕ್ತಿ.

ಹೈಸ್ಕೂಲು ದಾಟಲು ಅಷ್ಟೊಂದು ಸೋತ ಮೋಹನ. ಸ್ವಚ್ಛಂದ ಹವ್ಯಾಸಗಳನ್ನು ಹೊದ್ದು ನಿಂತ ಪರಾವಲಂಭಿ. ಅಣ್ಣನ ವಹಿವಾಟುಗಳಿಗೆ ಭುಜ ಕೊಟ್ಟು ಹತ್ತು ಜನರ ನಡುವೆ ತಲೆ ಎತ್ತಿ ತಿರುಗುವ ಆಸಕ್ತಿ ಇಲ್ಲ. ತಮ್ಮನ ದೋಷಗಳಿಗೆ ಪರಿಹಾರ ಹುಡುಕಲು ಅಸಮರ್ಥನಾದ ದೊಡ್ಡಣ್ಣನಿಗೆ ತಮ್ಮ ಅನುದಿನದ ತಲೆಚಿಂತೆ. ಅಣ್ಣ ಸೌಜನ್ಯ ಮೋಹನನ ದುರ್ನಡತೆಗೆ ವೇಗವರ್ಧ.

ಮೋಹನ ಮನುಷ್ಯನಾಗಿ ನಿಲ್ಲುವುದು ಸಾಧ್ಯವೇ? ಚಿತ್ರಾ ಮಂಜುಗಣ್ಣುಗಳನ್ನು ಮತ್ತೆ ಸೆರಗಿನಿಂದ ಒತ್ತಿ ತನ್ನಲ್ಲಿ ಹೇಳಿಕೊಂಡಳು.

ಅತ್ತಿಗೆ ಅಣ್ಣನನ್ನು ದೂಷಿಸುವುದರಲ್ಲಿ ತಪ್ಪೇನಿದೆ?

3

ನಿದ್ರೆ ಇಲ್ಲದೆ ಎರಡು ದಿನಗಳ ಸತತ ಮಾನಸಿಕ ದಣಿವಿನಿಂದ ಕಂಗೆಟ್ಟು ಕುಳಿತ ಮೋಹನ ದಿಂಬಿನಡಿಯಿಂದ ಬ್ರಾಂದಿ ಸೀಸೆ ಎಳೆದು ಗ್ಲಾಸ್‌ಗೆ ಬಗ್ಗಿಸಿದ. ಒಂದು ಗುಟುಕು ಹೀರಿ ಕಣ್ಣು ಮುಚ್ಚಿ ಕೇಕರಿಸುವುದರಲ್ಲಿ ಮುಚ್ಚಿದ ಬಾಗಿಲು ಕಟಕಟಿಸಿತು. ಏಕಾಂತಕ್ಕೆ ಭಂಗ ಬಂತು.

ಟವೆಲ್ ಎತ್ತಿ ಮೇಜಿನ ಬಾಟಲ್, ಗ್ಲಾಸ್ ಮೇಲೆ ಎಸೆದು ಬಾಗಿಲು ತೆಗೆದು ತಲೆ ಹಾಕಿದ. ಕಾರ್ಖಾನೆಯ ಕ್ಯಾಂಟಿನ್ ಸೂರಪ್ಪ ನಿಂತಿದ್ದ. ತಪ್ಪದೆ ತರುವ ಬಿರಿಯಾನಿ ತಟ್ಟೆ ಇಂದು ಅವನ ಕೈಯಲ್ಲಿ ಇಲ್ಲ.

ಮೋಹನನ ಕಪ್ಪು ಹಿಡಿದ ಬಿರುಸು ಮುಖ ಕಂಡು ಸೂರಪ್ಪ ಕ್ಷಣಕಾಲ ಬೆಪ್ಪನಂತೆ ನಿಂತು ರೆಪ್ಪೆ ಬಾರಿಸಿದ.

"ನನ್ನಿಂದ ಏನು ಕೊಳ್ಳೆ ಹೋಗೋದಿತ್ತು ಈಗ"

ಏರಿದ ಗಂಟಲಿನಲ್ಲಿ ಗದರಿಸಿದ ಮೋಹನ. ಕೆಂಗಣ್ಣಿಗೆ ಮತ್ತಷ್ಟು ರಕ್ತ ಕೂಡಿತು. ಮೂಗು ಅರಳಿ ಉಸಿರು ಸಶಬ್ದವಾಗಿ ಹೊರಬಿತ್ತು.

ಗಾಬರಿಯಾದ ಸೂರಪ್ಪ ಮೆಲ್ಲನೆ ಹೇಳಿದ.

"ಮಂಚೇನಹಳ್ಳಿ ಕೆರೇಲಿ ಹೆಣ ಎದ್ದಿದೆ, ಸಾರ್..."

ಅವನು ಅಡಗಿದ ಸ್ವರದಲ್ಲಿ ಹೇಳಿದ ಮಾತು ಮೋಹನನ ಕಿವಿ ತಮಟೆಯ ಮೇಲೆ ಮದ್ದಲೆಯಾಗಿ ಅಪ್ಪಳಿಸಿತು. ಕಾತರಿಸಿದ ನಿರೀಕ್ಷಿತ ಸುದ್ದಿ.

ಅಚ್ಚರಿಯ ಸೊಂಕೇ ಇಲ್ಲದ ಅಡಿಯಿಂದ ಮುಡಿಯವರೆಗೆ ತರತರ ಕಂಪಿಸಿದ.

ಅರ್ಧ ನಿಮಿಷದಲ್ಲಿ ಸಾವರಿಸಿಕೊಂಡು ಅರಚಿದ.

"ಯಾವ ಬೇವಾರ್ಸಿ ಹೆಣದಿಂದ ನನಗೇನಾಗಬೇಕು, ಬೇಕೂಫಾ..."

ಸೂರಪ್ಪನಿಗೆ ಅವಾಚ್ಯ ಶಬ್ದವಲ್ಲ ಅದು. ಕೇಬಲ್ಸ್ ಕಂಪನಿಯ ಶ್ರೀಮಂತ ಮಾಲೀಕನ ತಮ್ಮನ ಅನುಗ್ರಹದ ಪದ. ಅನುದಿನದ ಪ್ರೀತಿಯ ಸಂಬೋಧನೆ. ಬಿರಿಯಾನಿ ಹಾಗೂ ಶೀಷೆಗಳನ್ನು ನಿರಂತರವಾಗಿ ಒದಗಿಸಿ ಒಂದಕ್ಕೆ ನಾಲ್ಕು ಹಣ ಪಡೆದುದರ ಋಣ.

"ಬೇವಾರ್ಸಿ ಹೆಣ ಅಲ್ಲ, ಸಾರ್. ನಿಮ್ಮ ಸ್ನೇಹಿತ ನಂಜುಂಡ ಮೈ ಊದಿಸಿಕೊಂಡು ಏರಿ ಮೇಲೆ ಬಿದ್ದಿದ್ದಾನಂತೆ."

ಸೂರಪ್ಪ ಹೇಳಬೇಕಾದುದು ಮುಗಿದಿತ್ತು. ಭೀತಿಯ ಕಡಾಯಿಯಂತೆ ನಿಂತ ಚಿಕ್ಕ ದಣಿಯನ್ನು ಸೂಕ್ಷ್ಮವಾಗಿ ವೀಕ್ಷಿಸಿದ.

"ನೋಡೋದಕ್ಕೆ ಬರ್ತೀರಾ?" ಮತ್ತೆ ಹಾಗೆನ್ನುವುದರಲ್ಲಿ ಮೋಹನ ರಪ್ಪನೆ ಬಾಗಿಲು ಮುಚ್ಚಿದ. ಸತ್ವಹೀನ ದೇಹವನ್ನು ಹಾಸಿಗೆಗೆ ಒರಗಿಸಿದ. ಕೈ ಹಿಸುಕಿ ಗಟ್ಟಿಯಾಗಿ ಕಣ್ಣು ಮುಚ್ಚಿದ. ಆದರೆ ಮಿದುಳು ವಿಶಾಲವಾಗಿ ಬಾಯಿ ತೆರೆದು ನಿಂತಿತು. ದಿಗ್ಗನೆ ಎದ್ದು ಶೀಷೆ ಬಾಯಿಗಿಟ್ಟು ಒಂದೇ ಉಸಿರಿನಲ್ಲಿ ಗಟಗಟ ಕುಡಿದ.

ಸೂರಪ್ಪ ಮತ್ತೆ ಬಾಗಿಲು ತಟ್ಟುವ ತಪ್ಪು ಮಾಡಲಿಲ್ಲ.

ಕೆರೆಯ ಏರಿಯ ಅಂಚಿನಲ್ಲಿ ತಲೆ ಪಕ್ಕಕ್ಕೆ ವಾಲಿದ ವಿಕಾರರೂಪದ ದೇಹ ಬಿದ್ದಿತ್ತು. ಗುರುತಿಸಲು ಸಾಧ್ಯವಿಲ್ಲದಷ್ಟು ಊದಿಕೊಂಡಿತ್ತು. ಕಿವಿ, ತುಟಿ, ಕಣ್ಣು ರೆಪ್ಪೆಗಳು ಮೀನುಗಳಿಗೆ ತುತಾಗಿ, ದುರ್ಗಂಧ ಹೊಮ್ಮಿಸಿದ ದಪ್ಪ ಶರೀರದ ದೃಶ್ಯ ಭಯಾನಕವಾಗಿತ್ತು.

ಮಂಚೇನಹಳ್ಳಿಯ ಬಹುಬಾಲು ಜನ ಅಯ್ಯನ ಗುಡಿ ಜಾತ್ರೆಗೆ ಹೋಗಿದ್ದು, ಹತ್ತಾರು ಮಂದಿ ಮಾತ್ರ ದೂರದಲ್ಲಿ ನಿಂತು ನಂಜುಂಡನ ಈಚಿನ ಬದುಕಿನ ವರ್ಣನೆಯಲ್ಲಿ ತೊಡಿಗಿದ್ದರು.

ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪೂಣಚ್ಚ ಪಂಚನಾಮೆ ಹಾಳೆಗಳನ್ನು ತಂದು ಧನಂಜಯನ ಮುಂದೆ ಹಿಡಿದ.

"ದೇಹ ಬಹಳ ಕೆಟ್ಟು ಹೋಗಿದೆ. ಡಿಕಂಪೋಸ್ ಆಗೋಕೆ ಶುರು ಆಗಿದೆ. ಮುಟ್ಟಿದರೆ ಮಾಂಸ ಕೈಗೆ ಹತ್ತಿಬರುತ್ತೆ. ಮಾಮೂಲು ಪೋಸ್ಟ್ ಮಾರ್ಟಂ ಶಾಸ್ತ್ರ ಮುಗಿಸಿ ಬೇಗ ಕೊಡಿಸಿಬಿಡ್ತೀನಿ. ದಫನ್ ಮಾಡ್ಸಿಬಿಡಿ. ಜನ ಸೇರೊ ಮೊದಲು ಇಲ್ಲಿಂದ ಎತ್ತಿಸಿಬಿಡ್ಬೇಕು."

ಧನಂಜಯ ಅತೀವ ದುಃಖದಿಂದ ಅಸಹ್ಯ ನೋಟದ ದೇಹ ನೋಡಿದ. ಒಡಹುಟ್ಟಿದವ.

ಕುತ್ತಿಗೆಯ ಬೆಳ್ಳಿ ತಾಯಿತ. ಮೂರು ತಿಂಗಳ ಹಿಂದಿನ ತಿರುಪತಿ ಯಾತ್ರೆಯ ಕುರುಹು. ದುರ್ವ್ಯಾಪಾರಗಳನ್ನು ಮುಚ್ಚಬಹುದಾದ ಆಸ್ತಿಕ ಲಾಂಛನ! ನೀರಿನಲ್ಲಿ ಜಾರಿಹೋಗದೆ ನಿಂತು ಉಗ್ರ ನಡತೆಯನ್ನು ಸಾರುವ ಹುಲಿ ಉಗುರಿನ ಉಂಗುರ! ಅಷ್ಟೇ ಭದ್ರವಾಗಿ ನೀರು ಕುಡಿದು ನಿಂತ ಹುಲಿ ಚರ್ಮದ ಪಟ್ಟಿಯ ಗಡಿಯಾರ ಕೆರೆಯ ಬದಿ ಮಣ್ಣು ತುಂಬಿದ ನರೆತ ಗುಂಗುರು ಕೂದಲು.

ಒಂದೇ ಸಮನೆ ಬಿಕ್ಕಳಿಸಿದ ಧನಂಜಯನ ಬೆನ್ನು ಸವರಿದ ಸೂರಪ್ಪ.

“ಅಣ್ಣನ ಸಾವು ಎಂತೋನಿಗೂ ಸಹಿಸೋದಲ್ಲ. ಸ್ವಲ್ಪ ಸಮಾಧಾನ ತಂದ್ಕೊಳ್ಳಿ.”

ಪೂಣಚ್ಚ ಪೆನ್ ನೀಡಿದ, ಧನಂಜಯ ಮುಖ ಮುಚ್ಚಿ ಗದ್ಗದಿಸಿದ.

“ಮನೇಲಿ ಜಾಗ ಇರ್ಲಿಲ್ವೆ ಸಾಯೋದಿಕ್ಕೆ. ಈ ದುರ್ಮರಣ ಬೇಕಿತ್ತೆ? ಸಂಬಳ ಬರ್ತಿತ್ತು. ಕೇಳಿದಾಗೆಲ್ಲಾ ಹಣ ಕೊಡೋಕೆ ನಾನಿದ್ದೆ. ಸಾವು ಯಾಕೆ? ಬದುಕು ಬೇಡ. ಬೇಕಾದ್ದು ಒಂದೇ. ಬಾಟಲ್! ತಾನೂ ಕೆಟ್ಟು ನಾಲ್ಕು ಜನರನ್ನ ಕೆಡಿಸಿ ಹೊರಟ್ಹೋದ.”

ಪಂಚನಾಮೆ ನೋಡದೆ ಸಹಿ ಹಾಕಿದ. ಅದರಡಿಯಲ್ಲಿ ಸೂರಪ್ಪ ತನ್ನ ಹೆಸರನ್ನು ಗೀಚಿದ.

* * *

ಲಾಯರ್ ಅರವಿಂದ ಸಿಳ್ಳು ಹಾಕಿ ಕೈಗಳೆರಡನ್ನೂ ಆಕಾಶಕ್ಕೆ ಹರಡಿ ತಲೆ ಓರೆ ಮಾಡಿದ ಮತ್ತೆ ನೇರವಾಗಿ ನಿಂತ, ತೋರು ಬೆರಳಿನಿಂದ ಚಿತ್ರಾಗೆ ಬರಲು ಸನ್ನೆ ಮಾಡಿದ. ಚಿತ್ರಾ ಗದರಿಕೆಯ ನೋಟದಲ್ಲಿ ನಡೆದು ಬಂದಳು.

“ಗಂಭೀರವಾಗಿರೋದು ಯಾವಾಗ ಕಲಿತೀರ. ಬರೀ ಸಿನಿಮಾ ಆಟ. ಅತ್ತಿಗೆ ನಮ್ಮನ್ನ ಒಂದು ಸಾರಿ ನೋಡ್ಲಿ. ಒಂದೇ ದೃಷ್ಟಿಗೆ ಧಗಧಗ.”

ಅರವಿಂದ ಅವಳ ಕೈ ಹಿಡಿದು ತಗ್ಗಿನ ಕಡೆಗೆ ಇಳಿಯತೊಡಗಿದ.

“ಚಂದ್ರಮ್ಮನ ಉರಿಗಣ್ಣಿಗೆ ಸಿಗೋ ಮನ್ಮಥ ಅಲ್ಲ ನಾನು ಕಣ್ಣಿಗೆ ಮಣ್ಣ ತೂರೋ ಲಾಯರು.”

“ಎಲ್ಲಿಗೆ ಹಾರಿ ಹೋಗ್ತೀರಿ? ಏನಿದ್ರೂ ಇಲ್ಲೇ ಹೇಳಿ.”

“ಆಗೋ...”

ತಗ್ಗಿನ ಕಡೆಯ ತಾಳೆಗಿಡಗಳ ಕಡೆಗೆ ಕೈ ಚಾಚಿದ.

“ಒಲ್ಲೆ, ಅಲ್ಲಿಗೆ ಬರೋದಿಲ್ಲ. ನಂಗೆ ಭಯ ಆಗುತ್ತೆ” ಬೆದರಿ ನಿಂತಳು.

“ಚಂದ್ರಮ್ಮ ಈ ಕಡೆ ಬರೋದಿಲ್ಲ. ಗ್ಯಾರಂಟಿ ನಾನು ಕೊಡ್ತೀನಿ. ನಿನ್ನ ಪ್ರೀತಿಯ ಎರಡು ತಾಳೆ ಹೂ ಕಿತ್ತು ಕೊಡ್ತೀನಿ.”

“ತಾಳೆಗಿಡದ ಮೇಲೆ ನಾಗರಹಾವು ಇರುತ್ತಂತೆ.”

"ಇವತ್ತು ಇರೋದಿಲ್ಲ ಸುಮ್ಮನೆ ಬಾ" ಅವಳ ತೋಳು ಜಗ್ಗಿದ.

"ನನ್ನಾಣೆಗೂ ಬೇಡ. ಅತ್ತಿಗೆ ಭಯಕ್ಕಲ್ಲ. ಹಾವಿನ ಭಯಕ್ಕಲ್ಲ. ತಾಳೆ ಗಿಡದ ದಿಕ್ಕಿಗೆ ಇನ್ನು ತಿರುಗಿ ನೋಡೋದಿಲ್ಲ... ಅಲ್ಲೇ ನಂಜುಂಡನ್ನ ಹೂತಿದಾರೆ."

"ಓಹ್, ನಂಜುಂಡ ಸತ್ರೂ ಅವನ ಭೂತ ಸಾಯಲಿಲ್ಲ."

"ಹಾಗನ್ಬೇಡಿ. ನಂಗೆ ಇನ್ನಷ್ಟು ಭಯ ಆಗುತ್ತೆ."

ಚಿತ್ರಾ ಕಪ್ಪು ಕಲ್ಲಿನ ಮೇಲೆ ಕುಳಿತುಬಿಟ್ಟಳು. ಅರವಿಂದ ಪಕ್ಕದಲ್ಲಿ ಕುಳಿತು ಅವಳ ಕೈ ಸವರಿದ.

"ಆ ಸೈತಾನ ಸತ್ತಿದ್ದು ಒಳ್ಳೆದಾಯ್ತು. ನಿನ್ನ ಕಾಡ್ತಾ ಇದ್ದ ಶನಿ ತೊಲಗ್ತು."

ಅವಳು ಬೆದರಿ ಹಿಂದಕ್ಕೆ ನೋಡಿದಳು.

"ಆದ್ರೆ ಸಾಯಬಾರದಾಗಿತ್ತು. ಫ್ಯಾಕ್ಟರಿ ಹೆಣ್ಣಾಳು ಏನು ಮಾತಾಡ್ಕೊತಾರಂತೆ ಗೊತ್ತಾ? ನನ್ನ ಮದುವೆ ಆಗ್ಲಿಲ್ಲ ಅಂತ ಆತ್ಮಹತ್ಯೆ ಮಾಡ್ಕೊಂಡನಂತೆ ನಂಜುಂಡ. ಅತ್ತಿಗೇನೂ ಹಾಗೆ ಅಂದ್ರೂ."

"ನಿನ್ನ ಅತ್ತಿಗೆಗೆ ಹೊಟ್ಟೆ ಕಿಚ್ಚು. ಅವಳಿಗೆ ವಯಸ್ಸಾದ ನಿಮ್ಮ ದೊಡ್ಡಣ್ಣ ಸಿಕ್ಕಿದ್ರು. ನಿನಗೂ ವಯಸಾದೋನು ಸಿಗಲಿ ಅಂತ ಅವಳ ಚಿಲ್ಲರೆ ಬುದ್ಧಿ. ಆದ್ರೆ ಎಂದಿದ್ರೂ ನಿನ್ನ ಹೊಡಕೊಂಡು ಹೋಗೋದು ನಾನೇ ಅನ್ನೋದು ಅವಳ ತಲೆಗೆ ಇನ್ನೂ ಹೊಳೆದಿಲ್ಲ."

"ಇಂತಾ ಮಾತಿಗೆ ಟೋಪಿ ಬೀಳೊ ಹೆಣ್ಣಲ್ಲ ನಾನು. ನಿಮ್ಮ ಕುಬುದ್ಧಿ ನಂಗೆ ಗೊತ್ತಿಲ್ವೆ? ಚಾಲಾಕು ಏನಿದ್ರೂ ಕೋರ್ಟ್‌ನಲ್ಲಿ ತೋರ್ಸಿ. ಏನು ಲಾಯರೋ ಯಾವಾಗ ನೋಡ್ಲಿ ಇದೇ ಮಾತು. ಕಂಪನಿ ಲಾಯರು ಅಂತ ಮರ್ಯಾದೆ ಕೊಟ್ರೆ ಬಯಲಲ್ಲಿ ಕೈ ಹಿಡೀತೀರ. ನನ್ನ ಹೊಡಕೊಂಡು ಹೋಗ್ತೀನಿ ಅನ್ನೋಷ್ಟು ಬಲಿತಿದೀರ. ನಿಮ್ಮ ಈ ಧೂರ್ತತನ ತಿಳಿದೇ ಆ ಮಜ್ನು ನಂಜುಂಡ ಕೆರೆಗೆ ಹಾರಿದ್ದು."

ಅರವಿಂದ ಅವಳ ಕೈ ಹಿಡಿದು ತಲೆಗೊಂದು ಪೆಟ್ಟು ಹಾಕಿ ಕೆಳಕ್ಕೆ ಸಾಗಿದ. ಇಪ್ಪತ್ತು ಹೆಜ್ಜೆ ಸಾಗಿದ ಮೇಲೆ ಅವಳನ್ನು ತಡೆದು ಒಬ್ಬನೇ ಮುಂದುವರಿದ. ಅವಳ ಕೂಗು ಕೇಳಿಸಿಕೊಳ್ಳದೆ ತಾಳೆಗಿಡ ಏರಿದ. ಚಿತ್ರಾ ಕಣ್ಣು ಮುಚ್ಚಿದಳು.

ಐದು ನಿಮಿಷಗಳಲ್ಲಿ ಅವನು ತಾಳೆ ಹೂ ಹಿಡಿದು ಬಂದು ಅವಳ ಮುಂದೆ ನಿಂತಾಗಲೇ ಅವಳಿಗೆ ಹೋದ ಧೈರ್ಯ ಮತ್ತೆ ಬಂತು. ನಾಲ್ಕು ಹೂಗಳ ಸುಗಂಧ ಅವಳ ಕಣ್ಣು ಮತ್ತೆ ಮುಚ್ಚಿಸಿತು.

"ನೀನು ಹೇಳಿದ್ದು ನಿಜ, ಚಿತ್ರಾ. ಗಿಡ ಹತ್ತಿ ಇಳಿಯೋವರೆಗೆ ಒಂದೇ ಸದ್ದು. ನಂಜುಂಡನ ಸಮಾಧಿಯಿಂದ ನಿನ್ನ ಹೆಸರೊಂದೇ..."

ಚಿತ್ರಾ ಅವನ ತೋಳಿಗೆ ಒತ್ತಿ ನಿಂತಳು. ಕಂಪಿಸುವ ಅವಳ ದೇಹ ಹಿಡಿದು

ತುರುಬಿಗೆ ತುಟಿ ಒತ್ತಿದ.

"ತಮಾಷೆ ಮಾಡ್ಬೇಡಿ. ಎದೇಲಿ ಎಂತಾ ಚಳಿ ಎದ್ದಿದೆ ಗೊತ್ತಾ? ಎದುರಿಗೆ ನಂಜುಂಡ ನಿಂತ ಹಾಗಿದೆ... ಅವತ್ತು ಯಾರೂ ಇರ್ಲಿಲ್ಲ. ಕೋಣೇಲಿ ನಾನೊಬ್ಬಳೇ ಇದ್ದೆ. ಹೆಂಗೆ ಎದುರಿಗೆ ಬಂದು ನಿಂತುಬಿಟ್ಟ! ಅಣ್ಣನ ಸ್ನೇಹದಿಂದ ಆ ಧೈರ್ಯ. ನನ್ನ ಮದುವೆ ಆಗ್ತೀಯಾ ಅಂದ..."

"ಏನು ಹೇಳ್ದೆ ನೀನು?"

"ತಿರುಕನ ಕನಸು ಕಾಣ್ಬೇಡ ಅಂದೆ. ಬಲತ್ಕಾರ ಮಾಡಿದರೆ ಏನು ಮಾಡ್ತೀಯ ಅಂದ. ಎದೆ ಹೆಂಗಾಯ್ತು ಆಗ!"

"ಆಮೇಲೆ?" ಗಂಭೀರವಾಗಿ ಕೇಳಿ ಅವಳನ್ನು ಗಾಢವಾಗಿ ನೋಡಿದ.

"ಇನ್ನೊಂದು ಸಾರಿ ನನ್ನ ಕೋಣೆಗೆ ಬಂದ್ರೆ ನಿನ್ನ ಹುಟ್ಲೇ ಇಲ್ಲಾ ಅನ್ನಿಸಿಬಿಡ್ತೀನಿ ಅಂತ ಹೇಳ್ದೆ. ಕೋಣೆಯಿಂದ ಹಾರಿ ಬಂದಿದ್ದು ನನಗೆ ಆಶ್ಚರ್ಯ."

ಅರವಿಂದ ಬರಗಾಗಲಿಲ್ಲ. ಕಣ್ಣುಗಳಲ್ಲಿ ಮೆಚ್ಚಿಗೆ ಮೂಡಿಸಲಿಲ್ಲ.

"ನನಗೆ ಈ ತನಕ ಯಾಕೆ ಹೇಳ್ಲಿಲ್ಲ ಈ ಪ್ರಸಂಗ?" ಮತ್ತಷ್ಟು ಗಂಭೀರವಾಗಿ ಅವಳನ್ನು ನೋಡಿ ಅವಳ ತೋಳಿನಿಂದ ಕೈ ತೆಗೆದ. ಚಿತ್ರಾ ತಪ್ಪಿತಸ್ಥಳಂತೆ ಬೆದರಿ ನೆಲ ನೋಡಿದಳು.

* * *

ನಂಜುಂಡನ ದೇಹ ಕೆರೆಯಲ್ಲಿ ಕಾಣಿಸಿದ ಎರಡನೆ ದಿನ ಬೆಳಗ್ಗೆ ಸಬ್‌ಇನ್ಸ್‌ಪೆಕ್ಟರ್ ಪೂಣಚ್ಚನ ಮೋಟಾರ್ ಸೈಕಲ್ 'ಭಾರತ್ ಕೆಮಿಕಲ್ಸ್'ನ ಹೆಬ್ಬಾಗಿಲು ದಾಟಿ ಬಂತು. ಮ್ಯಾನೇಜರ್ ಧನಂಜಯ ಅವನನ್ನು ಎದುರುಗೊಂಡು ಆಫೀಸ್ ಲಾಂಜ್‌ಗೆ ಕರೆದೊಯ್ಯಲು ಯತ್ನಿಸಿದ. ಪೂಣಚ್ಚ ಅದಕ್ಕೆ ಅವಕಾಶ ಕೊಡದೆ ಬಾಕ್ಸ್‌ನಿಂದ ಒಂದು ಚೀಲ ಮತ್ತು ಫೈಲ್ ತೆಗೆದ.

"ಮಿಸ್ಟರ್ ಧನಂಜಯ, ಬಹಳ ಮುಖ್ಯವಾದ ಸಂಗತಿ ತಂದಿದೀನಿ. ಆಫೀಸ್ ಬೇಡ, ಮಾಲೀಕನ ಮನೆಗೆ ಹೋಗೋಣ. ಕಂಪನಿ ಡಾಕ್ಟರ್ ಇದಾರೇನು?"

ಧನಂಜಯ ಅಧಿಕಾರಿಯನ್ನು ಕುತೂಹಲದಿಂದ ನೋಡಿದ.

"ಎರಡು ಗಂಟೆ ಮೇಲೆ ಬರ್ತಾರೆ ಡಾಕ್ಟರ್ ವಾಗೀಶ. ಸಿಟಿ ಕ್ಲಿನಿಕ್‌ನಲ್ಲಿ ಪ್ರಾಕ್ಟೀಸ್ ಮುಗಿಸಿ ಇಲ್ಲಿನ ಪಾರ್ಟ್ ಟೈಂ ಜಾಬ್‌ಗೆ ಬರೋದು."

ಧನಂಜಯ ಅವನನ್ನು ಮನೆಗೆ ಸೇರಿದ ಅತಿಥಿ ಕೋಣೆಗೆ ಕರೆದೊಯ್ದು.

"ಇಲ್ಲಿ ಯಾರೂ ಬರೋದಿಲ್ಲ. ಏನು ಬೇಕಾದ್ರೂ ಚರ್ಚೆ ಮಾಡ್ಬೋದು."

ಪೂಣಚ್ಚ ಫೈಲ್ ಬಿಚ್ಚಿದ.

"ಚರ್ಚೆ ಮಾಡೋದಿಕ್ಕೆ ಬರ್‍ಲಿಲ್ಲ. ಶವ ಪರೀಕ್ಷೆ ರಿಪೋರ್ಟ್ ಇವತ್ತು ಬಂತು, ತಕ್ಷಣ ಬಂದೆ. ಮೊನ್ನೆ ದಿನ ನಿಮ್ಮಣ್ಣನ ದೇಹ ದಫನ್ ಆದ್ರೆ ಸಾಕು ಅನ್ನೋಷ್ಟು ಕೆಟ್ಟಿತ್ತು. ಅದರ ಹೆಚ್ಚಿನ ವಿವರಕ್ಕೆ ನಾನು ಕೈ ಹಚ್ಚಲಿಲ್ಲ. ಪೋರ್ಟ್ ಮಾರ್ಟಂ ವರದಿ ನನ್ನ ತಬ್ಬಿಬ್ಬು ಮಾಡಿದೆ. ಕೇಳಿ ನೀವೂ ಬೆದರಬೇಡಿ. ನಿಮ್ಮಣ್ಣ ಆತ್ಮಹತ್ಯೆ ಮಾಡಿಕೊಂಡಿಲ್ಲ. ಅವನ ಕೊಲೆ ಆಗಿದೆ."

"ಕೊಲೆ!"

ಸರ್ವಸ್ವವನ್ನೂ ಕಳೆದುಕೊಂಡಂತೆ ಎದ್ದು ನಿಂತ ಧನಂಜಯನನ್ನು ಹಿಡಿದು ಕುರ್ಚಿಗೆ ಕೂಡಿಸಿದ.

"ಹೌದು, ಅದೊಂದು ಕ್ಲಿಯರ್ ಮರ್ಡರ್. ಇಲ್ಲಿ ಓದಿ ನೋಡಿ. ಶವದ ಹೊಟ್ಟೆಯಲ್ಲಿ ನೀರಿಲ್ಲ. ತಲೆ ಹಿಂದೆ ಬಲವಾದ ಏಟು ಬಿದ್ದಿದೆ. ಕುತ್ತಿಗೆ ಜೋಲು ಬಿದ್ದಿದೆ. ಎಡತೋಳು, ಪಕ್ಕೆಲುಬು ಹಾಗೂ ಬಲತೊಡೆಯ ಮೂಳೆ ಮುರಿದಿವೆ. ನೀರಿಗೆ ಬೀಳುವ ಮೊದಲೇ ನಂಜುಂಡನ ಕೊಲೆ ಆಗಿದೆ. ದೇಹ ಯಾವುದೊ ವಾಹನಕ್ಕೆ ಸಿಕ್ಕಿದೆ. ಸಿಕ್ಕಿ ಜರ್ಝರಿತವಾಗಿದೆ. ನಿಮ್ಮಣ್ಣನ ಈ ಮರಣಕ್ಕೆ ನನ್ನ ಪೂರ್ಣ ಅನುಕಂಪ ಇದೆ. ಒಟ್ನಲ್ಲಿ ಇದು ಕೊಲೆ. ನಿಮಗೆ ಯಾರ ಮೇಲೆ ಸಂಶಯ ಇದೆ ಅಂತ ಒಂದು ಮಾತು ತಿಳಿಸಿದ್ರೆ ನನ್ನ ಪ್ರಯತ್ನ ಸಾಗಿಸೋದು ಸುಲಭ ಆಗುತ್ತೆ."

ಧನಂಜಯ ಬೊಂಬೆಯಂತೆ ಕೈ ಕಟ್ಟಿ ಕುಳಿತ. ಅಧಿಕಾರಿ ಅವನನ್ನು ತಟ್ಟಿ ಎಚ್ಚರಿಸಿದ.

"ಸಂಶಯ ಯಾರ ಮೇಲೆ ಅಂತ ಹೇಳೋದು. ಅವನಿಗೆ ಶತ್ರುವೇ ಇರ್‍ಲಿಲ್ಲ. ಅವನ ದುರ್ನಡತೆ, ದುಡುಕು, ಕೋಪ ಎಲ್ಲರಿಗೂ ಪರಿಚಯ ಇದೆ. ಪಕ್ಕದ ಎಡ್ವಿನ್ ಪೌಲ್ಟ್ರಿ ಫಾರಂನಲ್ಲಿ ಕೆಲಸಕ್ಕಿದ್ದ. ಅವನ ಓದಿಗೆ ಆ ಕೆಲಸ ಸಿಕ್ಕಿದ್ದೇ ಹೆಚ್ಚು ಎಡ್ವಿನ್ ಮಹಾ ದೊಡ್ಡ ಮನುಷ್ಯ. ಅಂಥವನ ಜೊತೇಲು ಅಣ್ಣ ಜಗಳ ಆಡಿದ್ದ. ಮೊಟ್ಟೆ ವ್ಯವಹಾರದಲ್ಲಿ ಬೇಕಾದಷ್ಟು ಏರುಪೇರು ಮಾಡಿದ್ದ. ಆದ್ರೂ ಎಡ್ವಿನ್ ಅವನ ಮೇಲೆ ಕ್ರಮಕೈಗೊಂಡಿರಲಿಲ್ಲ."

"ನಂಜುಂಡನಿಗೆ ಶತ್ರುಗಳು ಇರ್‍ಲಿಲ್ಲ. ಕುಡುಕರಿಗೆ ಪರಮ ಮಿತ್ರರೂ ಬಹಳ ಅಂತ ಅನುಭವದೋರು ಹೇಳ್ತಾರೆ."

"ಮಿತ್ರ ಯಾರು ಅಂತ ಹೇಳೋಕೆ ಮನಸ್ಸು ಒಪ್ಪೋದಿಲ್ಲ. ಅದು ಅನ್ನದ ಋಣ."

"ಹೇಳಿ, ಪರವಾಗಿಲ್ಲ."

"ಅವನಿಗಿದ್ದ ಸ್ನೇಹಿತ ಒಬ್ಬನೇ. ರಾಯರ ತಮ್ಮ. ಹಾಗಂದ್ರೆ ಮೋಹನ ಕೆಟ್ಟೋನು ಅಂತ ಭಾವಿಸಬೇಡಿ. ಮೋಹನ ಪ್ರಪಂಚ ತಿಳಿಯದ ಯುವಕ. ನಮ್ಮಣ್ಣ ಅವನಿಗೆ ಶನಿಯಾಗಿ ಬಂದ. ಕುಡಿತದ ಚಾಳಿ ಹತ್ತಿಸಿದ. ಕೆಲಸವಿಲ್ಲದ ಸೋಮಾರಿ ಮೋಹನ

ಸುಲಭವಾಗಿ ಬಲೆಗೆ ಬಿದ್ದ. ಸಿಟಿ ಬಾರ್‌ಗಳಲ್ಲಿ ಇಬ್ಬರೂ ಪದೇ ಪದೇ ಕಾಣಿಸಿಕೊಳ್ತಾ ಇದ್ರು. ಅಚಿಜನರಾಯರು ಎಷ್ಟೊ ಎಚ್ಚರಿಕೆ ಕೊಟ್ರು. ತಮ್ಮನಂತೂ ದಾರಿಗೆ ಬರ್ಲಿಲ್ಲ."

"ಮೋಹನ ಯಾವತ್ತಾದ್ರೂ ನಂಜುಂಡನ ಜೊತೇಲಿ ಜಗಳ ಆಡಿದ್ನಾ?"

ಧನಂಜಯ ಕಣ್ಣು ಮುಚ್ಚಿ ಹಣೆ ಉಜ್ಜಿದ.

"ಕುಡುಕರ ನಡುವೆ ಜಗಳಕ್ಕೆ ಬರ ಏನು ಬಂತು. ಬೇಕಾದಷ್ಟು ಸಾರಿ ಹೊಡೆದಾಡಿದ್ರು. ಕಾರ್ಖಾನೆ ಅಂಗಳದಲ್ಲೇ ಕೈ ಕೈ ಮಿಲಾಯಿಸಿದ್ರು. ಎಷ್ಟು ಜಗಳ ಆಡಿದ್ರೂ ಸಂಜೆ ಹೊತ್ತಿಗೆ ಹೇಳಲಾಗದಷ್ಟು ಆತ್ಮೀಯತೆ. ಶೀಷೆ ಪ್ರಭಾವ. ಕುಡುಕರ ಕಲಹ ಗಂಡ ಹೆಂಡಿರ ವಿರಸದ ಹಾಗೆ."

"ಸ್ವಲ್ಪ ನನ್ನ ಮಾತು ವಾಸ್ತವ ದೃಷ್ಟಿಯಲ್ಲಿ ತಗೊಳ್ಳಿ. ಮೋಹನ ಯಾಕೆ ನಂಜುಂಡನ ಕೊಲೆ ಮಾಡಿರಬಾರದು?"

ಧನಂಜಯ ಆ ಪ್ರಶ್ನೆಯಿಂದ ವಿಸ್ಮಯ ತೋರಲಿಲ್ಲ. ಸ್ಪಷ್ಟವಾಗಿ ನಿರಾಕರಿಸಿದ.

"ಅದನ್ನ ನಾನು ಯಾವತ್ತೂ ಒಪ್ಪೋದಿಲ್ಲ. ಮೋಹನ ಎಷ್ಟೇ ಬಿರುಸು ಜಗಳ ಮಾಡಿದ್ರೂ ಕೊಲೆ ಮಾಡೋ ಘಟ್ಟಕ್ಕೆ ಬರೋಲ್ಲ. ಯಾವ ದೇವರ ಮೇಲೆ ಬೇಕಾದ್ರೂ ಸತ್ಯಮಾಡಿ ಹೇಳ್ತೇನೆ. ರಾಯರ ಅನ್ನ ತಿಂದು ಇಂಥ ಸಂಶಯಕ್ಕೆ ಪುಷ್ಟಿ ಕೊಡೋನಲ್ಲ ನಾನು. ಕ್ಷಮಿಸಿ ಸಾರ್, ಕುಡುಕನ ಮರಣಕ್ಕೆ ನೂರೆಂಟು ಕಾರಣ. ನಂಜುಂಡ ಯಾವ ಅತ್ಯಾಚಾರದಲ್ಲಿ ಭಾಗವಹಿಸಿದ್ನೋ ಒಟ್ನಲ್ಲಿ ತನ್ನ ತಪ್ಪಿಗೇ ಬಲಿ ಆಗಿದಾನೆ."

4

ಒಂದೊಂದೇ ಕೋಳಿಗಳಿಗೆ ಕೊಕ್ಕರೆ ರೋಗದ ಚುಚ್ಚುಮದ್ದು ಏರಿಸಿ ಬಿಗಿಹಿಡಿದ ಸೊಂಟವನ್ನು ಮುಂದುಮಾಡಿ ಆಯಾಸದ ಉಸಿರು ಹಾಕಿದ ಎಡ್ವಿನ್ ಕತ್ತು ಸೆಟೆಸಿದ. ಕಣ್ಣು ಬಟ್ಟಲಾದವು. ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಬೆತ್ತ ಕೈಗೆ ಬಡಿಯುತ್ತಾ ನಿಂತಿದ್ದ.

"ನಮಸ್ಕಾರ ಸಾರ್. ಅಪರೂಪಕ್ಕೆ ಪಾದ ಬಹಳ ದೂರ ಬೆಳೆದು ಬಂದಿದೆ. ಪರಿಸ್ಥಿತಿ ಹಾಗೆ ಅನ್ನಿ. ನನ್ನ ಅಸಿಸ್ಟೆಂಟ್ ಹೋಗ್ಬಿಟ್ಟ. ನನಗೂ ನಿಮಗೂ ಇಲ್ಲದ ತ್ರಾಸ ಕೊಟ್ಟ."

"ತ್ರಾಸ ನನಗಲ್ಲ. ಸರಕಾರ ನನಗೆ ಕೊಟ್ಟಿರೋದೇ ಹೆಣದ ಉಸ್ತುವಾರಿ. ನಿಮಗೆ ತ್ರಾಸ ಕೊಡೋದಿಕ್ಕೆ ಬಂದಿದೀನಿ."

ಎಡ್ವಿನ್ ನಿಜಕ್ಕೂ ಗಾಬರಿಯಾದ. ಕೊಕ್ಕರಿಸುತ್ತಿದ್ದ ಕೋಳಿಗಳ ಕಡೆ ನೋಡಿ ಮದ್ದಿನ ಕೊಳವೆ, ಸೂಜಿಯನ್ನು ಪೆಟ್ಟಿಗೆ ಹಾಕಿದ.

"ಬನ್ನಿ, ಒಳಗೆ ಹೋಗೋಣ... ಮಾರ್ಟಿನ್, ಮೂರು ಎಗ್ ಆಮ್ಲೇಟ್" ಎಂದು

ಆದೇಶ ನೀಡಿದ.

"ಎರಡು ನಿಮಗೆ... ಒಂದು ನನಗೆ! ಸದ್ಯಕ್ಕೆ ಆಮ್ಲೆಟ್ ಅಭಿರುಚಿ ಕಳಕೊಂಡಿದೀನಿ."

ವರಾಂಡದ ಕುರ್ಚಿಯಲ್ಲಿ ಕುಳಿತು ಹ್ಯಾಟ್ ಮೇಜಿಗಿಟ್ಟ ಪೂಣಚ್ಚ.

"ಕೋಳಿಗೆ ವ್ಯಾಕ್ಸಿನೇಷನ್ ನೀವೇ ಹಾಕಿಬಿಡ್ತೀರಾ?"

"ಮತ್ತೇನು. ಯಾವ ಬ್ರಹ್ಮವಿದ್ಯೆ ಅದು. ಪಶುವೈದ್ಯನಿಗೆ ಕಾಯ ಮುಟ್ಠಾಳ ನಾನಲ್ಲ, ಸಾರ್. ನಂಜುಂಡನ ಕೊಲೆ ಆಗಿದೆ ಅಂತ ಕೇಳ್ದೆ ನೆನ್ನೆ."

ಅಳುಕುತ್ತಾ ಮಾತು ತಾನೇ ತೆಗೆದ ಎಡ್ವಿನ್.

"ನಿಮ್ಮ ವಿರಸ ಅವನ ಜೊತೇಲಿ ಯಾವ ಮಟ್ಟಕ್ಕೆ ಬಂದಿತ್ತು?"

ಪೂಣಚ್ಚ ಡೈರಿ ತೆಗೆದು ಬಾಲ್‌ಪೆನ್ ಅದರ ಮೇಲಿಟ್ಟ. ಎಡ್ವಿನ್ ತಾನೆತ್ತಿ ಕೊಟ್ಟ ಮಾತಿನಿಂದ ತಲ್ಲಣಿಸಿ ಕುರ್ಚಿ ಹಿಡಿದ.

"ಹೇಳ್ತೀನಿ ಕೇಳಿ. ನಂಜುಂಡ ಅವನ ತಮ್ಮನ ಹಾಗಲ್ಲ. ನಿರುದ್ಯೋಗಿಗೆ ಕೆಲಸ ಕೊಟ್ಟು ತನ್ನ ತಲೆ ಮೇಲೆ ಚಪ್ಪಡಿ ಎಳಕೊಂಡೆ. ಇಲ್ಲಿಯ ವ್ಯವಹಾರಕ್ಕೆ ಇನ್ನೂರು ಸಂಬಳ ಕೊಡ್ತಾ ಇದ್ದೆ. ನಾನೂರಕ್ಕೆ ಕತ್ತರಿ ಹಾಕ್ತಿದ್ದ. ಹೆಂಡತಿ, ಮನೆ ಯಾವುದೂ ಇಲ್ಲದೋನಿಗೆ ಆ ಹಣ ದಿನಕ್ಕೆ ಆಗ್ತಾ ಇರ್ಲಿಲ್ಲ."

"ನಂಜುಂಡ ಸಾಯೋವರೆಗೆ ಬ್ರಹ್ಮಚಾರಿ."

"ಬ್ರಹ್ಮಚಾರಿ ಅನ್ಬೇಡಿ. ಮದುವೆ ಆಗದೋನು ಅನ್ನಿ, ಅಯೋಗ್ಯ ಕಲೀದೆ ಇದ್ದ ಚಾಳಿ ಇಲ್ಲ. ವಯಸ್ಸು ನಲವತ್ತು ಮೀರಿದರೂ ಮದುವೆ ಜೀವನ, ಜವಾಬ್ದಾರಿ ಯಾವುದೂ ಬೇಕಿಲ್ಲ. ಇವನ ಅಖಂಡ ಬ್ರಹ್ಮಚರ್ಯದಿಂದ ಪಾಪ, ಆ ನಿಯತ್ತಿನ ತಮ್ಮನೂ ಅವಿವಾಹಿತ. ನಂಜುಂಡ ಒಂದು ದಿನವೂ ಸರಿಯಾಗಿ ಲೆಕ್ಕ ಒಪ್ಪಿಸಿದೋನಲ್ಲ. ಅವನ ತಪ್ಪುಗಳನ್ನೆಲ್ಲಾ ನುಂಗಿಕೊಂಡು ಬಂದೆ."

"ಕಳೆದ ವಾರ ಅವನ್ನ ಡಿಸ್‌ಮಿಸ್ ಮಾಡಿದ್ರಿ?"

ಎಡ್ವಿನ್ ಉಗುಳು ನುಂಗಿ ಕೃತಕ ನಗೆ ಮೂಡಿಸಿದ.

"ಡಿಸ್‌ಮಿಸ್ ಮಾಡ್ಲಿಲ್ಲ. ಮಾಡ್ತೀನಿ ಅಂತ ಹೆದರಿಸಿದ್ದೆ. ಅವನ ತಮ್ಮನಿಗೆ ಹೇಳಿಕಳಿಸಿದೆ. ಅಣ್ಣನ ಲೆಕ್ಕದಲ್ಲಿ ತೋರಿಸಿದ್ದ ಎರಡು ಸಾವಿರದ ಕೊರತೆಯನ್ನು ಧನಂಜಯ ತಾನು ತುಂಬಿಸೋ ಆಶ್ವಾಸನ ಕೊಟ್ಟ. ಆದರೆ ಡಿಸ್‌ಮಿಸ್ ಅನ್ನೋ ಶಬ್ದ ಕೇಳಿ ನಂಜುಂಡ ಬೆಂಕಿ ಉಂಡೆ ಆದ."

"ನಿಮ್ಮ ಮೇಲೆ ಕೈ ಮಾಡ್ದ. ನಿಮ್ಮ ಮುಖಕ್ಕೆ ಹೊಡೆತ ಕೊಟ್ಟ. ಪ್ರತಿಯಾಗಿ ನೀವು ಒಂದು ಹಾಕಿದ್ರಿ."

"ಹೌದು."

"ನಿಮ್ಮ ಕಡೆಗೆ ಅವನು ಚಪ್ಪಲಿ ಎಸೆದಿದ್ದೂ ನಿಜ."

"ಚಪ್ಪಲಿ?... ಹಾಗಂದ್ರೆ?" ಎಡ್ವಿನ್ ಮುಖ ಬಾಡಿತು.

"ಹೇಳಿ, ಇಲ್ಲಿ ನಾನೊಬ್ಬನೇ ಇರೋದು."

"ಇಲ್ಲಿ ನೀವೊಬ್ಬರೇ ಈಗ. ಅವತ್ತು ನನ್ನ ಕಡೆ ಚಪ್ಪಲಿ ಹಾರಿ ಬಂದಾಗ ಆಳುಗಳೆಲ್ಲಾ ಇದ್ರು. ನಾನು ಒಂದು ಸನ್ನೆ ಮಾಡಿದ್ರೆ ಅವನ್ನ ಕಾಗದದ ಹಾಗೆ ಹರಿದು ಬಿಡ್ತಾ ಇದ್ರು ನನ್ನ ಜನ. ನಾನು ಏಸುವನ್ನು ನಂಬಿದೋನು ಅವಮಾನ ನುಂಗಿಕೊಂಡೆ."

"ಒಳ್ಳೇದು ಮಾಡಿದ್ರಿ. ಕೊಲೆ ಆದ ದಿನ ನಂಜುಂಡ ಇಲ್ಲಿ ಎಷ್ಟರವರೆಗೆ ಇದ್ದ?"

ಎಡ್ವಿನ್ ಕಣ್ಣೇರಿಸಿ ಲೆಕ್ಕ ಹಾಕಿದ.

"ಕೊಲೆ ಆದ ದಿನ ಅಂದ್ರೆ ಏನ್ಸಾರ್? ಹೆಣ ಸಿಗೋದಿಕ್ಕೆ ಎರಡು ದಿನ ಮೊದಲು ಅನ್ನಿ."

ಅವನ ಚಾಣಾಕ್ಷ ಬುದ್ಧಿಗೆ ಪುಣಚ್ಚ ತಲೆ ಆಡಿಸಿದ.

"ಹುಂ. ಆ ದಿನ."

"ನನಗೆ ಜ್ಞಾಪಕ ಇರೊ ಹಾಗೆ ಮಧ್ಯಾಹ್ನವೆ ಇಲ್ಲಿಂದ ಹೊರಟುಬಿಟ್ಟಿದ್ದ. ನಮ್ಮ ಆಳು ಹೇಳೋ ಹಾಗೆ ಯಾವುದೊ ಫೋನ್ ಕಾಲ್ ಬಂದ ಮೇಲೆ ಅವಸರದಲ್ಲಿ ಹೋದ್ನಂತೆ."

"ಚಪ್ಪಲಿ ಎಸೆತ ಅಂದ್ರೆ ವಾಸಿಯಾಗೊ ಗಾಯ ಅಲ್ಲ."

"ನಿಶ್ಚಯ."

"ನನಗೇ ರಕ್ತ ಕುದಿಯುತ್ತೆ. ಇನ್ನು ಸಾವಿರಾರು ಕೋಳಿಗಳ ಒಡೆಯನಿಗೆ! ಪ್ರತೀಕಾರದ ಕಾವು ಮೈಯೆಲ್ಲಾ ಸುಟ್ಟಿರಬೇಕು."

"ಸರಿಯಾದ ಮಾತು."

"ಪರಿಣಾಮ?... ನಂಜುಂಡನ ಕೊಲೆ."

ಎಡ್ವಿನ್ ತಟಕ್ಕನೆ ಎದ್ದು ನಿಂತು ತೊದಲಿದ.

"ಛೇ, ನನ್ನ ಅಭಿಪ್ರಾಯ ಅದಲ್ಲ, ಸಾರ್. ಕೇಳಿ ಇಲ್ಲಿ..."

ಪೊಣಚ್ಚ ತಲೆಗೆ ಹ್ಯಾಟ್ ಏರಿಸಿ, ಬೆತ್ತ ಆಡಿಸುತ್ತಾ ಹೊರಟುಬಿಟ್ಟ. ಎಡ್ವಿನ್ ಗೋಗರೆಯುವ ಸ್ವರದಲ್ಲಿ ಹೇಳಿದ.

"ಸಾರ್, ಪೌಲ್ಟ್ರಿ ಫಾರಂಗೆ ಬಂದೋರು ಆಮ್ಲೆಟ್ ತೊಗೊಳ್ದೆ ಹೋಗ್ಬಾರ್ದು. ಅಲೆಮನೆಗೆ ಹೋಗಿ ಬೆಲ್ಲ ಮುಟ್ಟದಿದ್ರೂ ಒಂದು ತರಹ."

ಪೊಣಚ್ಚ ಗೇಟು ದಾಟಿದ್ದ.

* * *

ಚಂದ್ರಮ್ಮ ಎರಡು ಸಾರಿ ಕೆಮ್ಮಿ ಶಾಲು ಸರಿಯಾಗಿ ಹೊದ್ದು ಕುಳಿತಳು.

"ಇನ್ಸ್‌ಪೆಕ್ಟರ್ ಸಾರ್, ಅತ್ತಿಗೆ ಎಷ್ಟು ಒಳ್ಳೆಯವಳಾದ್ರೂ ಲೋಕದ ಕಣ್ಣಿಗೆ ಮೈದುನನ ಶತ್ರು. ನಿಜ ಹೇಳೋದಾದ್ರೆ ಮೋಹನನಿಗೆ ಯಾವುದಕ್ಕೂ ಒಂದು ದಿನ ನಾನು ಅಡ್ಡಿ ಮಾಡ್ದೋಳಲ್ಲ. ಅವನೂ ಹಾಗೇ. ಬಂಗಾರದಂತ ಹುಡುಗ. ನಂಜುಂಡನ ಸ್ನೇಹದಲ್ಲಿ ಕಲಿಬಾರ್ದ್ದು ಕಲಿತ. ರಾಯರ ಒಳ್ಳೆತನ ಅವನ ಇನ್ನಷ್ಟು ಕೆಡೋದಿಕ್ಕೆ ಅವಕಾಶ ಮಾಡಿಕೊಡ್ತು."

"ಒಂದು ವೈಯಕ್ತಿಕ ಪ್ರಶ್ನೆ" ನಮ್ರವಾಗಿ ಕೇಳಿದ ಪೂಣಚ್ಚ.

"ಬೇಕಾದ್ದು ಕೇಳಿ" ನಿರಾತಂಕವಾಗಿ ಹೇಳಿದಳು.

"ನೀವು ಆನಂದರಾಯರ ಎರಡನೆ ಹೆಂಡತಿಯಂತೆ."

"ಅದಕ್ಕೆ ಇಷ್ಟು ಸಂಕೋಚವೆ. ಮೊದಲನೆ ಹೆಂಡತಿ ಕ್ಷಯದಿಂದ ತೀರಿಕೊಂಡ ಮೇಲೆ ನಾನು ಮದುವೆ ಆಗಿ ಬಂದದ್ದು. ರಾಯರು ನನ್ನ ಮದುವೆ ಆಗಿ ಮೂರು ವರ್ಷ ಆಯ್ತು. ನಿಮ್ಮ ತಲೆಯಲ್ಲಿ ಆಡ್ತಾ ಇರೊ ಯೋಚನೆ ಅರ್ಥ ಆಯ್ತು. ನಾನು ಬಂದಮೇಲೆ ಮೋಹನ ಕೆಟ್ಟ ಚಾಳಿಗೆ ಬಿದ್ದಿದ್ದು. ತಾಯಿ ಸ್ಥಾನದಿಂದ ತಿಳುವಳಿಕೆ ಹೇಳ್ದೆ. ಆದರೆ ರಾಯರ ಮಾತೇ ಕೇಳದೆ ಹೋದ ಹುಡುಗ ಅವನು. ನಂಜುಂಡನ ನರಕದ ಜೀವನಕ್ಕೆ ಪಾಲುದಾರ. ನೀರಿಗಿಂತ ಹೆಚ್ಚಾಗಿ ಬ್ರಾಂದಿ, ಬೀರಿ ಕುಡೀತಿದ್ದ. ಎಲ್ಲಾ ನಿಜ. ಆದರೆ ಕೊಲೆ ಮಾಡೋ ಎದೆಗಾರಿಕೆ ಯಾವತ್ತೂ ಇಲ್ಲ. ದಯವಿಟ್ಟು ನನ್ನ ಮಾತಿಗೆ ಬೆಲೆ ಕೊಟ್ಟು ಈ ವಿಷಯಕ್ಕೆ ಉಪ್ಪು ಕಾರ ಹಾಕೋದು ಮಾಡ್ಬೇಡಿ. ಇದು ರಾಯರ ಮನೆತನದ ಗೌರವದ ವಿಷಯ. ಸಂಗತಿ ಕಿವಿಗೆ ಬಿದ್ರೆ ತಲ್ಲಣಿಸಿ ಹೋಗ್ತಾರೆ ಅವರು."

"ಯಜಮಾನರು ಬರೋದು ಇನ್ನೆಷ್ಟು ದಿನ ಆಗುತ್ತೆ?"

"ಇನ್ನೂ ಇಪ್ಪತ್ತೈದು ದಿನವಾದ್ರೂ ಆಗಬಹುದು. ಉತ್ತರದ ಕಡೆಗೆಲ್ಲಾ ಪ್ರೋಗ್ರಾಂ ಹಾಕಿದಾರೆ. ಅವರಿಗೆ ಈ ಸಂಗತಿ ತಿಳಿಯೋದು ಬೇಡ. ಮೋಹನನ ಮೆಲೆ ಗುಮಾನಿ ಅಂದ್ರೆ ಪ್ರವಾಸ ನಿಲ್ಲಿಸಿ ಬಂದುಬಿಡ್ತಾರೆ."

"ಅವರಿಗೆ ತಿಳಿಸೋದು ಬೇಡ. ಆದರೆ ಕರ್ತವ್ಯ ಸಾಗಲೇಬೇಕಲ್ಲಮ್ಮಾ. ಇದು ಕೊಲೆ ಕೇಸು. ಅನುಮಾನ ಇದ್ದೋರ್ನ ವಿಚಾರಿಸ್ದೆ ಇದು ಹೇಗೆ ಇತ್ಯರ್ಥ ಆಗೋದು."

"ಅಂದ್ರೆ ಮೋಹನನ ಮೇಲೆ ನಿಮ್ಮ ಸಂಶಯ."

"ಸಂಶಯ ಪ್ರಾರಂಭ ಆಗಿದೆ. ಅದು ಬಲಿಯುವಷ್ಟು ರುಜುವಾತು ಸಿಕ್ಕಿದರೆ ನಾನು ನಿಸ್ಸಹಾಯಕ ನಿಮಗೆ."

ಚಂದ್ರಮ್ಮ ಅವನನ್ನು ತಿರಸ್ಕಾರದಿಂದ ನೋಡಿದರು.

"ಕುಡುಕ ಆದ ಮಾತ್ರಕ್ಕೆ ಅಪರಾಧಿಯೇನು? ಅವನಿಗೂ ಕಾನೂನು ರಕ್ಷಣೆ ಇದೆ. ನಿಮ್ಮ ಕರ್ತವ್ಯ ಧಾರಾಳವಾಗಿ ಜರುಗ್ಸಿ."

"ನಿಮ್ಮ ಧೈರ್ಯಕ್ಕೆ ನಮಸ್ಕಾರ."

ಪೂಣಚ್ಚ ಎದ್ದು ಹೊರಬಂದ ಮೇಲೆ ಲಾಯರ್ ಅರವಿಂದ ಮ್ಯಾನೇಜರೊಂದಿಗೆ ಕೋಣೆ ಪ್ರವೇಶಿಸಿದ.

"ಪೊಲೀಸ್‌ನೋರ ಜೊತೇಲಿ ತರ್ಕ ಮಾಡಬಾರ್ದು, ಚಂದ್ರಮ್ಮ. ಅವರ ಮಾತು ಈ ಕಡೆ ಕೇಳಿ ಆ ಕಡೆ ತೂರಿಬಿಡ್ಬೇಕು. ಪೊಲೀಸ್‌ಗೆ ಸಂಶಯ ಬಂದಿದೆ. ಮೋಹನ ಕುಡಿತದ ಅಮಲಿನಲ್ಲಿ ಒಂದು ಪ್ರಾಣ ಹಾರಿಸಿಬಿಟ್ಟಾಂತ ಅವರ ಅಭಿಪ್ರಾಯ. ಅವನ್ನ ಕಾಪಾಡೋದು ನನ್ನ ಭಾರ."

ಚಂದ್ರಮ್ಮನ ಮುಖ ಬಿಗಿಯಾಯಿತು. ಹೊದ್ದ ಶಾಲು ತೆಗೆದು ಪಕ್ಕಕ್ಕೆ ಹಾಕಿದಳು.

"ಪೊಲೀಸೂ ಲಾಯರೂ ಇಬ್ಬರೂ ಒಂದೇ ಜಾತಿ. ನೀವು ಮೋಹನನ ರಕ್ಷಣೆಗೆ ಬರಬೇಕಾದ್ದಿಲ್ಲ. ಅವನು ನಿರಪರಾಧಿ. ಒಬ್ಬ ನಿರಪರಾಧಿಯ ವಕಾಲತ್ತಿಗೆ ಅನುಭವ ಇರೋ ಹತ್ತು ಲಾಯರು ನೇಮಿಸ್ತೀನಿ. ಮೋಹನ ಮೈದುನ ಅಲ್ಲ. ನನ್ನ ಮಗ."

"ಆತ್ಮೀಯತೆಗೆ ಸಾವಿರ ಧನ್ಯವಾದ. ಹತ್ತು ಲಾಯರು ಬೇಡ ನಾನೊಬ್ಬ ನೋಡ್ಕೋತೀನಿ. ಮೋಹನ ನನ್ನ ಕಕ್ಷಿದಾರ ಅಲ್ಲ. ಭಾವಮೈದ."

ಸಣ್ಣ ಸಿಳ್ಳು ಹಾಕಿ ಪೇಪರ್ ಬಿಚ್ಚಿದ. ಧನಂಜಯ ಗಟ್ಟಿಯಾಗಿ ನಗೆ ಹೊರಡಿಸಿದ. ಚಂದ್ರಮ್ಮ ಕಿಡಿಕಿಡಿಯಾದಳು.

"ನಿಮ್ಮನ್ನ ರಾಯರು ತೊಗೊಂಡಿದ್ದು ಕಂಪನಿ ಲೀಗಲ್ ಅಡ್ವೈಸರ್ ಅಂತ. ಮನೆಗೆ ಅಳಿಯ ಅಂತ ಅಲ್ಲ. ಅರಿಯದ ಹುಡುಗಿಗೆ ಎರಡು ತಾಳೆ ಹೂ ಕೊಟ್ಟು, ನಾಲ್ಕು ಸಿನಿಮಾ ಮಾತು ಆಡಿ ಮರಳು ಮಾಡೊ ವಿದ್ಯೆ ಈ ಜಾಗದಲ್ಲಿ ಬೇಡಾಂದೆ."

"ನಿಮ್ಮ ನಾದಿನಿಗೆ, ಹೆದರಿಸ್ತಾ ಇದ್ದ ಆ ನಂಜುಂಡನಿಗಿಂತ ಕೇಡೆ ನಾನು?... ಕೇಸ್ ವಿಷಯಕ್ಕೆ ಬರ್ತೀನಿ. ವಿಷಯ ಅಚಿಜನರಾಯರಿಗೆ ತಿಳಿಸೋದು ಒಳ್ಳೇದು, ಚಂದ್ರಮ್ಮ."

ಸಿಗರೇಟು ತುಟಿಗಿಟ್ಟು ಜೇಬು ತಟ್ಟಿದ.

"ದಯವಿಟ್ಟು ಆ ಕೆಲಸ ಮಾತ್ರ ಮಾಡೋದು ಬೇಡ."

ಧನಂಜಯ ಅವನ ಸಿಗರೇಟಿಗೆ ಬೆಂಕಿ ಸೋಕಿಸಿ ಜೇಬಿನಿಂದ ಒಂದು ಪೋಸ್ಟ್ ಕವರ್ ತೆಗೆದು ಮತ್ತೆ ನಮ್ರವಾಗಿ ಹೇಳಿದ.

"ರಾಯರು ಬಹಳ ಸೆನ್‌ಸಿಟಿವ್. ಮೋಹನನ ವಿಷಯ ಹೇಳಿದ್ರೆ ಎಷ್ಟೊ ದಿನದ ಪ್ರೋಗ್ರಾಂ ಗಾಳಿಗೆ ತೂರಿ ಬಂದುಬಿಡ್ತಾರೆ. ನೋಡಿ, ಅವರು ಹಾಕಿರೊ ಕಾಗದ."

ಅರವಿಂದ ಕವರ್‌ನಿಂದ ಪತ್ರ ಎಳೆದು ನೋಡಿದ. ಹೈದರಾಬಾದ್‌ನಿಂದ ಒಂದು

ಪತ್ರ. ಕಾಚಿಗುಡದಿಂದ ಪೋಸ್ಟ್ ಆಗಿ ಬಂದ ಇಂಗ್ಲಿಷ್‌ನಲ್ಲಿ ಟೈಪ್ ಆದ ಕಾಗದ. ಪಂಕ್ತಿಗಳನ್ನು ಹಾರಿಸಿ ಓದಿದ.

...ಮಲಾದಿ ಕೇಬಲ್ಲಾನ ಮಾತು ಫಲಕಾರಿ ಆಯ್ತು. ಅಹಮದಾಬಾದ್ ತಂತಿ ಇಲ್ಲಿಗೇ ಬಂತು. ನಾಳೆ ಔರಂಗಾಬಾದ್‌ಗೆ ಪ್ರಯಾಣ. ಮೋಹನನ ಚಿಂತೆ ಬಹಳ. ಅಲೆದಾಡಬೇಡಾಂತ ಹೇಳು. ಅವನಿಗೆ ಸರಿಯಾದ ಹುಡುಗಿ ಹುಡುಕಿದೀನಿ. ಶ್ರೀಮಂತ ಮನೆತನದ್ದು...

"ತಂಗಿಗೆ ಮೊದಲೇ ಮೋಹನನಿಗೆ ಕಂಕಣಯೋಗ."

ಅರವಿಂದ ಪತ್ರದ ಓದು ನಿಲ್ಲಿಸಿ ಮುಖ ಮುರಿದ.

"ಕೆಟ್ಟ ಹುಡುಗನ್ನ ಹಿಡಿದಿಡೋಕೆ ಅದೇ ದಾರಿ."

ಚಂದ್ರಮ್ಮ ಹೇಳಿದಳು.

"ಅದಲ್ಲ ಚಂದ್ರಮ್ಮ. ನಿಮ್ಮ ಆಶೀರ್ವಾದ ಚಿತ್ರಾಗೆ, ನನಗೆ ತಡ ಆದ್ರೆ..."

ಮಾತು ನಿಲಿಸಿ ಓದು ಮುಂದುವರಿಸಿದ.

....ಒಂದೇ ತೊಂದರೆ. ಊಟವೇ ಇಲ್ಲ. ಬರೀ ದ್ರವ ಆಹಾರ ತೊಗೊಂಡು ಬೇಜಾರಾಗಿದೆ. ಆಯಾಸ ಜಾಸ್ತಿ ಆದರಿಂದ...

ಅರವಿಂದ ತಲೆ ಎತ್ತಿದ.

5

ಚಿತ್ರಾ ಸೆರಗು ಸರಿಪಡಿಸಿಕೊಂಡು ಸೋಫಾ ತುದಿಗೆ ಕುಳಿತಳು. ಬಳೆಗಳ ಝುಣತ್ಕಾರದಿಂದ ಪೂಣಚ್ಚ ಓರೆಗಣ್ಣು ಮೇಲೆತ್ತಿದ.

"ಏನೂ ಹೇಳೋದಿಲ್ಲ ನಾನು. ಪೊಲೀಸ್ ಅಂದ್ರೆ ನನಗೆ ಭಯ."

"ಅರವಿಂದನ ಎದುರಿಗೆ ಇದ್ದೀಯ ಅಂತ ಭಾವಿಸ್ಕೊ. ಇವರೂ ಹಿತೈಷಿಗಳೇ. ಪರವಾಗಿಲ್ಲ ಹೇಳು."

ಚಂದ್ರಮ್ಮ ಅವಳ ಪಕ್ಕದಲ್ಲಿ ಕುಳಿತಳು. ಸಬ್‌ಇನ್ಸ್‌ಪೆಕ್ಟರ್ ಡೈರಿ ಮುಚ್ಚಿ ಪೆನ್ ಜೇಬಿಗೆ ಸೇರಿಸಿದ.

"ಹೆದರಬೇಡಿ. ನಾನು ಪೊಲೀಸ್ ಅಲ್ಲ ಈಗ. ನೊಡಿ, ಖಾಕಿ ತೆಗೆದು ಬಂದಿದೀನಿ. ಮೋಹನ ಹಾಗೆ ಇನ್ನೊಬ್ಬ ಅಣ್ಣ ಅಂತ ತಿಳೀರಿ. ನಾಲ್ಕು ಮಾತು ಹೇಳ್ಬಿಡಿ. ಹತ್ತು ನಿಮಿಷದಲ್ಲಿ ಮುಗಿಸಿಬಿಡ್ತೀನಿ. ನಂಜುಂಡ ನಿಮ್ಮ ಜೊತೇಲಿ ಹೇಗೆ ವರ್ತಿಸುತ್ತಿದ್ದ? ಏನಾದ್ರೂ ಬೆದರಿಕೆ ಹಾಕಿದ್ನೆ?"

"ಅಣ್ಣನ ಜೊತೇಲಿ ಮನೆಗೆ ಬರ್ತಾ ಇದ್ದ. ಇಬ್ಬರೂ ಕೋಣೆ ಬಾಗಿಲು ಮುಚ್ಚಿ ಗಂಟೆಗಟ್ಟಲೆ ಸೇರ್ಕೋತಾ ಇದ್ರು."

"ನಿಮಗೂ ನಂಜುಂಡನಿಗೂ ಇದ್ದ ಸಂಬಂಧ ನಾನು ಕೇಳ್ತಾ ಇರೋದು."

ಚತ್ರ ತಲೆ ಪೂರ್ತಿಯಾಗಿ ಎತ್ತಿದಳು. ಕಣ್ಣುಗಳು ಮಿನುಗಿದವು.

"ಸಂಬಂಧ ಅಂದ್ರೇನರ್ಥ? ನೀತಿಗೆಟ್ಟೋನ ಜೊತೇಲಿ ನನಗೆ ಯಾವ ಸಂಬಂಧ?"

"ತಪ್ಪಾಯ್ತು. ಆ ಪದ ಉಪಯೋಗಿಸಬಾರ್ದೇನು? ಗೋಣಿಕೊಪ್ಪಲಿನಲ್ಲಿ ಬೆಳದೋನು. ಇಲ್ಲಿ ಭಾಷೆ ಇನ್ನೂ ಮೈಹತ್ತಿಲ್ಲ. ಆಯ್ತು. ನಂಜುಂಡ ಆಡಿದ ಮಾತು. ಬೆದರಿಕೆ ಈ ವಿಚಾರ."

"ಅಣ್ಣ ಅವನ ಪರಿಚಯ ಮಾಡಿಸ್ದ. ಮೊದಲು ದೂರದಿಂದ ಕೈ ಮುಗೀತಿದ್ದ. ಆಮೇಲೆ ಹತ್ತಿರದಿಂದ ಎರಡೆರಡು ಮಾತು ಆಡ್ತಿದ್ದ."

"ನಿಮ್ಮನ್ನ ಮದುವೆ ಆಗೊ ಆಸೆ ತೋರಿಸಿದ್ನಾ?"

ಚಿತ್ರಾಳ ಮುಖ ಬಣ್ಣ ಬದಲಿಸಿತು.

"ನಮ್ಮ ದೊಡ್ಡಣ್ಣನ ವಯಸ್ಸಿನ ಆ ಕುಡುಕನ್ನ ಮದುವೆ ಆಗೋಕೆ ನನಗೆ ಹುಚ್ಚೆ?"

"ನನ್ನ ಪ್ರಶ್ನೆಗೆ ಉತ್ತರ ಅಲ್ಲ."

"ಆಸೆ ಪಟ್ಟಿದ್ದ. ಮೋಹನಂಗೆ ವಿಷಯ ತಿಳಿಸ್ದೆ. ನಂಜುಂಡ ಮತ್ತೆ ಆ ಮಾತು ಎತ್ತದ ಹಾಗೆ ಮಾಡ್ತೀನಿ ಅಂದ. ಏನೂ ಮಾಡ್ಲಿಲ್ಲ. ಹತ್ತು ಹನ್ನೆರಡು ದಿನಕ್ಕೆ ಹಿಂದೆ ನಂಜುಂಡ ನನ್ನ ರೂಂಗೆ ಬಂದ. ಅದೇ ಮೊದಲು ಅವನು ಹಾಗೆ ನೇರವಾಗಿ ಬಂದಿದ್ದು. ಚೆನ್ನಾಗಿ ಕುಡಿದಿದ್ದ. ಅಣ್ಣ, ಅತ್ತಿಗೆ ಯಾರೂ ಇರ್ಲಿಲ್ಲ. ನನಗೆ ಪೂರಾ ಗಾಬರಿ ಆಯ್ತು ಮದುವೆ ಮಾತು ಎತ್ತಿದ...."

"ನಿಮ್ಮನ್ನು ಬಲವಂತವಾಗಿ ಮದುವೆ ಆಗ್ತೀನಿ. ಅದಕ್ಕೆ ಮೋಹನನ ಸಹಕಾರ ಇದೆ ಅಂದ. ಹೌದಲ್ಲಾ?"

"ಗಾಬರಿ ಮಾಯ ಆಗಿ ಕೋಪ ಅತ್ತಿಬಂತು. ಅಣ್ಣನ ಮೇಲೆ ಜಿಗುಪ್ಸೆ ಬಂತು. ಎಂತಾ ಲೋಫರ್ ಜೊತೇಲಿ ಸ್ನೇಹ ಬೆಳೆಸಿದಾನೆ ಅಂತ ಅಳು ಬಂತು. ನನ್ನ ಮದುವೆಗೆ ಕೇಳೊ ಪೊಗರು ಆ ಅಯೋಗ್ಯನಿಗೆ! ಧೈರ್ಯವಾಗಿ ಹೇಳ್ಬಿಟ್ಟೆ. ಇನ್ನೊಂದು ಸಾರಿ ನಾಲಿಗೆ ಹರಿಬಿಟ್ರೆ ನಿನ್ನ ಕೊಲೆ ಮಾಡಿಸಿಬಿಡ್ತೀನೀಂತ ಕೋಣೆಯಿಂದ ಹಾರಿ ಹೋದೆ."

ಪೂಣಚ್ಚ ನಾಲಗೆ ದವಡೆಗೆ ಸೇರಿಸಿ ಮಾತನ್ನು ಮೆಲುಕು ಹಾಕಿದ.

"ನಿಮ್ಮ ಮೇಲೆ ಸಂಶಯ ಇಲ್ಲ. ನೀವು ಹೇಳಿದ್ದೇ ಕೊಲೆ ಮಾಡ್ತೀನಿ ಅಂತ ಅಲ್ಲ. ಕೊಲೆ ಮಾಡಿಸ್ತೀನಿ ಅಂದ್ರಿ. ನಿಮ್ಮ ಮೇಲೆ ಕಣ್ಣಿಟ್ಟ ಆ ಧೂರ್ತನ ಮೇಲೆ,

ನಿಮ್ಮ ಪರವಾಗಿ ಸೇಡು ತೀರಿಸಿಕೊಳ್ಳೋಕೆ ಪ್ರಯತ್ನ ಮಾಡಿರಬಹುದಾದ, ನಿಮ್ಮ ಹಿತೈಷಿ ಯಾರು ಅನ್ನೋದು ನನಗೆ ಬೇಕಾದ ವಿಚಾರ."

ಚಂದ್ರಮ್ಮ ಅವಾಕ್ಕಾದಳು.

"ಸೇಡು? ಏನೂ ಆಗ್ಲಿಲ್ಲ ಚಿತ್ರಾಗೆ. ಸೇಡಿನ ಪ್ರಶ್ನೆ ಯಾಕೆ ಬರುತ್ತೆ? ನಿಮ್ಮ ತರ್ಕ ಗೊತ್ತಾಯಿತು. ಚಿತ್ರಾ ಶ್ರೀಮಂತ ಮನೆತನದ ಹುಡುಗಿ ರೂಪವಂತೆ. ಅವಳನ್ನ ಮದುವೆ ಆಗೋ ಆಕಾಂಕ್ಷೆ ಎಷ್ಟೋ ಜನಕ್ಕಿರಬಹುದು. ಆದರೆ ಚಿತ್ರಾ ಹಿತೈಷಿ ಲಾಯರ್ ಅರವಿಂದ."

ಈಗ ನಿಜಕ್ಕೂ ಅಚ್ಚರಿಗೆ ಸಿಕ್ಕಿದಳು ಚಿತ್ರಾ. ಮುಖದಲ್ಲಿ ನೂರು ಆಸೆ ತೇಲಿ ಬಂದು ಕೆನ್ನೆ ಕೆಂಪಾಯಿತು.

ಎಷ್ಟು ಹಿತವಾದಳು ಅತ್ತಿಗೆ! ಅವಳ ನಸು ಕೋಪದಿಂದ ತಾನು ಇಲ್ಲದ ಅಪಾರ್ಥ ಮಾಡಿದ್ದೆ.

ಪೂಣಚ್ಚ ಕೆಮ್ಮಿದ.

"ಅದೇ ನನ್ನ ಪಾಯಿಂಟ್. ಚಿತ್ರಾಗೂ ಅರವಿಂದನಿಗೂ ಅಷ್ಟೊಂದು ಹೊಂದಾಣಿಕೆ. ಒಪ್ಪಿಗೆ ಇರುವಾಗ ಒಬ್ಬ ಯಃಕಶ್ಚಿತ್ ಕುಡುಕ, ಪೌಲ್ಟ್ರಿ ಫಾರಂ ಗುಮಾಸ್ತ, ಅದೂ ಸಾಕಷ್ಟು ವಯಸ್ಸಾದ ಲೋಫರ್ ಈಕೆ ಜೊತೇಲಿ ಸೌಜನ್ಯ ಬಿಟ್ಟು ಬಲಾತ್ಕಾರದಿಂದ ಮದುವೆ ಮಾತು ಆಡಿದ್ರೆ... ಯಾರಿಗೂ ತಲೆ ಕಾದು ಹೋಗುತ್ತೆ."

"ಲಾಯರ್ ದುಡುಕೋರಲ್ಲ, ಇನ್ಸ್‌ಪೆಕ್ಟರೇ."

ದೃಢವಾಗಿ ಹೇಳಿದಳು ಚಂದ್ರಮ್ಮ. ಚಿತ್ರಾಳ ಮುಖದಲ್ಲಿ ಆವರಿಸಿದ ಉತ್ಸಾಹ ಹಿಂದಕ್ಕೆ ಹೋಯಿತು.

"ಇದು ಪ್ರಣಯದ ಸಮಸ್ಯೆ. ಎರಡು ಹೃದಯ ಒಂದಾದಾಗ, ಅಡ್ಡಿ ಬರೋ ಮೂರನೇ ವ್ಯಕ್ತಿ ಖಳನಾಯಕ. ಅವನಿಗೆ ಬದಕೋ ಹಕ್ಕು ಮೊಟಕಾಗುತ್ತೆ."

ಹೊರಡುವ ಮಾತು ಹೇಳದೆ ಪುಣಚ್ಚ ಸೌಜನ್ಯ ಮರೆತು ನಡೆದ ಕೂಡಲೇ ಅತ್ತಿಗೆಯ ಕೈ ಹಿಡಿದಳು.

"ಅಣ್ಣನ ಗ್ರಹಚಾರ. ಈಗ ಅವರ ಮೇಲೆ ಜಾರೋ ಹಾಗೆ ಕಾಣಿಸ್ತಿದೆ, ಅತ್ತಿಗೆ."

"ಯಾವನೋ ತಲೆ ಮಾಡಿದೋನ ಸಾವಿಗೆ ನಿನ್ನ ಅರವಿಂದ ಬಲಿ ಆಗೋಷ್ಟು ಕೆಟ್ಟಿಲ್ಲ ಕಾಲ. ನಿನ್ನ ತಾಳೆ ಹೂ ಪ್ರೇಮೀನ ನಿನ್ನಿಂದ ದೂರ ಮಾಡೋಲ್ಲ ನಿನ್ನ ಅತ್ತಿಗೇನ ನಂಬು...

ಚಿತ್ರಾ ಅವಳನ್ನು ಹಾರ್ದಿಕವಾಗಿ ಅಪ್ಪಿದಳು.

* * *

ಎದುರಿಗೆ ಕುಳಿತ ನಾಲ್ವರನ್ನೂ ನೋಡಿ ಪೂಣಚ್ಚ ಕೈಗಡಿಯಾರದ ಕಡೆ ಕಣ್ಣು ಮಿಂಚಿಸಿ ಬೆಲ್ಟ್ ಸರಿಪಡಿಸಿಕೊಂಡ. ಡಾಕ್ಟರ್ ವಾಗೀಶ ಹಜಾರ ಪ್ರವೇಶಿಸಿ ವಂದನೆ ಮಾಡಿ ಕುರ್ಚಿ ಹಿಡಿದು ಸ್ಟೆತೊಸ್ಕೋಪ್ ಮಡಿಸಿದ.

"ಕ್ಷಮಿಸಿ. ನಿಮ್ಮನ್ನೆಲ್ಲಾ ಕಾಯಿಸಿಬಿಟ್ಟೆ. ಇವತ್ತು ಕೆಲಸ ಜಾಸ್ತಿ" ಟೈ ಗಂಟು ಕೆಳಕ್ಕೆ ಸರಿಸಿದ.

"ನನ್ನ ಕ್ಷಮಿಸಿ, ಡಾಕ್ಟ್ರೆ. ನಿಮಗೆ ತೊಂದರೆ ಕೊಡಲಿಕ್ಕೆ ಬಂದಿದೀನಿ. ಎಲ್ಲಾ ವಿಷಯ ಲಾಯರಿಗೆ ಹೇಳಿದೀನಿ. ಮಿಸ್ಟರ್ ಅರವಿಂದ, ನೀವೇ ಪ್ರಾರಂಭ ಮಾಡಿ ನನ್ನ ಕೆಲಸ ಸುಲಭ ಮಾಡೋ ಉಪಕಾರ ತೋರ್ಸಿ."

ನಾಲ್ವರ ಮುಖ ಅರವಿಂದನ ಕಡೆ ತಿರುಗಿತು. ಅರವಿಂದ ಹಿಂಜರಿಯುತ್ತಾ ಪ್ರಾರಂಭಿಸಿದ.

"ಡಾಕ್ಟರೇ, ಇದು ನಿಮಗೆ ಹೊಸದು. ಕೇಳಿ ಬೆದರಬೋದು. ಆದರೆ ಪೊಲೀಸಿಗೆ ಮಾಮೂಲು. ಸಂಶಯಿಗಳ ನಿದ್ರೆಗೆ ಖೋತಾ, ದೇಹ ಚಿಂತೆಗೆ ಬಲಿ. ಇದೇ ಸರ್ಕಾರ ಪೊಲೀಸರಿಗೆ ಕಲಿಸಿರೊ ಮಂತ್ರ. ಪೊಲೀಸ್ ಧರ್ಮ ಒಂದೇ. ಕಂಡಿದ್ದಕ್ಕೆಲ್ಲಾ ಸ್ಟೇಟ್‌ಮೆಂಟ್, ಕಂಡೋರ ಮೇಲೆಲ್ಲಾ ಅನುಮಾನ.

ಮನುಷ್ಯ ದೇವಲೋಕದಿಂದ ಇಳಿದು ಬಂದಿರ್ಲಿ. ಮೊದಲು ಅವನು ಅಪರಾಧಿ. ಆಮೇಲೆ ಅವನ ಯೋಗ್ಯತೆ ಪರಿಶೀಲನೆ, ಈಗ ಇಲ್ಲಿರೋರೆಲ್ಲಾ ಒಂದೊಂದು ರೀತಿ ಸಂಶಯಿಗಳೇ. ಇನ್ಸ್‌ಪೆಕ್ಟರ್ ಲೆಕ್ಕದಲ್ಲಿ ಇನ್ನೂ ಧನಂಜಯ ಮೋಹನ ಇವರನ್ನು ಪ್ರಶ್ನಿಸಿಲ್ಲ. ಇಷ್ಟೆಲ್ಲಾ ಪ್ರವರ ಯಾಕೆ ಹೇಳ್ದೆ ಅಂದ್ರೆ ಸದ್ಯಕ್ಕೆ ಗ್ರಹಚಾರ ನಿಮ್ಮ ಕಡೆ ತಿರುಗಿದೆ...."

"ಎದುರಿಸೋದಕ್ಕೆ ಸಿದ್ಧವಾಗಿದ್ದೀನಿ" ಮನದಲ್ಲೆದ್ದ ಭೀತಿಯನ್ನು ತಟ್ಟಿ ಮಲಗಿಸಿ ನಗೆ ಸೂಸಿದ ವಾಗೀಶ.

"ನಮ್ಮೆಲ್ಲರ ಮೇಲೆ ಸಂದೇಹ ಪಟ್ಟ ಹಾಗಲ್ಲ ಇದು. ನಿಮ್ಮ ಮೇಲಿನ ಸಂದೇಹ ಸ್ವಲ್ಪ ಭಾರವಾದ್ದು. ಒಂದೆರಡು ರುಜುವಾತು ಸಿಕ್ಕಿದೆ. ಗುರುವಾರ ರಾತ್ರಿ ಸುಮಾರು ಎಂಟೂವರೆ ಹೊತ್ನಲ್ಲಿ ಮಂಚೇನಹಳ್ಳಿ ರಸ್ತೆಗೆ ಬಂದಿದ್ರಾ?"

"ರಸ್ತೆಯೇನು, ಮಂಚೇನಹಳ್ಳಿಗೆ ಹೋಗಿದ್ದೆ. ಚಾಮಯ್ಯನ ಅಟೆಂಡ್ ಮಾಡಿ ಬಂದೆ."

"ಎರಡು ಸಾರಿ ಆ ರಸ್ತೇಲಿ ಕಾಣಿಸಿಕೊಂಡ್ರಿ."

"ಹೋಗಿದ್ದು ಒಂದುಸಾರಿ. ವಾಪಸ್ ಬಂದಿದ್ದು ಇನ್ನೊಂದು ಸಾರಿ. ಎರಡು ಸಾರಿ ಆಯ್ತಲ್ಲ."

ಎಲ್ಲರ ನಗೆಯೊಂದಿಗೆ ತಾನೂ ಸೇರಿದ.

"ನೀವೇ ಹೇಳ್ಬಿಡಿ ಪೂಣಚ್ಚ. ನನಗೆ ಯಾಕೆ ಇಲ್ಲದ ಉಪದ್ರವ ಕೊಟ್ಟು ತಮಾಷೆ ನೋಡ್ತೀರಿ."

ಸಿಗರೇಟು ಹೊತ್ತಿಸಿ ಸೀಲಿಂಗ್ ಫ್ಯಾನ್ ನೋಡುತ್ತಾ ಕುಳಿತ ಪೂಣಚ್ಚ ಮಾತಿಗೆ ಬಂದ.

"ಮಿಸ್ಟರ್ ವಾಗೀಶ. ಅವತ್ತು ಸುಮಾರು ಎಂಟೂವರೆ ರಾತ್ರಿಗೆ ಸ್ಕೂಟರ್‌ನಲ್ಲಿ ಆ ರಸ್ತೇಲಿ ಹೋದ್ರಾ?"

"ಹೌದು. ಧನಂಜಯನ ಸ್ಕೂಟರ್ ತೆಗೆದುಕೊಂಡು ಹೋಗಿದ್ದೆ."

"ನೀವು ಯಾವಾಗಲೂ ತಿರುಗಾಡೋದು ಕಾರಿನಲ್ಲಿ. ನಿಮ್ಮ ಕಾರು ಆ ದಿನ ಕಂಪನಿ ಗ್ಯಾರೇಜಿನಲ್ಲಿ ಇರ್ಬೆಕು."

"ತಿರುಗಾಡೋದು ಕಾರಿನಲ್ಲೇ. ಆ ದಿನ ಆ ಹೊತ್ನಲ್ಲಿ ನನ್ನ ಕಾರು ಇರ್ಲಿಲ್ಲ. ಅದಕ್ಕೇ ಸ್ಕೂಟರ್ ಒಯ್ದೆ."

"ನಿಮ್ಮ ಕಾರು ಯಾರು ಒಯ್ದಿದ್ರು?"

ಡಾಕ್ಟರ್ ಕಣ್ಣುಮುಂದೆ ಮೋಹನನ ಚಿತ್ರ ಸರಿದು ಬಂತು. ಕಾರು ಹುಡುಕಿ ಒದ್ದಾಡಿದ ಆ ರಾತ್ರಿ. ಮರುದಿನ ಬೆಳಿಗ್ಗೆ ಕಾರು ತೊಳೆಯುತ್ತಿದ್ದ ಮೋಹನನೊಂದಿಗೆ ನಡೆಸಿದ ಮಾತು.

ವಗೀಶನ ತೆರೆಯಲ್ಲಿ ವಿಚಾರಧಾರೆ ಪ್ರವಹಿಸಿತು. ಮೋಹನ ಈಗ ಪೊಲೀಸರ ಸಂಶಯಿ. ಅವನು ಕಾರು ಒಯ್ದಿದ್ದು ನಿಜ. ಈಗ ನನ್ನ ಉತ್ತರದಿಂದ ಮೋಹನ ಮತ್ತಷ್ಟು ಬತ್ತಲೆ ನಿಂತಾನು.

"ಗೊತ್ತಿಲ್ಲ" ಗಂಭೀರವಾಗಿ ಉತ್ತರಿಸಿದ.

"ಸ್ಕೂಟರ್ ಮೇಲೆ ಮಂಚೆನಹಳ್ಳಿಗೆ ಹೋಗಿ ಬಂದೋರು ಮತ್ತೆ ಎರಡು ಗಂಟೆ ನಂತರ ಅದೇ ರಸ್ತೆಗೆ ನಿಮ್ಮ ಕಾರು ಯಾಕೆ ತೊಗೊಂಡು ಹೋದ್ರಿ?"

ಡಾಕ್ಟರೊಂದಿಗೆ ಉಳಿದವರೂ ಅವಾಕ್ಕಾದರು. ಡಾಕ್ಟರ್ ಟೈ ಪೂರ್ಣವಾಗಿ ಎಳೆದು ಹಾಕಿ ನೆಮ್ಮದಿ ಕೆಟ್ಟವನಂತೆ ನೆಲ ನೋಡಿದ.

"ಬೇರೆ ಯಾರದೋ ಕಾರು ಇರ್ಬೇಕು ಅದು. ನಾನು ಎರಡನೆ ಸಾರಿ ಆ ರಸ್ತೆಗೆ ಬರಲೇ ಇಲ್ಲ" ದೃಢವಾಗಿ ಹೇಳಿದ.

"ರಾತ್ರಿಯಲ್ಲೂ ಸಾಕಷ್ಟು ಬೆಳ್ಳಗೆ ಕಾಣೊ ಅಂಬಾಸಿಡರ್. ವಂಚೇನ ಹಳ್ಳಿಗೆ ಪದೇ ಪದೇ ಹರಿದಾಡೊ ಏಕೈಕ ಬಿಳುಪು ವಾಹನ. ಆ ರಾತ್ರಿ ದೀಪ ಇಲ್ಲದೆ ಬಂದು, ಅರ್ಧ ರಸ್ತೆಗೆ ನಿಂತು ಹಳ್ಳಿಗೆ ಬರದೆ ಹಿಂದಕ್ಕೆ ಹೋಗಿದೆ."

"ಇರಬಹುದು."

ಪೂಣಚ್ಚ ಚೀಲದಿಂದ ಟಾರ್ಚ್ ಹೊರಕ್ಕೆಳೆದು ತೋರಿಸಿದ.

"ಇದನ್ನ ಗುರ್ತಿಸ್ತೀರಾ, ಮಿಸ್ಟರ್ ವಾಗೀಶ? ಬಹುಶಃ ನಿಮ್ಮ ಕಾರಿನ ಡ್ಯಾಷ್ ಬೋರ್ಡ್‌ಗೆ ಇವರ ಪರಿಚಯ ಇರ್ಬೇಕು. ಇದು ಮಂಚೇನಹಳ್ಳಿ ರಸ್ತೇಲಿ ಸಿಕ್ಕಿದ್ದು."

"ಟಾರ್ಚ್ ನನ್ನದೇ" ತಲ್ಲಣಿಸಿ ಹೇಳಿದ.

ಅರವಿಂದ ಏನೋ ಹೇಳಲು ತುಟಿ ಆಡಿಸಿ ಸುಮ್ಮನಾದ. ಪೂಣಚ್ಚ ಮತ್ತಷ್ಟು ಉತ್ಸಾಹದಿಂದ ಹೇಳಿದ.

"ನಂಜುಂಡನ ದೇಹ ಕೆರೆಗೆ ಬೀಳುವ ಮೊದಲು ಅದರ ಕೊಲೆ ಆಗಿತ್ತು. ಇದು ಐದು ದಿನದ ಹಳೇ ಸುದ್ದಿ. ಬಿಳುಪು ಕಾರಿನಿಂದ ದೇಹ ಹೊತ್ತು ತಂದ ಎರಡು ಮಾಸಲು ವ್ಯಕ್ತಿಗಳನ್ನ ಆ ಹೊತ್ನಲ್ಲಿ ನೋಡಿದ ಮನುಷ್ಯ ಒಬ್ಬ ಇದಾನೆ. ಆಸ್ತಮಾದಿಂದ ನಿದ್ದೆ ಕೆಟ್ಟು ಆ ರಾತ್ರಿ ಕೆರೆ ಏರಿ ಮೇಲೆ ಬಂದಿದ್ದ ಮಂಚೇನಹಳ್ಳಿ ಚಿನ್ನಯ್ಯ ಇದಕ್ಕೆ ಸಾಕ್ಷಿ."

"ನಂಜುಂಡನ ಕೊಲೆ ಮಾಡಿ, ನನ್ನ ಕಾರಿನಲ್ಲಿ ತಂದು ಕೆರೆಗೆ ಹಾಕಿ ಹೋದೋನು ನಾನು ಅನ್ನೋದು ನಿಮ್ಮ ತೀರ್ಮಾನ."

"ತೀರ್ಮಾನ ಮಾಡೋದು ಕೋರ್ಟು. ತೀರ್ಮಾನಕ್ಕೆ ನಿಮ್ಮನ್ನ ಒಡ್ಡೋದು ನನ್ನ ಕರ್ತವ್ಯದ ಒಂದು ಭಾಗ. ಅದನ್ನು ವಿರೋಧಿಸೊ ಹಕ್ಕು ಮೇಧಾವಿತನ ನಿಮ್ಮದು..."

ಟಾರ್ಚ್ ಚೀಲಕ್ಕೆ ಸೇರಿಸಿ ಹ್ಯಾಟ್ ಎತ್ತಿಕೊಂಡ ಪಕ್ಕದ ಕೋಣೆಯ ಬಾಗಿಲು ತಟಕ್ಕನೆ ತೆರೆಯಿತು. ಆರು ಮುಖಗಳೂ ಅತ್ತ ತಿರುಗಿದವು.

ಸೌಮ್ಯ ಮುಖದ ಮೋಹನ ನಿಂತಿದ್ದ!

"ಡಾಕ್ಟರನ್ನ ಎಲ್ಲಿಗೆ ಒಯ್ತೀರಿ, ಇನ್‌ಸ್ಪೆಕ್ಟರ್ ಜನರಲ್ ಸಾರ್?" ಕುಹಕದ ಸಂಬೋಧನೆಯಿಂದ ಗಾಂಭೀರ್ಯ ಬಿಡದೆ ಪೂಣಚ್ಚ ಬೆತ್ತ ಆಡಿಸಿದ.

"ನನ್ನ ಅರಮನೆಗೆ ಅತಿಥಿಯಾಗಿ ಒಯ್ತಾ ಇದೀನಿ, ಉಮರ್ ಖಯಾಂ ಸಾಬ್."

ಮೋಹನ ಮತ್ತಷ್ಟು ಮುಂದೆ ಬಂದ.

"ನಿಮ್ಮ ಪ್ರಶ್ನೆಗೆ ಬಾಕಿ ಇದ್ದೋನು ನಾನು ಒಬ್ಬನೇ. ನಾನೇ ಬಂದೆ ಮಾತೆಲ್ಲಾ ಕೇಳ್ದೆ ಇಷ್ಟು ಹೊತ್ತು. ಬಿಳಿ ಕಾರು, ಟಾರ್ಚ್ ಇಷ್ಟರಿಂದ ನೀವು ಅವರನ್ನು ಒಯ್ಯೋದು ನ್ಯಾಯ ಅಲ್ಲ. ನಾನು ಕುಡುಕು ಕಾನೂನು ವಿರೋಧಿ ಅಲ್ಲ. ನನ್ನಿಂದ ಒಬ್ಬ ನಿರಪರಾಧಿ ನರಳೋದು ನೋಡಿ ಸಹಿಸುವಷ್ಟು ಸ್ವಾರ್ಥ ಇಲ್ಲ ನನಗೆ. ನಮ್ಮ ದೊಡ್ಡ ವಂಶಕ್ಕೆ ಕಳಂಕ ಬೇಡ ಅಂತ ನನ್ನ ಮರೆಮಾಡ್ತಾ ಇದಾರೆ ಡಾಕ್ಟರು... ಅವರಿಗೆ ಹೇಳದೆ ಅವರ ಕಾರು ಒಯ್ದೋನು ನಾನು ಮಂಚೇನಹಳ್ಳಿ ರಸ್ತೆಗೆ ತಂದು, ಇದೇ ಕೈಗಳಿಂದ ಸ್ಟೀರಿಂಗ್ ಆಡಿಸಿ ನಂಜುಂಡನ ದೇಹದ ಮೇಲೆ ನಾಲ್ಕು ಸಾರಿ ಚಕ್ರ ಹರಿಸಿದೋನು ನಾನೇ. ಆಮೇಲೆ ದೇಹವನ್ನ ಕೆರೆಗೆ ತೂರಿದ್ದೂ ನಾನೇ. ಇದಕ್ಕೆ

ರುಜುವಾತು ಬೇಕೇನು? ರಾತ್ರಿ ಆ ಕಾರನ್ನು ನನ್ನೊಂದಿಗೆ ನೋಡಿರೊ ಮೊದಲನೆ ಸಾಕ್ಷಿ ಕೆಂಗೇರಿ ಪೊಲೀಸ್. ಎದುರಿನಿಂದ ಬಂದ ಎಷ್ಟೋ ಲಾರಿಯೋರು ನನ್ನ ಗುರ್ತಿಸಿದಾರೆ. ಬಿಡಿ ಡಾಕ್ಟರನ್ನ. ಈಗ ನಾನು ಕುಡಿದಿಲ್ಲ. ಇನ್ನೂ ಒಂದು ಬಲವಾದ ಸಾಕ್ಷಿ ಇದೆ. ಆ ಹಾಳು ಕೆಂಪು ಮಫ್ಲರ್‌ನೋನು ಯಾರು ಅನ್ನೋದೆ ತಲೆಗೆ ಹತ್ತಿಲ್ಲ."

"ಅಣ್ಣಯ್ಯಾ, ಏನು ಹೀಗೆ ಹೇಳ್ತೀಯಾ?"

ಅಳಕು ಗಂಟಲಿನಲ್ಲಿ ಕೂಗಿದಳು ಚಿತ್ರಾ. ಚಂದ್ರಮ್ಮ ಸೊಲ್ಲಡಗಿ ಕುಳಿತಿದ್ದಳು. ಉಳಿದವರು ಸ್ಮಶಾನ ಮೌನದಲ್ಲಿ ಮುಳುಗಿದರು.

ಸಾಕಷ್ಟು ತಲ್ಲಣಿಸಿದ ಪೂಣಚ್ಚ ಮುಂದೆ ಬಂದು ಮೋಹನನ ಕೈ ಭದ್ರವಾಗಿ ಹಿಡಿದ.

6

ಕಾನ್ಸ್‌ಟೇಬಲ್ ತಂದಿರಿಸಿದ ಕಾಗದಗಳನ್ನು ಕೂಲಂಕಷವಾಗಿ ನೋಡಿ ಸಹಿ ಹಾಕತೊಡಗಿದ ಪೂಣಚ್ಚ. ಎರಡು ಸಿಗರೇಟು ಸುಟ್ಟು ಮೂರನೆಯದನ್ನು ಬೆಂಕಿಪೊಟ್ಟಣಕ್ಕೆ ಬಡಿಯುತ್ತ ಬೇಸರದಿಂದ ಅರವಿಂದ ಹೇಳಿದ.

"ಹೋಗ್ತೀನಿ ನಾನು. ಇನ್ನು ಕಾದಿರೋದು ಸಾಧ್ಯವಿಲ್ಲ. ಎಲ್ಲರ್ರೂ ಕಾಯಿಸಿ ಸತಾಯ್ಸೋ ಹಾಗೆ ನನ್ನ ಹತ್ರ ಮಾತ್ರ ಬೇಡ."

"ಒಂದು ನಿಮಿಷ ಕೂಡ್ರಿ. ಈ ಸತ್ತ ಕಾಗದಗಳನ್ನು ಎಸ್.ಪಿ.ಗೆ ರವಾನೆ ಮಾಡಿಬಿಡ್ತೇನಿ. ಇದರಲ್ಲೇ ನಮ್ಮ ಅರ್ಧ ಸರ್ವಿಸ್ ಕಳೆದು ಹೋಗೋದು. ಏನು ತೊಗೊಳ್ತೀರಿ... ಕಾಫಿ... ಟೀ?"

"ಏನೂ ಬೇಡ."

"ಭೇಷ್ ನನ್ನ ಹಾಗೇ ಗೋಣಿ ಕೊಪ್ಪಲು ಹವ ಕುಡಿದಿರಬೇಕು ನೀವೂ. ಒಂದು ಸಲ ಶೀಷೆ ಹಿಡಿದ ಕೈ ಮತ್ತೆ ಆ ಹಾಳು ಹೊಟೇಲಿನ ಎಂಜಲು ಗ್ಲಾಸ್ ಮುಟ್ಟೋದಿಲ್ಲ."

"ಈ ಕಾಡು ಹರಟೆ, ಈ ಸತ್ತ ಕಾಗದ ಎರಡೂ ಒಂದ್ನಿಮಿಷ ಮರೆತು ನಾನು ಕೇಳಿದ್ದು ಕೊಡಿ."

"ಚಾರ್ಜ್‌ಷೀಟ್ ಫೈಲ್ ಮಾಡೋವರೆಗೆ ಅವೆಲ್ಲಾ ರಹಸ್ಯ. ಸ್ನೇಹ ಶೀಷೆವರೆಗೆ ಮಾತ್ರ. ಫೈಲುಗೀಲು ಬೇಡ."

"ನಿಮ್ಮ ಸುಡುಗಾಡು ಸ್ಟೇಟ್‌ಮೆಂಟ್, ಸ್ಕೆಚ್ ಯಾವುದೂ ಬೇಡ. ಬರೀ ಪೋಸ್ಟ್

ಮಾರ್ಟಂ ರಿಪೋರ್ಟು ಒಂದ್ಸ ಮಾತ್ರ ತೋರ್ಸ್ಸಿ ಒಂದು ನಿಮಿಷ."

ಪೂಣಚ್ಚ ಗೊಣಗುತ್ತಾ ಎದ್ದು ರ್‍ಯಾಕ್‌ನಿಂದ ಫೈಲ್ ಎತ್ತಿ ಅದರಿಂದ ಹಳದಿ ಹಾಳೆಯೊಂದನ್ನು ಅವನ ಮುಂದಿರಿಸಿದ. ವೈದ್ಯರ ವರದಿಯನ್ನು ಲಾಯರ್ ನಿಧಾನವಾಗಿ ಓದಿದ. ಕೆಲವು ಅಂಶಗಳನ್ನು ಗುರ್ತಿಸಿಕೊಂಡ.

"ಇದೇ ಬೇಡ ಅನ್ನೋದು. ಸುಮ್ಮನೆ ನೋಡ್ತೀನಿ ಅಂತ ಹೇಳಿ ಏನೇನೋ ಗುರುತು ಹಾಕ್ತಾ ಇದೀರಿ. ಒಟ್ನಲ್ಲಿ ನನ್ನ ಕೇಸು ಡಮಾರ್ ಅನ್ನಿಸೊ ಪಿತೂರಿ."

"ಕೇಸ್‌ವರೆಗೆ ಯಾಕೆ ಹೋಗ್ತೀರಿ. ಮೋಹನನ ಮೇಲೆ ಚಾರ್ಜ್‌ಷೀಟ್ ಹಾಕದ ಹಾಗೆ ಮಾಡದಿದ್ರೆ ನನ್ನ ಹೆಸರು ಅರವಿಂದ ಅಲ್ಲ."

"ಇಡೀ ಭೂಮಂಡಲದ ತೂಕ ಒಂದಾದ್ರೆ ಭಾಮೈದನ ತೂಕವೇ ಅದಕ್ಕಿಂತ ಇನ್ನೊಂದು ಪೆಟ್ಟು ಹೆಚ್ಚು ಅಂತಾರೆ. ಕೇಳಿಲ್ಲವೆ ಗಾದೆ 'ಸಾರಾ ಜಹಾಂ ಏಕ್ ತರಫ್...' ಭಾವಿ ಮೈದುನನ ಪರ ಇಷ್ಟು ವಕಾಲತ್ತು ವಹಿಸದಿದ್ರೆ ನಾಳೆ ಅವನ ತಂಗಿ ಸುಮ್ಮನಿದ್ದಾಳೆಯೇ?"

"ಪೋಸ್ಟ್ ಮಾರ್ಟಂ ವರದಿ ನೋಡಿದ್ದೀರಾ ಸರಿಯಾರಿ. ವೈದ್ಯರ ನಿರ್ಲಕ್ಷ್ಯತೆಯಿಂದ ಒಂದು ಪಾಯಿಂಟ್ ಬಿಟ್ಟು ಹೋಗಿದೆ. ಅಷ್ಟೇ ಸಾಕು ನನಗೆ."

"ಏನಾದ್ರು ಮಾಡಿ. ನಿಮ್ಮ ಭಾವಮೈದ ಈಗ ಆಪಾದಿತ. ಅವನ್ನ ಪಾರು ಮಾಡೋದಿಕ್ಕೆ ನೀವು ಹೆಣಗೊ ಹಾಗೆ, ಅವನ್ನ ಕೋರ್ಟಿನ ಕಟಕಟೇಲಿ ನಿಲ್ಲಿಸೋದಿಕ್ಕೆ ನಾನೂ ಹೋಗ್ತೀನಿ."

"ಮೋಹನ ಯಜ್ಞದ ಪಶು ಆಗ್ಬೇಕು ಅನ್ನಿ."

"ನನ್ನ ಸ್ಥಾನದಲ್ಲಿ ನೀವು ಇದ್ದಿದ್ರೆ ನಿಮಗೂ ತಲೆ ಇಷ್ಟೇ ಕೆಡ್ತಾ ಇತ್ತು. ನಂಜುಂಡನ ಕೊಲೆ ಯಾರಿಂದ ಅಂತ ಯೋಚ್ನೆ ಮಾಡಿ. ತಲೆಗೆ ಚಾಕರಿ ಕೊಡಿ. ಒಬ್ಬೊಬ್ಬರ ಮೇಲೂ ಸಂದೇಹ ಪಡೋದಿಕ್ಕೆ ಒಂದೊಂದು ಕಾರಣ ಇದೆ. ಎಡ್ವಿನ್‌ಗೂ ನಂಜುಂಡನಿಗೂ ಹಣಾಹಣಿ ಆಗಿತ್ತು. ಒಬ್ಬ ಶ್ರೀಮಂತ ಪೌಲ್ಟ್ರಿ ಮಾಲೀಕ ತನ್ನ ಮೇಲೆ ಹತ್ತು ಜನರ ಮುಂದೆ ಚಪ್ಪಲಿ ಎಸೆದ ಸಾಮಾನ್ಯ ಗುಮಾಸ್ತನ್ನ ಸುಮ್ಮನೆ ಬಿಟ್ಟಾನೆ? ಆಮೇಲೆ ಮ್ಯಾನೇಜರ್ ಧನಂಜಯ. ಕುಡುಕ ಅಣ್ಣನಿಗೆ ಹಣ ಒದಗಿಸಿ ಸಾಕಾಗಿರಬೇಕು. ಅವನಿಂದ ಘನತೆಗೆ ಪೆಟ್ಟು ಬೀಳುವಷ್ಟು ತಗಾದೆ ಬಂದಿದೆ. ಅದರಿಂದ ಧನಂಜಯ ಯಾಕೆ ರೋಸಿಹೋಗಿರಬಾರ್ದು? ಮತ್ತೆ ಆ ಚಂದ್ರಮ್ಮ. ಶ್ರೀಮಂತನ ಹೆಂಡತಿ ತನ್ನ ನಾದಿನಿಯ ಮರ್ಯಾದೆ ಹಾಗೂ ಮನೆತನದ ಗೌರವ ಕಾಪಾಡೋದಿಕ್ಕೆ ನಂಜುಂಡನ್ನ ಕೊನೆಗಾಣಿಸಿರಬೋದು. ಚಿತ್ರಾ ಸರಿಯೇ ಸರಿ. ತನಗೆ ಯಾವ ವಿಧದಲ್ಲೂ ಸರಿಹೊಂದದವನಿಂದ ಒಂದು ಸಾರಿ ಬೆದರಿಕೆ ಪಡೆದಮೇಲೆ ಸುಮ್ಮನಿದ್ದಾಳೆ? ಹಣ ಏನು ಬೇಕಾದ್ರೂ ಮಾಡಿಸುತ್ತೆ.

"ಸರಿ ಡಾಕ್ಟರಿಗೆ ಯಾವ ಉದ್ದೇಶವೋ?"

"ಮರ್ಡರ್ ಫಾರ್ ಲವ್. ನಿಮ್ಮ ಹಾಗೆ ಯುವಕ. ಚಿತ್ರಾನ ಒಲಿಸಿಕೊಳ್ಳೋಕೆ ನಿಮಗೆ ತಿಳಿಯದ ಹಾಗೆ ನಿಮ್ಮ ಜೊತೇಲಿ ಪೈಪೋಟಿ ಮಾಡಿರಬಹುದಾದ ಘಟಿಂಗ. ಆಕೆ ಫೇಮ್ ಪಡೆಯೋಕೆ ಚಿತ್ರಾ ಜೊತೆ ಸೇರಿ ನಂಜುಂಡನ ಮೇಲೆ ಪಿತೂರಿ ನಡೆಸಿರಬಹುದು."

"ಆಯ್ತು, ಉಳಿದೋನು ನಾನು."

"ಅದೂ ಕರೆಕ್ಟ್, ಮೊದಲೇ ಚಿತ್ರಾಗೆ ಕಟ್ಟಿಟ್ಟ ಜೊತೆ. ನಿಮ್ಮ ಸ್ವತ್ತು ಅಂತ ಹೆಚ್ಚು ಕಡಿಮೆ ತೀರ್ಮಾನ ಆಗಿರೋಳ್ನ ಆ ಅಧಮ ಕೆಣಕೋದೂಂದ್ರೆ ಏನರ್ಥ? ಕಾನೂನು ತಿಳಿದೋನ ಮುಂದೆ ನಂಜುಂಡ ಕೋಳಿ ಹಾಗೆ ತುಂಡಾದ."

"ಆಪಾದಿತರ ಪಟ್ಟಿ ಮುಗೀತೆ?"

"ಎಲ್ಲಿ ಮುಗೀತು. ಉಳಿದೋನು ನಿಮ್ಮ ಆ ಭಾವಮೈದ. ನಾನು ಹಿಡಿಯೋ ಮೊದಲೇ ಶರಣಾದ."

"ಕಾನೂನು ಅವಕಾಶ ಕೊಟ್ರೆ ಆರು ಜನರ ಮೇಲೂ ಚಾರ್ಜ್‌ಷೀಟ್ ಹಾಕೋಕೆ ಸಿದ್ಧ ನೀವು."

"ನನ್ನ ಪರಿಸ್ಥಿತಿ ಹೇಳ್ದೆ."

"ಬರ್‍ತೀನಿ ಇನ್ನು. ಮತ್ತೆ ನಿಮ್ಮ ಸ್ಟೇಷನ್‌ಗೆ ಬರೋ ತಪ್ಪು ಮಾಡೋದಿಲ್ಲ."

* * *

ಪೋಸ್ಟ್‌ಮನ್ ಗೇಟ್ ದಾಟಿ ಬರುತ್ತಲೇ ಅರವಿಂದ ಅವನ ಕಟ್ಟುಗಳಿಂದ ಚಂದ್ರಮ್ಮನ ವಿಳಾಸಕ್ಕೆ ಟೈಪ್ ಆಗಿದ್ದ ಕವರ್ ತೆಗೆದುಕೊಂಡು ಹಿಂದು ಮುಂದು ತಿರುಗಿಸಿ ನೋಡಿದ. ಔರಂಗಾಬಾದ್ ಅಂಚೆ ಮುದ್ರೆ ಚೆನ್ನಾಗಿ ಮೂಡಿತ್ತು. ಅಂಜನರಾಯರು ಹೆಂಡತಿಗೆ ಬರೆದ ಕಾಗದ.

ಮನದ ಚಪಲ ಗರಿಕೆದರಿತು. ಮರೆಗೆ ಬಂದು ಕವರ್ ಒಡೆದು ಪತ್ರ ತೆಗೆದ. ಇಂಗ್ಲಿಷ್ ಒಕ್ಕಣೆ. ಟೈಪ್ ಆದ ಪತ್ರ. ಎರಡು ಸಾರಿ ಓದಿ ಮತ್ತೆ ಮಧ್ಯದ ಪಂಕ್ತಿಗಳ ಮೇಲೆ ಕಣ್ಣಾಡಿಸಿದ.

...ಅಹಮದಾಬಾದ್‌ನಿಂದ ತಂತಿ ಬಂದಿದೆ. ನಿರೀಕ್ಷಿಸಿದುದಕ್ಕಿಂತ ಹೆಚ್ಚಿನ ಬೇಡಿಕೆ ಬಂದಿದೆ. ಬರೋಡದಿಂದ ಅಲ್ಲಿಗೇ ಇನ್ನು ಹದಿನೈದು ದಿನಕ್ಕೆ ಹೋಗ್ತೀನಿ. ಲಾಯರ್ ಅರವಿಂದ್‌ಗೆ ಹೇಳಿ ಟ್ರಿಬ್ಯೂನಲ್ ಕೇಸು ಮುಂದಕ್ಕೆ ಹಾಕಲು ತಿಳಿಸು. ನನ್ನ ಆಹಾರ ಸಮಸ್ಯೆ ಈಗ ಅಷ್ಟಿಲ್ಲ. ಬ್ರೆಡ್, ಫ್ರೂಟ್ ಜಾಂನಿಂದ ಕಾಲ ಸಾಗಿದೆ. ಮುಂದಿನ ಸಾರಿ ಚಿತ್ರಾನ ಈ ಭಾಗಕ್ಕೆಲ್ಲಾ ಕರಕೊಂಡು ಬರ್ಬೇಕು. ಈಗಲೂ ನನಗೆ ಮೋಹನನ ಚಿಂತೆ. ಹೇಗಿದಾನೆ?....

ಪತ್ರವನ್ನು ಕವರ್‌ಗೆ ಸೇರಿಸಿ ನೇರವಾಗಿ ಚಿತ್ರಾಳ ಕೋಣೆಗೆ ಬಂದ. ಪ್ರಿಯತಮೆ ಮೆಲ್ಲನೆ ಹಾಡುತ್ತ ರೇಷ್ಮೆ ಸೀರೆಗೆ ಇಸ್ತ್ರಿ ಮಾಡುತ್ತಿದ್ದಳು.

"ಈ ಕಾಗದ ಸ್ವಲ್ಪ ಓದ್ತೀಯಾ ಬೇಗಂ."

ಇಸ್ತ್ರಿಪೆಟ್ಟಿಗೆ ಸರಿಸಿ ಪತ್ರ ತೆಗೆದುಕೊಂಡು ನೋಡಿದಳು.

"ಇದು ಅತ್ತಿಗೆ ಕಾಗದ, ನವಾಬ್‌ಸಾಬ್. ನಿಮ್ಮ ಕೈಗೆ ಕೊಟ್ರೇನು?"

"ಕೊಡ್ಲಿಲ್ಲ. ನಾನೇ ರಿಸೀವ್ ಮಾಡಿ ಒಡೆದುಬಿಟ್ಟೆ. ತಪ್ಪಾಯ್ತು."

ಚಿತ್ರಾ ಬೇಸರಿಸಿದಳು.

"ಈ ಕಸುಬು ಯಾವಾಗನಿಂದ ಕಲಿತಿದ್ದು. ಬೇರೆಯೋರ ಕಾಗದ ಓದೋ ಹಾಳು ಬುದ್ಧಿ ನಂಗೆ ಕಲಿಸಬೇಡ್ರಿ... ಅಣ್ಣ ಪ್ರೀತಿಯ ಹೆಂಡತಿಗೆ ಬರೆದಿರೊ ಲವ್ ಲೆಟರ್ ಇರ್ಬೇಕು."

"ನೀನೂ ಅದರಿಂದ ಕಲಿಯೋದು ಇರಬೋದು. ಓದು ಪರವಾಗಿಲ್ಲ."

ಪತ್ರ ಓದಿದಳು ಚಿತ್ರಾ.

"ಹಗಲು ರಾತ್ರಿ ಚಿಕ್ಕಣ್ಣನದೇ ಚಿಂತೆ ಅವರಿಗೆ. ಏನು ತಮ್ಮಾಂತ ಹುಟ್ಟಿದನೋ."

ಮಾತಿನಲ್ಲಿ ಮೋಹನನ ಮೇಲಿನ ಪ್ರೀತಿ, ಬೇಸರ, ಅನುಕಂಪ ಒಂದಾಗಿತ್ತು.

ಪತ್ರ ಎಳೆದ ಅರವಿಂದ ಮತ್ತೆ ಕಣ್ಣಾಡಿಸಿದ. ಬಾಯಿಯಿಂದ ಲಘು ಶಿಳ್ಳೆ ಹೊರಬಿತ್ತು. ಅಕ್ಷರಗಳ ಮೇಲೆ ದೃಷ್ಟಿ ಸಾಗಿದಂತೆ ಮಿದುಳಿನಲ್ಲಿ ಅಲೆಗಳು ತೂರಿಬಂದವು.

"ಕಾಗದ ನೀವೇ ಕೊಡಿ ಅತ್ತಿಗೆಗೆ ಒಡೆದ ತಪ್ಪಿಗೆ ಏನು ಹೇಳ್ತಿರೋ ಹೇಳ್ಬನ್ನಿ."

ತಲೆಯಲ್ಲಿ ಅದೇ ತರಂಗಮಾಲೆ. ನಾಲಗೆಯಿಂದ ತುಟಿ ಸವರಿ ಹೊರಕ್ಕೆ ಅಡಿ ಇಟ್ಟ.

"ನಾಳೆ ಕೊಡ್ತೀನಿ. ಇವತ್ತು ನನ್ನಲ್ಲೇ ಇರ್ಲಿ."

ಅವನ ವರ್ತನೆಯಿಂದ ಅವಳಿಗೆ ಜುಗುಪ್ಸೆ ಬಂತು. ಅರವಿಂದನಿಗೆ ಇದಾವ ಕೀಳು ಪ್ರವೃತ್ತಿ?

ಅರವಿಂದ ನೇರವಾಗಿ ಕ್ಲಿನಿಕ್‌ಗೆ ಬಂದು ಗೂಡಿನ ಶೀಷೆ ಬಿಚ್ಚಿ ಮೂರು ಎ.ಪಿ.ಸಿ. ನುಂಗಿ ನೀರು ಕುಡಿದ.

"ನಾನಿರೋದು ಯಾಕೆ? ನನ್ನ ಕೇಳಿ ಔಷಧಿ ತಗೊಳ್ಳಿ. ತಲೆನೋವೆ?"

ಡಾಕ್ಟರ್ ವಾಗೀಶ ಸಲಿಗೆಯಿಂದ ಅವನ ಬೆನ್ನಿಗೆ ಗುದ್ದು ಹಾಕಿದ.

"ತಲೇಲಿ ಬ್ರೇನ್ ವೇವ್ ಎದ್ದಿದೆ. ಅದರ ತೀವ್ರತೆಗೆ ಈ ಅಗ್ಗದ ಮದ್ದು."

ಒಂದೇ ಸಮನೆ ಸಿಳ್ಳು ಹಾಕತೊಡಗಿದ.

"ಮೋಹನನ ಪ್ರಕರಣ ಎಲ್ಲಿವರೆಗೆ ಬಂತು?"

"ನಿಮ್ಮ ತಲೆ ತೊಳೆದು ಅವನ ತಲೆಗೆ ಸುತ್ಕೊಂಡ. ಈ ವೈದ್ಯ ಸಾಲದೂಂತ ಹಲ್ಲು ಚಿಕಿತ್ಸೆ ಬೇರೆ ಮಾಡ್ತಿರೇನು?"

"ಅದೂ ಕಲಿತದ್ದೇ. ರಾಯರ ಹಲ್ಲೆಲ್ಲಾ ಎಳೆದುಹಾಕ್ದೋನು ನಾನೇ."

"ಕೋಳಿಗೂ ಮದ್ದು ಮಾಡ್ತಿರೇನು?"

"ಓ, ಅಗತ್ಯಬಿದ್ರೆ. ಎಡ್ವಿನ್ ಒಂದ್ಸಾರಿ ಅದಕ್ಕೂ ಕೇಳಿದ್ದ."

"ರಾಯರು ಡೆಂಟಿಸ್ಟ್ ಬಿಟ್ಟು ನಿಮ್ಮ ಹತ್ರ ಯಾಕೆ ಬಂದ್ರು?"

"ಕೀಳೋದಿಕ್ಕೇನು ತಾಪತ್ರಯ. ಕಟ್ಟೋದು ಬೇರೆ ಕಡೆ. ಗ್ಲೈಲೊಕೇನ್ ಚುಚ್ಚೋದು. ಇಕ್ಕಳದಲ್ಲಿ ಎಳೆದು ಹಾಕೋದು. ನಾಲ್ಕು ಸಾರಿ ಕೂಡಿಸಿ ರಾಯರ ಬಾಯಿ ಖಾಲಿ ಮಾಡ್ದೆ."

"ಪುಣ್ಯದ ಕೆಲಸ ಮಾಡಿದ್ರಿ."

"ಇದು ಕೇಳೋಕೆ ಇಲ್ಲಿ ಬಂದು ಕೆಲಸ ಹಾಳು ಮಾಡಿದ್ರಾ?... ವಿಚಿತ್ರದೋರು."

ಸಿಳ್ಳು ಸದ್ದು ಕರಗಿಹೋಯಿತು.

7

ಹೊಳಪಿನ ಗುಳ್ಳೆಗಳು ಏರುತ್ತಿದ್ದ ಗ್ಲಾಸ್ ಎತ್ತಿ ಬಣ್ಣದ ಬೆಳಕಿಗೆ ಹಿಡಿದು ಮತ್ತೆ ಮೇಜಿಗಿರಿಸಿದ ಅರವಿಂದ. ವಿದೇಶಿ ಸಂಗೀತ ಹಜಾರದಲ್ಲಿ ಮೊಳಗಿತು.

"ಐದು ನಿಮಿಷದಲ್ಲಿ ಬರ್ತಿನಿ. ಏಳ್ಬೇಡಿ"

ಎಂದು ಮೋಹನನ ತಲೆ ತಟ್ಟಿ ಕೌಂಟರ್ ಪಕ್ಕದ ಕೋಣೆಯ ಬಾಗಿಲಿನ ರಂಧ್ರದ ಗಾಜಿನಲ್ಲಿ ನೋಡಿದ. ಬೆಂಜಮಿನ್ ಸೋಫಾದಲ್ಲಿ ತೂಕಡಿಸುತ್ತ ಕುಳಿತಿದ್ದ.

ಬಾಗಿಲು ತಳ್ಳಿ "ಗುಡ್ ಈವಿನಿಂಗ್, ಬಾಸ್" ಎಂದು ಅವನ ಪಕ್ಕದಲ್ಲಿ ಭಾರವಾಗಿ ಕುಳಿತು ಟೀಪಾಯ್ ಮೇಲಿನ ವೀಕ್ಲಿ ತಿರುವಿ ಹಾಕಿದ.

"ವೆಲ್‌ಕಮ್. ನಿಮಗೇ ಕಾದಿದ್ದೆ. ವಿಚಾರ ಮಾಡ್ದೆ. ಪ್ರಯೋಜನ ಆಗ್ಲಿಲ್ಲ. ಮೋಹನ್ ಮೇಲೆ ಚಾರ್ಜಸ್ ಬಂದಿದೆಯಂತೆ. ಅಲ್ಲಿ ಅವರು?"

"ಎಲ್ಲಿ ಹೋಗ್ತಾನೆ. ಅದೇ ಮೂಲೆ, ಅದೇ ಟೇಬಲ್, ಅದೇ ಬ್ರಾಂಡ್ ಹಿಡಿದು ಕೂತಿದಾನೆ. ಈವರೆಗೆ ನಂಜುಂಡನ ಜೊತೆ ಬರ್ತಿದ್ದ. ಈಗ ನನ್ನ ಜೊತೆ ಬಂದಿದ್ದಾನೆ."

'ಬ್ಲೂ ಹೊರೈಸನ್' ಬಾರ್‌ನ ಮಾಲೀಕ ಹರ್ಷದ ನಗೆ ಚಿಮ್ಮಿ, ಚಿನ್ನದ ರಂಗು ಸವರಿದ ಹಲ್ಲು ಮಿನುಗಿಸಿದ. ಅರವಿಂದನ ಕೈ ಹಿಡಿದು ಹೊರಬಂದು ಕೌಂಟರ್‌ನಲ್ಲಿ

ನಿಂತು ದಿಟ್ಟಿಸಿದ.

ಗ್ಲಾಸ್ ಹಿಡಿದ ಮೋಹನ ಗೋಡೆ ಮೇಲಿನ ನಗ್ನ ಚಿತ್ರದಲ್ಲಿ ಮಗ್ನನಾಗಿದ್ದ.

"ಈಗ ಲಿಮಿಟ್‌ನಲ್ಲಿದ್ದಾರೆ ಅಂತ ಕಾಣತ್ತೆ." ಮಾರ್ಮಿಕವಾಗಿ ಅರವಿಂದನನ್ನು ನೋಡಿ ಸಿಗರೇಟ್ ಪ್ಯಾಕ್ ಮುಂದುಮಾಡಿದ.

"ಅವನು ಯಾವತ್ತೂ ಲಿಮಿಟ್‌ನೋನೆ. ಅವತ್ತು ಮಾತ್ರ ನನ್ನ ಹಿಡಿತಕ್ಕೆ ಸಿಕ್ಕಿ ಎರಡು ಬಾಟಲ್ ಹೆಚ್ಚಾಗಿ ಏರಿಸಿಬಿಟ್ಟ. ಅದರಿಂದ ಸ್ನೇಹಿತನ್ನ ಬೇರೆ ಲೋಕಕ್ಕೆ ಹಾರಿಸಿಬಿಟ್ಟ."

"ತಪ್ಪು ನನ್ನದಲ್ಲ. ನನ್ನ ಲಿಕ್ಕರ್ ಖರ್ಚಾಗಲಿ ಅಂತ ಯಾವತ್ತೂ ಟ್ರಿಕ್ ಮಾಡೋದಿಲ್ಲ. ಹಣ ಇದ್ದಷ್ಟು ಮಾತ್ರ ಸಪ್ಲೈ ಮಾಡ್ತೀನಿ. ಅವತ್ತು ಅವನಿಗೆ ಮೂರು ಬಾಟಲ್ ಹೆಚ್ಚಾಗಿ ಕುಡಿಸೋದಿಕ್ಕೆ ಮುಂಗಡ ಹಣ ಬಂತು. ಹಣಕ್ಕೆ ಮೋಸ ಮಾಡ್ಲಿಲ್ಲ."

"ಹಣ ಕೊಟ್ಟೋನು ಯಾರು?"

"ನೆನಪಿಲ್ಲ. ನೂರಾರು ಜನ ಬರೋ ಜಾಗ, ಯಾರದೊ ಬಿಲ್ ಯಾರೊ ಕೊಡ್ತಾರೆ."

"ನೀನು ತಿಳಿದಿರೊ ಹಾಗೆ ಮೋಹನನಿಗೆ ಮರೆವು ರೋಗ, ನಿದ್ರೆ ರೋಗ ಯಾವುದೂ ಇಲ್ಲ. ಯಾವನೊ ಅಜ್ಞಾತ ವ್ಯಕ್ತಿ ತನ್ನ ಉದ್ದೇಶ ಸಾಧನೆಗೆ ಅವನಿಗೆ ಕಂಠಪೂರ್ತಿ ಕುಡಿಸಿ ಬುದ್ಧಿ ಪಲ್ಲಟ ಮಾಡ್ಸಿದಾನೆ. ಅದರಿಂದ ಅಚಾತುರ್ಯ ನಡೆದುಹೋಯ್ತು. ಬಡಪಾಯಿ ಆಪಾದನೆಗೆ ಸಿಕ್ಕಿ ನೇಣುಕಂಬ ನೋಡ್ತಾ ಇದಾನೆ. ನಾನು ಅವನ ಲಾಯರ್. ಈಗ ನಿನ್ನ ಕೋರ್ಟಿಗೆ ಎಳೆದು ಮೊದಲನೆ ಸಾಕ್ಷಿ ಮಾಡ್ತೀನಿ."

ಬೆಂಜಮಿನ್ ಸಿಗರೇಟ್ ಧೂಮ ಹೇರಳವಾಗಿ ತೂರಿ ನಾಲಗೆ ಆಡಿಸಿದ.

"ಎಷ್ಟೊ ಸಾಕ್ಷಿ ಕೊಟ್ಟಿರೋನು ನಾನು. ನಡೆಸೋದು ಬಾರ್ ಆದ್ರೂ ಪ್ರಿನ್ಸಿಪಲ್ ಮನುಷ್ಯ. ಈಗ ಹೇಳ್ತಾ ಇರೋದು ಸತ್ಯ. ಅವತ್ತು ರಾತ್ರಿ ಒಂಬತ್ತರ ಹೊತ್ತಿಗೆ ಒಬ್ಬ ಆಸಾಮಿ ಬಂದ. ಕೆಂಪು ಮಫ್ಲರ್, ಅಚ್ಚಕಪ್ಪು ಕನ್ನಡಕ. ಮೋಹನ ಮಾಮೂಲು ಕುಡಿದ ಮೇಲೆ ಎರಡು ಬೀರ್, ಒಂದು ಬ್ರಾಂದಿ ಅವನ ಮುಂದೆ ಇಡೋದಿಕ್ಕೆ ಸೂಚನೆ, ಹಣ ಕೊಟ್ಟು ಹೋದ. ಅರ್ಧ ಗಂಟೆ ಆದ್ಮೇಲೆ ಬಂದು ಕುಳಿತ. ಆಸಾಮಿ ಯಾರೂಂತ ವಿಚಾರಿಸಲಿಲ್ಲ. ಕರಾರುವಾಕ್ಕಾಗಿ ಸಪ್ಲೈ ಮಾಡ್ದೆ."

"ಹಣ ಬಂದ್ರೆ ಆಯ್ತು. ಆಸಾಮಿ ಯಾರಾದ್ರೇನು. ಮೋಹನ್ ಹೆಚ್ಚುವರಿ ಬಾಟಲ್ ನೋಡಿ ಏನೂ ಕೇಳಲಿಲ್ವೆ?"

"ಕೇಳಿದ್ರು ಅದು ನಮ್ಮ ಖಾಯಂ ಗಿರಾಕಿಗೆ ಗಿಫ್ಟ್ ಅಂತ ಹೇಳ್ದೆ. ಅದೊಂದೇ ಸುಳ್ಳು ಈ ವಿಷಯದಲ್ಲಿ ನಾನು ಹೇಳಿದ್ದು. ಹಾಗೆ ಹೇಳೋದಿಕ್ಕೆ ಅದೇ ಆಸಾಮಿ ಸೂಚನೆ ಕೊಟ್ಟಿದ್ದ."

"ಆಮೇಲೇನಾಯ್ತು?"

"ಏನಾಯ್ತೋ ಗೊತ್ತಿಲ್ಲ. ನಾನು ಹೊರಟುಹೋದೆ. ನಮ್ಮ ಸೇಲ್ಸ್‌ಮನ್ ಹೇಳಿಕೆ ಪ್ರಕಾರ ಆ ಮಫ್ಲರ್ ಆಸಾಮಿ ಮೋಹನನ ಪಕ್ಕಕ್ಕೆ ಬಂದು ಕುಳಿತ. ಮೋಹನ ಒಂದೇ ಸಮ ಕುಡಿದ. ಸ್ವಲ್ಪ ಹೊತ್ತಿಗೆ ಫೋನ್‌ಕಾಲ್ ಬಂತು ಮೋಹನನಿಗೆ. ಫೋನ್ ಯಾರಿಂದ ಬಂತು ಅನ್ನೋದು ಗೊತ್ತಿಲ್ಲ. ಆಮೇಲೆ ಮೋಹನ ಮಫ್ಲರ್ ಆಸಾಮಿಯೊಂದಿಗೆ ಕಾರಿನಲ್ಲಿ ಹೊರಟುಹೋದನಂತೆ."

"ನಿನ್ನ ಬಾಟಲ್‌ನಿಂದ ಅವನ ಮೇಲೆ ಪರಿಣಾಮ ಆಗಿಲ್ಲ. ಆಸಾಮಿ ಬಾಟಲ್‌ಗೆ ಮದ್ದು ಸೇರಿಸಿದಾನೆ."

ಬೆಂಜಮಿನ್ ಮುಖ ಮುಂದು ಮಾಡಿ ವಿಸ್ಮಯ ಪ್ರಕಟಿಸಿದ.

"ಬುದ್ಧಿ ಮಂಕು ಮಾಡೊ ಮದ್ದೇ."

"ಏನೋ ಹಾಕಿಬಿಟ್ಟ. ಮೋಹನನ ಜೊತೇಲಿ ಕಾರಿನಲ್ಲಿ ಸಾಗಿದ ನಂಜುಂಡನ ಮೇಲೆ ಚಕ್ರ ಹರಿಸಿ, ದೇಹ ಕೆರೆಗೆ ಹಾಕಿ ಕತ್ತಲಲ್ಲಿ ಮಾಯ ಆದ. ಅಷ್ಟೊಂದು ನಡೆಯೋವರೆಗೆ ಮೋಹನನಿಗೆ ಬುದ್ಧಿ ಗ್ರಹಣ, ನಿದ್ರಾವಸ್ತೆ. ಈಗ ಬಾ. ನಯವಾಗಿ ಮಾತಾಡ್ಸು ಅವನ್ನ."

ಬೆಂಜಮಿನ್ ಕತ್ತಿನ ಬೋ ಸರಿಪಡಿಸಿಕೊಂಡು ನಿಧಾನವಾಗಿ ಮೇಜಿನ ಬಳಿಗೆ ಬಂದು ನಿಂತ. ಅವನನ್ನು ತಿರಸ್ಕಾರದಿಂದ ನೋಡಿದ ಮೋಹನ, ಮುಖ ಪಕ್ಕಕ್ಕೆ ತಿರುಗಿಸಿ ಬೆರಳಿನಿಂದ ಮೇಜು ಬಡಿಯುತ್ತಾ ಕುಳಿತ.

"ಗುಡ್ ಈವಿನಿಂಗ್ ಸರ್."

ನಮ್ರವಾಗಿ ತಲೆಬಾಗಿಸಿದ ಬೆಂಜಮಿನ್. ಮೋಹನ ಏಕಾಏಕಿ ಮೇಲೆದ್ದು ಕೇಕರಿಸಿ ನೆಲಕ್ಕೆ ಉಗಿದ. ಕೈ ಬಡಿತಕ್ಕೆ ಸಿಕ್ಕಿ ಮೇಜಿನ ಗ್ಲಾಸ್ ಪಟಾರನೆ ಹಾರಿಹೋಯಿತು. ಬೆಂಜಮಿನ್ ಹೆದರಿ ಸೆಟೆದು ನಿಂತು ಎದೆಗೆ ಕೈ ಹಚ್ಚಿದ.

ಮುಂದಿನ ಹಗರಣ ತಪ್ಪಿಸಲು ಅರವಿಂದ ಮೋಹನನನ್ನು ಹೊರಕ್ಕೆ ಸಾಗಿಸಿ ಕಾರಿನಲ್ಲಿ ಕೂಡಿಸಿ ವೇಗದಿಂದ ಚಲಿಸಿದ.

"ನೋಡ್ತಾ ಇರು, ಇಷ್ಟರಲ್ಲೇ ಅವನು ಹುಟ್ಟಲಿಲ್ಲ ಅನ್ನಿಸಿಬಿಡ್ತೀನಿ" ಬುಸುಗುಟ್ಟಿದ ಮೋಹನ.

"ಈಗ ಮಾಡಿರೊ ಒಂದು ಕೊಲೆ ಸುಧಾರಿಸ್ಕೊ. ನಿನ್ನ ವಕಾಲತ್ತು ವಹಿಸಿ ನಾನು ಹುಚ್ಚಾಸ್ಪತ್ರೆ ಸೇರಬೇಕಾಗಿದೆ. ಏನು ಮಾಡ್ಲಿ. ಎಲ್ಲಾ ಆ ನಿನ್ನ ತಂಗಿಗೋಸ್ಕರ."

"ಅವಳು ನಿನಗೆ ದಕ್ಕಬೇಕಾದ್ರೆ ನನ್ನ ಶಿಫಾರಸ್ ಬೇಕೇಬೇಕಲ್ಲ."

"ಮುಚ್ಚು ಬಾಯಿ. ಭಾರಿ ಶಿಫಾರಸ್ ಮಾಡೋಕೆ ಬಂದ. ನಿನ್ನ ತಂಗಿ ಅಂದ್ರೆ ರಂಭೆ ಅಂತ ತಿಳಿದಿಯೇನು? ನಾನು ಮನಸ್ಸು ಮಾಡಿದ್ರೆ ಹೆಣ್ಣುಗಳು ಕ್ಯೂ ನಿಲ್ಲುತ್ವೆ."

"ಬಸ್ ಸ್ಟಾಪ್‌ನಲ್ಲಾ?"

"ಹುಡುಗಾಟ ಸಾಕು. ನಿನ್ನ ಮೊಂಡ ತಲೆ ಸ್ವಲ್ಪ ಒದರಿ ಅವತ್ತು ಏನಾಯ್ತು ಅನ್ನೋದು ಜ್ಞಾಪಿಸ್ಕೊ."

ಸಾಲುಮರಗಳ ಪಕ್ಕದಲ್ಲಿ ಕಾರು ನಿಲ್ಲಿಸಿದ. ತಂಗಾಳಿ ಬೀಸುತ್ತಿತ್ತು.

"ಏನು ಹೇಳ್ಲಿ?"

"ಸಿನಿಮಾ ಕತೆ ಹೇಳೂಂತ ಕರಕೊಂಡು ಬಂದ್ನೇನು ಇಲ್ಲಿಗೆ? ಹೇಳು. ಅವತ್ತು ರಾತ್ರಿ ಹತ್ತು ಗಂಟೆಗೆ ನಿನಗೆ ಫೋನ್ ಮಾಡಿದೋರು ಯಾರು?"

"ಗೊತ್ತಿಲ್ಲ. ಸ್ವರ ಗೊತ್ತಾಗಬಾರದು ಅಂತ ಬಾಯಲ್ಲಿ ಸ್ಪಂಜ್, ಪೇಪರ್ ಬಾಲ್ ಇಟ್ಕೊಂಡು ಮಾತಾಡ್ತಾರಂತೆ."

"ಭಾರೀ ಚುರುಕು! ನಿನ್ನ ಪಕ್ಕದಲ್ಲಿ ಅವತ್ತು ಕುಳಿತ ಆಸಾಮಿನ ಗುರ್ತಿಸ್ತೀಯಾ?"

ತುಟಿ ಹಿಗ್ಗಿಸಿ ತಲೆ ಆಡಿಸಿದ.

"ಎಲ್ಲೋ ನೋಡಿದ ಹಾಗೆ. ಆದರೆ ಹೇಳೋಕೆ ಆಗಲೊಲ್ಲದು."

"ಹತ್ತು ಕಡಾಯಿ ಕುಡಿದ್ರೂ ಚರಂಡಿಗೆ ಬೀಳದ ಧೀರ ಅಂತ ಕೊಚ್ಚಕೊತೀಯ. ಒಂದು ಗಂಟೆ ಪಕ್ಕದಲ್ಲಿದ್ದ ವ್ಯಕ್ತೀನ ಗುರುತಿಸಲಿಲ್ವಾ?"

ತುಟಿ ಹಿಗ್ಗಿಸಿ ತಲೆ ಆಡಿಸಿದ.

"ಎಲ್ಲೋ ನೋಡಿದ ಹಾಗೆ. ಆದರೆ ಹೇಳೋಕ್ಕೆ ಆಗಲೊಲ್ಲದು."

"ಹತ್ತು ಕಡಾಯಿ ಕುಡಿದ್ರೂ ಚರಂಡಿಗೆ ಬೀಳದ ಧೀರ ಅಂತ ಕೊಚ್ಕೊತೀಯ. ಒಂದು ಗಂಟೆ ಪಕ್ಕದಲ್ಲಿದ್ದ ವ್ಯಕ್ತೀನ ಗುರುತಿಸಲಿಲ್ವಾ?"

"ಲಿಕ್ಕರ್‌ಗೆ ಏನೋ ಸೇರಿಸಿರ್ಬೇಕು."

"ಅದರ ಪರಿಜ್ಞಾನ ಯಾವಾಗ ಬಂತು?"

"ಮಾರನೆ ದಿನ ಬೆಳಗ್ಗೆ ಕಾರು ತೊಳೆಯೋವಾಗ."

"ಕುಡುಕ ಸಹವಾಸ! ಪೆದ್ದ ನಾನು... ನೀನಲ್ಲ"

ಕಾರು ಸಾಗಿತು. ಮಂಚೇನ ಹಳ್ಳಿ ರಸ್ತೆ ತಿರುಗಿ ಎದುರಿಗೆ ಕಾಣುತ್ತಿದ್ದ ಕೆರೆಗೆ ಅರ್ಧ ಫರ್ಲಾಂಗ್ ದೂರದಲ್ಲಿ ನಿಂತಿತು. ಇಬ್ಬರೂ ಕೆಳಗಿಳಿದರು.

"ನಂಜುಂಡನ ದೇಹ ಬಿದ್ದಿದ್ದ ಭಾಗ ಇದೂಂತ ಪೂಣಚ್ಚ ಸ್ಕೆಚ್ ಮಾಡಿದಾನೆ. ಹೌದಾ?"

ಮೋಹನ ಮಣ್ಣು ರಸ್ತೆಯನ್ನು ಮೇಲಿಂದ ಕೆಳಗಿನವರೆಗೆ ನಿರಾಸಕ್ತಿಯಿಂದ ನೋಡಿದ.

"ಇರಬೋದು."

"ಕಾರಿನ ಹೆಡ್ ಲೈಟ್ ಆರಿಹೋದಾಗ ನಿನಗೆ ಗಾಬರಿ, ಆಶ್ಚರ್ಯ ಒಂದೂ ಆಗ್ಲಿಲ್ವೆ?"

"ಆಗ ಮಫ್ಲರ್ ಡ್ರೈವ್ ಮಾಡ್ತಿದ್ದ. ದೇಹದ ಮೇಲೆ ಕಾರು ಹರಿದಾಗ ನಾನು ಸ್ಟೀರಿಂಗ್ ಹಿಡಿದಿದ್ದೆ."

"ಬೇಡದ್ದೆಲ್ಲಾ ನೆನಪಿದೆ. ದೇಹ ಹೇಗೆ ಕಾಣಿಸ್ತು ಕತ್ತಲಲ್ಲಿ?"

"ಅವನೇ ಟಾರ್ಚ್ ಹಾಕಿ ತೋರಿಸ್ದ."

"ಅವನಿಗೆ ಹೇಗೆ ಗೊತ್ತು ಕಾರಿನಲ್ಲಿ ಟಾರ್ಚ್ ಇದ್ದಿದ್ದು?"

"ಗೊತ್ತಿಲ್ಲ. ಎಷ್ಟೊಂದು ಪ್ರಶ್ನೆ ಕೇಳ್ತೀರಿ."

"ನಾಳೆ ಕೋರ್ಟ್‌ನಲ್ಲಿ ಇದಕ್ಕೂ ಹೆಚ್ಚಾಗಿ ಬೇಯಿಸ್ತಾರೆ ನಿನ್ನ. ಆಮೇಲೆ ಇಬ್ಬರೂ ಸೇರಿ ದೇಹಾನ ಕೆರೆಗೆ ಆಹುತಿ ಮಾಡಿದ್ರಿ. ಯಾರಾದ್ರೂ ನೋಡಿರ್ಬೋದು ಅಂತ ಸಂದೇಹ ತಟ್ಟಲಿಲ್ವೇನು?"

"ಯಾವುದೂ ನೆನಪಿಲ್ಲ. ಕಣ್ಣು ಎಳೀತಾ ಇತ್ತು."

"ಅಷ್ಟಾದ್ರೂ ಪಕ್ಕದೋನು ಯಾರೂಂತ ತಿಳೀಲಿಲ್ಲ. ಅವನ ಹೆಸರು ಕೇಳಲಿಲ್ವೆ?"

"ಕಪ್ಪು ಕನ್ನಡಕ, ಕೆಂಪು ಮಫ್ಲರ್ ಇಷ್ಟು ಬಲ್ಲೆ. ಹೆಸರು ಹೇಳ್ದ."

"ಏನಂತ?" ಕಾತರವಾಗಿ ಬೆನ್ನು ಹಿಡಿದ.

"ನನ್ನ ಹಿತೈಷಿ ಅಂದ."

"ದೇವರೇ ಗತಿ. ಸರಿ, ಹತ್ತು ಕಾರು. ಏನು ಕೇಳಿದ್ರೂ ಒಂದು ಉತ್ತರ... ಗೊತ್ತಿಲ್ಲ! ನಾಳೆ ಕೋರ್ಟಿನಲ್ಲಿ ಕಟಕಟೇಲಿ ನಿಂತಾಗ್ಲೂ ಇದೇ ಗೊತ್ತಿಲ್ಲ ಹೇಳಿ ಪ್ರಾಕ್ಟೀಸ್‌ಗೆ ಮಣ್ಣು ಹಾಕೋದು ಗ್ಯಾರಂಟಿ."

'ಭಾರತ್ ಕೇಬಲ್ಸ್' ತಲುಪುವವರೆಗೆ ಅರವಿಂದ ಮತ್ತೆ ಅವನಿಗೆ ಪ್ರಶ್ನೆ ಹಾಕಲಿಲ್ಲ.

* * *

ಮಿಸ್ಲೇನಿಯಸ್ ಅಂಡ್ ಪರ್ಸನಲ್ ಪಟ್ಟಿ ಹಾಕಿದ್ದ ದಪ್ಪನೆಯ ಫೈಲ್ ಎತ್ತಿ ಹಾಳೆಗಳನ್ನು ತಿರುವಿಹಾಕಿ ಹೊಟೇಲ್ ವಿಳಾಸಗಳನ್ನು ನೋಟ್ ಬುಕ್‌ನಲ್ಲಿ ಬರೆದುಕೊಂಡ ಅರವಿಂದ.

ಹಾಗೆಯೇ ಅಂಜನರಾಯರ ಟೂರ್ ಪ್ರೋಗ್ರಾಂ, ಬ್ಯಾಂಕ್ ಲೆಕ್ಕ ಗುರ್ತಿಸಿಕೊಂಡ.

"ರಾಯರು ಈ ಹೊಟೇಲ್‌ನಲ್ಲಿ ರಿಸರ್ವೇಶನ್ಸ್ ಮಾಡ್ಸಿದ್ರಾ?

"ಹುಂ. ಎಲ್ಲಾ ಹಳೆಯ ಹೋಟೇಲ್‌ಗಳೇ. ಅದರಲ್ಲಿ ಅಹಮದಾಬಾದ್,

ಗ್ವಾಲಿಯರ್, ಅಂಬಾಲಾ ಹೊಸದಾಗಿ ಸೇರಿಸಿರೋದು."

ಟೈಪಿಸ್ಟ್ ಫಯಲ್ ಬೀರುವಿನಲ್ಲಿರಿಸಿ ಟೈಪ್ ಮಾಡುತ್ತಾ ಕುಳಿತ. ಪಕ್ಕದ ಮೇಜಿನ ಮೇಲಿದ್ದ ಮತ್ತೊಂದು ಟೈಪ್‌ರೈಟರ್‌ಗೆ ಕಾಗದ ಹಾಕಿ ಅರವಿಂದ ಪತ್ರವೊಂದನ್ನು ಟೈಪ್ ಮಾಡಿದ.

"ಈ ಮಿಷಿನ್ ಸರಿಯಾಗಲ್ಲ. ನಿಮ್ಮ ಮಿಷನ್‌ಗೆ ಹಾಕಿ ಟೈಪ್ ಮಾಡಿ ಕೊಡಿ ಈ ಮ್ಯಾಟರ್."

ಹಾಳೆ ಅವನಿಗೆ ನೀಡಿದ. ಟೈಪಿಸ್ಟ್ ಅದರ ಒಕ್ಕಣೆ ನೋಡಿ ಕಣ್ಣರಳಿಸಿದ.

"ಸಾರ್, ಬಾಸ್‌ಗೆ ಬರೀತಾ ಇದೀರಿ. ಮೋಹನ ಕೊಲೆ ಆಪಾದನೆಗೆ ಸಿಕ್ಕಿದಾನೆ ಅಂತ ತಿಳಿದ್ರೆ, ಅತಂತ್ರ. ರಾಯರು ಬರೋವರೆಗೆ ಈ ಸುದ್ದಿ ಅವರಿಗೆ ತಿಳಿಸಬಾರ್ದೂಂತ ಮ್ಯಾನೇಜರ್, ಅಮ್ಮಾವ್ರು, ಚಿತ್ರಾ ಎಲ್ಲಾ ಒಮದೇ ಸಮ ಹೇಳ್ತಾ ಇದಾರೆ."

"ಅವರಿಗೆ ಪೋಸ್ಟ್ ಮಾಡೊ ಕಾಗದ ಅಲ್ಲ ಇದು. ಸುಮ್ಮನೆ ಟೈಪ್ ಮಾಡ್ರಿ. ಇನ್ನು ಎಂಟು ದಿನಕ್ಕೆ ಪ್ರೋಗ್ರಾಂ ಪ್ರಕಾರ ರಾಯರು ಎಲ್ಲಿರ್ತಾರೆ?"

ಟೈಪಿಸ್ಟ್ ಮತ್ತೆ ಫೈಲ್ ತೆಗೆದು ನೋಡಿ ಹೇಳಿದ.

"ಗ್ವಾಲಿಯರ್."

ಟೈಪಿಸ್ಟ್ ಟೈಪ್ ಮಾಡಿದ ಕಾಗದವನ್ನು ಅರವಿಂದನಿಗೆ ನೀಡಿದ.

"ಹಳೇ ಮಿಷನ್‌ಗಳೂಂತ ಕಾಣುತ್ವೆ. ಅಕ್ಷರ ಅಡ್ಡಾದಿಡ್ಡಿ."

"ಹೌದು ಸಾರ್. ಈ ಸಾರಿ ಇವನ್ನ ಕಂಡೆಮ್ ಮಾಡಿ ಹೊಸದು ತರ್ಸಬೇಕೂಂತ ಹೇಳ್ತಿದ್ರು ರಾಯ್ರು..."

ಮ್ಯಾನೇಜರ್ ಕೋಣೆಯ ಕಡೆ ಸಾಗಿದಾಗ ಕಾಫಿ ಟ್ರೇ ಹಿಡಿದ ಕ್ಯಾಂಟೀನ್ ಸೂರಪ್ಪ ತಲೆ ಬಾಗಿಸಿ ನಮಸ್ಕರಿಸಿದ.

ಮೋಹನನ ಪರ್ಸನಲ್ ಸೆಕ್ರೆಟರಿ ಸೂರಪ್ಪ ಬಿರಿಯಾನಿ, ಶೀಷೆಗಳ ಸರಬರಾಜುದಾರ. ಕಾಫಿ, ತಿಂಡಿ ತಯಾರಿಕೆಯಿಂದ ಕಾರಿನ ಸ್ಟೀರಿಂಗ್ ಹಿಡಿಯುವವರೆಗೆ ಎಲ್ಲಾ ಕಲಿತ ಚತುರ.

"ಮ್ಯಾನೇಜರ್ ಪಾಲಿನ ಕಾಫಿ ನನಗೇ ಆಗಲಿ. ಇನ್ನೊಂದು ತೊಗೊಂಡು ಹೋಗು ಅವರಿಗೆ."

ಲೋಟಾ ಎತ್ತಿ ಬರಿದು ಮಾಡಿ ಟ್ರೇಗೆ ನಾಣ್ಯ ಹಾಕಿ ಚೇಂಬರ್ ಪ್ರವೇಶಿಸಿದ. ಧನಂಜಯ ಪೋಸ್ಟ್ ಆಗಲಿದ್ದ ಇನ್ವಾಯ್ಸ್‌ಗಳಿಗೆ ಸಹಿ ಹಾಕುವುದರಲ್ಲಿ ಮಗ್ನನಾಗಿದ್ದ.

"ಬನ್ನಿ ರಾಯರೇ. ಹೇಳಿ ಕಳಿಸೋಣಾಂತ ಇದ್ದೆ. ಕಂಪನಿ ಲಾರಿ ಆಕ್ಸಿಡೆಂಟ್ ಆಯ್ತು. ಅದರ ರಿಲೀಸ್‌ಗೆ ಮ್ಯಾಜಿಸ್ಟ್ರೇಟ್ ಪರ್ಮಿಷನ್ ಬೇಕು. ಬಾಂಡ್‌ಗೆ ಹೇಗೆ ಬರೀಬೇಕು ಹೇಳಿ."

"ಮಾಡಿ ಟೈಪ್."

ಅರವಿಂದ ಬಾಂಡ್ ಒಕ್ಕಣೆಯನ್ನು ಬಾಯಲ್ಲಿ ಹೇಳುತ್ತಿದ್ದಂತೆ ಧನಂಜಯ ಅದನ್ನು ಟೈಪ್ ಮಾಡಿದ. ಹಾಳೆಯ ಕಾಪಿ ತೆಗೆದುಕೊಂಡು ಕಿಟಕಿ ಬಳಿ ನಿಂತು ಅರವಿಂದ ಓದಿದ. ಮೈಯೆಲ್ಲಾ ಕಣ್ಣಾಯಿತು. ಮಿದುಳಿನಲ್ಲಿ ಮಿಂಚು ಬಳ್ಳಿ ಹಾದು ಹೋಯಿತು.

"ಏನಾದ್ರು ಬಿಟ್ಟಿದೀರಾ?" ತಲೆ ಎತ್ತದೆ ಕೇಳಿದ ಮ್ಯಾನೇಜರ್.

"ಇಲ್ಲ. ಇದು ಇಪ್ಪತ್ತೆರಡೂವರೆ ರೂಪಾಯಿ ಸ್ಟಾಂಪ್ ಪೇಪರ್‌ನಲ್ಲಿ ಟೈಪ್ ಆಗಬೇಕು. ಅದಕ್ಕೆ ಷೂರಿಟಿ ಕೊಡೊ ಪಾರ್ಟಿ ಬೇಕು."

"ಆಗಬೋದು."

ಅರವಿಂದ ಒಂದು ಪ್ರತಿಯನ್ನು ಜೇಬಿಗೆ ಸೇರಿಸಿ ಕುರ್ಚಿಯಲ್ಲಿ ಒರಗಿದ.

"ಮೋಹನನ ವಿಷಯ ತಲೆ ಮೇಲೆ ಬೆಟ್ಟವಾಗಿ ಕೂತಿದೆ. ಹೇಗೆ ನಿಭಾಯಿಸೋದೂಂತ ಹೊಳೀತಾ ಇಲ್ಲ. ಏನು ಕೇಳಿದ್ರೂ ನೆನಪಿಲ್ಲ ಅಂತಾನೆ. ಪೊಣಚ್ಚನಿಗೆ ಹಸಿದ ಹೊತ್ತಿಗೆ ಸೊಗಸಾದ ಊಟ ಸಿಕ್ಕಿದ ಹಾಗಾಯ್ತು. ಇನ್ನೊಂದು ವಾರದಲ್ಲಿ ಚಾರ್ಜ್‌ಷೀಟ್ ಹಾಕೋದು ನಿಜ. ನನ್ನ ಮಾತು ಕೇಳ್ತೀರಾ?"

"ಹೇಳಿ" ತಲೆ ಎತ್ತಿ ಕಾತರಿಸಿದ.

"ಅಂಜನರಾಯರಿಗೆ ಕಾಗದ ಹಾಕಿ ಹಿಂದಕ್ಕೆ ಕರೆಸಿಬಿಡಿ." ಗಾಬರಿಯಿಂದ ಧನಂಜಯ ಪೆನ್ ಮೇಜಿಗಿಟ್ಟ.

"ಉಂಟೆ, ಸಾರ್. ರಾಯರು ಆಹ್ವಾನದ ಮೇಲೆ ಪ್ರವಾಸ ಹೋಗಿರೋದು. ವರ್ಷದಿಂದ ಹಾಕಿದ್ದ ವ್ಯಾಪಾರಿ ಯೋಜನೆ ಹಾಳಾಗಿ ಹೋಗುತ್ತೆ. ಅವರು ಬರೋದ್ರಲ್ಲಿ ಏನಾದ್ರು ಇತ್ಯರ್ಥ ಮಾಡಿಸೋದು ನೋಡಿ. ಹಣ ಎಷ್ಟಾದ್ರೂ ಖರ್ಚಾಗಲಿ."

"ರಾಯರ ಮನೆತನಕ್ಕೆ ಕಳಂಕ ಬರಬಾರ್ದು ಅಂತ ಕೇಸ್ ನಿಲ್ಲೋಕೆ ಸಾಧ್ಯವೇ? ಮೋಹನ ಹರಿಶ್ಚಂದ್ರನ ಹಾಗೆ ಮುಂದೆ ಬಂದು ಕುತ್ತಿಗೆಗೆ ಉರುಳು ಹಾಕಿಕೊಂಡಿದ್ದಾನೆ."

"ಬೇಕಾದ್ರು ಒಂದೇ. ಈ ಸುದ್ದಿ ರಾಯರ ಕಿವಿಗೆ ಬೀಳಬಾರ್ದು. ಅವರು ಬರೋದ್ರಲ್ಲಿ ಮುಗಿಬೇಕು."

"ಸ್ವಲ್ಪ ನಂಜುಂಡನ ವಿವರ ಕೊಡಿ. ಸದ್ಯಕ್ಕೆ ನೀವೇ ಬದುಕಿರೋ ನಂಜುಂಡ."

"ನತದೃಷ್ಟ ಅಣ್ಣ. ಅವನ ಸಾವಿಗೆ ನಾನು ದುಃಖಪಡೋದಿಲ್ಲ. ಸಾಯೋನು ಐದು ವರ್ಷ ಮೊದಲೇ ಸಾಯಬಾರದಾಗಿತ್ತೆ. ಇಷ್ಟು ಕೆಟ್ಟು ನಾಲ್ಕು ಜನರಿಂದ 'ಛಿ' ಅನ್ನಿಸಿಕೊಂಡ ಹೋಗಬೇಕಾಗಿತ್ತೆ? ಸದ್ಯ, ಮದುವೆ ಆಗಿರ್ಲಿಲ್ಲ ಮಹರಾಯ. ಅದೊಂದೇ ಅವನು ಮಾಡಿದ ಪುಣ್ಯದ ಕೆಲಸ."

"ಹಣಕ್ಕೆ ಸತಾಯಿಸ್ತಾ ಇದ್ನೆ?"

"ಅಣ್ಣನ ಹಕ್ಕು. ಕಾಡ್ತಾ ಇದ್ದ. ತಪ್ಪದೆ ಕೊಡ್ತಾ ಇದ್ದೆ."

"ಪೂಣಚ್ಚನ ಬ್ರೇನ್ ವರ್ಕ್ ಕೇಳಿದ್ರಲ್ಲಾ. ನಂಜುಂಡ ಹಣಕ್ಕಾಗಿ ನಿಮ್ಮ ಹೆಗಲೇರಿದ್ದ. ಅದರಿಂದ ಬೇಸತ್ತು ನೀವು ಅವನ್ನ ಕೊನೆಗಾಣಿಸಿ ಬಿಟ್ರಂತೆ."

"ಅಣ್ಣನ ಕೊಲೆ ಮಾಡುವಷ್ಟು ಧೂರ್ತತನ ಕಲಿಸಲಿಲ್ಲ ನಮ್ಮಪ್ಪ."

"ನಿಮ್ಮ ತಂದೆಗೆ ನಂಜುಂಡನ ಚಾಳಿ ಗೊತ್ತಿತ್ತಲ್ಲ?"

"ಎಲ್ಲಾ ಗೊತ್ತಿತ್ತು. ಬಹಳ ಮೆದು ಸ್ವಭಾವ. ಹೊಸೂರ್‌ನಲ್ಲಿ ರಿಟೈರ್ಡ್ ಸ್ಕೂಲ್ ಮಾಸ್ಟರ್, ಅಲ್ಲೇ ಒಂದು ಸಣ್ಣ ಮನೆ ಇದೆ. ಎಷ್ಟೋ ಸಾರಿ ಇಲ್ಲಿಗೆ ಬಂದು ಹೋಗಿದಾರೆ. ನೀವು ಬಂದಮೇಲೆ ಅವರು ಬಂದಿಲ್ಲ. ನಾನು ಇಲ್ಲಿಗೆ ಬಂದು ಐದು ವರ್ಷ ಆಯ್ತು. ಅಂಜನರಾಯರು ನನ್ನ ಚೆನ್ನಾಗಿ ನೋಡ್ಕೊಂಡ್ರು. ಎಲ್ಲಾ ವಹಿವಾಟೂ ನನಗೇ ವಹಿಸಿದ್ರು. ನಾನು ಬಂದ ಮೇಲೆ ಲಾಭ ಏರ್ತು ಅಂದ ಅವರ ನಂಬಿಕೆ. ನಾನು ಬಂದ ಆರು ತಿಂಗಳಿಗೆ ನಮ್ಮಣ್ಣ ಬಂದ. ಅವನ ಕೈ ಶುದ್ಧ ಅಲ್ಲ. ರಾಯರು ನನ್ನ ವಿಶ್ವಾಸದ ಮೇಲೆ ಅವನ್ನ ಸೇರಿಸಿಕೊಳ್ಳೋಕೆ ಇಷ್ಟಪಟ್ಟರೂ ನಾನು ಒಪ್ಪಿಲ್ಲ. ಅನ್ನ ಕೊಡೋ ದಣಿಗೆ ಅವನು ದ್ರೋಹ ಬಗೆಯೋದು ಖಂಡಿತ ಅನ್ನೋದು ಗೊತ್ತು. ಹಾಳಾದೋನು ದೂರ ಹೋಗ್ಲಿಲ್ಲ. ಪಕ್ಕದ ಪೌಲ್ಟ್ರಿ ಫಾರಂ ಸೇರ್ದ. ಎಡ್ವಿನ್, ರಾಯರ ಹಾಗೇ ದೊಡ್ಡ ಮನುಷ್ಯ. ಅಂತೋನಿಗೆ ನಂಜುಂಡ ಸಾಕಷ್ಟು ಕಿರುಕುಳ ಕೊಟ್ಟು ಹೋದ.

"ನೀವು ಯಾಕೆ ಮದುವೆ ಆಗ್ಲಿ?"

ಧನಂಜಯ ಶುಷ್ಕ ನಗೆ ಬೀರಿದ.

"ನಲವತ್ತೆರಡು ವರ್ಷ ದಾಟಿದ್ರೂ ಮದುವೆ ಅನ್ನೋ ಶಬ್ದ ಕಾಣದ ಅಣ್ಣ ಪಕ್ಕದಲ್ಲೇ ಇರೋವಾಗ, ನಾನು ಹೇಗೆ ಆಗೋದು, ಸಾರ್. ರಾಯರು ಅಮ್ಮಾವ್ರು ಹೆಣ್ಣು ಹುಡುಕಿ ವರ್ಷದಿಂದ ಒತ್ತಾಯ ಮಾಡ್ತಾ ಇದಾರೆ. ಇನ್ಮೇಲೆ ಮದುವೆ ಆಗ್ತೀನಿ."

"ಇನ್ಮೇಲೆ ಯಾವಾಗ?"

"ನಿಮ್ಮದೂ ಚಿತ್ರಾದೂ ಮದುವೆ ಆದ ಮೇಲೆ."

ಅರವಿಂದ ಹಾರ್ದಿಕವಾಗಿ ಅವನ ಕೈ ಕುಲುಕಿ ಹೊರಬಿದ್ದ.

8

ನಸುನಗುತ್ತಲೇ ಪಸರಿಸುವುದನ್ನು ಕಾಯುತ್ತಿದ್ದವನು ಅತ್ತಿತ್ತ ನೋಡಿದ. ನೀರವತೆ ಹೊದ್ದು ನಿಂತ ನಿರ್ಜನ ಕಾರ್ಖಾನೆ ಕಟ್ಟಡಗಳು. ಇನ್ನೂ ವಾಚ್‌ಮನ್ ಸುಳಿವಿರಲಿಲ್ಲ.

ಸ್ಟೋರ್ ಹೌಸ್ ಹಿಂಬದಿಯಲ್ಲಿ ನಿಂತು ನೋಡಿದ.

ತಗ್ಗಿಗೆ ಹರಡಿದ ಬಂಜರು ನಿಮ್ಮ ಭೂಮಿ. ಅದಕ್ಕೆ ತುಸು ದೂರದಲ್ಲಿ ರೈಲು ಹಳಿ. ಮಾಸಲು ಗೆರೆಗಳಲ್ಲಿ ಕಾಣುವ ಪರಿಚಿತ ತಾಳೆ ಮರಗಳು.

ಕೆಮ್ಮುವ ಶಬ್ದ ಕೇಳಿ ಹೌಹಾರಿದ ಅರವಿಂದ ಹಿಂದಕ್ಕೆ ತಿರುಗಿ ನಿಟ್ಟುಸಿರು ಹಾಕಿದ ಪ್ರಿಯತಮೆ,

"ಎಲ್ಲಿಗೆ ಹೊರಟಿದೀರಿ ಕಳ್ಳರ ಹಾಗೆ?" ಕೈ ಹಿಂದೆ ಸೇರಿಸಿ ರಾಗವಾಗಿ ಕೇಳಿದಳು.

"ಹೊರಡೊ ಮೊದಲೇ ಎಲ್ಲಿಗೆ ಅಂದ್ರೆ ಕೆಲಸ ಆದ್ದಾಗೆ..."

"ತಪ್ಪಾಯ್ತು. ಏನು ಹೊರಟ್ರಿ ಅಂದೆ."

ಏನೊ ನೆನಪಿಗೆ ತಂದುಕೊಂಡು ತಟಕ್ಕನೆ ಹೇಳಿದಳು.

"ಎಲ್ರಿ ಅತ್ತಿಗೆ ಕಾಗದ? ನೀವು ಒಡೆದ ಕಾಗದ ಅವರಿಗೆ ಕೊಟ್ಟು ಛೀಮಾರಿ ಹಾಕಿಸಿಕೊಳ್ಳೊಕು ನಾನು."

ಸದ್ದಿಲ್ಲದೆ ಜೇಬಿನಿಂದ ಕವರ್ ತೆಗೆದು ಅವಳ ಕೈಗಿತ್ತ.

"ಆಯ್ತಲ್ಲ ಇನ್ನು ದಯಮಾಡ್ಸು."

"ನಾನೂ ಬರ್ತೀನಿ."

"ಹೋಗ್ತಾ ಇರೋದು ಲಾಲ್‌ಬಾಗ್‌ಗಲ್ಲ. ಅಗೋ... ತಗ್ಗಿನ ತಾಳೆಗಿಡಗಳ ಕಡೆ ಬೆರಳು ಮಾಡಿ ತೋರಿಸಿದ."

"ನಡೀರಿ."

"ನಿಮ್ಮ ಅತ್ತಿಗೆ ನೋಡಿದ್ರೆ ಹತ್ತು ಪೈಸೆಗೆ ನಿನ್ನ ಹರಾಜು."

"ಅತ್ತಿಗೆ ಸಿನಿಮಾಕ್ಕೆ ಹೋಗಿದಾರೆ. ಕಾರು ಬರೋದು ಹತ್ತು ಗಂಟೆ ಮೇಲೆ."

"ಮೊದಲೇ ತಾಳೆ ಗಿಡದ ಮೇಲೆ ಮಿಡಿ ನಾಗರ ಹಾವು ಕಾಟ. ಈ ಕತ್ತಲಿನಲ್ಲಿ..."

"ಹಾವು ಕಂಡ್ರೆ ನನಗೆ ಭಯ ಇಲ್ಲ. ಬನ್ನಿ ಸುಮ್ನೆ" ಅರವಿಂದ ಬೆಪ್ಪಾದ.

"ತಾಳೆಗಿಡದ ಬುಡದಲ್ಲಿ ನಂಜುಂಡನ್ನ ಹೂತಿರೋದು ಗೊತ್ತಿದೆಯಲ್ಲ?"

"ಹುಡುಗರಿಗೆ ಹೇಳ್ರಿ ಭೂತದ ಕತೆ."

ಅವನ ಕೈಗೆ ಕೈ ಸೇರಿಸಿ ನಿಂತಳು. ಪೂರ್ಣವಾಗಿ ಸೋತ ಅರವಿಂದ. ಅವಳ ನಡು ಹಿಡಿದು ಹೂವಿಲ್ಲದ ಜಡೆಯನ್ನು ಹಿಡಿದೆಳೆದ.

"ಆಟ ಶುರು ಮಾಡಿದ್ರಾ?" ಅವನ ಕೈ ಒತ್ತಿದಳು.

"ಈ ಖಾಲಿ ಜಡೆಗೆ ನಾಲ್ಕು ತಾಳೆ ಹೂ ತರ್ತೀನಿ... ಈ ಹೊತ್ನಲ್ಲಿ ಬರ್ಬೇಡ ಅಲ್ಲಿಗೆ."

ಗಂಭೀರವಾಗಿ ಹೇಳಿದ. ಅವಳ ಉತ್ಸಾಹ ಮಾಯವಾಯಿತು. ಕಣ್ಣುಗಳಲ್ಲಿ ಆತಂಕ ತುಳುಕಿತು.

"ಈ ಮಬ್ಬುಗತ್ತಲಲ್ಲಿ ಅದನ್ನು ತರದಿದ್ರೆ ಏನು? ಹೋಗಬೇಡಿ. ನನ್ನಾಣೆ."

ಅವಳನ್ನ ಪೋರ್ಟಿಕೊ ಬಿಟ್ಟು ನಿಧಾನವಾಗಿ ನುಡಿದ.

"ಈಗ ನಿಮ್ಮಣ್ಣನ ತಲೆಮೇಲೆ ಬಂದಿರೋ ಗ್ರಹಚಾರ ದೂರ ಆಗ್ಬೇಕಾದ್ರೆ, ನನ್ನ ನಿನ್ನ ಮದುವೆ ಸುಸೂತ್ರ ಆಗಬೇಕಾದ್ರೆ, ನನ್ನಲ್ಲಿ ನಿನಗೆ ವಿಶ್ವಾಸ ಇದ್ರೆ ನನ್ನ ಮಾತು ಕೇಳು. ನಾನು ಒಬ್ಬನೇ ಸ್ವಲ್ಪ ಹೋಗಿ ಬರ್ತೀನಿ. ಸುಮ್ಮನೆ ನೀರು ಮನೆ ಸೇರು."

ಅವಳು ಕಣ್ಣುಗಳಲ್ಲಿ ಒಪ್ಪಿಗೆ ಸೂಚಿಸಿ ಮೌನವಾಗಿ ನಿಂತಳು. ಅರವಿಂದ ಸ್ಟೋರ್ ಹೌಸ್ ಗೋಡೆಯ ಪಕ್ಕದಲ್ಲಿ ಮುಚ್ಚಿಟ್ಟ ಕಬ್ಬಿಣದ ಸಲಾಕೆ ಹಾಗೂ ಟಾರ್ಚ್ ತೆಗೆದು ತಾಳೆಗಿಡಗಳ ದಿಕ್ಕಿಗೆ ಇಳಿದುಹೋದ.

ರಣಗುಡುವ ಬಿಸಿಲಿನಲ್ಲಿ ಸ್ಕೂಟರ್ ನಿಲ್ಲಿಸಿ ಬೆವರಿನಿಂದ ತೊಯ್ದ ಮುಖವನ್ನು ಕರವಸ್ತ್ರದಿಂದ ಒತ್ತಿದ ಧನಂಜಯ. ಕಚೇರಿಯ ಅಂಗಳಕ್ಕೆ ಹೆಜ್ಜೆ ಹಾಕಲಿದ್ದವನು ಕುತೂಹಲದಿಂದ ನೋಡುತ್ತಾ ನಿಂತ.

ಟೈ ಸರಿಪಡಿಸಿಕೊಂಡು ತಲೆಗೂದಲು ಸವರುತ್ತ ಓಡು ನಡಿಗೆಯಲ್ಲಿ ಹೆಬ್ಬಾಗಿಲಿನ ಕಡೆಗೆ ಸಾಗಿದ್ದ ಅರವಿಂದ. ಎದುರಿನಲ್ಲಿ ಹಾದುಬಂದ ಜೀಪ್ ಕಂಡು ಹೆಜ್ಜೆಯ ತೀವ್ರತೆ ಕುಗ್ಗಿಸಿದ.

ಪೂಣಚ್ಚ ಜೀಪ್‌ನಿಂದ ಇಳಿದು ಅರವಿಂದನ ಕೈ ಹಿಡಿದು ರಾಯರ ಮನೆ ಕಡೆ ನಡೆದ. ಚಂದ್ರಮ್ಮ ಹೊರಬಂದಳು. ಅವಳ ಹಿಂದೆ ಚಿತ್ರಾ.

ಜೀಪ್‌ನಿಂದ ಹಳ್ಳಿಯವನೊಬ್ಬ ಇಳಿದು ಬಂದ.

"ಮಿಷ್ಟರ್ ಅರವಿಂದ್, ಆತುರವಾಗಿ ಹೋಗ್ತಾ ಇದ್ರಿ. ನಾನು ಆತುರವಾಗೇ ಬಂದಿದೀನಿ. ಕೊಲೆ ಮಾಡ್ದವರು ಯಾರು ಅಂತಾ ನಿರ್ಧಾರಕ್ಕೆ ಬಂದ್ರಾ?"

ಎಂತಹ ಪ್ರಶ್ನೆ! ಮೋಹನನ ಮೇಲೆ ಆಪಾದನೆ ಹೊರಿಸಲು ಅಂತಿಮವಾಗಿ ತೀರ್ಮಾನಿಸಿದವನಿಗೆ ಅನಿರೀಕ್ಷಿತ ಪ್ರಶ್ನೆ!

ಬಿಸಿಲಿನಲ್ಲಿ ಇಳಿದು ಯಾವ ಸಂಪ್ರದಾಯದ ಪ್ರಾರಂಭಿಕ ಮಾತೂ ಇಲ್ಲದೆ ಹೀಗೇಕೆ ಕೇಳಿದ?

ಅರವಿಂದ ದಿಟ್ಟತನದಿಂದ ಉತ್ತರಿಸಿದ.

"ಪತ್ತೇ ಮಾಡೋರು ನೀವು. ಈಗೇಕೆ ಪ್ರಶ್ನೆ. ನಾನು ಕೇವಲ ಊಹೆ ಮಾಡೋನು."

"ಊಹೆ ಮಾಡಿ ಹೇಳಿ" ಉತ್ಸಾಹರಹಿತನಾಗಿ ಹೇಳಿದ.

"ಪೌಲ್ಟ್ರಿ ಮಾಲೀಕ ಎಡ್ವಿನ್."

ಉಳಿದವರು ಚಕಿತರಾದರೂ ಪೂಣಚ್ಚ ಮುಖದ ಗೆರೆ ಬದಲಿಸದೆ ನಿಂತ.

"ಅಂಬೋದು. ನನ್ನ ಹಳೆ ಕಲ್ಪನೆಯಲ್ಲಿ ಮೊದಲನೆ ಆಪಾಧಿತ ಅವನು. ಸದ್ಯಕ್ಕೆ ಎಡ್ವಿನ್‌ನ ಮರೆಯೋಣ. ಕೊಲೆ ಆದ ಆ ಗುರುವಾರ ರಾತ್ರಿ ಮಂಚೇನಹಳ್ಳಿ ರಸ್ತೇಲಿ ಹಾದುಬಂದಿದ್ದ ಎರಡು ವಾಹನ ಅಂತ ಚರ್ಚೆ ಆಯ್ತು. ಒಂದು ಮ್ಯಾನೇಜರ್ ಸ್ಕೂಟರ್. ಅದನ್ನ ತಂದೋರು ಡಾಕ್ಟರ್. ಆಮೇಲೆ ಡಾಕ್ಟರ್ ಬಿಳಿ ಕಾರು. ಅದನ್ನ ತಂದೋನು ಮೋಹನ. ಇದಕ್ಕೆ ಸಾಕ್ಷಿ ಆ ಹಳ್ಳಿಯ ಚಿನ್ನಯ್ಯ. ಈಗೊಂದು ಹೊಸ ಸಂಗತಿ. ಆ ಎರಡೂ ವಾಹನಗಳು ಬರೋದರ ನಡುವೆ ಅದೇ ರಸ್ತೆಗೆ ಸುಮಾರು ಒಂಬತ್ತೂವರೆ ಮೇಲೆ ಒಂದು ಕಪ್ಪು ಕಾರು ಬಂತು. ಮಂಚೇನಹಳ್ಳಿ ಮುಟ್ಟದೆ ಹಿಂದಕ್ಕೆ ಹೋಯ್ತು."

"ಮೂರೂ ವಾಹನಗಳೂ ರಾತ್ರಿ ಒಂದೇ ರಸ್ತೆಗೆ" ಧನಂಜಯ ಉದ್ಗರಿಸಿದ.

"ಹೌದು ಮೂರೂ ವಾಹನ. ಮೊದಲು ಬಂದ ಸ್ಕೂಟರ್ ಹಳ್ಳಿಗೆ ಬಂದು ಹೋಯ್ತು. ಚಾಮಯ್ಯನ ಚಿಕಿತ್ಸೆಗೆ ಬಂದದ್ದು. ಕಪ್ಪು ಕಾರು ರಸ್ತೇಲಿ ನಿಂತುಬಿಡ್ತು. ನಂಜುಂಡನ ದೇಹ ಅದರಿಂದ ಹೊರಕ್ಕೆ ಬಿತ್ತು. ಆಮೇಲೆ ಬಂದ ಬಿಳಿ ಕಾರು ಕೆರೆವರೆಗೆ ಬಂದು ದೇಹ ಕೆರೆಗೆ ಹಾಕಿ ಹೋಯ್ತು."

"ಈ ಕತೆ ಹೇಳ್ದೋರು ಯಾರು?"

ಅರವಿಂದ ಗಂಭೀರ ಪ್ರಶ್ನೆ ಹಾಕಿದ.

"ಕತೆ ಅಲ್ಲ. ಇವೆಲ್ಲಾ ಒಂದರ ಹಿಂದೆ ಒಂದರಂತೆ ಸಾಗಿರೊ ಘಟನೆಗಳು."

"ನಿಮಗೆ ಬುದ್ಧಿ ಭ್ರಮಣೆ ಆಗಿದೆ. ಮಿಸ್ಟರ್ ಪೊಣಚ್ಚ. ನಿಮ್ಮ ಇನ್ವೆಸ್ಟಿಗೇಷನ್‌ನಲ್ಲಿ ಹತ್ತನೇ ರೂಪ ಇದು."

"ಏನು ಮಾಡ್ತೀರಿ. ಹತ್ತು ಪರಿಚಿತರ ಮಧ್ಯೆ ಕೊಲೆಗಾರನ್ನ ಹುಡುಕೊ ಪರಿಸ್ಥಿತಿ. ಹತ್ತು ಪೆಟ್ಟು ಹಾಕಿದ್ರೆ ಒಪ್ಪವಾದ ವಿಗ್ರಹ ನಿಲ್ಲೋದು. ನಾನು ಹೇಳಿದ ಘಟನೆಗಳಿಗೆ ಪ್ರತ್ಯಕ್ಷದರ್ಶಿ ಸಿಕ್ಕಿದಾನೆ. ಇಗೋ, ಈ ಮನುಷ್ಯ. ಮಂಚೇನಹಳ್ಳಿಯ ನೀರುಗಂಟಿ. ಕೆರೆ ತೂಬಿನ ಉಸ್ತುವಾರಿ ನೋಡೋನು. ಅವತ್ತು ಊರಿಗೆ ಹೋಗಿ ನೆನ್ನೆ ಬಂದಿದಾನೆ. ಎಲ್ಲಾ ಕರಾರುವಾಕ್ಕಾಗಿ ಹೇಳ್ತಾನೆ. ಅಂಜನರಾಯರ ಪಾಂಟಿಯಾಕ್ ಕಪ್ಪು ಬಣ್ಣದ್ದು ತಾನೆ, ಚಂದ್ರಮ್ಮ?"

ಗರಬಡಿದಂತೆ ನಿಂತ ಚಂದ್ರಮ್ಮ ಎಚ್ಚೆತ್ತಳು.

"ಹೌದು. ಕಪ್ಪು ಕಾರು."

"ರಾಯರ ಕಾರು ಉಪಯೋಗಿಸೊ ಅಧಿಕಾರ ಯಾರಿಗಿದೆ ಇಲ್ಲಿ?"

"ಮ್ಯಾನೇಜರ್, ವರ್ಕ್ಸ್ ಮ್ಯಾನೇಜರ್, ಲಾಯರ್... ಮತ್ತೆ ನನಗೆ."

"ಗುರುವಾರ ರಾತ್ರಿ ಎಲ್ಲಿತ್ತು ಕಾರು?"

"ಗೊತ್ತಿಲ್ಲ. ಗುರುವಾರ ಬೆಳಿಗ್ಗೆ ನಾನು ಯಜಮಾನರ ಜೊತೇಲಿ ಬೆಂಗಳೂರಿಗೆ

ಹೋದೆ. ಕಾರು ಇಲ್ಲಿಗೆ ವಾಪಸ್ ಬಂತು. ನಾನು ಹಿಂತಿರುಗಿದ್ದು ಶುಕ್ರವಾರ ಬೆಳಗ್ಗೆ."

"ಹಾಗಾದರೆ ಗುರುವಾರ ಸಂಜೆ ಆ ಕಾರು ಒಯ್ದೋರು ಯಾರು?"

ಅರವಿಂದ ಚಿತ್ರಾಳ ಮುಖ ನೋಡಿದ. ಚಿತ್ರಾ ನೆಲ ನೋಡಿದಳು.

"ಮಿಸ್ಟರ್ ಪೂಣಚ್ಚ, ನಾನು ಹೇಳ್ತೀನಿ. ಅದನ್ನ ಚಂದ್ರಮ್ಮ ಒಯ್ಯಲಿಲ್ಲ. ಅವರು ಕಾರು ಇಲ್ಲದೆ ಬೆಂಗಳೂರಿನಲ್ಲಿ ಇದ್ರು. ಮ್ಯಾನೇಜರ್, ವರ್ಕ್ಸ್ ಮ್ಯಾನೇಜರ್ ಇಬ್ಬರೂ ಇಲ್ಲೇ ಕಂಪನಿ ಲೆಕ್ಕ ನೋಡ್ತಾ ರಾತ್ರಿ ಬಹಳ ಹೊತ್ತು ಕೂತಿದ್ರು... ಗುರುವಾರ ಸಂಜೆ ಆ ಕಾರು ಒಯ್ದೋರು ನಾನು, ಚಿತ್ರಾ."

"ಎಲ್ಲಿಗೆ ತೊಗೊಂಡು ಹೋದ್ರೀ?" ಪ್ರಶ್ನೆ ಬಿರುಸಾಗಿತ್ತು.

"ಪ್ಲಾಜಾ ಥಿಯೇಟರ್‌ಗೆ. ವಾಪಸ್ ಬಂದಿದ್ದು ಸುಮಾರು ಹತ್ತು ಗಂಟೆಗೆ."

"ಕೇಸ್ ಹೊಸ ರೂಪ ತಾಳ್ತಾ ಇದೆ."

"ನಿಮ್ಮ ಕಲ್ಪನೆ ನನಗೆ ಅರ್ಥ ಆಗ್ತಿದೆ. ಇದು ಪ್ರೇಮಕ್ಕೆ ಆದ ಕೊಲೆ. ಅದೇ ಮೋಟಿವ್. ದುರದೃಷ್ಟವಶಾತ್ ನಾನೂ, ಚಿತ್ರಾ ಇದರಲ್ಲಿ ಭಾಗಿಗಳು. ನಿಮಗೆ ಸಾಕ್ಷಿ ಸಿಕ್ಕಿದೆ."

"ನನ್ನ ಮುಂದಿನ ಕೆಲಸ ಸುಲಭ ಮಾಡಿಕೊಡಿ."

"ನಾನು ಅರೆಸ್ಟ್ ಆಗೋದು ಅಷ್ಟು ಸುಲಭ ಅಲ್ಲ."

ಪೂಣಚ್ಚ ಮುಂದೆ ಬರುವುದರೊಳಗಾಗಿ ಅರವಿಂದ ಮಿಂಚಿನ ವೇಗದಲ್ಲಿ ಸ್ಕೂಟರ್ ಚಲಾಯಿಸಿ ತೆರೆದ ಹೆಬ್ಬಾಗಿಲಿನ ಮೂಲಕ ವೇಗವಾಗಿ ಸರಿದು ಹೋದ.

9

ನಿದ್ರೆ ಇಲ್ಲದೆ ಹದಿಮೂರು ರಾತ್ರಿ ಕಳೆದು, ಚಿಂತೆಯಿಂದ ಶತಚ್ಛಿದ್ರವಾದ ತಲೆಯನ್ನು ಮೇಜಿಗಿಟ್ಟು ಹಾಡಹಗಲಿನಲ್ಲಿ ನಿದ್ರೆಗೆ ದೇಹ ಒಪ್ಪಿಸಿದ ಸಬ್ ಇನ್ಸ್‌ಪೆಕ್ಟರ್ ಪೂಣಚ್ಚ ಪಕ್ಕನೆ ಎಚ್ಚರಗೊಂಡ.

ಅಸಿಸ್ಟೆಂಟ್ ಮೇಜು ತಟ್ಟುತ್ತಿದ್ದ.

ಕೆಂಗಣ್ಣು ಮೇಲೆತ್ತಿ 'ಏನು' ಸನ್ನೆಯ ಪ್ರಶ್ನೆ ಹಾಕಿದ. ಅಸಿಸ್ಟೆಂಟ್ ಬಾಗಿಲಿನ ಕಡೆಗೆ ಕೈ ತೋರಿದ. ಪುಣಚ್ಚ ದೃಷ್ಟಿ ತಿರುಗಿಸಿ ಕಣ್ಣು ಉಜ್ಜಿದ.

ಲಾಯರ್ ಅರವಿಂದ,

ಭೂತದರ್ಶನವಾದಂತಾಯಿತು. ಮೇಲೇಳುವುದರಲ್ಲಿ ಅರವಿಂದ ಕೂಗಿ ಹೇಳಿದ.

"ಕೋಳ ಕೈಗೆ ಎತ್ಕೊಬೇಡಿ. ನಾನೇ ಸರೆಂಡರ್ ಆಗಿ ನಿಮ್ಮ ದರ್ಶನ ಪಡೀತಾ

ಇದೀನಿ. ಎದ್ದು ಬನ್ನಿ. ನಿದ್ರೆ ಸಾಕು. ಸ್ವಲ್ಪ ಇನ್‌ವೆಸ್ಟಿಗೇಷನ್ ಮಾಡಿ. ನಿಮ್ಮ ಅಖಂಡ ಪತ್ತೇದಾರಿಗೆ ಇನ್ನು ಯಾರಾದ್ರೂ ಬಲಿಯಾಗೋದಿದ್ರೆ ಅವರನ್ನ ಕಾಪಾಡೋಣ."

ಪೊಣಚ್ಚ ಹ್ಯಾಟ್ ಏರಿಸಿ ಬೆಲ್ಟ್ ಬಿಗಿದು ಬೆತ್ತ ಹಿಡಿದು ಹೊರಬಂದ.

"ಏನಾದ್ರೂ ಅದ್ಭುತ ತೋರಿಸ್ತಿರೊ ಇಲ್ಲಾ, ಮತ್ತೆ ಅವತ್ತಿನ ಹಾಗೆ ಸ್ಟಂಟ್ ಹೊಡಿತೀರೊ?"

"ಸ್ಟಂಟ್ ಮಾಡಿದ್ದು ನನ್ನ ರಕ್ಷಣೆಗಲ್ಲ. ನನ್ನ ಪತ್ತೆದಾರಿ ಕಾರ್ಯ ಅರ್ಧಕ್ಕೆ ನಿಂತುಹೋಗುತ್ತೆ ಅನ್ನೊ ಆತಂಕದಿಂದ. ಹಾಗೆ ಹಾರಿ ಹೋಗ್ದೆ ಇದ್ರೆ ಇನ್ನೂ ಜಂತರ್ ಮಂತರ್ ಆಗ್ತಿತ್ತು ಈ ಪ್ರಕರಣ."

"ಹತ್ಯಾಕಾರೀನ ಹಿಡಿದ್ರಾ?"

ಪ್ರಶ್ನೆಯಲ್ಲಿ ತವಕ ಪರಮಾವಧಿಗೆ ಏರಿತ್ತು.

"ಈಗ ಹಿಡಿಯೋದಿಕ್ಕೇ ಹೋಗ್ತಾ ಇರೋದು. ತರ್ಸಿ ನಿಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಜೀಪ್‌ನ. ಇಬ್ಬರು ಪ್ಯಾದೆಗಳನ್ನ ಕರಕೊಳ್ಳಿ."

ಕಾನ್‌ಸ್ಟೇಬಲ್‌ಗಳೊಂದಿಗೆ ಜೀಪು 'ಭಾರತ್ ಕೇಬಲ್ಸ್' ತಲುಪಿದಾಗ ಬಿಸಿಲು ಚುರುಕಾಗಿತ್ತು.

"ಅರವಿಂದ್!"

ಕಚಿತ್ರಾಳ ಕರೆಯಲ್ಲಿ ಅವನನ್ನು ಹದಿಮೂರು ದಿನ ಕಾಣದ ಪರಿತಾಪ ಸೇರಿತ್ತು. ಅರವಿಂದನ ಆಗಮನ ಇಲ್ಲಿಗೆ ವಿಶೇಷ ಸುದ್ದಿ. ಹತ್ತು ನಿಮಿಷದಲ್ಲಿ ಚಂದ್ರಮ್ಮ, ಧನಂಜಯ, ವಾಗೀಶ ಹಾಗೂ ಮೋಹನ ಬಂದು ಸೇರಿದರು. ಹಜಾರದಲ್ಲಿ ಮಿತ್ರ ಮೇಳ ಸೇರಿತು. ಎಲ್ಲರಿಗೂ ಕುತೂಹಲ. ಮುಖಗಳಲ್ಲಿ ಯಾವುದೊ ಅಗೋಚರ ಭೀತಿ.

"ಅವತ್ತು ಇಲ್ಲಿಂದ ಹಾರಿಹೋಗುವ ಮೊದಲು ಆಪಾದಿತ ಎಡ್ವಿನ್ ಅಂತ ಹೇಳಿದ್ರಿ. ಈಗ ಯಾರನ್ನ ಹೆಸರಿಸ್ತೀರಿ?"

ಪುಣಚ್ಚ ಮಾತಿಗೆ ಪೀಠಿಕೆ ಹಾಕಿದ. ಅರವಿಂದ ನಿಧಾನವಾಗಿ ಹೇಳಿದ.

"ಸುಮ್ಮನೆ ಹಾಗಂದೆ. ನಿಮ್ಮ ಪ್ರಶ್ನೆಗೊಂದು ಉತ್ತರ. ಈಗ ಇಲ್ಲಿರೋ ನಾವೆಲ್ಲ ನಂಜುಂಡನ ಜೊತೇಲಿ ಒಂದಲ್ಲ ಒಂದು ರೀತಿ ಸಂಬಂಧ ಹೊಂದಿದೀನಿ. ವ್ಯಾಪಾರ ನಷ್ಟ ಹಾಗೂ ಪಾದರಕ್ಷೆ ಪ್ರಯೋಗಕ್ಕೆ ಸಿಕ್ಕಿದ ಎಡ್ವಿನ್... ವ್ಯಾಪಾರ ನಷ್ಟ ಹಾಗೂ ಪಾದರಕ್ಷೆ ಪ್ರಯೋಗಕ್ಕೆ ಸಿಕ್ಕಿದ ಎಡ್ವಿನ್... ನಾದಿನಿಯ ದುಃಸ್ವಪ್ನ ಕೊನೆಗಾಣಿಸೊ ಚಂದ್ರಮ್ಮ... ತನ್ನ ಮರ್ಯಾದೆ ರಕ್ಷಣೆಗೆ ಚಿತ್ರಾ... ಹಣದ ತಗಾದೆಗೆ ಸಿಕ್ಕಿ ರೋಸಿ ಹೋದ ಧನಂಜಯ... ಚಿತ್ರಾಳ ಮೇಲಿನ ಪ್ರೀತಿ ಅಥವಾ ಅಭಿಮಾನಕ್ಕೆ ಸಹಾಯಕನಾಗಿ ವಾಗೀಶ... ಹೆಚ್ಚು ಕಡಿಮೆ ಖಾಯಂ ಆದ ಮದುವೆಗೆ ಅಡ್ಡಿ ನಂಜುಂಡ ಅಂತ ನಾನು... ಬೇಡದ ಸ್ನೇಹ ಕೊನೆಗಾಣಿಸೊ ಮೋಹನ... ಎಲ್ಲರೂ ನಂಜುಂಡನ

ಪರೋಕ್ಷ ಶತ್ರುಗಳು. ಇಷಟು ಮಂದಿ ನಡುವೆ ಕಾರ್ಯ ಸಾಗಿಸಿದೋರು ಒಂದು ಮುಖ್ಯವಾದ ವ್ಯಕ್ತೀನ ಮರೆತುಬಿಟ್ರು..."

ಪೂಣಚ್ಚನಿಗೆ ವಿನೋದವಾಗಿ ಕಾಣಿಸಿತು. ಭುಜ ಹಾರಿಸಿದ.

"ಇಲ್ಲಿರೋರೇ ಸಾಕಾಗಿರುವಾಗ ಉಳಿದ ವ್ಯಕ್ತಿ ಯಾರು?"

ಅರವಿಂದ ಗೋಡೆ ಮೇಲಿನ ಫೋಟೋ ಕಡೆ ಬೆರಳು ಮಾಡಿದ. ಎಲ್ಲಾ ಕಣ್ಣುಗಳು ಅತ್ತ ತಿರುಗಿದವು.

"ಅಂಜನರಾಯರು!"

ಧನಂಜಯನ ಉದ್ಗಾರದೊಂದಿಗೆ ಚಂದ್ರಮ್ಮ ರೋಷದಿಂದ ಕೂಗಿದಳು.

"ಇದೇನ್ರಪ್ಪ ಹೊಸ ರಾದ್ಧಾಂತ? ದೇವರೇ ಅಂತ ಟೂರ್ ಮಾಡ್ತಿರೋರ್ನ ಬೀದಿಗೆ ಎಳೀತಾ ಇದೀರಿ."

ಪೂಣಚ್ಚ ಮುಖ ಕಿವಿಚಿ ಹಣೆ ಉಜ್ಜಿದ.

"ಒಂದು ರಾತ್ರಿ ನನಗೂ ಆ ಸಂದೇಹ ಬಂತು, ಲಾಯರೇ. ಅದರೆ ಎವಿಡೆನ್ಸ್ ಒಂದೂ ಇಲ್ದೆ ಸುಮ್ಮನಾದೆ."

"ನಮ್ಮಣ್ಣ ನಂಜುಂಡನ ಕೊಲೆ ಮಾಡೋ ಅಗತ್ಯ ಇರ್ಲಿಲ್ಲ. ನಂಜುಂಡ ಅವರ ಜೊತೆ ಮಾತಾಡಿದ್ದೇ ಅಪರೂಪ" ಮೋಹನ ಮಧ್ಯೆ ಹೇಳಿದ.

"ನಂಜುಂಡ ಆಡಿದ ಬೆದರಿಕೆ ಮಾತನ್ನ ದೊಡ್ಡಣ್ಣನ ಕಿವಿಗೆ ನಾನು ಹಾಕ್ಲೆ ಇಲ್ಲ. ರೋಷ–ದ್ವೇಷ ಎಲ್ಲಿ ಬಂದಾತು ಅವರಿಗೆ?" ಚಿತ್ರಾ ದನಿಗೂಡಿಸಿದಳು.

ಅರವಿಂದ ಅವರ ಗುಜು ಗುಜು ಮಾತು ನಿಲ್ಲಿಸಲು ಯಾಚಿಸಿ ಮುಂದೆ ಹೇಳಿದ.

"ಅಂಜನರಾಯರು ಕೊಲೆಗಾರ್ರು ಅಂತ ನಾನು ಹೇಳ್ಲಿಲ್ಲ. ಅವರು ಏಕೆ ಮಾಡಿರಬಾರದೂಮತ ಒಂದು ಸಾರಿ ಎಡ್ವಿನ್ ನನ್ನ ಚಪಲ ಕೆದಕಿದ್ದ."

"ಅಯೋಗ್ಯ ಎಡ್ವಿನ್. ಹೊಟ್ಟೆಕಿಚ್ಚಿನಿಂದ ಹೊರಟ ಪಿತೂರಿ ಇದು" ಧನಂಜಯ ದೂಷಿಸಿದ.

"ಸ್ವಲ್ಪ ಕೂಗೋದು ನಿಲ್ಸಿ, ಧನಂಜಯ. ಉದ್ರೇಕ ಬೇಡ. ನನ್ನ ಪ್ರಶ್ನೆಗೆ ಸಮಾಧಾನದಿಂದ ಉತ್ತರ ಹೇಳಿ. ಕೊಲೆ ಆದ ಆ ಗುರುವಾರ ರಾಯರು ಎಲ್ಲಿದ್ರು?"

"ಗುರುವಾರ ಬೆಳಗ್ಗೆ ಎಂಟಕ್ಕೆ ಇಲ್ಲಿಂದ ಅಮ್ಮಾವ್ರ ಜೊತೇಲಿ ಹೊರಟ್ರು. ಹತ್ತೂ ಮುಕ್ಕಾಲರ ಸಿಕಂದರಾಬಾದ್ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಮಾಡಿದ್ರು."

"ಇಲ್ಲಿಂದ ಹೇಗೆ ಹೋದ್ರು? ಅವರ ಕಪ್ಪು ಪಾಂಟಿಯಾಕ್‌ನಲ್ಲಿ ತಾನೆ? ಜೊತೇಲಿ ನೀವೂ ಹೋಗಿದ್ರಾ?"

"ಇಲ್ಲ. ಸೂರಪ್ಪ ಡ್ರೈವ್ ಮಾಡಿಕೊಂಡು ಹೋದ. ಇಬ್ಬರನ್ನೂ ಹೋಟಲಿಗೆ ಬಿಟ್ಟು ಹತ್ತು ಗಂಟೆ ಹೊತ್ತಿಗೆ ಕಾರು ವಾಪಸ್ ತಂದ."

"ನೀವು ಅವತ್ತು ಬೆಂಗಳೂರಿಗೆ ಎಷ್ಟು ಹೊತ್ತಿಗೆ ಹೋದ್ರಿ?"

ಧನಂಜಯ ಎದೆ ಸೆಟೆಸಿದ.

"ಬೆಂಗಳೂರು? ಯಾಕೆ ಹೋಗ್ಲಿ ಬೆಂಗಳುರಿಗೆ? ನಾನು ಅವತ್ತು ಮೈಸೂರಿಗೆ ಹೋಗಿ ಸಂಜೆ ಆರಕ್ಕೆ ಬಂದೆ."

"ಹೇಗೆ ಹೋದ್ರಿ ಮೈಸೂರಿಗೆ?"

"ಲಾರಿಯಲ್ಲಿ"

"ರಾಯರ ಖಾಸಗಿ ಕಾರು ಉಪಯೋಗಿಸೊ ಹಕ್ಕಿದೆಯಲ್ಲಾ ನಿಮಗೆ."

"ಇದೆ. ಚಿತ್ರಾ ಅವತ್ತು ಕಾರು ಬೇಕು ಅಂದಿದ್ರು... ನಿಮ್ಮ ಸಂಗಡ ಸಿನಿಮಾ ನೋಡೋದಿಕ್ಕೆ."

ಅರವಿಂದ ನಸು ನಾಚಿಕೆಯಿಂದ ತುಟಿ ಉಜ್ಜಿದ.

"ಹೌದು. ಮರೆತ್ತಿದ್ದೆ. ಕಾರು ಒಯ್ದೋನು ನಾನೇ... ಆದರೆ ಧನಂಜಯ, ಅವತ್ತು ಮಧ್ಯಾಹ್ನ ನಿಮ್ಮನ್ನ ಬೆಂಗಳೂರಲ್ಲಿ ನೋಡಿದವರು ಇದ್ದಾರೆ."

"ಬೇಜವಾಬ್ದಾರಿ ಮಾತು ಇದು."

"ಹೊಟೇಲ್ ಸೀ ಲ್ಯಾಂಡ್ ಮ್ಯಾನೇಜರ್ ಜವಾಬ್ದಾರಿ ಮನುಷ್ಯ ಅಲ್ವೆ?"

ಧನಂಜಯ ಕರವಸ್ತ್ರದಿಂದ ಹಣೆ ಒತ್ತಿದ.

"ನಿಜ ಹೇಳಿ. ನೀವು ಅವತ್ತು ಮಧ್ಯಾಹ್ನ ಬೆಂಗಳುರು ಸೇರಿ ಸಂಜೆ ಆರು ಗಂಟೆ ತನಕ ಅಲ್ಲೇ ಇದ್ರಿ. ಮೈಸೂರಿಗೆ ಹೋಗ್ಲಿಲ್ಲ."

"ಈ ಹುಚ್ಚು ಮಾತಿಗೆ ನಾನೇನ್ ಹೇಳ್ಲಿ." ತಿರಸ್ಕಾರದಿಂದ ಮುಖ ಪಕ್ಕಕ್ಕೆ ತಿರುವಿದ.

"ಈ ಹುಚ್ಚು ಮಾತು ಪ್ರಸಂಗದ ಜಿವಾಳ. ಅಂಜನರಾಯರನ್ನ ಈ ಮಟ್ಟದವರೆಗೆ ಬಿಟ್ಟುಕೊಡದೆ ಇರೊ ನಿಮ್ಮ ಪ್ರಾಮಾಣಿಕತೆಗೆ ಧನ್ಯವಾದ. ಸ್ವಲ್ಪ ವಿಶ್ರಾಂತಿ ತಗೊಳ್ಳಿ.... ಚಂದ್ರಮ್ಮ, ಸ್ವಲ್ಪ ಸಹನೆಯಿಂದ ನಾನು ಕೇಳೋದಕ್ಕೆ ಉತ್ತರ ಹೇಳಿ. ನಿಮ್ಮ ಯಜಮಾನರ ಮೇಲೆ ಬರಬಹುದಾದ ಆಪಾದನೆ ತಪ್ಪಿಸೋಕೆ ನಿಮ್ಮ ಸಹಕಾರ ಬಹಳ ಅಗತ್ಯ. ಗುರುವಾರ ಯಜಮಾನರ ಜೊತೇಲಿ ಹೊಟೇಲ್ ಸೀ ಲ್ಯಾಂಡ್ ಸೇರಿದ್ರಿ. ಆಗ ಬೆಳಗ್ಗೆ ಒಂಬತ್ತು ಅನ್ನೋಣ. ನಿಮಗೆ ಹೊಟ್ಟೆನೊವು ಕಾಣಿಸ್ತು. ರಾಯರು ಪ್ರಯಾಣ ರದ್ದು ಮಾಡೋದಲ್ಲಿದ್ರು. ನಿಮ್ಮ ಒತ್ತಾಯದಿಂದ ಅವರು ನಿಮ್ಮನ್ನ ನರ್ಸಿಂಗ್ ಹೋಂಗೆ ಸೇರಿಸಿ ಸಿಕಂದರಾಬಾದ್ ಎಕ್ಸ್‌ಪ್ರೆಸ್ ಹಿಡಿದ್ರು. ನೀವು ಅವತ್ತು ಪೂರ್ತಿ ನರ್ಸಿಂಗ್ ಹೋಂನಲ್ಲಿದ್ದು ಶುಕ್ರವಾರ ಬೆಳಿಗ್ಗೆ ಇಲ್ಲಿಗೆ ಬಂದ್ರಿ"

"ಇದಿಷ್ಟನ್ನೂ ನಾನು ಈಗಾಗಲೇ ಹೇಳಿದ್ದೀನಲ್ಲಾ..."

"ನೀವು ಯಾವ ನರ್ಸಿಂಗ್ ಹೋಂನಲ್ಲಿದ್ರಿ ಹೇಳ್ತೀರಾ?"

ಚಂದ್ರಮ್ಮ ಬಾಯಿಗೆ ಸೆರಗು ಹಚ್ಚಿದಳು.

"ಅದೆಲ್ಲಾ ಹೇಳೋಕೆ ತಯಾರಿಲ್ಲ ನಾನು. ನನ್ನ ಖಾಯಿಲೆ, ಚಿಕಿತ್ಸೆ, ಡಾಕ್ಟರು ಎಲ್ಲಾ ನನಗೆ, ನನ್ನ ಯಜಮಾನರಿಗೆ ಸೇರಿದ ಖಾಸಗಿ ವಿಷಯ. ಅದನ್ನ ಚಿತ್ರಾಗೇ ಹೇಳೋದಿಲ್ಲ ನಾನು. ನನ್ನ ಕಷ್ಟ, ಕೋಟಲೆ ಹೇಳಿ ಬೇರೆಯೋರನ್ನ ಯಾಕೆ ಬೇಸರ ಪಡಿಸೋದು."

ಅರವಿಂದ ಚಿತ್ರಾ ಕಡೆ ನೋಡಿದ.

"ನಿಮ್ಮ ಅತ್ತಿಗೆ ಟ್ರೀಟ್‌ಮೆಂಟ್ ತೊಗೊಳ್ತಾ ಇದ್ರಾ?"

"ಹುಂ. ಇವತ್ತಿಗೂ ತೊಗೊಳ್ತಾ ಇದಾರೆ."

ಚಿತ್ರಾ ನಮ್ರವಾಗಿ ಹೇಳಿದಳು.

"ಈ ವೈಯಕ್ತಿಕ ವಿಷಯವೆಲ್ಲಾ ಕೇಳಿ ಅಮ್ಮಾವರಿಗೆ ತೊಂದರೆ ಕೊಡ್ತೀರಲ್ಲಾ, ಅರವಿಂದ್" ಡಾಕ್ಟರು ಬೇಸರದಿಂದ ನುಡಿದ.

"ಇದೂ ಒಂದು ತರಹ ಗ್ರಹಚಾರ, ಡಾಕ್ಟರೇ. ಈ ಮನೆ ಅಳಿಯ ಆಗೋರಿಗೆ ನಾನು ಯಾವುದಕ್ಕೂ ಅಡ್ಡಿ ಬಂದಿಲ್ಲ. ಅವರಿಗೆ ಅರ್ಥವಿಲ್ಲದ ಮತ್ಸರ ನನ್ನ ಮೇಲೆ ಎಲ್ಲರ ಎದುರಿಗೆ ನನ್ನ ತಲೆ ತಗ್ಗಿಸೋ ಹಾಗೆ ಮಾಡೊ ಹಟ, ಚಪಲ ಇದ್ರೆ ಮುಂದುವರಿಸಲಿ ಮಾತು."

ಪೊಣಚ್ಚ ಬೆತ್ತದಿಂದ ಅರವಿಂದನ ತೊಡೆ ಒತ್ತಿದ.

"ಇದೆಲ್ಲಾ ಬೇಡ. ಕೇಸ್ ವಿಷಯಕ್ಕೆ ಬನ್ನಿ."

"ಇವೆಲ್ಲಾ ಕೇಸ್‌ಗೆ ನೇರವಾಗಿ ಸಂಬಂಧಿಸಿದ ಸಂಗತಿ ಸಾರ್... ಇನ್ನು ಐದು ನಿಮಿಷ ಅವಕಾಶ ಕೊಡಿ, ಚಂದ್ರಮ್ಮ. ದಯವಿಟ್ಟು ಬೇಸರ, ಕೋಪ ಮಾಡ್ಕೊಳ್ದೆ ವಿಷಯ ಹೇಳೀಂತ ಕೇಳ್ಕೋತಿನಿ... ನಾನು ಹೇಳ್ತೀನಿ ನೀವು ಅವತ್ತು ಯಾವ ನರ್ಸಿಂಗ್ ಹೋಂನಲ್ಲೂ ಇರ್ಲಿಲ್ಲಾಂತ."

"ಏನು ಬೇಕಾದ್ರೂ ಹೇಳಿ" ಸಿಡುಕಿದಳು ಚಂದ್ರಮ್ಮ.

"ಅವತ್ತು ಮಧ್ಯಾಹ್ನ ನೀವು ವೀನಸ್ ಹೊಟೇಲ್‌ನಲ್ಲಿ ಇದ್ರಿ. ಆಗ ನಿಮ್ಮ ಜೊತೇಲಿ ಮ್ಯಾನೇಜರ್ ಧನಂಜಯ ಇದ್ರು..."

"ನಾನು?" ಧನಂಜಯ ಎದೆಗೆ ತಟ್ಟಿಕೊಂಡ.

"ಅಷ್ಟೇ ಅಲ್ಲ. ಆಗ ನಿಮ್ಮಿಬ್ಬರ ಜೊತೇಲಿ ಅಂಜನರಾಯರೂ ಇದ್ರೂ ಅಲ್ಲಿ."

ಆರು ಜೊತೆ ಕಣ್ಣುಗಳು ಅರವಿಂದನ ಕಡೆ ದಿಟ್ಟಿಸಿ ನೋಡಿದವು. ಧನಂಜಯ

ಎದ್ದು ಉಚ್ಚ ಕಂಠದಲ್ಲಿ ಹೇಳಿದ.

"ಸುಳ್ಳು. ನಿಮ್ಮ ಮೇಲೆ ಬಂದಿರೋ ಆಪಾದನೇನ ನಮ್ಮ ಮೇಲೆ ತಳ್ಳೋ ಕುತಂತ್ರ."

"ಕೂತ್ಕೊಳ್ಳಿ, ಧನಂಜಯ. ನಾನು ಆಗಲೇ ಹೇಳಿದ್ದ ಹಾಗೆ ಇಂತಾ ಸಂದರ್ಭಕ್ಕೆಲ್ಲಾ ತಾಳ್ಮೆ, ಸೌಜನ್ಯ ಬೇಕು."

"ಒಳ್ಳೆ ತಾಳ್ಮೆ ಪರೀಕ್ಷೆ ಆಯ್ತು. ಒದರೋದೆಲ್ಲಾ ಒದರಿ ಬಿಡಿ" ಮತ್ತಷ್ಟು ಸಿಡುಕಿದ.

"ಚಂದ್ರಮ್ಮ, ಇದೇ ಗುರುವಾರ ಮಧ್ಯಾಹ್ನ ಎರಡು ಘಂಟೆ ಹೊತ್ನಲ್ಲಿ ಸಿಂಡಿಕೇಟ್ ಬ್ಯಾಂಕ್‌ನಿಂದ ನಲವತ್ತು ಸಾವಿರ ಡ್ರಾ ಮಾಡಿದೀರಿ. ಅಷ್ಟೊಂದು ಹಣದ ಅಗತ್ಯ ಆಗ ಏನಿತ್ತು?"

ಮೋಹನ ಉತ್ಸುಕನಾದ.

"ನಲವತ್ತು ಸಾವಿರ"

"ನಡುವೆ ಮಾತಾಡ್ಬೇಡ, ಮೋಹನ್. ನೀವು ಹೇಳಿ ಚಂದ್ರಮ್ಮ."

"ಅದು ನಂದೂ, ರಾಯರ್‌ದೂ ಜಾಯಿಂಟ್ ಅಕೌಂಟ್. ಹೆಂಡತಿ ಆದೋಳಿಗೆ ಹಣ ತೆಗೆಯೋ ಅಧಿಕಾರ ಇಲ್ಲೇನು? ಬೇಕಾದಾಗ ಯಜಮಾನರಿಗೆ ಹಣ ತೆಗೆದು ಕೊಡ್ತಾ ಇದ್ದೋಳು ನಾನೇ."

"ನಿಮ್ಮ ಹಣದ ಲೆಕ್ಕ, ಅಧಿಕಾರ ಕೇಳ್ತಿಲ್ಲ ನಾನು. ರಾಯರು ಪ್ರಯಾಣ ಮಾಡಿದ ಮೇಲೆ ಅಷ್ಟು ದೊಡ್ಡ ಮೊತ್ತ ಯಾಕೆ ತೆಗೆದ್ರಿ?"

"ರಾಯರಿಗೋಸ್ಕರವೇ ತೊಗೊಂಡು ಬಂದೆ ಅನ್ಕೊಳ್ಳಿ. ನೀವೇ ಹೇಳಿದ್ರಲ್ಲಾ ರಾಯರು ಅವತ್ತು ನನ್ನ ಜೊತೇಲಿ ವೀನಸ್ ಹೊಟೇಲ್‌ನಲ್ಲಿ ಇದ್ರೂಂತ" ವ್ಯಂಗ್ಯವಾಗಿ ಹೇಳಿದಳು ಚಂದ್ರಮ್ಮ.

"ನೀವು ಅಡ್ಡಾದಿಡ್ಡಿ ಮಾತಾಡ್ತಾ ಇದೀರ. ಹೀಗೆ ಹತಾಶರಾಗಿ ಸಿಕ್ಕಾಪಟ್ಟೆ ಮಾತಾಡಿ ಇಲ್ಲಿ ಕುಳಿತಿರೋರ ಸಹಾನುಭೂತಿ ಪಡೆಯೊ ಆಸೆ ಇಟ್ಕೊಬೇಡಿ.... ಚಂದ್ರಮ್ಮ, ಅಲ್ಲಿರೊ ಅಂಜನರಾಯರ ಫೋಟೊ ನೋಡಿ, ನಿಮ್ಮ ಮಾಂಗಲ್ಯ ಮುಟ್ಟಿ ಸತ್ಯ ಹೇಳಿ. ಗುರುವಾರ ಬೆಳಗ್ಗೆ ಪ್ರವಾಸ ಹೊರಟ ರಾಯರು ಏಕಾಏಕಿ, ಅನಿರೀಕ್ಷಿತವಾಗಿ ಮಧ್ಯಾಹ್ನ ನಿಮ್ಮಲ್ಲಿಗೆ ಬಂದಿದ್ದುಂಟಾ?"

ಧನಂಜಯ ತಲೆತಗ್ಗಿಸಿದ. ಚಂದ್ರಮ್ಮ ಬಿಕ್ಕಳಿಸಿದಳು. ಕಂಠ ಗದ್ಗದಿಸಿತು.

"ಬಂದಿದ್ರು. ನನ್ನ ಆರೋಗ್ಯ ವಿಚಾರಿಸೋದಿಕ್ಕೆ, ನೆಮ್ಮದಿ ಇಲ್ದೆ ರೈಲು ಪ್ರಯಾಣ ಬಿಟ್ಟು ಓಡಿ ಬಂದಿದ್ರು."

"ಎಲ್ಲಿವರೆಗೆ ನಿಮ್ಮ ಜೊತೇಲಿ ಇದ್ರು?"

"ಸಂಜೆತನಕ ನನ್ನ ಹತ್ರದಲ್ಲಿದ್ದು ಆಮೇಲೆ ಟ್ಯಾಕ್ಸಿ ಮಾಡ್ಕೊಂಡು ಹೈದರಾಬಾದ್‌ಗೆ

ಹೊರಟ್ರು."

"ಹೈದರಾಬಾದ್‌ವರೆಗೆ ಟ್ಯಾಕ್ಸಿ! ಏನು ಮಾತಾಡಿದ್ರೂ ನಿಮ್ಮ ಜೊತೇಲಿ ಇದ್ದಾಗ?"

"ಹೆಂಡತಿ ಜೊತೇಲಿ ಗಂಡ ಆಡೊ ಮಾತುಗಳು."

"ಸಾಕು ನಿಲ್ಸಿ. ನನ್ನ ತಲೆ ಚಿಟ್ಟು ಹಿಡೀತು ಈ ಮಾತಿನಿಂದ." ಮೋಹನ ದೀರ್ಘ ಮೌನ ಒಡೆದು ಮಧ್ಯೆ ಕೂಗಿದ.

"ಮುಚ್ಚು ಬಾಯಿ ನಿಮ್ಮ ಸಂಸಾರದ ವಿಷಯ ಕೇಳೊ ಆಸಕ್ತಿ ಇಲ್ಲ ನನಗೆ. ರಾಯರಿಗೆ ಸಂಬಂಧಿಸಿದ್ದು ಇದು... ಚಂದ್ರಮ್ಮ, ನೀವು ಸಂಜೆವರೆಗೆ ರಾಯರ ಸಂಗಡ, ಗಂಡ ಹೆಂಡತಿ ಆಡೋದನ್ನ, ಅದೂ ಧನಂಜಯ ಅಲ್ಲಿದ್ದಾಗ ಹೇಗೆ ಮಾತಾಡೋದು ಸಾಧ್ಯ ಅಂತ."

"ಆ ಹೊತ್ನಲ್ಲಿ ನಾನು ಅಲ್ಲಿ ಯಾಕೆ ಇರ್ಲಿ?"

ಧನಂಜಯ ಟೀಪಾಯ್ ಗುದ್ದಿದ್ದ.

"ಅಂಜನರಾಯರ ಆಣೆಗೂ ನೀವು ಅಲ್ಲಿದ್ರಿ ಧನಂಜಯ... ಚಂದ್ರಮ್ಮ, ಇನ್ನು ಸತಯಿಸ್ಬೇಡಿ. ದಯಮಾಡಿ ಹೇಳಿ. ನೀವು ರಾಯರ ಜೊತೆ ಹೇಗೆ ಮಾತಾಡೋಕೆ ಸಾಧ್ಯ ಆಯ್ತು?"

"ಮಾತಾಡೋದು ಹೇಗೆ ಸಾಧ್ಯ ಅಂದ್ರೆ?"

ಕ್ರುದ್ಧಳಾಗಿ ಮುಖ ಎತ್ತಿ ಕಣ್ಣೊರೆಸಿಕೊಂಡಳು.

"ಅಂಜನರಾಯರ ಹೆಣದ ಜೊತೇಲಿ ನೀವು ಹೇಗೆ ಮಾತಾಡಿದ್ರಿ ಅಂತ..."

ಚಂದ್ರಮ್ಮನ ಚೀತ್ಕಾರ ಎಲ್ಲರನ್ನೂ ಬೆಚ್ಚುವಂತೆ ಮಾಡಿತು. ಪೂಣಚ್ಚನ ಬೆತ್ತ ಸಶಬ್ದವಾಗಿ ಕೆಳಕ್ಕೆ ಬಿತ್ತು. ಅರವಿಂದನ ಭುಜ ಹಿಡಿದು ಅಲುಗಿಸಿದ.

"ಅಂದ್ರೆ ಅಂಜನರಾಯರು ಸತ್ತು ಹೋದರೆ?" ಗಾಬರಿಯ ಮೇಲುಸಿರಿನಲ್ಲಿ ಕೇಳಿದ ಅಧಿಕಾರಿ.

"ಸಾಯಲಿಲ್ಲ... ಕೊಲೆ ಆದ್ರು."

"ಯಾರು ಕೊಲೆಗಾರ?" ಅದೇ ಉದ್ರೇಕದಲ್ಲಿ ಕೇಳಿದ.

"ಕೊಲೆಗಾರ ಅಗೋ, ಅಲ್ಲಿರೋ ಪ್ರಾಮಾಣಿಕ ಮ್ಯಾನೇಜರ್ ಅಂಜನರಾಯರ ಪ್ರಾಮಾಣಿಕ ಸೇವಕ ಧನಂಜಯ."

"ಧನಂಜಯ ಕೊಲೆಗಾರ!"

ನಾಲ್ಕು ಉದ್ಗಾರಗಳು ಒಂದಾದವು. ಧನಂಜಯ ವಿಗ್ರಹದಂತೆ ಕುಳಿತ. ಅರವಿಂದ ಮುಂದುವರಿಸಿದ.

"ಧನಂಜಯ ಧಣಿಯ ಹತ್ಯಾಕಾರಿ. ಅದಕ್ಕೆ ಪ್ರತ್ಯಕ್ಷದರ್ಶಿ ಚಂದ್ರಮ್ಮ. ಅವನು

ಮಾಡಿದ ಹತ್ಯೆಗೆ ಪ್ರತಿಭಟನೆ ತೋರದೆ ಮೌನವಾಗಿ ನಿಂತು ಸಹಕಾರ ಕೊಟ್ಟ ವ್ಯಕ್ತಿ. ಕಾರಿನ ಚಕ್ರ ಹರಿಸಿ, ಕೆರೆಗೆ ಹಾಕಿ, ಆಮೇಲೆ ನೀವು ಪಂಚನಾಮೆ ತಯಾರಿಸಿ ವೈದ್ಯ ಪರೀಕ್ಷೆ ಮಾಡಿಸಿದ ಆ ದೇಹ ನಂಜುಂಡನದಲ್ಲ, ಅಂಜನರಾಯರದು, ಹತ್ಯಾಕಾರಿ ಹಾಗೂ ಚಂದ್ರಮ್ಮನ್ನ ಈಗಲೇ ಸರಿಯಾಗಿ ನೋಡ್ಕೊಳ್ಳಿ. ನಿಮಿಷ ತಡವಾದ್ರೆ ಆತ್ಮಹತ್ಯೆ ಮಾಡಿ ಕೊಂಡಾರು."

ಇಬ್ಬರು ಕಾನ್ಸ್‌ಟೇಬಲ್ ಒಳ ಬಂದರು. ವಿಸ್ಮಯದಲ್ಲಿ ಮುಳುಗಿದ ಇಡೀ ಕೂಟ ಮುಂದಿನ ಪ್ರಶ್ನೆ ಹಾಕುವ ಮೊದಲೇ ಅರವಿಂದ ಕೋಟು ಸರಿಪಡಿಸಿಕೊಂಡು ಹೊರಕ್ಕೆ ನಡೆದುಬಿಟ್ಟ.

10

'ಹಿಲ್ ಟಾಪ್' ರೆಸ್ಟೋರೆಂಟ್‌ನ ಎರಡನೆ ಅಂತಸ್ತಿನಲ್ಲಿ ಇಬ್ಬರೂ ಎದುರು ಬದರು ಕುಳಿತಿದ್ದರು.

"ನಾಳೆ ಈ ಹೊತ್ತಿಗೆ ನಂಜುಂಡ ಬರ್‍ತಾನೆ. ಅಹಮದಾಬಾದ್ ಪೋಲೀಸ್ ನೇರವಾಗಿ ನಿಮ್ಮ ಸ್ಟೇಷನ್‌ಗೆ ಕರೆತರ್‍ತಾರೆ ಅವನ್ನ. ಕೊಲೆಗಾರನಿಂದ ವಿವರ ಚೆನ್ನಾಗಿ ಸಿಗೋದು ನನಗೆ. ಅದಕ್ಕೇ ನೀವು ಅಲ್ಲಿ ಬೇಡ ಅಂದಿದ್ದು. ಧನಂಜಯ ನಾನು ಊಹಿಸಿದ ಹಾಗೇ ಕಾರ್ಯ ಸಾಧಿಸಿದಾನೆ. ಪ್ರತಿಯೊಂದು ಪತ್ತೆ ಕಾರ್ಯಕ್ಕೂ ಚಾತುರ್ಯಕ್ಕಿಂತ ಹೆಚ್ಚಾಗಿ ಒಂದು ಅದೃಷ್ಟದ ಹೊಡೆತ ಬೀಳುತ್ತೆ. ಅಂತಾದ್ದು ನನಗೆ ಯಾವುದು ಗೊತ್ತಾ, ಮಿಸ್ಟರ್ ಪೂಣಚ್ಚ?"

ಎರಡು ಗ್ಲಾಸ್‌ಗಳಿಗೂ ಕೋಕಾಕೋಲ ಸುರಿದ.

"ಬಹುಶಃ ಅಂಜನರಾಯರ ಬ್ಯಾಂಕ್ ಲೆಕ್ಕ, ಹೊಟೇಲ್ ಪಟ್ಟಿ."

ತಾನು ಒಗೆದ ಸಿಗರೇಟು ಧೂಮಕ್ಕೆ ಮುಖ ಇಟ್ಟು ಎರಡು ಸಾರಿ ಕೆಮ್ಮಿದ ಪೂಣಚ್ಚ.

ಅರವಿಂದ ಜೇಬಿನಿಂದ ತೆಗೆದ ಐದು ಟೈಪ್ ಆದ ಕಾಗದಗಳನ್ನು ಮೇಜಿನ ಮೇಲೆ ಹರಡಿದ.

"ಇಗೋ, ನನ್ನ ಮಿದುಳು ತಿವಿದ ಅಂಜನರಾಯರ ಈ ಎರಡು ಪ್ರವಾಸ ಪತ್ರ. ಚಂದ್ರಮ್ಮನಿಗೆ ಹೈದರಾಬಾದ್‌ನಿಂದ ಬಂದ ಈ ಮೊದಲನೆ ಪತ್ರ ಟೈಪ್ ಆಗಿದ್ದು ಕಂಡಾಗಲೇ ನನಗೆ ತಲೆಯಲ್ಲಿ ತುಳುಕಾಟ. ಚಂದ್ರಮ್ಮ ಉದ್ದೇಶಪೂರ್ವಕವಾಗಿ ಆ ಪತ್ರ ನನ್ನ ಕಣ್ಣಿಗೆ ಬೀಳೋ ಹಾಗೆ ಮಾಡಿದ್ಲು. ಅಂಜನರಾಯರು ಬದುಕಿರೊ ವಿಷಯದಲ್ಲಿ ನನಗೆ ಸಂದೇಹ ಬರದೆ ಇರಲಿ ಅಂತ. ಪ್ರವಾಸದಲ್ಲಿರೊ ಮನುಷ್ಯ ಸಾಮಾನ್ಯವಾಗಿ ಕಾಗದವನ್ನ ಬರೆದು ಹಾಕ್ತಾನೆ. ಅದರಲ್ಲೂ ಹೆಂಡತಿ ವಿಳಾಸಕ್ಕೆ

ವಿರಾಮವಾಗಿ ಟೈಪ್ ಮಾಡಿಸಿ ಹಾಕೊ ಸಂದರ್ಭ, ಅವಕಾಶ ಎಲ್ಲೀದು? ಇನ್ನೊಂದು ಕಾಗದ ಬಂತು ಔರಂಗಾಬಾದ್‌ನಿಂದ. ಅದೂ ಟೈಪ್ ಆದ ಪತ್ರವೇ. ವಿಶೇಷ ಏನು ಗೊತ್ತೆ? ಆ ಎರಡು ಕಾಗದಗಳೂ ಒಂದೇ ಮಿಷನ್‌ನಲ್ಲಿ ಟೈಪ್ ಆಗಿವೆ. ರಾಯರ ಕಂಪನೀಲಿ ಮೂರು ಟೈಪ್‌ರೈಟರ್ ಇವೆ. ಎಲ್ಲದರ ಟೈಪಿಂಗ್ ಮಾದರಿ ನೋಡ್ದೆ. ಧನಂಜಯನ ಆಫೀಸಿನಲ್ಲಿರೊ ಮಿಷನ್‌ನ ಅಕ್ಷರಗಳು ಈ ಎರಡು ಪತ್ರದ ಅಕ್ಷರಗಳಿಗೆ ಹೊಂದಿಕೊಂಡ್ವು..."

"ಅಂದರೆ ಧನಂಜಯ ಆ ಪತ್ರಗಳನ್ನು ತನ್ನ ಆಫೀಸಿನಲ್ಲೇ ಟೈಪ್ ಮಾಡಿ, ರಾಯರ ರುಜು ಅದಕ್ಕೆ ಹಾಕಿ, ಒಂದು ದೊಡ್ಡ ಲಕೋಟೆಯಲ್ಲಿಟ್ಟು ಹೊರ ರಾಜ್ಯಕ್ಕೆ ಕಳುಹಿಸಿ ಪೋಸ್ಟ್ ಮಾಡಿಸಿದ್ದಾನೆ."

"ಹೌದು. ಗುರುವಾರ ರಾತ್ರಿ ಧನಂಜಯ ಬಹಳ ಹೊತ್ತಿನವರೆಗೆ ಆಫೀಸಿನಲ್ಲಿ ಟೈಪ್ ಮಾಡ್ತಾ ಇದ್ದದ್ದು ಕಂಪನಿ ಪತ್ರ ಅಲ್ಲ. ರಾಯರ ಪ್ರವಾಸ ಪತ್ರಗಳು. ಹೊರರಾಜ್ಯದಲ್ಲಿ ಈ ಪತ್ರಗಳನ್ನು ಪಡೆದ ಒಬ್ಬ ಆಸಾಮಿ ಮತ್ತೆ ಇಲ್ಲಿಗೆ ಅದೇ ಕಾಗದಗಳನ್ನು ಸೂಚನೆಗೆ ಸರಿಯಾಗಿ ಕರಾರುವಾಕ್ ತಾರೀಖಿಗೆ ಪೋಸ್ಟ್ ಮಾಡಿದಾನೆ. ಅಂಜನರಾಯರ ಸ್ಥಾನ ಹಿಡಿದು ಬೇರೆ ಬೇರೆ ನಗರದಲ್ಲಿ ಕೆಲಸ ಸಾಗಿಸಿದ ವ್ಯಕ್ತಿ..."

"ನಂಜುಂಡ."

"ಕರೆಕ್ಟ್. ಮತ್ತೆ ಆ ಕಾಗದಗಳಲ್ಲಿ ಒಂದು ಕ್ಲೂ ಸಿಕ್ತು. ರಾಯರ ಆಹಾರ ಸಮಸ್ಯೆ. ಹಲ್ಲುಗಳೆಲ್ಲಾ ಕೀಳಿಸಿದ ರಾಯರ ತಾಪತ್ರಯ. ತಲೆಯಲ್ಲಿ ಅಲೆ ಹರಿದಾಡ್ತು. ಅದು ರಾಯರ ದೇಹ ಗುರುತಿಸೋಕೆ ಸೊಗಸಾದ ಅಂಶ ಕತ್ತಲಾದ ಮೇಲೆ, ತಾಳೆಗಿಡದ ಬುಡ ಸೇರಿ ಗೋರಿ ಅಗೆದು ಹಾಕ್ದೆ. ವಿಷಯ ತಿಳಿಯಿತು. ಆ ದೇಹದ ಬಾಯಲ್ಲಿ ಒಂದೂ ಹಲ್ಲು ಇಲ್ಲ. ನಂಜುಂಡನಿಗೆ ಒಂದು ಹಲ್ಲೂ ಬಿದ್ದಿರಲಿಲ್ಲ. ದೇಹ ಅಂಜನರಾಯರದು ಅನ್ನೋದು ಖಚಿತ ಆಯ್ತು. ಆಮೇಲೆ ಕಂಪನಿ ಫೈಲ್ ತಪಾಸಣೆ. ಅವರು ರಿಸರ್ವ್ ಮಾಡಿದ ಹೊಟೇಲ್ ವಿಳಾಶ. ಬ್ಯಾಂಕ್ ಬ್ಯಾಲೆನ್ಸ್ ತೊಗೊಂಡೆ. ಅದೇ ಕಾದಲ್ಲಿ ಹದಿಮೂರು ದಿನದ ವನವಾಸ. ಹೈದರಾಬಾದ್, ಔರಂಗಾಬಾದ್‌ನಲ್ಲಿ ಕೋಣೆ ರಿಸರ್ವ್ ಆಗಿವೆ. ಆದರೆ ರಾಯರ ಆಗಮನವೇ ಆಗಿಲ್ಲ. ಅವರ ಹೆಸರು ಹೊತ್ತು ನಂಜುಂಡ ಅಲ್ಲಿಗೆಲ್ಲಾ ಬಂದಿರೋದು ಗೊತ್ತಾಯ್ತು. ಆದರೆ ಅವನ ದರ್ಶನ ಆಗ್ಲಿಲ್ಲ."

"ಕೊಲೆಗೆ ಉದ್ದೇಶ ಏನು?"

"ಅಂಜನರಾಯರ ಮನೆತನಕ್ಕೆ ಮಚಿ ಅಚ್ಚೊ ವಿಷಯ ಅದು. ಕೊಲೆಗೆ ಮೋಟಿವ್ ಪ್ರೇಮ. ಚಂದ್ರಮ್ಮ ಪ್ರಪಂಚ ಸುಖಕ್ಕೆ ಹಾತೊರೆದ ರೂಪವಂತ ಯುವತಿ. ದೊಡ್ಡ ಕುರುಗೋಡಿನ ಸಾಮಾನ್ಯ ಕಚೇರಿ ಗುಮಾಸ್ತನ ಮಗಳು. ರಾಯರ ದೂರದ ಸಂಬಂಧಿ. ಅವರ ಮೊದಲನೆಯ ಹೆಂಡತಿ ತೀರಿದ ಕೂಡ್ಲೆ ಪರಿಸ್ಥಿತಿಗೆ ಬಲಿಯಾಗಿ ಎರಡನೆ ಹೆಂಡತಿಯಾಗಿ ಬಂದ್ಲು. ರಾಯರಿಗೆ ಕಾರ್ಯಭಾರ. ಅದರ ಮೇಲೇ ಸ್ವಲ್ಪ

ಏರು ವಯಸ್ಸು. ಅಂತಸ್ತು, ರೂಪ ಇದ್ದ ಮ್ಯಾನೇಜರ್ ಧನಂಜಯ ಕಣ್ಣು ಕುಕ್ಕಿದ. ರಾಯರಿಗೆ ಚಂದ್ರಮ್ಮನ ಮೇಲೆ ಸಂಶಯ ಇತ್ತು. ಅದರ ವಾಸನೆ ನನಗೂ, ಚಿತ್ರಾಗೂ ಬಡಿದಿತ್ತು. ಚಂದ್ರಮ್ಮ ಸಿನಿಮಾ, ಷಾಪಿಂಗ್ ಅಂತ ಬೆಂಗಳುರಿಗೆ ಕಾರು ಒಯ್ತಾ ಇದ್ದಿದ್ದು, ಅವಳ ಸಹಾಯಕ್ಕೆ ಡ್ರೈವಿಂಗ್‌ಗೆ ಅಂತ ಧನಂಜಯ ಆಗಾಗ್ಗೆ ಜೊತೆ ಗೂಡ್ತಾ ಇದ್ದಿದ್ದು ರಾಯರಿಗೆ ಗೊತ್ತು. ಆದರೆ ಆ ವಯಸ್ಸಿನಲ್ಲಿ ರೂಪಸಿ ಎರಡನೆ ಹೆಂಡತಿಗೆ ದೊಡ್ಡ ಪ್ರಶ್ನೆ ಹಾಕಿ ತಮ್ಮ ಘನತೆಗೆ ನಷ್ಟ ಪಡೆಯೋ ಇಚ್ಛೆ ಇರ್ಲಿಲ್ಲ ಅವರಿಗೆ. ಆಕೆ ಭೇಟಿ ಕೊಡ್ತಾ ಇದ್ದ ಕೆಲವು ಹೋಟೆಲ್ ಹೆಸರು ಅವರ ಹಾಗೆ ನನಗೂ ಗೊತ್ತಿತ್ತು."

"ಅಂಜನರಾಯರ ಕೊಲೆಗೆ ಮೊದಲೇ ಪ್ಲಾನ್ ಆಗಿತ್ತೆ?"

"ಕೊಲೆ ನಿಯೋಜಿನ ಅಲ್ಲ ಅನಿರೀಕ್ಷಿತ ದುರದೃಷ್ಟಕರ ಪ್ರಸಂಗ. ಆದರೆ ಕೊಲೆ ಆದಮೇಲೆ ನಡೆದಿದ್ದೆಲ್ಲಾ ಯೋಜಿತ ಕಾರ್ಯ. ಚಂದ್ರಮ್ಮ ಹಾಗೂ ಧನಂಜಯ ತಕರಾರು ಇಲ್ಲದೆ ವಿವರಣೆ ಕೊಟ್ಟಿದ್ದಾರೆ. ಅಂಜನರಾಯರಿಗೆ ಹೆಂಡತೀನ ಪ್ರವಾಸಕ್ಕೆ ಕರೆದುಕೊಂಡು ಹೋಗೋ ಆಸೆ. ಆದರೆ ಚಂದ್ರಮ್ಮನಿಗೆ ಒಪ್ಪಿಗೆ ಇಲ್ಲ. ಅವರನ್ನ ಬೆಂಗಳೂರಿನವರೆಗೆ ಬಿಟ್ಟು ಬರ್ತೀನಿ ಅಂತ ಬಂದ್ಲು. ಸಿಕಂದರಾಬಾದ್ ಎಕ್ಸ್‌ಪ್ರೆಸ್ ಏರಿದ ರಾಯರಿಗೆ ಹೆಂಡತಿ ಮೇಲೆ ಬಲವಾದ ಶಂಕೆ. ಬಹುಶಃ ಯಶವಂತಪುರದಲ್ಲಿ ಇಳಿದು ಬಂದಿರಬೇಕು. ಬೆಳಿಗ್ಗೆ ಹೆಂಡತಿ ಜೊತೆ ಇಳಿದಿದ್ದ ಹೋಟೆಲ್ ಸೀ ಲ್ಯಾಂಡ್‌ಗೆ ಬಂದಿದ್ದಾರೆ. ಅಲ್ಲಿ ಚಂದ್ರಮ್ಮ ಇಲ್ಲ. ಸಂಶಯದ ಕಾವು ಏರಿ ಹೋಟೆಲ್ ವೀನಸ್‌ಗೆ ಊಹೆ ಮೇಲೆ ಬಂದ್ರು. ಸ್ವಲ್ಪ ಕಾದು ನೋಡಿದಾಗ ಚಂದ್ರಮ್ಮ ಅಥವಾ ಧನಂಜಯನ ಸುಳಿವು ಹತ್ತಿದೆ.

ಅವರ ಕೋಣೆ ಪತ್ತೆ ಮಾಡಿ ಬಾಗಿಲು ತಟ್ಟಿದ್ರು. ಚಂದ್ರಮ್ಮ ಹಾಗೂ ಧನಂಜಯ ನಿರಾತಂಕವಾಗಿ ಒಳಗೆ ಸೇರಿರೋ ಕಾಲ ಕಾಮಕೇಳಿಗೆ ಭಂಗ ಬಂತು. ಬಾಗಿಲು ತೆಗೆದಾಗ ರಾಯರ ಯಮದರ್ಶನ. ರಾಯರು ಬಾಗಿಲು ಹಾಕಿ ಒಳಬಂದು ಇಬ್ಬರಿಗೂ ಛೀಮಾರಿ ಹಾಕಿದ್ರು. ಮಾತಿನ ಕಾವು ಏರಿತು, ಪ್ರೇಮಿ ಹತಾಶನಾದ. ಏನೂ ತೋಚದ ಸನ್ನಿವೇಶ. ತಲೆಗೆ ಭೂತ ಪ್ರವೇಶ ಆಯ್ತು. ಮೇಜಿನ ಮೇಲಿದ್ದ ಹೂ ದಾನಿಯಿಂದ ರಾಯರ ತಲೆಗೆ ಭಾರಿಸಿದ. ರಾಯರು ಪ್ರಜ್ಞಾಶೂನ್ಯರಾಗಿ ಬಿದ್ದ ಮೇಲೆ ಅವರ ಕುತ್ತಿಗೆ ಒತ್ತಿ ಸಾಯಿಸಿದ. ಚಂದ್ರಮ್ಮ ಷಾಕ್‌ಗೆ ಸಿಕ್ಕಿ ಸೊಲ್ಲಡಗಿ ನಿಂತಳು. ರಾಯರ ದೇಹ ಮಂಚದಡಿ ಸೇರಿಸಿ ಧನಂಜಯ ಸಾವಕಾಶವಾಗಿ ಯೋಚನೆ ಮಾಡಿದ. ಕತ್ತಲಾದ ಮೇಲೆ ದೇಹ ಒಯ್ದು ನಿರ್ಜನ ಪ್ರದೇಶದಲ್ಲಿ ಎಸೆಯುವುದು ಅಸಾಧ್ಯವಲ್ಲ. ಆದರೆ ಹೊಟೇಲ್ ವೀನಸ್‌ನ ಸಿಬ್ಬಂದಿಯಲ್ಲಿ ಯಾರಾದರೂ ರಾಯರನ್ನು ನೋಡಿಯೇ ಇರುತ್ತಾರೆ. ನಾಳೆ ಅವರ ದೇಹ ಸಿಕ್ಕಿದಾಗ ತನಗೆ ಅಪಾಯ ತಪ್ಪಿದ್ದಲ್ಲ. ಹೊಟೇಲ್ ವೀನಸ್‌ಗೆ ತಾನೂ ಹಾಗೂ ಚಂದ್ರಮ್ಮ ಚಿರಪರಿಚಿತ ಅನಧಿಕೃತ ದಂಪತಿಗಳು. ಅಣ್ಣನ ನೆನಪು ಬಂತು. ನಂಜುಂಡ ಫೋನ್ ಕರೆಯ ಮೇಲೆ ಬಂದ. ಮುಂದಿನ

ವ್ಯೂಹದ ರಚನೆ ಆಯ್ತು. ಕುಡುಕನಿಗೆ ಬೇಕಾದ್ದು ಹಣ. ತಲೆಮರೆಸಿ ಕೂಡಲು ಯಾವ ಊರಾದರೇನು? ಚಂದ್ರಮ್ಮ ಸಿಂಡಿಕೇಟ್ ಬ್ಯಾಂಕ್‌ನಿಂದ ನಲವತ್ತು ಸಾವಿರ ತಂದಳು. ನಂಜುಂಡನ ರೂಪಕ್ಕೆ ರಾಯರ ದೇಹ ಒಳಗಾಯಿತು. ಬೆಳ್ಳಿ ತಾಯಿತ, ಹುಲಿ ಉಗುರು ಉಂಗುರ, ಹುಲಿ ಚರ್ಮದ ಪಟ್ಟಿಯ ಕೈಗಡಿಯಾರ, ಕಪ್ಪು ಪ್ಯಾಂಟ್, ಹಳದಿ ಕೆಂಪು ಬಟ್ಟೆಯ ಷರಟು ನಂಜುಂಡ ಕಳಚಿಟ್ಟ. ಮುಂದಿನ ಸೂಚನೆ ಪಡೆದು ಹಣದೊಂದಿಗೆ ಹೈದರಾಬಾದ್ ದಿಕ್ಕು ಹಿಡಿದ. ಧನಂಜಯ ಮತ್ತೆ ತಲೆಗೆ ಕೆಲಸ ಕೊಟ್ಟ. ನಂಜುಂಡನ ದೇಹದ ಗುರು! ಹೌದು, ಅಂಜನರಾಯರನ್ನು ಯಾರೂ ಗುರ್ತಿಸುವಂತಾಗಬಾರದು. ಅದಕ್ಕೂ ಒಂದು ಯಜ್ಞಪಶೂ! ತನ್ನ ಮೇಲೆ ಆವರಿಸಬಹುದಾದ ಸಂಶಯವನ್ನು ದೂರ ಮಾಡಲು ಅದೆಷ್ಟು ಸುಗಮ! ಕುಡುಕ ಹಾಗೂ ನಂಜುಂಡನ ಮಿತ್ರನಾದ ಮೋಹನ ಇದಕ್ಕೆ ಹೇಳಿ ಮಾಡಿಸಿದ ವ್ಯಕ್ತಿ!

ಸಂಜೆ ಆರರ ಹೊತ್ತಿಗೆ ಕತ್ತಲು ಪಸರಿಸಿತ್ತು. ಹೋಟೆಲ್ ವೀನಸ್‌ನ ಪಶ್ಚಿಮ ಭಾಗ. ಅದು ಹಗಲಿನಲ್ಲೇ ನಿರ್ಜನ. ಕಪ್ಪು ಅಂಬಾಸಿಡರ್ ಹೊಂದಿಸಿಕೊಂಡು ಬಂದ ಧನಂಜಯ. ಅದಕ್ಕೆ ಪರಿಚಿತ ಆಪ್ತ ಡ್ರೈವರ್ ಕಾರು ಕೋಣೆಗೆ ಸಮೀಪವಾಗಿ ನಿಂತಿತು. ಒಬ್ಬರ ಸುಳಿವಿಲ್ಲ. ಇಬ್ಬರೂ ರಾಯರ ತೋಳು ಹಿಡಿದು ನಿಲ್ಲಿಸಿ ರೋಗಿಯನ್ನು ಸಾಗಿಸುವಂತೆ ದೇಹವನ್ನು ಜರುಗಿಸಿ ಹಿಂದಿನ ಸೀಟಿಗೆ ಸೇರಿಸಿದರು. ಧನಂಜಯ ಕಂಪನಿಗೆ ಹಿಂದಿರುಗುವ ಮೊದಲು ಚಂದ್ರಮ್ಮನನ್ನು ಬೇರೆ ಹೋಟೆಲಿಗೆ ವರ್ಗಾಯಿಸಿದ. ರಾಯರ ದೇಹ ಹೊತ್ತ ಕಪ್ಪುಕಾರು ರಾತ್ರಿ ಒಂಭತ್ತೂವರೆ ತನಕ ಅಲ್ಲಿ ಇಲ್ಲಿ ಸುತ್ತಾಡಿ ಮಾಡಿ ಮಂಚೇನಹಳ್ಳಿ ರಸ್ತೆಗೆ ಬಂತು. ದೇಹ ನೆಲಕ್ಕೆ ಬಿದ್ದ ಮೇಲೆ ಕಾರಿನ ಚಕ್ರ ಅದರ ಮೇಲೆ ಸಾಕಷ್ಟು ಸಾರಿ ಹರಿದು ವಿರೂಪಗೊಳಿಸಿತು. ಅದಕ್ಕೆ ಮೊದಲೇ ಡಾಕ್ಟರ್ ವಾಗೀಶ ಮಂಚೇನಹಳ್ಳಿ ಭೇಟಿ ಮುಗಿಸಿದ್ದ. ಕಪ್ಪು ಕಾರಿನ ಡ್ರೈವರ್ ಹಿಂದಕ್ಕೆ ಸಾಗಿ, ಹೂಡಿದ ಪ್ಲಾನ್‌ನಂತೆ ಬಾರ್ ಸೇರಿದ."

"ಮೋಹನ ಬಾರ್‌ನಲ್ಲಿ ಸಿಕ್ಕದೆ ಇದ್ದರೆ ಆ ದೇಹದ ಗತಿ?"

"ಅದೇ ಡ್ರೈವರ್ ಮತ್ತೆ ಬಂದು ದೇಹವನ್ನು ಕೆರೆಗೆ ಹಾಕಬೇಕಾಗಿತ್ತು ಆದರೆ 'ಬ್ಲೂ ಹೊರೈಸನ್' ಬಾರ್ ಮೋಹನನಿಗೆ ಪ್ರತಿ ಸಂಜೆ ದೇವಾಲಯ. ಧನಂಜಯ ಮೊದಲೇ ಹೂಡಿದ ಸಂಚಿನಂತೆ ಮೋಹನನಿಗೆ ವಿಶೇಷ ಶೀಷೆಗಳ ಸೇವನೆ ಆಯ್ತು. ಅದರಲ್ಲಿ ಸೇರಿಸಿದ ಮದ್ದು ಅವನ ಬುದ್ಧಿಗೆ ಗ್ರಹಣ ಹಿಡಿಸಿ ನಿಶ್ಯಕ್ತ ಬೊಂಬೆಯಾಗಿ ಮಾಡಿತು. ಅದೇ ಕಾಲಕ್ಕೆ ಧನಂಜಯ ಫೋನ್ ಮಾಡಿ ಮೋಹನನ ಉದ್ರೇಕ ಕೆರಳಿಸಿದ. ನಂಜುಂಡ ಚಿತ್ರಾಳ ಮೇಲೆ ಅತ್ಯಾಚಾರಕ್ಕೆ ಹೊರಟನೆಂದು ತಿಳಿಸಿದ.

"ವೀನಸ್ ಹೋಟಲಿನ ಮಾಲೀಕ, ಮ್ಯಾನೇಜರ್‌ಗೆ ಚಂದ್ರಮ್ಮ ಹಾಗೂ ಧನಂಜಯನ ಸಂಬಂಧ ತಿಳಿದಿರಲಿಲ್ಲವೆ?"

"ಉಹುಂ. ಅವರಿಬ್ಬರ ವಿಲಾಸ ವಿಹಾರಕ್ಕೆ ಅದೊಂದೇ ಹೋಟಲೇನು? ಎಷ್ಟೋ ಇದ್ವು. ಸಿಟಿ ಹೋಟಲಿನ ಸಿಬ್ಬಂದಿಗೆ ತಮ್ಮ ಕಾರ್ಯಭರದಲ್ಲಿ ಯಾರ

ಸಂಬಂಧಕ್ಕೇಂತ ತಲೆ ಕಡಿಸಿಕೊಳ್ಳೊ ಅಗತ್ಯ ಇದೆ. ಬೇರೆ ಹೆಸರುಗಳಲ್ಲಿ ಕೋಣೆ ಹಿಡಿಯುವ ಧನಂಜಯ, ಚಂದ್ರಮ್ಮ ಅವರ ಕಣ್ಣಿಗೆ ದಂಪತಿಗಳೇ."

"ದೊಡ್ಡ ಸಂಗತಿ ಕಣ್ಣು ತಪ್ಪಿ ಹೋಗಿದೆ. ನನಗೂ ಮೋಸ ಆಗಿದೆ... ಲಾಯರ ದೇಹದ ಐಡೆಂಟಿಫಿಕೇಷನ್."

"ಅದೇ ಧನಂಜಯನ ಚಾಣಾಕ್ಷ ಬುದ್ಧಿ. ಅಂಜನರಾಯರ ದೇಹದ ಗುರುಗು ಸಿಗಬಾರದೆಂದೇ ಅದರ ಮೇಲೆ ಚಕ್ರ ಹರಿಸಿ ವಿರೂಪಗೊಳಿಸಿದ್ದು. ಗುರುತು ಮತ್ತಷ್ಟು ಹದಗೆಡಿಸೋಕೆ ದೇಹವನ್ನ ನಿರಿಗೆ ಹಾಕಿದ್ದು. ಆ ಕೊಳೆತ ದೇಹದಲ್ಲಿ ಗುರುತಿಗೆ ನಿಂತಿದ್ದು ತಾಯಿತ, ಉಂಗುರ, ಕೈಗಡಿಯಾರ, ನರೆತ ಗುಂಗುರು ಕೂದಲು. ಅದೇ ರೀತಿಯ ಕೂದಲು ರಾಯರಿಗೂ ಇತ್ತು. ಮತ್ತೊಂದು ಮುಖ್ಯ ಸಂಗತಿ ನಂಜುಂಡನದು ಎನಿಸಿಕೊಂಡ ದೇಹವನ್ನು ಗುರ್ತಿಸಿದೋರು ಯಾರು? ದೇಹ ತೇಲಿದ ಕೂಡಲೇ ಓಡಿಬಂದ ಧನಂಜಯ. ಅಣ್ಣನ ದೇಹ ಗುರುತಿಸಿ ಗೋಳಾಟದ ನಾಟಕ ಮುಗಿಸಿದ. ನಿಮಗೂ ತೊಂದರೆ ತಪ್ಪು. ಧನಂಜಯನೊಂದಿಗೆ ಕ್ಯಾಂಟಿನ್ ಸೂರಪ್ಪ ರುಜು ಹಾಕ್ದ. ನೀವು ಮೋಸ ಹೋದ್ರಿ. ಅದರ ಮೇಲೆ ಡಾಕ್ಟರರ ಸಣ್ಣ ಅಸಡ್ಡೆ. ದೇಹದ ಬಾಯಲ್ಲಿ ಹಲ್ಲಿಲ್ಲ ಅಂತ ಒಂದು ಮಾತು ಬರೀಲಿಲ್ಲ ಭೂಪ."

"ಕ್ಯಾಂಟಿನ್ ಸೂರಪ್ಪ ಈ ನಾಟಕದಲ್ಲಿ..."

"ಸರಿ. ಕಪ್ಪು ಕಾರು ಡ್ರೈವ್ ಮಾಡಿ, ದೇಹ ಮಂಚೇನಹಳ್ಳಿ ರಸ್ತೆಗೆ ಹಾಕಿ, ಬಾರ್‌ನಲ್ಲಿ ಮೋಹನನಿಗೆ ಮದ್ದು ಹಾಕಿದ ಮದ್ಯ ಕುಡಿಸಿ ಬಿಳಿ ಕಾರಿನಲ್ಲಿ ಸಾಗಿಸಿ ದೇಹ ಕೆರೆಗೆ ಹಾಕಿ ಧನಂಜಯನ ಕೆಲಸಕ್ಕೆ ಸಿಂಹಭುಜ ಕೊಟ್ಟೋನು. ಅವನಿಗೂ ಭಾರಿ ಹನದ ವಾಗ್ದಾನ ಆಗಿತ್ತು. ಸಾಕಷ್ಟು ಅಡ್ವಾನ್ಸ್ ಸಿಕ್ಕಿತ್ತು. ಅವನ ಕೆಂಪು ಮಫ್ಲರ್, ಕಪ್ಪು ಕನ್ನಡಕ, ಬಾಯಲ್ಲಿ ಸೇರಿದ ಸ್ಪಾಂಜ್ ತುಂಡು ಮೋಹನನಿಗೆ ಯಾರೂಂತ ಸುಳಿವು ಕೊಡ್ಲಿಲ್ಲ."

"ಕೊಲೆಯಲ್ಲಿ ಚಂದ್ರಮ್ಮನ ಪಾತ್ರ ಇಲ್ಲ."

"ಚಂದ್ರಮ್ಮನಿಗೆ ಗಂಡನ ಕೊಲೆ ಧನಂಜಯನಿಗೆ ಅನಿಸಿದಷ್ಟೇ ಅನಿರೀಕ್ಷಿತ. ಸಮಯದ ಧೂರ್ತ ಸ್ಫೂರ್ತಿಯಿಂದ ಅವನು ಕೊಲೆ ಮಾಡ್ದ. ಕೊಲೆಗೆ ಅಡ್ಡಿ ಮಾಡದೆ ಪ್ರತ್ಯಕ್ಷದರ್ಶಿಯಾಗಿ ನಿಂತ ದುರದೃಷ್ಟದ ಹೆಣ್ಣು ಕೊಲೆಯಲ್ಲಿ ಸಮಭಾಗಿ."

"ಪ್ರವಾಸ ಮುಗಿಯೊ ಹೊತ್ತಿಗೆ ರಾಯರಿಗೆ ಯಾವ ಅಂತ್ಯ ನಿಯೋಜಿತವಾಗಿತ್ತು?"

"ಧನಂಜಯ ಹೇಳೋ ಹಾಗೆ ಅದಕ್ಕೂ ಯೋಜನೆ ಆಗಿಹೋಗಿತ್ತು. ನಂಜುಂಡ ರಾಯರ ಬಟ್ಟೆ ದಡದಲ್ಲಿಟ್ಟು ಯಮುನಾ ನದಿಗೆ ಜಾರಿದ್ರು ಅಂತ ಸುದ್ದಿ ಕೊಡ್ತಿದ್ದ."

ಏಳುವ ಮೊದಲು ಪೂಣಚ್ಚ ಆತ್ಮೀಯವಾಗಿ ಕೇಳಿದ.

"ನಿಮ್ಮ ಪತ್ತೇದಾರಿ ಕಾರ್ಯದಲ್ಲಿ ತಿರುವು ಸಿಕ್ಕಿದ್ದು ಯಾವಾಗ? ಸ್ಫೂರ್ತಿ ಎಲ್ಲಿಂದ."

"ಸ್ಫೂರ್ತಿಯೇನು, ಒಂದು ರೀತಿಯಲ್ಲಿ ಒತ್ತಡ. ಕೊಲೆ ಭೂತ ನನ್ನೋಳ ಸುತ್ತಲೂ ಹರಿದಾಡಿತ್ತು. ಅವಳ ರಕ್ಷಣೆ ನನ್ನ ಸ್ವಾರ್ಥ. ನನ್ನೋಳಿಗೆ ತಾಳೆ ಹೂ ಮೇಲೆ ಪ್ರಾಣ. ತಾಳೆ ಹೂ ಸೇರೋ ಅವಳ ತುರುಬಿನ ಮೇಲೆ ನನ್ನ ಪ್ರಾಣ. ತಾಳೆ ಮರದಡಿ ಅಂಜನರಾಯರ ಸಮಾಧಿ. ಆ ಸಮಾಧಿ ತೋಡಿದಾಗ ಪತ್ತೇದಾರಿಗೆ ಬಲವಾದ ತಿರುವು... ಹೀಗೇ ಒಂದಕ್ಕೊಂದು ಬಾದರಾಯಣ ಸಂಬಂಧ."

ಉತ್ಸಾಹದ ಪರಮಾವಧಿಯಲ್ಲಿ ಸುತ್ತಲಿನ ಜನ ತಿರುಗಿ ನೋಡುವಷ್ಟು ಗಟ್ಟಿಯಾಗಿ ಸಿಳ್ಳು ಹಾಕಿದ.